ಶುಕ್ರವಾರ, ಸೆಪ್ಟೆಂಬರ್ 2, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗಣೇಶ ವಿಸರ್ಜನೆ

ಮಹಾರಾಷ್ಟ್ರದ ಠಾಣೆಯಲ್ಲಿ ಭಕ್ತರೊಬ್ಬರು ಗುರುವಾರ ಕೆರೆಯಲ್ಲಿ ವಿಸರ್ಜಿಸಲು ಗಣೇಶ ಮೂರ್ತಿಯನ್ನು ತಲೆ ಮೇಲೆ ಹೊತ್ತು ತಂದಿದ್ದರು

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ಭಾರತ ಸರ್ಕಾರ | SAGARMALA | PM Gati Shakti | ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕರ್ನಾಟಕದಲ್ಲಿ ಡಬಲ್ ಇಂಜಿನ್ ಸರ್ಕಾರದಿಂದ ಅಭಿವೃದ್ಧಿಯ ಹೊಸ ಯುಗಕ್ಕೆ ನಾಂದಿ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರಿಂದ,
ರೂ.3,800 ಕೋಟಿ ಮೊತ್ತದ 8 ಯೋಜನೆಗಳ ಲೋಕಾರ್ಪಣೆ ಮತ್ತು ಶಿಲಾನ್ಯಾಸ

ಸೆಪ್ಟೆಂಬರ್ 2, 2022, ಮಧ್ಯಾಹ್ನ 1.30 ರಿಂದ
ಗೋಲ್ಡ್‌ಫಿಂಚ್ ಸಿಟಿ, ಕೂಳೂರು, ಮಂಗಳೂರು

ಲೋಕಾರ್ಪಣೆ

1 ಕಂಟೇನರ್‌ಗಳು ಹಾಗೂ ಇತರೆ ಸರಕು ನಿರ್ವಹಣೆಗಾಗಿ ಬರ್ತ್ ಸಂಖ್ಯೆ 14ರ ಯಾಂತ್ರೀಕರಣ

- 2,200 ಜನರಿಗೆ ಉದ್ಯೋಗಾವಕಾಶಗಳು
- ಸಾಮರ್ಥ್ಯ ಹೆಚ್ಚಳ ಹಾಗೂ ಕಾರ್ಯನಿರ್ವಹಣಾ ಸಮಯದಲ್ಲಿ 35% ಉಳಿತಾಯ
- ಬಂದರು, ಕಡಲಿಗೆ ಸಂಬಂಧಿಸಿದ ಹಾಗೂ ಪರಿಸರವ್ಯವಸ್ಥೆಗಳಿಗೆ ಪರಿಸರ ಸಂರಕ್ಷಣೆಯ ಲಾಭಗಳು

ಯೋಜನೆ ವೆಚ್ಚ: ರೂ.281 ಕೋಟಿ
6.02 ಎಂಟಿಪಿಎರಷ್ಟು ಹೆಚ್ಚುವರಿ ಸಾಮರ್ಥ್ಯ

ಲೋಕಾರ್ಪಣೆ

2 ಬಿಎಸ್ VI ಉನ್ನತೀಕರಣ ಯೋಜನೆ

- ಬಿಎಸ್ VI ಶ್ರೇಣಿ ಇಂಧನಗಳ ಉತ್ಪಾದನೆ
- ಪರಿಸರ ಸಂರಕ್ಷಣೆ, ಮಾಲಿನ್ಯ ನಿಯಂತ್ರಣ

ಯೋಜನೆ ವೆಚ್ಚ: ರೂ.1,829 ಕೋಟಿ

ಲೋಕಾರ್ಪಣೆ

3 ಸಮುದ್ರದ ಲವಣ ನೀರು ಶುದ್ಧೀಕರಣ ಘಟಕ

- ಶುದ್ಧ ನೀರಿನ ಸಂರಕ್ಷಣೆ
- 30 ಎಂಎಲ್‌ಡಿ ಲವಣ ನೀರು ಶುದ್ಧೀಕರಣ ಸಾಮರ್ಥ್ಯದೊಂದಿಗೆ ಸುಸ್ಥಿರತೆಗೆ ಉತ್ತೇಜನ

ಯೋಜನೆ ವೆಚ್ಚ: ರೂ.677 ಕೋಟಿ

ಶಿಲಾನ್ಯಾಸ

4 ಎನ್‌ಎಂಪಿಯಲ್ಲಿ ಸಮಗ್ರ ಎಲ್‌ಪಿಜಿ ಹಾಗೂ ಬೃಹತ್ ಪಿಒಎಲ್ ಸೌಲಭ್ಯ ಸ್ಥಾಪನೆ

- 2,200 ಜನರಿಗೆ ಉದ್ಯೋಗಾವಕಾಶಗಳು
- ದ್ರವರೂಪದ ಸರಕುಗಳ ಅನ್‌ಲೋಡಿಂಗ್ ಸಮಯದಲ್ಲಿ ಉಳಿತಾಯ
- ಎಲ್‌ಪಿಜಿಯ ಒಟ್ಟಾರೆ ಆಮದು ವೆಚ್ಚದಲ್ಲಿ ಇಳಿಕೆ
- ಪಿಎಂ ಉಜ್ವಲ ಯೋಜನೆಗೆ ನೇರ ಬೆಂಬಲ

ಯೋಜನೆ ವೆಚ್ಚ: ರೂ.500 ಕೋಟಿ
ಸಾಮರ್ಥ್ಯ ಹೆಚ್ಚಳ: 200 ಎಂಟಿಪಿಎ

ಶಿಲಾನ್ಯಾಸ

5 ಎನ್‌ಎಂಪಿಯಲ್ಲಿ ಶೇಖರಣಾ ಟ್ಯಾಂಕ್‌ಗಳು ಹಾಗೂ ಖಾದ್ಯ ತೈಲ ಸಂಸ್ಕರಣಾಗಾರ ನಿರ್ಮಾಣ

- ಖಾದ್ಯ ತೈಲದ ದೋಣಿಗಳ ಓಡಾಟದಲ್ಲಿ ಸುಧಾರಣೆ
- ಖಾದ್ಯ ತೈಲದ ಒಟ್ಟಾರೆ ಆಮದು ವೆಚ್ಚದಲ್ಲಿ ಇಳಿಕೆ
- ದರ-ಕಾರ್ಯಕ್ಷಮತೆ ಸುಧಾರಣೆ
- 700 ಜನರಿಗೆ ಉದ್ಯೋಗಾವಕಾಶಗಳು

ಯೋಜನೆ ವೆಚ್ಚ: ರೂ.100 ಕೋಟಿ
ಎಂಟಿಪಿಎ ಸಾಮರ್ಥ್ಯ: 0.30

ಶಿಲಾನ್ಯಾಸ

6 ಎನ್‌ಎಂಪಿಯಲ್ಲಿ ಬಿಟುಮೆನ್ ಶೇಖರಣಾ ಟ್ಯಾಂಕ್ ಘಟಕಗಳ ನಿರ್ಮಾಣ

- ಬಿಟುಮೆನ್ ಸಾಗಣೆಯಲ್ಲಿ ಸುಧಾರಣೆ
- ಬಿಟುಮೆನ್‌ನ ಒಟ್ಟಾರೆ ದರದಲ್ಲಿ ಇಳಿಕೆ
- ಪಿಎಂ ಗತಿ ಶಕ್ತಿ ಯೋಜನೆಗೆ ನೇರ ಬೆಂಬಲ
- 275 ಜನರಿಗೆ ಉದ್ಯೋಗಾವಕಾಶಗಳು

ಯೋಜನೆ ವೆಚ್ಚ: ರೂ.100 ಕೋಟಿ
ಎಂಟಿಪಿಎ ಸಾಮರ್ಥ್ಯ: 40,000 ಎಂಟಿ/ ಬಿಟುಮೆನ್ ದ್ರವರೂಪದ ಸರಕು

ಶಿಲಾನ್ಯಾಸ

7 ಎನ್‌ಎಂಪಿಯಲ್ಲಿ ಬಿಟುಮೆನ್, ಖಾದ್ಯ ತೈಲ ಶೇಖರಣಾ ಟ್ಯಾಂಕ್‌ಗಳು ಹಾಗೂ ಸಂಬಂಧಿತ ಸೌಲಭ್ಯಗಳ ನಿರ್ಮಾಣ

- ಖಾದ್ಯ ತೈಲ ಮತ್ತು ಬಿಟುಮೆನ್‌ನ ಒಟ್ಟಾರೆ ಆಮದು ವೆಚ್ಚದಲ್ಲಿ ಇಳಿಕೆ
- ದರ-ಕಾರ್ಯಕ್ಷಮತೆ ಸುಧಾರಣೆ
- 275 ಜನರಿಗೆ ಉದ್ಯೋಗಾವಕಾಶಗಳು

ಯೋಜನೆ ವೆಚ್ಚ: ರೂ.100 ಕೋಟಿ
ಎಂಟಿಪಿಎ ಸಾಮರ್ಥ್ಯ: ಪ್ರತಿ ಎಕರೆಗೆ ವಾರ್ಷಿಕ 8,000 ಟನ್‌ಗಳ ಎಂಜಿಟಿ

ಭೂಮಿ ಪೂಜೆ

8 ಕುಳಾಯಿಯಲ್ಲಿ ಇಪಿಸಿ ಮಾದರಿಯಲ್ಲಿ ಮೀನುಗಾರಿಕೆ ಬಂದರು ಅಭಿವೃದ್ಧಿ

- 8,500 ಜನರಿಗೆ ಉದ್ಯೋಗಾವಕಾಶಗಳು
- ಕರಾವಳಿ ಮೀನುಗಾರಿಕಾ ಸಮುದಾಯದವರಿಗೆ ಸುಮಾರು ರೂ.192 ಕೋಟಿ ವಾರ್ಷಿಕ ಆದಾಯ

ಯೋಜನೆ ವೆಚ್ಚ: ರೂ.196.51 ಕೋಟಿ

ಘನ ಉಪಸ್ಥಿತಿ

ಶ್ರೀ ಥಾವರ್ ಚಂದ್ ಗೆಹ್ಲೋಟ್
ಮಾನ್ಯ ರಾಜ್ಯಪಾಲರು, ಕರ್ನಾಟಕ ಸರ್ಕಾರ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಶ್ರೀ ಪ್ರಲ್ಹಾದ್ ಜೋಶಿ
ಮಾನ್ಯ ಕೇಂದ್ರ ಸಂಸದೀಯ ವ್ಯವಹಾರಗಳು ಮತ್ತು ಕಲ್ಲಿದ್ದಲು ಸಚಿವರು

ಶ್ರೀ ಸರ್ಬಾನಂದ್ ಸೋನೊವಾಲ್
ಮಾನ್ಯ ಕೇಂದ್ರ ಬಂದರು, ಹಡಗು ಮತ್ತು ಜಲಸಾರಿಗೆ ಹಾಗೂ ಆಯುಷ್ ಸಚಿವರು

ಶ್ರೀ ಹರ್ದೀಪ್ ಸಿಂಗ್ ಪುರಿ
ಮಾನ್ಯ ಕೇಂದ್ರ ಇಂಧನ ಮತ್ತು ನೈಸರ್ಗಿಕ ಅನಿಲ ಸಚಿವರು

ಶ್ರೀ ಶ್ರೀಪಾದ್ ಯಸ್ಸೊ ನಾಯಕ್
ಮಾನ್ಯ ಕೇಂದ್ರ ಬಂದರು, ಹಡಗು ಮತ್ತು ಜಲಸಾರಿಗೆ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರು

ಶ್ರೀ ಶಾಂತನು ಠಾಕೂರ್
ಮಾನ್ಯ ಕೇಂದ್ರ ಬಂದರು, ಹಡಗು ಮತ್ತು ಜಲಸಾರಿಗೆ ರಾಜ್ಯ ಸಚಿವರು

ಬಂದರುಗಳು ಹಾಗೂ ಒಳನಾಡು ಜಲಸಾರಿಗೆ ಅಭಿವೃದ್ಧಿಗೆ ಕರ್ನಾಟಕ ಸರ್ಕಾರದ ಮಹತ್ವದ ಕ್ರಮಗಳು

- ಪಿಎಂ ಮತ್ಸ್ಯ ಸಂಪದ ಯೋಜನೆಯಡಿ (ಪಿಎಂಎಂಎಸ್‌ವೈ) ರೂ.120 ಕೋಟಿ ವೆಚ್ಚದಲ್ಲಿ ಮೀನು ಉತ್ಪಾದನೆ, ರಫ್ತು ಸಾಮರ್ಥ್ಯ ವೃದ್ಧಿ ಹಾಗೂ ಉದ್ಯೋಗಗಳ ಸೃಷ್ಟಿಗಾಗಿ 100 ಆಳ ಸಮುದ್ರ ದೋಣಿಗಳಿಗೆ ಅನುಮೋದನೆ ನೀಡಲಾಗಿದೆ.
- ಉತ್ತರ ಕನ್ನಡ ಜಿಲ್ಲೆಯ ಮಜಲಿಯಲ್ಲಿ ಭಾರತ ಸರ್ಕಾರ (ಸಾಗರಮಾಲ ಹಾಗೂ ಪಿಎಂಎಂಎಸ್‌ವೈ ಯೋಜನೆಗಳಡಿ) ಹಾಗೂ ಕರ್ನಾಟಕ ಸರ್ಕಾರದ ವತಿಯಿಂದ ಒಟ್ಟು ಅಂದಾಜು ರೂ.250 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಮೀನುಗಾರಿಕೆ ಬಂದರು ಅಭಿವೃದ್ಧಿ.
- ಕಾರವಾರ ಬಂದರಿನಲ್ಲಿ, ಕೇಂದ್ರದ ಸಾಗರಮಾಲಾ ಕರಾವಳಿ ಬರ್ತ್ ಯೋಜನೆಯಡಿ ರೂ.276 ಕೋಟಿ ಮೊತ್ತದಲ್ಲಿ ಅಭಿವೃದ್ಧಿ ಯೋಜನೆಗಳು ಅನುಷ್ಠಾನದಲ್ಲಿವೆ.
- ಹಳೆ ಮಂಗಳೂರಿನಲ್ಲಿ ಅಂದಾಜು ರೂ.65 ಕೋಟಿ ವೆಚ್ಚದಲ್ಲಿ, ಲಕ್ಷದ್ವೀಪ ದ್ವೀಪಗಳೊಂದಿಗೆ ಐತಿಹಾಸಿಕ ವ್ಯಾಪಾರ ಒಪ್ಪಂದಗಳನ್ನು ಪುನರುಜ್ಜೀವನಗೊಳಿಸಲು ಪೂರಕ ಮೂಲಭೂತಸೌಕರ್ಯಗಳು ಹಾಗೂ ಹಡಗು ಟರ್ಮಿನಲ್ ಸಹಿತ ಸಮರ್ಪಿತ ಜೆಟ್ಟಿ ಅಭಿವೃದ್ಧಿ.
- ಸಾರ್ವಜನಿಕ-ಖಾಸಗಿ ಪಾಲುದಾರಿಕೆಯಲ್ಲಿ (ಪಿಪಿಪಿ) ಅಂದಾಜು ರೂ.5,000 ಕೋಟಿ ವೆಚ್ಚದಲ್ಲಿ ಕೇಣಿಯಲ್ಲಿ 30 ಎಂಟಿಪಿಎ ಆಳ ನೀರು ಸರ್ವಋತು ಗ್ರೀನ್‌ಫೀಲ್ಡ್ ಬಂದರು ಅಭಿವೃದ್ಧಿ.

- ಮೀನುಗಾರಿಕೆ ದೋಣಿಗಳ ಸುಗಮ ಹಾಗೂ ವೇಗದ ಓಡಾಟಕ್ಕಾಗಿ ರೂ.20 ಕೋಟಿ ವೆಚ್ಚದಲ್ಲಿ 8 ಮೀನುಗಾರಿಕಾ ಬಂದರುಗಳಲ್ಲಿ ಜಲಸಂಚಾರ ಮಾರ್ಗಗಳಲ್ಲಿ ಹೂಳೆತ್ತುವಿಕೆ.
- ಹಳೆ ಮಂಗಳೂರು ಬಂದರಿನಲ್ಲಿ ಅಂದಾಜು ರೂ.65 ಕೋಟಿ ವೆಚ್ಚದಲ್ಲಿ 350 ಮೀ. ಕರಾವಳಿ ಬರ್ತ್ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿ.
- ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ, ಕರ್ನಾಟಕದ ಕರಾವಳಿ ಭಾಗಗಳಲ್ಲಿ ವಾಸಿಸುತ್ತಿರುವ ಯುವಜನರಿಗಾಗಿ ಉದ್ಯೋಗ ಸೃಷ್ಟಿಸಲು ಮತ್ತು ಕೈಗಾರಿಕೆಗೆ ಬೇಕಾದಂತಹ ಕೌಶಲ್ಯಗಳನ್ನು ಒದಗಿಸಲು ಅಂದಾಜು ರೂ.30.35 ಕೋಟಿ ವೆಚ್ಚದಲ್ಲಿ ಕಡಲು ಸಂಬಂಧಿತ ತರಬೇತಿ ಸಂಸ್ಥೆ ಸ್ಥಾಪನೆ.
- ಸಾರ್ವಜನಿಕ-ಖಾಸಗಿ ಪಾಲುದಾರಿಕೆಯಡಿ (ಪಿಪಿಪಿ), ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಬಂದರಿನಲ್ಲಿ ರೂ.600 ಕೋಟಿ ಹೂಡಿಕೆಯ 5 ದಶಲಕ್ಷ ಎಂಟಿಪಿಎ ಬಂದರು ಅಭಿವೃದ್ಧಿಪಡಿಸಲಾಗುತ್ತಿದೆ.
- ಹೊನ್ನಾವರ ತಾಲ್ಲೂಕಿನ ಪವಿನಕುರ್ವೆಯಲ್ಲಿ ಸಾರ್ವಜನಿಕ-ಖಾಸಗಿ ಪಾಲುದಾರಿಕೆಯಲ್ಲಿ (ಪಿಪಿಪಿ) ಅಂದಾಜು ರೂ.2,000 ಕೋಟಿ ವೆಚ್ಚದಲ್ಲಿ 12 ಎಂಟಿಪಿಎ ಆಳ ನೀರು ಸರ್ವಋತು ಗ್ರೀನ್‌ಫೀಲ್ಡ್ ಬಂದರು ಅಭಿವೃದ್ಧಿ.
- 2021–22ನೇ ಸಾಲಿನಲ್ಲಿ, ಸಮುದ್ರ ಕೊರೆತವನ್ನು ತಡೆಗಟ್ಟುವ ಯೋಜನೆಗಳಿಗೆ ರೂ.35 ಕೋಟಿ ಹಾಗೂ ಸಾಧಾರಣ ಬಂದರುಗಳು, ಒಳನಾಡು ಜಲಸಾರಿಗೆ ಹಾಗೂ ಸಾಗರಮಾಲಾ ಯೋಜನೆಗಳಿಗೆ ರೂ.37.90 ಕೋಟಿ ವೆಚ್ಚ ಮಾಡಲಾಗಿದೆ.

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕಾರ್ಯಕ್ರಮವನ್ನು ಡಿಡಿ ನ್ಯೂಸ್‌ನಲ್ಲಿ ನೇರ ಪ್ರಸಾರದಲ್ಲಿ ವೀಕ್ಷಿಸಿ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
80ರ ಹೆಜ್ಜೆಯಲ್ಲಿ ಕರ್ನಾಟಕದ ಕುಳ್ಳ ದ್ವಾರಕೀಶ್ ನೆನಪಿನ ರೀಲುಗಳು



ಆಳ-ಅಗಲ
ತೋಪು ಸಿನಿಮಾ ಬಸವಳಿದ ಬಾಲಿವುಡ್

ಜಿಡಿಪಿ ಶೇ 13.5ರಷ್ಟು ಬೆಳವಣಿಗೆ 11

ಎಎಪಿ ವಿಶ್ವಾಸಮತ ಸಾಬೀತು 10

ಸೆನ್ಸೆಕ್ಸ್	ನಿಫ್ಟಿ	₹/$
58,767	17,543	79.56

ಜಿಎಸ್‌ಟಿ: ₹1.43 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಮೂಲಕ ಆಗಸ್ಟ್‌ನಲ್ಲಿ ₹ 1.43 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಜುಲೈನಲ್ಲಿ ಆಗಿದ್ದ ₹1.49 ಲಕ್ಷ ಕೋಟಿ ಸಂಗ್ರಹಕ್ಕೆ ಹೋಲಿಸಿದರೆ ₹5,383 ಕೋಟಿ ಕಡಿಮೆ ಆಗಿದೆ.

2021ರ ಆಗಸ್ಟ್‌ನಲ್ಲಿ ₹1.12 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿತ್ತು. ಇದಕ್ಕೆ ಹೋಲಿಸಿದರೆ 2022ರ ಆಗಸ್ಟ್‌ನಲ್ಲಿ ಶೇ 28ರಷ್ಟು ಹೆಚ್ಚು ವರಮಾನ ಸಂಗ್ರಹ ಆದಂತಾಗಿದೆ. ಸತತ ಆರನೇ ತಿಂಗಳಿನಲ್ಲಿಯೂ ಜಿಎಸ್‌ಟಿ ಸಂಗ್ರಹವು ₹ 1.4 ಲಕ್ಷ ಕೋಟಿಗಿಂತಲೂ ಹೆಚ್ಚಿನ ಮಟ್ಟದಲ್ಲಿ ಇದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

ನಿರುದ್ಯೋಗ ಹೆಚ್ಚಳ

ಮುಂಬೈ (ಪಿಟಿಐ): ದೇಶದಲ್ಲಿ ಆಗಸ್ಟ್ ತಿಂಗಳಲ್ಲಿ ನಿರುದ್ಯೋಗ ಪ್ರಮಾಣವು ಒಂದು ವರ್ಷದ ಗರಿಷ್ಠ ಮಟ್ಟವಾದ ಶೇಕಡ 8.3ಕ್ಕೆ ಹೆಚ್ಚಳವಾಗಿದೆ ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ಹೇಳಿದೆ. ಆಗಸ್ಟ್‌ನಲ್ಲಿ ಒಟ್ಟು 20 ಲಕ್ಷ ಉದ್ಯೋಗ ಕಡಿಮೆ ಆಗಿದ್ದು, 39.46 ಕೋಟಿಗೆ ತಲುಪಿದೆ ಎಂದು ತಿಳಿಸಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ಪ್ರಕರಣ

ಮುರುಘಾ ಶರಣರ ಬಂಧನ

ಪ್ರಜಾವಾಣಿ ವಾರ್ತೆ



ಚಿತ್ರದುರ್ಗ: ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಮುರುಘಾ ಶರಣರನ್ನು ಗುರುವಾರ ರಾತ್ರಿ 10 ಗಂಟೆಗೆ ಪೊಲೀಸರು ಬಂಧಿಸಿದ್ದಾರೆ.

‘ಮುರುಘಾ ಮಠದಲ್ಲಿಯೇ ಶಿವಮೂರ್ತಿ ಮುರುಘಾ ಶರಣರನ್ನು ಬಂಧಿಸಲಾಗಿದೆ. ಡಿವೈಎಸ್‌ಪಿ ಅನಿಲ್‌ಕುಮಾರ್ ನೇತೃತ್ವದ ತನಿಖಾ ತಂಡ ಅವರನ್ನು ವಿಚಾರಣೆಗೆ ಒಳಪಡಿಸಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಭಾರಿ ಸಂಖ್ಯೆಯಲ್ಲಿ ಮುರುಘಾ ಮಠಕ್ಕೆ ಬಂದಿದ್ದ ಪೊಲೀಸ್ ತನಿಖಾ ತಂಡ, ಮುರುಘಾ ಶರಣರನ್ನು ವಶಕ್ಕೆ ಪಡೆದು ಬಿಗಿ ಭದ್ರತೆಯಲ್ಲಿ ತಮ್ಮೊಂದಿಗೆ ಕರೆದುಕೊಂಡು ಹೋಯಿತು. ಅಜ್ಞಾತ ಸ್ಥಳಕ್ಕೆ ಕರೆದುಕೊಂಡು ಹೋಗಲಾಯಿತು. ಇದಕ್ಕೂ ಮೊದಲು ಪ್ರಕರಣದ ಎರಡನೇ ಆರೋಪಿ ಹಾಸ್ಟೆಲ್ ವಾರ್ಡನ್ ಅವರನ್ನು ತನಿಖಾ ತಂಡ ವಶಕ್ಕೆ ಪಡೆದಿತ್ತು.

ಇಬ್ಬರು ಸಂತ್ರಸ್ತ ವಿದ್ಯಾರ್ಥಿನಿಯರು ಮೈಸೂರಿನ ಒಡನಾಡಿ ಸಂಸ್ಥೆಯನ್ನು ಸಂಪರ್ಕಿಸಿ ನ್ಯಾಯ ದೊರಕಿಸಿಕೊಡುವಂತೆ ಮನವಿ ಮಾಡಿದ್ದರು. ಆಗಸ್ಟ್ 26ರಂದು ಮೈಸೂರಿನ ಮಕ್ಕಳ ಕಲ್ಯಾಣ ಸಮಿತಿ ಎದುರು ಮಕ್ಕಳನ್ನು ಹಾಜರು ಪಡಿಸಿ ಹೇಳಿಕೆ ಪಡೆಯಲಾಯಿಗಿತ್ತು. ಸಮಿತಿಯ ಸೂಚನೆಯ ಮೇರೆಗೆ ಅಂದು ರಾತ್ರಿ ನಜರಬಾದ್ ಪೊಲೀಸ್ ಠಾಣೆಯಲ್ಲಿ ಮುರುಘಾ ಶರಣರು ಸೇರಿ ಐವರ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

ಮೈಸೂರಿನಿಂದ ಪ್ರಕರಣವನ್ನು ಆ.27ರಂದು ಚಿತ್ರದುರ್ಗದ ಗ್ರಾಮಾಂತರ ಪೊಲೀಸ್ ಠಾಣೆಗೆ ವರ್ಗಾಯಿಸಲಾಗಿತ್ತು. ಪ್ರಕರಣ ದಾಖಲಾಗಿ ಕೆಲ ದಿನಗಳಾದರೂ ಮುರುಘಾ ಶರಣರನ್ನು ಬಂಧಿಸದೇ ಇರುವುದನ್ನು ಖಂಡಿಸಿ ಮೂರ್ನಾಲ್ಕು ದಿನಗಳಿಂದ ರಾಜ್ಯದ ವಿವಿಧೆಡೆ ಪ್ರತಿಭಟನೆ ನಡೆದಿತ್ತು. ಮಠದ ಸುತ್ತ ಭಾರಿ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿದೆ.

ಮುರುಘಾ ಶ್ರೀಗೆ ವಿಶೇಷ ವಾರ್ಡ್: ಜಿಲ್ಲಾ ಆಸ್ಪತ್ರೆಯ ಹೊಸ ಕಟ್ಟಡದಲ್ಲಿ ಮುರುಘಾ ಶರಣರ ಸಲುವಾಗಿಯೇ ಕಳೆದ ಮೂರು ದಿನಗಳಿಂದ ವಿಶೇಷ ವಾರ್ಡ್ ಸಿದ್ಧಪಡಿಸಲಾಗಿದೆ. ಅದೇ ವಾರ್ಡ್‌ನಲ್ಲಿ ಶರಣರನ್ನು ದಾಖಲಿಸಲಾಗುತ್ತದೆ ಎಂದು ತಿಳಿದುಬಂದಿದೆ.

ಇನ್ನಷ್ಟು ಸುದ್ದಿಗಳು 6

ಮಂಗಳೂರಿಗೆ ಇಂದು ಭೇಟಿ • ಬಿಜೆಪಿ ನಾಯಕರ ಜತೆ ಸಮಾಲೋಚನೆ

ಪ್ರಧಾನಿ ಮೋದಿಗೆ ಪ್ರಶ್ನೆಗಳ ಸ್ವಾಗತ

ಪ್ರಜಾವಾಣಿ ವಾರ್ತೆ

ರಾಷ್ಟ್ರೀಯ ರಾಜಕಾರಣದಲ್ಲಿ ಹೊಸ ಧ್ರುವೀಕರಣ ಸೃಷ್ಟಿಯಾಗಿದೆ. ಲಂಚ ಆರೋಪಿಗಳನ್ನು ರಕ್ಷಿಸಲು, ಕೆಲವು ರಾಜಕೀಯ ಗುಂಪುಗಳು ಬಹಿರಂಗವಾಗಿಯೇ ಒಗ್ಗೂಡಲು ಯತ್ನಿಸುತ್ತಿವೆ

ನರೇಂದ್ರ ಮೋದಿ, ಪ್ರಧಾನಿ

ಬೆಂಗಳೂರು: ವಿಧಾನಸಭೆ ಚುನಾವಣೆಗೆ ಕಮಲ ಪಾಳಯವನ್ನು ಅಣಿಗೊಳಿಸುವ ಉದ್ದೇಶದಿಂದ ಎರಡು ತಿಂಗಳ ಅವಧಿಯಲ್ಲಿ ಎರಡನೇ ಬಾರಿ ರಾಜ್ಯಕ್ಕೆ ಬರುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ವಿರೋಧ ಪಕ್ಷ ಕಾಂಗ್ರೆಸ್ ಹಲವು ಪ್ರಶ್ನೆಗಳನ್ನು ಮುಂದಿಟ್ಟಿದೆ.

ಜೂನ್‌ನಲ್ಲಿ ಬೆಂಗಳೂರು ಮತ್ತು ಮೈಸೂರಿಗೆ ಮೋದಿ ಭೇಟಿ ನೀಡಿದ್ದರು. ಮಂಗಳೂರಿಗೆ ಶುಕ್ರವಾರ ಬರಲಿರುವ ಅವರು ₹ 3,800 ಕೋಟಿ ಮೊತ್ತದ 8 ವಿವಿಧ ಯೋಜನೆಗಳ ಉದ್ಘಾಟನೆ ಮತ್ತು ಶಿಲಾನ್ಯಾಸ ನೆರವೇರಿಸಲಿದ್ದಾರೆ. ಇದಕ್ಕಾಗಿ ರಾಜ್ಯ ಬಿಜೆಪಿ ಭರ್ಜರಿ ಸಿದ್ಧತೆ ಮಾಡಿಕೊಂಡಿದ್ದು, ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ.

ಮೋದಿಯವರು ಮಂಗಳೂರಿನಲ್ಲಿ ಸಾರ್ವಜನಿಕ ಸಭೆಯ ಬಳಿಕ ಪಕ್ಷದ ರಾಜ್ಯಘಟಕದ ಪ್ರಮುಖರ ಸಭೆಯನ್ನೂ ನಡೆಸಲಿದ್ದು, ಯಾವ ರೀತಿಯ ಸಂದೇಶ ನೀಡಲಿದ್ದಾರೆ ಎಂಬ ಚರ್ಚೆಯೂ ನಡೆದಿದೆ.

ವಿಧಾನಸಭಾ ಚುನಾವಣೆಗೆ ನಡೆಸಬೇಕಾದ ತಯಾರಿಗಳ ಬಗ್ಗೆ ಸಲಹೆ ನೀಡಲಿರುವ ಅವರು, ರಾಜ್ಯ ಸರ್ಕಾರದ ಆಡಳಿತ ಮತ್ತು ಕಾರ್ಯಕ್ರಮಗಳ ಬಗ್ಗೆ ಸುಮಾರು ಒಂದು ಗಂಟೆ ಹೊತ್ತು ಜತೆ ಚರ್ಚೆ ನಡೆಸಲಿದ್ದಾರೆ. ಈ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಸೇರಿ ಪ್ರಮುಖ ನಾಯಕರು ಭಾಗವಹಿಸುವರು ಎಂದು ಪಕ್ಷದ ಮೂಲಗಳು ತಿಳಿಸಿವೆ.

6ನೇ ಪುಟ ನೋಡಿ

‘ರಾಜ್ಯದಲ್ಲೂ ಭ್ರಷ್ಟಾಚಾರ ರಹಿತ ಸರ್ಕಾರ ಬೇಕು’

ಬೆಂಗಳೂರು: ‘ರಾಜ್ಯದಲ್ಲೂ ಭ್ರಷ್ಟಾಚಾರ ಮುಕ್ತ, ಅಭಿವೃದ್ಧಿ ಪರ ಸರ್ಕಾರದ ಅಗತ್ಯ ಇದೆ ’ ಎಂದು ಉದ್ಯಮಿ ಟಿ.ವಿ. ಮೋಹನ್‌ದಾಸ್ ಪೈ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಟ್ವೀಟ್ ಮೂಲಕ ಮನವಿ ಮಾಡಿದ್ದಾರೆ.

ಮಂಗಳೂರಿನಲ್ಲಿ ಬಿಜೆಪಿ ಕೋರ್ ಕಮಿಟಿ ಸಭೆ ನಡೆಸಲಿದ್ದಾರೆ ಎನ್ನುವ ವರದಿಯನ್ನು ಲಗತ್ತಿಸಿ ಅವರು ಟ್ವೀಟ್ ಮಾಡಿದ್ದಾರೆ.

6ನೇ ಪುಟ ನೋಡಿ



₹ 30 ಕೋಟಿ ವೆಚ್ಚದಲ್ಲಿ ಕೆಂಪೇಗೌಡರ ಥೀಮ್‌ಪಾರ್ಕ್: ಸಚಿವ ಸಿ.ಎನ್‌.ಅಶ್ವತ್ಥ ನಾರಾಯಣ

ಪವಿತ್ರ ಮೃತ್ತಿಕೆ, ಜಲ ಸಂಗ್ರಹ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡರ ಜೀವನ, ಸಾಧನೆ ಹಾಗೂ ಭಾವೈಕ್ಯ ಸಂದೇಶ ಸಾರುವ ಥೀಮ್‌ಪಾರ್ಕ್ ₹ 30 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಮಾಡಲಾಗುತ್ತಿದೆ ಎಂದು ಕೆಂಪೇಗೌಡ ಪಾರಂಪರಿಕ ತಾಣಗಳ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರೂ ಆದ ಸಚಿವ ಸಿ.ಎನ್. ಅಶ್ವತ್ಥ ನಾರಾಯಣ ಅವರು ಹೇಳಿದರು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಗುರುವಾರ ಥೀಮ್‌ಪಾರ್ಕ್ ನಿರ್ಮಾಣದ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

23 ಎಕರೆ ಜಾಗದಲ್ಲಿ ಮೊದಲ ಹಂತದಲ್ಲಿ 3.35 ಎಕರೆಯಲ್ಲಿ ಥೀಮ್‌ಪಾರ್ಕ್ ತಲೆಯೆತ್ತಲಿದೆ. ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ, ಥೀಮ್‌ಪಾರ್ಕ್‌ಗೆ ₹ 84 ಕೋಟಿ ವಿನಿಯೋಗಿಸಲಾಗುತ್ತಿದೆ. ಜಾಗತಿಕ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಹೇಳಿದರು.

ಆ್ಯಂಪಿ ಥಿಯೇಟರ್, ಪಾತ್ ವೇ, ಸುರಂಗ ನಿರ್ಮಾಣ, ಎಕ್ಸಿಬಿಷನ್ ವ್ಯವಸ್ಥೆ, ತ್ರೀ-ಡಿ ಪ್ರೊಜೆಕ್ಷನ್, ಚಕ್ರಾಕಾರದ ಕಾರಂಜಿ, ಹೂದೋಟ, ವಿಐಪಿ ಲಾಂಜ್, ವಿಶ್ರಾಂತಿ ಕೊಠಡಿಗಳು, ಅತ್ಯುತ್ತಮ ಹಾಸುಗಲ್ಲುಗಳು, ಪೆವಿಲಿಯನ್, ಕಾಂಕ್ರೀಟ್ ತಡೆಗೋಡೆ ಇರಲಿವೆ ಎಂದು ಅವರು ಮಾಹಿತಿ ನೀಡಿದರು.

ಮೃತ್ತಿಕೆ (ಮಣ್ಣು) ಮತ್ತು ಜಲ ಸಂಗ್ರಹ ಅಭಿಯಾನ: ಕೆಂಪೇಗೌಡರ ಕಂಚಿನ ಪ್ರತಿಮೆಯ (ಪ್ರಗತಿ ಪ್ರತಿಮೆ) ಉದ್ಘಾಟನೆಗೆ ಪೂರ್ವಭಾವಿಯಾಗಿ ರಾಜ್ಯದಾದ್ಯಂತ ಪವಿತ್ರ ಮೃತ್ತಿಕೆ (ಮಣ್ಣು) ಮತ್ತು ಜಲ ಸಂಗ್ರಹಿಸುವ ಅಭಿಯಾನಕ್ಕೆ ಚಾಲನೆ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, 45 ದಿನಗಳು ಈ ಅಭಿಯಾನ ನಡೆಯಲಿದೆ. ಇದರ ಅಂಗವಾಗಿ 31 ಜಿಲ್ಲೆಗಳ ಎಲ್ಲ ಹಳ್ಳಿಗಳ ವ್ಯಾಪ್ತಿಯ ಕೆರೆಕಟ್ಟೆಗಳು, ನದಿಗಳಿಂದ ಪವಿತ್ರವಾದ ಮಣ್ಣು ಮತ್ತು ಜಲ ಸಂಗ್ರಹಿಸಲಾಗುವುದು. ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಮೆ ಲೋಕಾರ್ಪಣೆ ಮಾಡುವರು ಎಂದರು.

ಅಭಿಯಾನವು ರಾಜ್ಯದ ಎಲ್ಲರನ್ನೂ ಒಳಗೊಳ್ಳಲಿದೆ. ನವ ಕರ್ನಾಟಕ ನಿರ್ಮಾಣದ ದೊಡ್ಡ ಹೆಜ್ಜೆಯಾಗಿದೆ. ಇದು ಸರ್ಕಾರದ ಸಮಗ್ರ ಅಭಿವೃದ್ಧಿ ಸಂಕಲ್ಪದ ಸಂಕೇತ ಎಂದು ಅವರು ಬಣ್ಣಿಸಿದರು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣ ಮುಂಭಾಗ ಕೆಂಪೇಗೌಡ ಥೀಮ್‌ಪಾರ್ಕ್‌ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಭೂಮಿಪೂಜೆ ನೆರವೇರಿಸಿದರು. ಸಚಿವರಾದ ಸಿ.ಎನ್‌.ಅಶ್ವತ್ಥ ನಾರಾಯಣ, ಕೆ.ಸುಧಾಕರ್, ಎಸ್‌.ಟಿ. ಸೋಮಶೇಖರ್, ಮುನಿರತ್ನ, ನಾರಾಯಣಗೌಡ, ಶಾಸಕ ನಿಸರ್ಗ ನಾರಾಯಣ ಸ್ವಾಮಿ ಇದ್ದರು.

ಸುದ್ದಿ 2 ನಿಮಿಷ

ನಾಳೆ ಫೋನ್‌-ಇನ್ ಕಾರ್ಯಕ್ರಮ

ಬೆಂಗಳೂರು: ಜಲಮಂಡಳಿ ವತಿಯಿಂದ ಇದೇ 3ರಂದು ಬೆಳಿಗ್ಗೆ 9ರಿಂದ 10.30ರ ವರೆಗೆ ನೇರ ಫೋನ್‌-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಜಲಮಂಡಳಿಯ ಅಧ್ಯಕ್ಷ ಎನ್. ಜಯರಾಮ್ ಅವರು ಈ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಸಾರ್ವಜನಿಕರು ತಮ್ಮ ಪ್ರದೇಶದಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ ಸಮಸ್ಯೆ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಸಾರ್ವಜನಿಕ ಸಂಪರ್ಕಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆ ತಿಳಿಸಿ ದೂರು ನೀಡಬೇಕು ಎಂದು ಕೋರಿದ್ದಾರೆ. ಸಾರ್ವಜನಿಕರು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ: 080-22945119

ಸಂಘಕ್ಕೆ ಆಯ್ಕೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ನೌಕರರ ಸಾಲ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಚ್. ಕೃಷ್ಣಪ್ಪ ಅವರು ಆಯ್ಕೆಯಾಗಿದ್ದಾರೆ.

ಸಂಘದ ಚುನಾವಣೆಯಲ್ಲಿ ಕಾರ್ಯಕಾರಿ ಮಂಡಳಿ ಸದಸ್ಯರಾದ ಎಚ್. ಕೃಷ್ಣಪ್ಪ ಅವರು ಬಹುಮತದಿಂದ ಆಯ್ಕೆಯಾಗಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬಿಎಂಟಿಸಿ ಪಾಸ್ ಅವಧಿ ವಿಸ್ತರಣೆ

ಬೆಂಗಳೂರು: ಅಂತಿಮ ವರ್ಷದ ಪದವಿ, ವೃತ್ತಿಪರ, ಸ್ನಾತಕೋತ್ತರ, ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳ ಬಸ್ ಪಾಸ್ ಸೌಲಭ್ಯವನ್ನು ಬಿಎಂಟಿಸಿ ಅಕ್ಟೋಬರ್ 31ರವರೆಗೆ ವಿಸ್ತರಿಸಿದೆ.

ಕೋವಿಡ್‌ನಿಂದ 2021-22ನೇ ಸಾಲಿನ ತರಗತಿಗಳು ತಡವಾಗಿ ಆರಂಭವಾಗಿದ್ದು, ಪರೀಕ್ಷೆಗಳು ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ನಡೆಯಲಿವೆ. ಈ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅ.31ರವರೆಗೂ ಪಾಸ್ ವಿಸ್ತರಿಸಲಾಗಿದೆ ಎಂದು ಬಿಎಂಟಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಶಸ್ತಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಳಾ ರಂಗನಾಥ ರಾವ್ ಸ್ಮಾರಕ ಪ್ರತಿಷ್ಠಾನದ ವತಿಯಿಂದ ಸಾಹಿತ್ಯ ಕಲೆಗಳಲ್ಲಿ ಮಹಿಳೆಯರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಸರಳಾ ರಂಗನಾಥ ರಾವ್ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

2021ರ ಜನವರಿ ಮತ್ತು ಡಿಸೆಂಬರ್ ಅವಧಿಯಲ್ಲಿ ಪ್ರಕಟವಾದ ಕಾದಂಬರಿಗಳನ್ನು ಸೆಪ್ಟೆಂಬರ್ 20ರೊಳಗೆ ಬೆಂಗಳೂರಿನ ಕೋರಮಂಗಲದಲ್ಲಿರುವ ಸರಳಾ ರಂಗನಾಥ ರಾವ್ ಸ್ಮಾರಕ ಪ್ರತಿಷ್ಠಾನ, ನಂ.266, ಸ್ನೇಹ, 3ನೇ ಮೈನ್, 8ನೇ ಬ್ಲಾಕ್‌ಗೆ ಕಳಿಸಬೇಕು. ಪ್ರಶಸ್ತಿಯು ₹10 ಸಾವಿರ ನಗದು, ಸ್ಮರಣಿಕೆಯನ್ನು ಒಳಗೊಂಡಿರಲಿದೆ ಎಂದು ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ 08025701165/ 6362473151 ಸಂಪರ್ಕಿಸಿ.

ಸಿನಿಮಾ ಛಾಯಾಚಿತ್ರಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಗತಿ ಅಶ್ವತ್ಥನಾರಾಯಣ ತಮ್ಮ ವೃತ್ತಿ ಬದುಕಿನಲ್ಲಿ ಸೆರೆ ಹಿಡಿದಿರುವ ಅಪರೂಪದ ಛಾಯಾಚಿತ್ರಗಳ ಪ್ರದರ್ಶನವನ್ನು ಸೆಪ್ಟೆಂಬರ್ 2ರಿಂದ 4ರ ವರೆಗೆ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಲಾಗಿದೆ.

ಶುಕ್ರವಾರ (ಸೆ. 2) ಬೆಳಿಗ್ಗೆ 10.30ಕ್ಕೆ ಹಿರಿಯ ನಟಿ ಭಾರತಿ ವಿಷ್ಣುವರ್ಧನ್ ಅವರು ಪ್ರದರ್ಶನವನ್ನು ಉದ್ಘಾಟನೆ ಮಾಡಲಿದ್ದಾರೆ. ನಟ ಶ್ರೀನಾಥ್, ಟಿ.ಎಸ್ ನಾಗಾಭರಣ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಕನ್ನಡ ಚಿತ್ರರಂಗದ ಕಲಾವಿದರು, ತಂತ್ರಜ್ಞರು, ಪ್ರಮುಖ ಸಭೆ- ಸಮಾರಂಭಗಳು, ಕನ್ನಡ ಸಾಹಿತಿಗಳು ಮತ್ತು ಹಿಂದಿ ಚಿತ್ರರಂಗದ ಹಿಂದಿನ ತಾರೆಯರ ಕಲಾತ್ಮಕ ಛಾಯಾಚಿತ್ರಗಳ ಪ್ರದರ್ಶನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಹಾಸ್ಯನಟ ನರಸಿಂಹರಾಜು ಅವರು ಡಾ.ರಾಜ್‌ಕುಮಾರ್ ಅವರನ್ನು ತಬ್ಬಿಕೊಂಡಿರುವ ದೃಶ್ಯ. ಪ್ರಗತಿ ಅಶ್ವತ್ಥನಾರಾಯಣ ಅವರು ಸೆರೆಹಿಡಿದಿರುವ ಅಪರೂಪದ ಛಾಯಾಚಿತ್ರ

ಬಿಬಿಎಂಪಿ: ಸೆ. 22ಕ್ಕೆ ಮತದಾರರ ಪಟ್ಟಿ ನಿರೀಕ್ಷೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚುನಾವಣೆ ಹಿನ್ನೆಲೆಯಲ್ಲಿ ಇದೇ 22ಕ್ಕೆ ಮತದಾರರ ಅಂತಿಮ ಪಟ್ಟಿ ಪ್ರಕಟಿಸುವ ನಿರೀಕ್ಷೆ ಇದೆ' ಎಂದು ರಾಜ್ಯ ಚುನಾವಣಾ ಆಯೋಗ ಹೈಕೋರ್ಟ್‌ಗೆ ತಿಳಿಸಿದೆ.

ಬಿಬಿಎಂಪಿ ವಾರ್ಡ್ ಮರು ವಿಂಗಡಣೆ ಮತ್ತು ಮೀಸಲು ಅಂತಿಮ ಅಧಿಸೂಚನೆ ಪ್ರಶ್ನಿಸಿ ಸಲ್ಲಿಸಲಾಗಿರುವ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಹೇಮಂತ್ ಚಂದನ್ ಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಬಿಬಿಎಂಪಿ ಚುನಾವಣಾ ವೇಳಾಪಟ್ಟಿಗೆ ಸಂಬಂಧಿಸಿದಂತೆ ನ್ಯಾಯಪೀಠದ ಪ್ರಶ್ನೆಗೆ ಉತ್ತರಿಸಿದ ಆಯೋಗದ ಪರ ಹಿರಿಯ ವಕೀಲ ಕೆ.ಎನ್. ಫಣೀಂದ್ರ, 'ಮತದಾರರ ಅಂತಿಮ ಪಟ್ಟಿಯನ್ನು ಇದೇ 22ಕ್ಕೆ ಪ್ರಕಟಿಸುವ ಸಾಧ್ಯತೆಯಿದೆ. ನಂತರ ಚುನಾವಣಾ ವೇಳಾಪಟ್ಟಿ ಪ್ರಕಟಿಸಲಾಗುವುದು' ಎಂದು ವಿವರಿಸಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ವಾರ್ಡ್ ಮರು ವಿಂಗಡಣೆ ಮತ್ತು ಮೀಸಲು ಅಂತಿಮ ಅಧಿಸೂಚನೆಗೆ ತಡೆ ನೀಡುವಂತೆ ಕೋರಿದ ಮಧ್ಯಂತರ ಮನವಿ ಪುರಸ್ಕರಿಸಲು ನ್ಯಾಯಪೀಠ ನಿರಾಕರಿಸಿತು.

'ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸಿದ ನಂತರವೇ ಚುನಾವಣಾ ವೇಳಾಪಟ್ಟಿ ಹೊರಡಿಸಲಾಗುವುದು ಎಂದು ಆಯೋಗ ತಿಳಿಸಿದೆ. ಆದ್ದರಿಂದ, ಇದೇ 22ರೊಳಗೆ ವಿಚಾರಣೆಯನ್ನು ಪೂರ್ಣಗೊಳಿಸಲಾಗುವುದು' ಎಂದು ವಿಚಾರಣೆಯನ್ನು ಇದೇ 8ಕ್ಕೆ ವಿಚಾರಣೆ ಮುಂದೂಡಿತು.

ಓಣಂ ಹಬ್ಬಕ್ಕೆ ವಿಶೇಷ ಬಸ್

ಬೆಂಗಳೂರು: ಓಣಂ ಹಬ್ಬದ ಪ್ರಯುಕ್ತ ಕೇರಳದ ವಿವಿಧ ನಗರಗಳಿಗೆ ಸೆ.6 ಮತ್ತು 7ರಂದು ಕೆಎಸ್‌ಆರ್‌ಟಿಸಿ ವಿಶೇಷ ಬಸ್‌ಗಳನ್ನು ವ್ಯವಸ್ಥೆ ಮಾಡಿದೆ.

ಕಣ್ಣೂರು, ಕೋಯಿಕ್ಕೋಡ್, ಎರ್ನಾಕುಲಂ, ಪಾಲಕ್ಕಾಡ್, ತ್ರಿಶೂರ್, ಕೊಟ್ಟಾಯಂ, ತಿರುವನಂತಪುರ ಸೇರಿ ಹಲವು ಸ್ಥಳಗಳಿಗೆ ಬೆಂಗಳೂರಿನಿಂದ ವಿಶೇಷ ಬಸ್ ವ್ಯವಸ್ಥೆ ಮಾಡಲಾಗಿದೆ. ಈ ಬಸ್‌ಗಳು ಸ್ಯಾಟಲೈಟ್ ಬಸ್ ನಿಲ್ದಾಣ ಹಾಗೂ ಶಾಂತಿನಗರ ಬಸ್ ನಿಲ್ದಾಣದಿಂದ ಕಾರ್ಯಾಚರಣೆ ಮಾಡಲಿವೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ರೇಷ್ಮೆ ಇಲಾಖೆ

ರೇಷ್ಮೆ ಮಾರುಕಟ್ಟೆ ಅಧಿಕಾರಿ ಹಾಗೂ ರೇಷ್ಮೆ ಜಂಟಿ ನಿರ್ದೇಶಕರ ಕಛೇರಿ, ರೇಷ್ಮೆ ವಿನಿಮಯ ಕೇಂದ್ರ, ರೇಷ್ಮೆ ಭವನ, ಓಕಳೀಪುರ, ಬೆಂಗಳೂರು - 560021

ಸಂಖ್ಯೆ: ಬೆರೆವಿಕೆ/ಲೆಕ್ಕ/ಹಮಾಲಿ/ಟೆಂಡರ್/05/2022-23 ದಿನಾಂಕ: 01.09.2022

ಮರು ಟೆಂಡರ್ ಪ್ರಕಟಣೆ

ರೇಷ್ಮೆ ಜಂಟಿ ನಿರ್ದೇಶಕರು ಹಾಗೂ ರೇಷ್ಮೆ ಮಾರುಕಟ್ಟೆ ಅಧಿಕಾರಿಗಳು, ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು ಇವರಿಂದ ಹಮಾಲಿಗಳ ಸೇವೆಗಾಗಿ 2022-23ನೇ ಸಾಲಿಗೆ (ಟೆಂಡರ್ ಅವಧಿ-12 ತಿಂಗಳು) ಕಾರ್ಮಿಕ ಇಲಾಖೆಯಿಂದ ನೋಂದಾಯಿಸಲ್ಪಟ್ಟ ಸಂಸ್ಥೆಗಳು / ಅರ್ಹ ವ್ಯಕ್ತಿಗಳಿಂದ ಕಾರ್ಮಿಕ ಇಲಾಖೆಯ ಪ್ರಕಟಣೆ ಸಂಖ್ಯೆ: ಕೆ.ಎ.ಇ-23 ಎಲ್.ಎಮ್.ಡಬ್ಲ್ಯೂ 2017 ದಿನಾಂಕ: 30.12.2017 ರ ಕನಿಷ್ಟ ವೇತನ ಹಾಗೂ ವಿ.ಡಿ.ಎ (01.04.2022 ರಿಂದ 31.03.2023)ರ ಅನ್ವಯ ಎರಡು ಸಂಖ್ಯೆಯ ಹಮಾಲಿಗಳಿಂದ ಕೆಲಸ ನಿರ್ವಹಿಸಲು ಅರ್ಹ ವ್ಯಕ್ತಿಗಳಿಂದ ಮರು ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಇ.ಎಂ.ಡಿ ಮೊತ್ತ ರೂ. 10,000/- ಟೆಂಡರ್ ಫಾರಂ ಬೆಲೆ ರೂ. 100/- ಆಗಿರುತ್ತದೆ. ಟೆಂಡರ್‌ನ ಅಂದಾಜು ಮೌಲ್ಯ ರೂ. 4.50 ಲಕ್ಷ. **ಮರು ಟೆಂಡರ್ ವೇಳಾಪಟ್ಟಿ** 1). ಟೆಂಡರ್ ಪ್ರಕಟಣೆ ದಿನಾಂಕ: 02.09.2022. 2). ಟೆಂಡರ್ ಫಾರಂ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 03.09.2022. 3). ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 12.09.2022 ರ ಸಂಜೆ 05.00 ಗಂಟೆಗೆ 4). ಟೆಂಡರ್ ತೆರೆಯುವ ವೇಳೆ ಮತ್ತು ದಿನಾಂಕ: 13.09.2022 ರ ಮಧ್ಯಾಹ್ನ 3.30 ಗಂಟೆಗೆ 5). ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: ರೂ. 10,000/- ನಿಯಮ ಮತ್ತು ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಚೇರಿಯನ್ನು ಸಂಪರ್ಕಿಸುವುದು.

ಸಹಿ/- ರೇಷ್ಮೆ ಜಂಟಿ ನಿರ್ದೇಶಕರು
ಹಾಗೂ ರೇಷ್ಮೆ ಮಾರುಕಟ್ಟೆ ಅಧಿಕಾರಿಯವರು
ವಾಸಾಸಂಇ/ವಾಪ್ರ/ಅಡ್ವಿಟ್/2024/2022-23 ರೇಷ್ಮೆ ವಿನಿಮಯ ಕೇಂದ್ರ, ಬೆಂಗಳೂರು

ಶ್ರೀ ವಿನಾಯಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

ನಂ. 14, 3ನೇ ಮುಖ್ಯ ರಸ್ತೆ, ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು-560 003.
ದೂ. 23441545, 23441546, 23419545, 23241399.

49ನೇ ಸರ್ವ ಸದಸ್ಯರ ಸಭೆಯ ತಿಳುವಳಿಕೆ
ದಿನಾಂಕ: 18-09-2022 ರ ಬೆಳಿಗ್ಗೆ 10:00 ಘಂಟೆಗೆ

ಮೇಲ್ಕಂಡ ಸೊಸೈಟಿಯ 2021-2022ನೇ ಸಾಲಿನ 49ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ದಿನಾಂಕ: 18-09-2022 ರ ಭಾನುವಾರ ಬೆಳಿಗ್ಗೆ 10:00 ಘಂಟೆಗೆ **"ಶ್ರೀ ರಾಮ್ ಕನ್ವೇನ್‌ಷನ್ ಹಾಲ್"** ಸರ್ಪಂಟೈನ್ ರಸ್ತೆ, ಕುಮಾರ ಪಾರ್ಕ್ ವೆಸ್ಟ್, ಎಸ್.ಬಿ.ಐ ಹಿಂಭಾಗ, ಹಾಪ್ ಕಾಮ್ಸ್ ಹತ್ತಿರ ಬೆಂಗಳೂರು-560020 ಇಲ್ಲಿ ಸಂಘದ ಅಧ್ಯಕ್ಷರಾದ **ಶ್ರೀ ಬಿ. ರಾಮಕೃಷ್ಣ** ರವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರಿಗೆ ಸಭೆಯ ನೋಟಿಸ್‌ನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ನೋಟೀಸ್ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ನೋಟೀಸ್ ಎಂದು ತಿಳಿದು ಮಾನ್ಯ ಸಾಮಾನ್ಯ (ರೆಗ್ಯೂಲರ್) ಸದಸ್ಯರು ಕಡ್ಡಾಯವಾಗಿ ಸೊಸೈಟಿಯಿಂದ ನೀಡಿರುವ ಗುರುತಿನ ಚೀಟಿಯೊಂದಿಗೆ ಸಭೆಗೆ ಆಗಮಿಸಬೇಕಾಗಿ ಕೋರಿದೆ. 2021-2022ನೇ ಶೈಕ್ಷಣಿಕ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಕನಿಷ್ಠ ಶೇಕಡ 80ಕ್ಕೂ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವಂತಹ ಹಾಗೂ ಕ್ರೀಡೆಯಲ್ಲಿ ರಾಜ್ಯ/ದೇಶ/ವಿದೇಶ ಮಟ್ಟದಲ್ಲಿ ಬಹುಮಾನ ಪಡೆದ ಸಾಮಾನ್ಯ (ರೆಗ್ಯೂಲರ್) ಸದಸ್ಯರುಗಳ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಪ್ರತಿಭಾ ಪುರಸ್ಕಾರದ ಅರ್ಜಿಯನ್ನು ಸೊಸೈಟಿಯಲ್ಲಿ ವಿತರಿಸಲಾಗುತ್ತಿದೆ. ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ: 13-09-2022ರ ಸಂಜೆ 07:00 ಘಂಟೆಯೊಳಗೆ ಕೇಂದ್ರ ಕಛೇರಿಗೆ ಸಲ್ಲಿಸಬೇಕು.

ದಿನಾಂಕ: 02-09-2022 ಸಹಿ/-
ಬೆಂಗಳೂರು ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ - 562110.

ಸಂಖ್ಯೆ: ಬಿಐಎಎಪಿಎ/ಟಿಪಿ/ಭೂಉಬ/36/2022-23/1102 ದಿನಾಂಕ: 29-08-2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಭೂವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಆರ್. ಗೋಪಾಲ್ ಬಿನ್ ಎಂ. ರಾಮಯ್ಯ	ದೇವನಹಳ್ಳಿ	ಕಸಬಾ	ಭಂಡರಾಮನಹಳ್ಳಿ	13	2ಎ-31ಗು	ವ್ಯವಸಾಯ	ವಸತಿ
2		ದೇವನಹಳ್ಳಿ	ಕಸಬಾ	ಭಂಡರಾಮನಹಳ್ಳಿ	16/2	6ಎ-07ಗು	ವ್ಯವಸಾಯ	ವಸತಿ

ಷರಾ:- ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದೆಂದೂ ಸದರಿ ಜಮೀನುಗಳು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾ.ಪ್ರ/2023/ಅಡ್ವರ್ಟೋ/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land Converted

Hosur Road

KRISHNAGIRI (TAMILNADU) Near District Court, DTCP, RERA Approved 2.33 Acre Layout Sale. Contact: 9443225303, 8660719986.

Commerical

General

MADIWALA- MARUTHI Ngr PG: site 1350sf, Building 8000sf Borewell, lift total 50rooms+ attach bathroom, Dining area, CCTV & Parking: 8803499999

Sites

Vishweshwariah Layout

AVAILABLE 20X30 BDA Vishweshwariah Layout Near 100ft Road, 40X60 60ft Road Good Location Contact: 9481703468

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New-Technology and Readymade Precasting Compound Wall-work. Contact-9880916988

RENTAL PROPERTIES

Accommodation Available

Commercial

CO-WORKINGSPACE. LAUNCH Offer. Open workstation. Rs.3500/month. Private cabinRs.15000/month. Virtual office Rs.750/month. Kalyanagar- 9980902345

House

FOR RENT/ Less 1 BHK 1st Floor Banashakari 2nd Stage near DG petrol Bank 9845264457

JOB OPPORTUNITIES

Engg/ Production Technical

DIWAKAR SOLAR Jaipur requires an Auto Cad Operator with two year experience in solar designing for Bangalore. Contact: 94140 51705. SBL51705@GMAIL.COM

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

BANKING SECTOR Jobs. Office work, Field work. Telecaller Qualification: SSLC,PUC and Degree. Salary: 20k. 7483098280

Wanted

WANTED BUSINESS DEVELOPMENT MANAGER, Earn more than 1,00,000/ month, Part-time/ Full-time/ Freshers/ Retired. 9341313141

WANTED MALE Female Sales man, Sales girl, Accountant. Contact Navrang Silk Saree Showroom, M.G. Road Public Utility Building, Bangalore

Multiple Vacancy

REQUIRE
CHANNEL MANAGEMENT OFFICER : 1 - 2 yrs
TERRITORY SALES MANAGER : 3 - 5 yrs
CUSTOMER RELATION EXECUTIVE : 1 yrs
BILLING OFFICER : 2 - 3 yrs
Graduates & Freshers are welcome.
Dates : 2nd & 9th Sep 2022
Time : 10 a.m. to 5 p.m.
DTDC Express Limited
No. 269, Lahari Towers, Albert Victor Road,1st Main, Chamarajpet, Bangalore.
Ph: 9886861012 / 9513403034
hr.bangalore@dtdc.com

Receptionist/ Secretary

REQUIRED
Secretary to MD's Office at CBD Area
At Least 5 year of Experience
Professional in Mailing, Correspondence Etc.
(M) 9164878690
(E) info@safinaplaza.com

Manager

VISHWAKARMA TRUST, Requires Young, Male Customer Support Manager to maintain entire activities of the Sabha Bhavana. Salary 20,000 + Incentives. Candidates residing in and around Kasthuri Nagar, Bangalore are preferred. Contact: 9880726846, within 15 days.

BUSINESS

Business to Business

Finance

WANTED 30 Lakhs finance for Educational Building Construction- Koratagere Taluk, Tumkur. Security Assured. Contact: 8296778087

WANTED BUSINESS PARTNER with 3L investment for selling consumables. We offer ONLINE PLATFORM, Marketing, Advertisement, Godown, Delivery. Profit on Sales: 9980883950

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7411265189

Franchise

WANTED FRANCHISEES With Small Investment for Libey Custom T-Shirts in Major Cities of karnataka 9972588991.

Business For Sale

SCHOOL FOR SALE Government approved English medium School near Magadi road toll-gate is for sale. 650 students in English medium and 150 students in Kannada medium aided high school are studying. School housed with five floor buildings within two 30x40 sites. Interested may contact- 9448074071

BEAUTY & HEALTH

Skin Care

ಕರ್ನಾಟಕದಲ್ಲೇ ಪ್ರಪ್ರಥಮ ಬಾರಿ ತುಮಕೂರು ಮತ್ತು ಬೆಂಗಳೂರಿನಲ್ಲಿ ಪ್ರಾರಂಭವಾಗಿದೆ ವಿಶ್ವವಿಖ್ಯಾತ
FRAXEL DUAL LASER (ಫ್ರಾಕ್ಸೆಲ್ ಡ್ಯುಯಲ್ ಲೇಸರ್) ಚಿಕಿತ್ಸೆ ತುಮಕೂರಿನ ಕಾಸ್ಮೊ ಕ್ಲಿನಿಕ್‌ನಲ್ಲಿ ಲಭ್ಯ
ಈ ಮಿಷನ್‌ನಿಂದ ಲಭ್ಯವಾಗುವ ಚಿಕಿತ್ಸೆಗಳು

ಕಪ್ಪು ಕಲೆ, ಕುಳಿಬಿದ್ದ ಕಲೆ, ಉಬ್ಬಿದ ಕಲೆ, ಶಸ್ತ್ರ ಚಿಕಿತ್ಸೆಗಳಿಂದ ಆಗಿರುವ ಕಲೆಗಳ ನಿವಾರಣೆ ತ್ವಚೆಯ ದೃಢತೆ, ಮುಖದ ಸುಕ್ಕು ಮತ್ತು ನೆರಿಗೆಗಳಿಗೆ ಸ್ಟ್ರೆಚ್ ಮಾರ್ಕ್‌ಗಳಿಗೆ ತ್ವರಿತಗತಿಯಲ್ಲಿ ನಿವಾರಣೆಯಾಗುತ್ತದೆ.
ಡಾ. ಸತ್ಯಾನಂದ
ಕಾಸ್ಮೊ ಸ್ಕಿನ್ ಕ್ಲಿನಿಕ್
1ನೇ 'ಎ' ಕ್ರಾಸ್, ಸಿದ್ದಗಂಗಾ ಬಡಾವಣೆ, ತುಮಕೂರು
Mobile : 94482 14441
Ph : 0816-2270061

EDUCATIONAL

Tuitions

STANDARDS 7 to 10 ICSE / CBSE Hindi Tution on or offline contact 9886754479

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

OTHERS

For Sale

RETIRED ACADEMICIAN wishes to sell his stock of old management and computer books contact 8549984515

PERSONAL

Change of Name

I, SHEEBA ABRAHAM (old name) W/o Vincent Fernandes, R/a No.2, 7th Cross, Medarahalli, Chikkabanavara, Bengaluru-560090, have changed my name as SHEEBA FERNANDES (new name) vide affidavit dated 26.08.22 notary N.Mahesha, Bengaluru.

NAMITA MANJARI NATH W/o 6495774K NK/ASH Tapan Kumar Nath, R/a Hatiasuni Nagar RRL Khurda Bhubaneswar Odisha, my name NAMITA MANJARI NATH to NAMITA NATH, Notary KV Mani, Bangalore.

I, KHUKU DATTA M/o 14855044P- Sep/MT- RAJIB DATTA, R/a Thakurchara, South Tripura, Tripura changed name from KHUKU DATTA to KHUKURANI DATTA notary K.V.Mani, Bangalore.

I, JC-820586K- Sub- BASAPPA BHANGI at CMP Centre and School, Bangalore changed name from BASAPPA BHANGI to BASAPPA PATIL notary K.V.Mani, Bangalore.

I, RAMESH RANGANATHAN, residing at Bengaluru-16 have changed my name as RAMESH RANGANATH, vide affidavit dated 1/9/2022 before Notary P.C.Ramaiah, Bengaluru

PUBLIC NOTICE

PUBLIC NOTICE
My client Mr. Mohammed Shabbeer intends to purchase the immovable property morefully described in the schedule hereunder written and hereinafter referred to as the "Schedule Property" from its current owner Sri. L. Lingaraju, was allotted by the Bangalore Development Authority ("BDA" for short). The BDA has executed an Absolute Sale Deed dated 28/04/2004, registered as Document No. BDA-1-00868-2004-05 of Book-I, Stored in C. D. No. BDAD31, registered at the office of Additional District Registrar, Bengaluru Urban District.
Any person/s, firms, societies, institutions, entity (corporate or otherwise) claiming to have any right, title, interest, benefit, claim or demand in, or to, the Schedule Property and/or any part thereof, by way of sale, exchange, gift, lease, tenancy, license, assignment, mortgage, charge, lien, trust, family arrangement/settlement, encumbrance, inheritance, bequest, easement, possession, maintenance, development rights, order/decree/ judgment of any Court, agreement, understanding or otherwise howsoever, to intimate the same, together with true copies of all documentary evidence/ proof in support thereof, to the undersigned, at the address given below, within 10 days from the date of publication of this notice, failing which, any such claim/s in, to or on the Schedule Property or any part thereof shall be deemed to have been waived for all intents and purposes and the same would not be binding on our client and our client will proceed with acquiring the Schedule Property.
SCHEDULE
All that piece and parcel of vacant land bearing Site No.392, BBMP Khata No. 298/372, Sector-4, Hosur Sarjapura Road, measuring East to West 24.39 meters, North to South 15.24 meters, total 371.70 Sq. Meters, bounded by: East by: Site bearing No. 384 and 385, West by: Road, North by: Site bearing No. 393, South by: Site bearing No. 391
Sourabh R Kurubarahalli, Advocate
Address: N-104, 1st Floor, Manipal Centre, Dickenson Road, Bengaluru-560 042
Email- sourabhrkurubarahalli@gmail.com
Mobile No:- 9620704646

DH DECCAN HERALD ಪ್ರಜಾವಾಣಿ

BOOK YOUR REAL ESTATE
Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
100	150	120	190	600

For More Details Contact:
Ph:080- 45557160 | 163 | 164 |
M: 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಇಂದಿನಿಂದ ಬಿಜೆಪಿ ಪ್ರಶಿಕ್ಷಣ ವರ್ಗ

ಕೋಲಾರ: ರಾಜ್ಯ ಬಿಜೆಪಿ ಎಸ್‌ಸಿ ಮೋರ್ಚಾ ಪ್ರಶಿಕ್ಷಣ ವರ್ಗ ಶುಕ್ರವಾರ (ಸೆ.2) ಆರಂಭವಾಗಲಿದ್ದು, ಪಕ್ಷ ಸಂಘಟನೆ ಸಂಬಂಧ ಮೂರು ದಿನ ಪ್ರಮುಖ ಮುಖಂಡರು ಸಮಾಲೋಚನೆ ನಡೆಸಲಿದ್ದಾರೆ.

ನಗರ ಹೊರವಲಯದ ಕಾಳಸ್ತಿಪುರ ಗೇಟ್ ಬಳಿಯ ರತ್ನಾ ಕನ್ವೆನ್ಷನ್ ಹಾಲ್‌ನಲ್ಲಿ ಬೆಳಿಗ್ಗೆ 10 ಗಂಟೆಗೆ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಾಲ್ ಸಿಂಗ್ ಆರ್ಯ ಚಾಲನೆ ನೀಡಲಿದ್ದಾರೆ. ಎಸ್‌ಸಿ ಮೋರ್ಚಾ ರಾಜ್ಯ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ, ಸಂಸದ ಎಸ್.ಮುನಿಸ್ವಾಮಿ ಪಾಲ್ಗೊಳ್ಳಲಿದ್ದಾರೆ.

‘ಚುನಾವಣೆ ಸಮೀಪಿಸುತ್ತಿರುವುದರಿಂದ ಜನರೊಂದಿಗೆ ಬೆರೆಯುವ ರೀತಿ, ಪಕ್ಷ ಸಂಘಟನೆ, ಪಕ್ಷದ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಬಗೆ, ಯಾವ ರೀತಿಯ ವಿಚಾರಗಳನ್ನು ಜನರ ಮುಂದಿಡಬೇಕು ಎಂಬುದರ ಕುರಿತು ಪ್ರಶಿಕ್ಷಣ ವರ್ಗದಲ್ಲಿ ಚರ್ಚಿಸಲಾಗುವುದು’ ಎಂದು ಮೂಲಗಳು ತಿಳಿಸಿವೆ.

12 ಸಾವಿರ ಪಿಒಪಿ ಮೂರ್ತಿಗಳ ವಿಸರ್ಜನೆ

ಬೆಂಗಳೂರು: ನಗರದಲ್ಲಿ ಬುಧವಾರ ಒಂದೇದಿನ 12 ಸಾವಿರಕ್ಕೂ ಹೆಚ್ಚು ಪಿಒಪಿ ಮೂರ್ತಿಗಳು ವಿಸರ್ಜನೆಯಾಗಿವೆ.

ಆ.31ರಂದು ಸಂಚಾರಿ/ ಮೊಬೈಲ್ ಟ್ಯಾಂಕರ್ ಹಾಗೂ ಕಲ್ಯಾಣಿ/ ಹೊಂಡಗಳಲ್ಲಿ ಒಟ್ಟು 1,59,980 ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಅತಿ ಹೆಚ್ಚು ಮಣ್ಣಿನ ಮೂರ್ತಿಗಳು (68,521) ದಕ್ಷಿಣ ವಲಯದಲ್ಲಿ ವಿಸರ್ಜನೆಯಾಗಿದ್ದು, ಇದೇ ವಲಯದಲ್ಲಿ ಅತಿ ಹೆಚ್ಚು ಪಿಒಪಿ ಮೂರ್ತಿಗಳೂ (11,402) ವಿಸರ್ಜನೆಯಾಗಿವೆ. ನಂತರದ ಸ್ಥಾನದಲ್ಲಿ ಪಶ್ಚಿಮ ವಲಯ (306) ಇದೆ. ಆರ್.ಆರ್. ನಗರ– 152, ಬೊಮ್ಮನಹಳ್ಳಿ– 131, ಯಲಹಂಕ– 73, ದಾಸರಹಳ್ಳಿ ವಲಯದಲ್ಲಿ 22 ಪಿಒಪಿ ಮೂರ್ತಿಗಳು ವಿಸರ್ಜನೆಯಾಗಿವೆ. ಪೂರ್ವ ಹಾಗೂ ಮಹದೇವಪುರ ವಲಯಲದಲ್ಲಿ ಪಿಒಪಿ ಮೂರ್ತಿಗಳು ವಿಸರ್ಜನೆಯಾಗಿಲ್ಲ.

ಗರ್ಭಕಂಠದ ಕ್ಯಾನ್ಸರ್: ಶೀಘ್ರದಲ್ಲೇ ಲಸಿಕೆ

ನವದೆಹಲಿ (ಪಿಟಿಐ): ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಭಾರತವು ಮೊದಲ ಬಾರಿಗೆ ಸ್ಥಳೀಯವಾಗಿ ಅಭಿವೃದ್ಧಿಪಡಿಸಿರುವ ಕ್ವಾಡ್ರಿವೇಲೆಂಟ್ ಹ್ಯೂಮನ್ ಪ್ಯಾಪಿಲೋಮಾ ವೈರಸ್ (ಎಚ್‌ಪಿವಿ) ಲಸಿಕೆಯನ್ನು ಕೆಲವೇ ತಿಂಗಳುಗಳಲ್ಲಿ ಬಿಡುಗಡೆ ಮಾಡಲಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ಅವರು ಗುರುವಾರ ಹೇಳಿದ್ದಾರೆ.

ಶಿಕಾರಿಪಾಳ್ಯ ಕೆರೆ ಒತ್ತುವರಿ ಮಾಡಿ ಅಪಾರ್ಟ್‌ಮೆಂಟ್ ನಿರ್ಮಾಣ ● ಕೆಎಸ್‌ಪಿಸಿಬಿ ಶಿಫಾರಸು

‘ಎಸ್‌ಟಿಪಿ ಇಲ್ಲದೆ ಅನುಮತಿ ಬೇಡ’

ಪ್ರಜಾವಾಣಿ ವಾರ್ತೆ

ನವದೆಹಲಿ: ತ್ಯಾಜ್ಯ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ಹೊಂದಿರದ ಅಪಾರ್ಟ್‌ಮೆಂಟ್ ಸಮುಚ್ಚಯ ಹಾಗೂ ವಾಣಿಜ್ಯ ಸಂಕೀರ್ಣಗಳಿಗೆ ಅನುಮತಿ ನೀಡಬಾರದು ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಶಿಫಾರಸು ಮಾಡಿದೆ.

ಬೆಂಗಳೂರಿನ ಜಿಗಣಿ ಸಮೀಪದ ಮಾರಗೊಂಡನಹಳ್ಳಿಯ ಶಿಕಾರಿಪಾಳ್ಯ ಕೆರೆ ಒತ್ತುವರಿ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಸೂಚನೆಯ ಮೇರೆಗೆ ಅಧಿಕಾರಿಗಳ ಸಮಿತಿ ವರದಿಯನ್ನು ಸಲ್ಲಿಸಿದೆ. ಆ ವರದಿಯಲ್ಲಿ ಕೆಎಸ್‌ಪಿಸಿಬಿ ಈ

ಮುಖ್ಯಾಂಶಗಳು

- ಎನ್‌ಜಿಟಿ ಮೆಟ್ಟಿಲೇರಿದ್ದ ನಾಗರಿಕ
- ವಸ್ತುಸ್ಥಿತಿ ವರದಿ ನೀಡುವಂತೆ ಸೂಚಿಸಿದ್ದ ಎನ್‌ಜಿಟಿ
- ಜಲಕಾಯಕ್ಕೆ ಸೇರುತ್ತಿರುವ ಗ್ರಾಮಗಳ ಕೊಳಚೆ ನೀರು

ಶಿಫಾರಸು ಮಾಡಿದೆ. ಅಪಾರ್ಟ್‌ಮೆಂಟ್ ಸಮುಚ್ಚಯದ ಒಳಗೆ ತ್ಯಾಜ್ಯ ನೀರು ಸಂಸ್ಕರಿಸಿ ಪುನರ್ ಬಳಕೆಗೆ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದೂ ಶಿಫಾರಸು ಮಾಡಲಾಗಿದೆ.

ಜಲಕಾಯಕ್ಕೆ ತ್ಯಾಜ್ಯ ನೀರು ಸೇರುತ್ತಿದೆ ಹಾಗೂ ಒತ್ತುವರಿಯಾಗಿದೆ ಎಂದು ಆರೋಪಿಸಿ ಮಣ್ಣೆ ರಂಜನ್ ಎಂಬುವರು ಈ ವರ್ಷದ ಮಾರ್ಚ್‌ನಲ್ಲಿ ಎನ್‌ಜಿಟಿಯ ಪ್ರಧಾನ ಪೀಠದ ಮೊರೆ ಹೋಗಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಪೀಠವು, ಬಿಬಿಎಂಪಿ ಮುಖ್ಯ ಆಯುಕ್ತರು, ನಗರ ಜಿಲ್ಲಾಧಿಕಾರಿ ಹಾಗೂ ಕೆಎಸ್‌ಪಿಸಿಬಿಯ ಪ್ರತಿನಿಧಿಗಳ ಸಮಿತಿ ರಚಿಸಿ ವರದಿ ನೀಡುವಂತೆ ನಿರ್ದೇಶನ ನೀಡಿತ್ತು. ಅಧಿಕಾರಿಗಳ ತಂಡವು ಕೆರೆ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಿ ಪ್ರಧಾನ ಪೀಠಕ್ಕೆ ಗುರುವಾರ ವರದಿ ಸಲ್ಲಿಸಿದೆ. ಪ್ರಕರಣದ ವಿಚಾರಣೆಯನ್ನು ಅಕ್ಟೋಬರ್ 14ಕ್ಕೆ ಮುಂದೂಡಲಾಗಿದೆ.

‘ಕೆಲವು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಎಸ್‌ಟಿಪಿಗಳು ಇಲ್ಲ. ಎಸ್‌ಟಿಪಿಗಳನ್ನು ಅಳವಡಿಸುವವರೆಗೆ ತ್ಯಾಜ್ಯ ನೀರು ಸಂಸ್ಕರಣೆಗೆ ಪರ್ಯಾಯ ಹಾಗೂ ವಿಕೇಂದ್ರೀಕೃತ ಸಂಸ್ಕರಣಾ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳಬೇಕು’ ಎಂದೂ ವರದಿಯಲ್ಲಿ ತಿಳಿಸಲಾಗಿದೆ.

ಶಿಕಾರಿಪಾಳ್ಯ ಕೆರೆಗೆ ಆಸುಪಾಸಿನ ಗ್ರಾಮಗಳ ತ್ಯಾಜ್ಯ ನೀರು ಸೇರುತ್ತಿದೆ. ಅದನ್ನು ತಡೆಗಟ್ಟಲು ಸ್ಥಳೀಯ ಸಂಸ್ಥೆಗಳು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಸಮಿತಿ ಸೂಚಿಸಿದ್ದು, ಜಲಕಾಯದ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿರುವ ಎಲ್ಲ ಅಪಾರ್ಟ್‌ಮೆಂಟ್ ಸಮುಚ್ಚಯಗಳ ಪರಿಸರ ಲೆಕ್ಕಪರಿಶೋಧನೆ ನಡೆಸಬೇಕು. ಆಗ ಅಪಾರ್ಟ್‌ಮೆಂಟ್‌ಗಳ ಎಸ್‌ಟಿಪಿಗಳ ಸ್ಥಿತಿಗತಿ ಪರಿಶೀಲನೆ ನಡೆಸಲು ಸಾಧ್ಯವಾಗುತ್ತದೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಗ್ರಾಮದ ಸರ್ವೆ ಸಂಖ್ಯೆ 110ರಲ್ಲಿ 18 ಎಕರೆ 39 ಗುಂಟೆ ಪ್ರದೇಶದಲ್ಲಿ ಕೆರೆ ಇದೆ. ಜಲಕಾಯದ 1 ಎಕರೆ 38 ಗುಂಟೆ ಒತ್ತುವರಿಯಾಗಿದೆ ಎಂಬುದನ್ನು ಬೆಂಗಳೂರು ನಗರ ಜಿಲ್ಲಾಡಳಿತ ಒಪ್ಪಿಕೊಂಡಿತ್ತು. ಜುಲೈನಲ್ಲಿ ಕಾರ್ಯಾಚರಣೆ ನಡೆಸಿ 1 ಎಕರೆ 30 ಗುಂಟೆಯ ಒತ್ತುವರಿ ತೆರವುಗೊಳಿಸಲಾಗಿದೆ. 8 ಗುಂಟೆ ಪ್ರದೇಶದಲ್ಲಿ ಸರ್ಕಾರಿ ಉರ್ದು ಶಾಲೆ ಇದ್ದು, ಅದರ ಒತ್ತುವರಿ ತೆರವು ಬಾಕಿ ಇದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕೆರೆಯ ಪುನರುಜ್ಜೀವನದ ಕಾರ್ಯ ಶೇ 90ರಷ್ಟು ಪೂರ್ಣಗೊಂಡಿದ್ದು, ಗಿಡಗಳನ್ನು ನೆಡುವುದು ಸೇರಿದಂತೆ ಸಣ್ಣಪುಟ್ಟ ಕಾರ್ಯಗಳು ಬಾಕಿ ಇವೆ. ಈ ಕಾಮಗಾರಿಗಳು ಶೀಘ್ರ ಪೂರ್ಣಗೊಳ್ಳಲಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

48 ಉಪನ್ಯಾಸಕರ ಪರಿಷ್ಕೃತ ಪಟ್ಟಿ ಪ್ರಕಟ

ಬೆಂಗಳೂರು: ಪದವಿಪೂರ್ವ ಕಾಲೇಜು ಉಪನ್ಯಾಸಕರ ಖಾಲಿ ಹುದ್ದೆ ಭರ್ತಿಗೆ 2020ರಲ್ಲಿ ಪ್ರಕಟಿಸಿದ್ದ ಹೆಚ್ಚುವರಿ ಪಟ್ಟಿಯಲ್ಲಿನ 48 ಅಭ್ಯರ್ಥಿಗಳ ಪರಿಷ್ಕೃತ ಪಟ್ಟಿಯನ್ನು ಪದವಿಪೂರ್ವ ಶಿಕ್ಷಣ ಇಲಾಖೆ ಗುರುವಾರ ಬಿಡುಗಡೆ ಮಾಡಿದೆ.

ರಾಜ್ಯದ ವಿವಿಧ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇದ್ದ 1,203 ಹುದ್ದೆಗಳಿಗೆ 2015ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. 2018 ಡಿಸೆಂಬರ್‌ನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪರೀಕ್ಷೆ ನಡೆಸಿತ್ತು. ವಿವಿಧ ವಿಷಯ, ಮೀಸಲಾತಿ ಆಧಾರದಲ್ಲಿ ಸಿದ್ಧವಾಗಿದ್ದ ಆಯ್ಕೆಪಟ್ಟಿ ಅನುಸಾರ ಅಭ್ಯರ್ಥಿಗಳಿಗೆ 2020ರಲ್ಲಿ ನೇಮಕಾತಿ ಆದೇಶ ನೀಡಲಾಗಿತ್ತು.

ಅಂದು 48 ಅಭ್ಯರ್ಥಿಗಳು ವಿವಿಧ ಕಾರಣಗಳಿಂದ ಉಪನ್ಯಾಸಕರ ಹುದ್ದೆಗೆ ವರದಿ ಮಾಡಿಕೊಂಡಿರಲಿಲ್ಲ. ಖಾಲಿ ಉಳಿದಿದ್ದ ಆ ಹುದ್ದೆಗಳಿಗೆ ಈಚೆಗೆ ಆಯ್ಕೆ ಪಟ್ಟಿ ಪ್ರಕಟಿಸಲಾಗಿತ್ತು. ಜ್ಯೇಷ್ಠತೆ ಉಲ್ಲಂಘಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಆರೋಪ ಕೇಳಿಬಂದಿತ್ತು. ಈ ಕುರಿತು ‘ಪ್ರಜಾವಾಣಿ’ ಆ.27ರ ಸಂಚಿಕೆಯಲ್ಲಿ ‘ನಿಯಮ ಉಲ್ಲಂಘಿಸಿ ನೇಮಕ’ ಶೀರ್ಷಿಕೆ ಅಡಿ ವಿಶೇಷ ವರದಿ ಪ್ರಕಟಿಸಿತ್ತು.

ಪರಿಷ್ಕೃತ ಪಟ್ಟಿಗೆ ಆಕ್ಷೇಪಣೆಗಳು ಇದ್ದರೆ ಸೆ.8ರ ಸಂಜೆ 5.30ರ ಒಳಗೆ ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರ ಕಚೇರಿಗೆ ಸಲ್ಲಿಸಲು ಕೋರಲಾಗಿದೆ.

ನಗರದಲ್ಲಿ ಇಂದು

ವಿಜ್ಞಾನ ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ಜವಾಹರ್‌ಲಾಲ್ ನೆಹರೂ ತಾರಾಲಯ, ಟಿ.ಚೌಡಯ್ಯ ರಸ್ತೆ, ಹೈಗ್ರೌಂಡ್ಸ್, ಬೆಳಿಗ್ಗೆ 10.30

ಡಾ.ದೀಪ್ತಿ ನವರತ್ನ ಅವರ ‘ದಿ ಮೇವರಿಕ್ ಮಹಾರಾಜ’ ಪುಸ್ತಕ ಬಿಡುಗಡೆ: ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಪಾರ್ಕ್, ಮಧ್ಯಾಹ್ನ 1

ನೃತ್ಯ ಸಂಭ್ರಮ: ಆರಗ ಜ್ಞಾನೇಂದ್ರ, ಎಂ.ಟಿ.ಬಿ. ನಾಗರಾಜ್, ಬಲವಂತ ರಾವ್ ಪಾಟೀಲ್, ಆಯೋಜನೆ: ಸಂಗೀತ ನೃತ್ಯ ಭಾರತಿ ಅಕಾಡೆಮಿ, ಸ್ಥಳ: ಎಡಿಎ ರಂಗಮಂದಿರ, ಸಂಜೆ 4.30

‘ಕೃಷ್ಣಗಾರುಡಿಗ’ ಅಭಿನಂದನಾ ಗ್ರಂಥ ಬಿಡುಗಡೆ: ಉದ್ಘಾಟನೆ: ದೊಡ್ಡರಂಗೇಗೌಡ, ಅಧ್ಯಕ್ಷತೆ: ಕೆ. ಮರುಳಸಿದ್ದಪ್ಪ, ಕೃತಿ ಬಿಡುಗಡೆ: ಶ್ರೀನಾಥ್, ಆಯೋಜನೆ: ಪಂಪ ಸಾಂಸ್ಕೃತಿಕ ಮತ್ತು ಸಾಮಾಜಿಕ ಕೇಂದ್ರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 5.15

ಸಂಗೀತ ಕಾರ್ಯಕ್ರಮ: ಪ್ರಸ್ತುತಿ: ಅಲೋಕ್.ಆರ್.ಬಾಬು (ಆಲ್ ಒಕೆ), ಆಯೋಜನೆ ಮತ್ತು ಸ್ಥಳ: ಶ್ರೀವಿನಾಯಕ ಮಿತ್ರ ಮಂಡಳಿ, ಜಯನಗರ, ಸಂಜೆ 6.30

ಮಿಲ್ಕ್ ಕಾಲೊನಿ ಗಣೇಶ ಹಬ್ಬ: ಕಂಬದ ರಂಗಯ್ಯ ಮತ್ತು ತಂಡ, ಆಯೋಜನೆ: ಸ್ವಸ್ತಿಕ್ ಯುವಕರ ಸಂಘ, ಸ್ಥಳ: ಮಿಲ್ಕ್ ಕಾಲೊನಿ, ರಾಜಾಜಿನಗರ, ಸಂಜೆ 7

ಮುರುಘಾ ಶ್ರೀ ಪ್ರಕರಣ; ತ್ವರಿತ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಶರಣರ ಮೇಲಿನ ಆರೋಪದ ವಿಚಾರಣೆಯನ್ನು ತ್ವರಿತವಾಗಿ, ಪಾರದರ್ಶಕವಾಗಿ ನಡೆಸಬೇಕು ಎಂದು ಸಾಹಿತಿಗಳಾದ ಕೆ.ಮರುಳಸಿದ್ದಪ್ಪ, ಜಿ.ರಾಮಕೃಷ್ಣ, ರಾಜೇಂದ್ರ ಚೆನ್ನಿ, ಅಲ್ಲಮಪ್ರಭು ಬೆಟ್ಟದೂರು, ಜೆ.ಎಸ್.ಪಾಟೀಲ, ಶಂಕರ ಹಲಗತ್ತಿ, ಕೆ.ನೀಲಾ, ಸಿದ್ದನಗೌಡ ಪಾಟೀಲ ಒತ್ತಾಯಿಸಿದ್ದಾರೆ.

ಶರಣರು ಮಠದ ವಸತಿ ಶಾಲೆಯ ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂಬುದು ಗಂಭೀರ ಆರೋಪ. ಈ ಸಮಯದಲ್ಲಿ ಶರಣರು ನೀಡಿದ ‘ಸಂಧಾನಕ್ಕೂ ಸಿದ್ಧ, ಸಮರಕ್ಕೂ ಸಿದ್ಧ’ ಎಂಬ ಹೇಳಿಕೆ ಅವರ ಘನತೆ ಹೆಚ್ಚಿಸುವಂತಿರಲಿಲ್ಲ. ಸಂಧಾನ, ಸಮರ ಮಠದ ಆಂತರಿಕ ವಿಚಾರ. ಆದರೆ, ಆರೋಪ ಮಾಡಿರುವ ಹೆಣ್ಣು ಮಕ್ಕಳ ಬಗ್ಗೆ ತೀವ್ರ ನಿರ್ಲಕ್ಷ್ಯ ತೋರಿದ್ದಾರೆ. ಸರ್ಕಾರ ಮತ್ತು ಪೊಲೀಸ್ ಸಹ ಅವರ ಹಿತರಕ್ಷಣೆಯನ್ನು ಆದ್ಯತೆಯ ವಿಚಾರವಾಗಿ ಪರಿಗಣಿಸಲಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪೋಕ್ಸೊ ಕಾಯ್ದೆ, ದಲಿತರ ಮೇಲೆ ಎಸಗಿದ ದೌರ್ಜನ್ಯದಂತಹ ದೂರುಗಳು ದಾಖಲಾದರೂ ತನಿಖೆ ಆಮೆಗತಿಯಲ್ಲಿ ನಡೆಯುತ್ತಿದೆ. ಬಲಾಢ್ಯರನ್ನು ರಕ್ಷಿಸಲಾಗುತ್ತಿದೆ ಎಂಬ ಅನುಮಾನ ವ್ಯಕ್ತವಾಗುತ್ತಿದೆ. ಕ್ಷಿಪ್ರವಾಗಿ ನ್ಯಾಯ ದೊರಕದಿದ್ದರೆ ಕಾನೂನು ಸುವ್ಯವಸ್ಥೆಯ ಬಗ್ಗೆ ಜನರು ನಂಬಿಕೆ ಕಳೆದುಕೊಳ್ಳುವ ಸಂಭವವಿದೆ. ಸರ್ಕಾರ ಇತ್ತ ತುರ್ತುಗಮನ ಹರಿಸಬೇಕು. ಬಡ ಹೆಣ್ಣುಮಕ್ಕಳಿಗೆ ನ್ಯಾಯ ಒದಗಿಸಬೇಕು. ಆರೋಪ ಸುಳ್ಳಾಗಿದ್ದರೆ ನ್ಯಾಯ ಸಮ್ಮತವಾಗಿ ಅದು ಗೊತ್ತಾಗಬೇಕು ಎಂದು ಒತ್ತಾಯಿಸಿದ್ದಾರೆ.

ಸಮಗ್ರ ತನಿಖೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರನ್ನು ಪೊಲೀಸರು ಬಂಧಿಸಿರುವುದು ನಿರಂತರ ಹೋರಾಟಕ್ಕೆ ಸಿಕ್ಕಿರುವ ಸಣ್ಣ ಜಯವಷ್ಟೆ’ ಎಂದು ಇಲ್ಲಿನ ಒಡನಾಡಿ ಸಂಸ್ಥೆಯ ಸಂಚಾಲಕ ಪರಶುರಾಂ ಪ್ರತಿಕ್ರಿಯಿಸಿದರು.

‘ಪ್ರಜಾವಾಣಿ’ ಜೊತೆ ಮಾತನಾಡಿದ ಅವರು, ‘ಇಬ್ಬರು ವಿದ್ಯಾರ್ಥಿನಿಯರಷ್ಟೆ ದೌರ್ಜನ್ಯಕ್ಕೆ ಒಳಗಾಗಿಲ್ಲ. ಮಠದ ವಸತಿನಿಲಯದಲ್ಲಿನ ಬಹಳಷ್ಟು ವಿದ್ಯಾರ್ಥಿನಿಯರು ಶೋಷಣೆಗೆ ಒಳಗಾಗಿದ್ದಾರೆ. ಅವರೂ ನೊಂದಿದ್ದಾರೆ;ನಲುಗಿದ್ದಾರೆ. ಹೀಗಾಗಿ, ಪ್ರಕರಣವನ್ನು ನ್ಯಾಯಾಂಗದ ಸುಪರ್ದಿಯಲ್ಲಿ ಸಮಗ್ರ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.

ಮೋದಿಯವರೇ ಅಚ್ಛೇ ದಿನ್ ಯಾವಾಗ?– ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿಯ ಸುಪರ್ದಿಯಲ್ಲಿಯೇ 24X7 ಭ್ರಷ್ಟಾಚಾರ ವಿರೋಧಿ ಸಹಾಯವಾಣಿ’ ಇದೆ ಎಂದು ನೀವು ಹೇಳುತ್ತೀರಿ. ಆದರೆ, ಶೇ 40 ಕಮಿಷನ್ ಬಗ್ಗೆ ಗುತ್ತಿಗೆದಾರರು ಪ್ರಧಾನಿ ಕಚೇರಿಗೆ ಪತ್ರ ಬರೆದರೂ ಉತ್ತರ ಇಲ್ಲ ಎಂದು ಜನ ಮಾತನಾಡುತ್ತಿದ್ದಾರೆ. ಇದೇನಾ ನಿಮ್ಮ ‘ನಾ ಖಾವೂಂಗಾ, ನಾ ಖಾನೆ ದೂಂಗಾ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಪ್ರಶ್ನಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, ‘ರೈತರಿಗೆ ಲಾಭದಾಯಕ ಬೆಂಬಲ ಬೆಲೆ ಎನ್ನುತ್ತೀರಿ. ಎಂಎಸ್‌ಪಿ ಲೆಕ್ಕದಲ್ಲಿಯೇ ಮೋಸ, ಎಂಎಸ್‌ಪಿ ದರದಲ್ಲಿ ಬೆಳೆ ಖರೀದಿಸುವವರೇ ಇಲ್ಲ. ರೈತರಿಗೆ ಅಚ್ಛೇ ದಿನ್ ಯಾವಾಗ ಮೋದಿಯಯವರೇ’ ಎಂದೂ ಕೇಳಿದ್ದಾರೆ.

‘ಸಣ್ಣ ಕೈಗಾರಿಕೆಗಳಿಗೆ ₹ 6,000 ಕೋಟಿ ನೆರವು ಎನ್ನುತ್ತೀರಿ. ಆದರೆ, ಎರಡು ವರ್ಷಗಳಲ್ಲಿ 754 ಕೈಗಾರಿಕೆಗಳಿಗೆ ಬೀಗ, 44,000 ಉದ್ಯೋಗ ನಷ್ಟವಾಗಿದೆ. ಎಲ್ಲಿದೆ ನಿಮ್ಮ ವರ್ಷಕ್ಕೆ ಎರಡು ಕೋಟಿ ಉದ್ಯೋಗ’ ಎಂದೂ ಪ್ರಶ್ನಿಸಿದ್ದಾರೆ.

‘2022ಕ್ಕೆ ಎಲ್ಲರ ಮನೆಗೆ ವಿದ್ಯುತ್ ಎಂದೂ ಹೇಳುತ್ತೀರಿ. ದಿನಕ್ಕೆ ಕನಿಷ್ಠ 10 ಗಂಟೆಯೂ ವಿದ್ಯುತ್ ಇಲ್ಲ. ಮಹಿಳೆಯರು ಮಸಾಲೆ ಅರೆಯಲು ವಿದ್ಯುತ್ ಕಚೇರಿಗೆ ಹೋಗಿದ್ದರಂತೆ. ಇದಕ್ಕಾಗಿಯೇ ಜನರಿಗೆ ಕ್ಯಾಂಡಲ್ ಹಚ್ಚಲು ಕರೆ ನೀಡಿದ್ರಾ ಮೋದಿಯವರೇ’ ಎಂದೂ ಕುಟುಕಿದ್ದಾರೆ.

ಭೂಮಿಕಾ ಕ್ಲಬ್: 5 ಮಂದಿಗೆ ವಾಟರ್ ಪ್ಯೂರಿಫೈರ್

ಬೆಂಗಳೂರು: ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ‘ಭೂಮಿಕಾ ಕ್ಲಬ್’ ಉದ್ಘಾಟನೆಗೊಂಡಿದ್ದು, ಆ ಸಂದರ್ಭದಲ್ಲಿ ಆಯೋಜಿಸಿದ್ದ ಲಕ್ಕಿ ಡಿಪ್‌ನಲ್ಲಿ ಐವರು ಅದೃಷ್ಟಶಾಲಿಗಳಿಗೆ ಎಒ ಸ್ಮಿತ್ ವಾಟರ್ ಪ್ಯೂರಿಫೈರ್ ದೊರೆಯಲಿದೆ.

ಆಯ್ಕೆಯಾದವರು: ಅಖಿಲಾ ಎಸ್., ಹೇಮಲತಾ ರೇವಣ್ಣ, ಶೈಲಾ ರಾವ್, ಟಿ.ಎನ್. ಯಶೋದಾ, ವರ್ಷಾ ಸೊಂಡೂರ್. ಸ್ಮೂತ್ ಚಾಕೊಲೇಟ್ಸ್ ಹಾಗೂ ಚಾ ಅಂಗಡಿ ಉದ್ಘಾಟನಾ ಸಮಾರಂಭದಲ್ಲಿ ಉಡುಗೊರೆ ಹಾಗೂ ಉಪಾಹಾರದ ಸಹಭಾಗಿತ್ವ ವಹಿಸಿದ್ದವು.

ಚಿತ್ರಾವಳಿ

ನಗರದ ಸ್ಯಾಂಕಿ ಕೆರೆಯಲ್ಲಿ ಬಿಬಿಎಂಪಿ ವ್ಯವಸ್ಥೆ ಮಾಡಿದ್ದ ಜಾಗದಲ್ಲಿ ಗಣೇಶ ವಿಗ್ರಹಗಳನ್ನು ಸಾರ್ವಜನಿಕರು ಬುಧವಾರ ವಿಸರ್ಜಿಸಿದರು

ನಗರದ ಸ್ಯಾಂಕಿ ಕೆರೆಯಲ್ಲಿ ಬುಧವಾರ ಬಿಬಿಎಂಪಿ ವ್ಯವಸ್ಥೆ ಮಾಡಿದ್ದ ಜಾಗದಲ್ಲಿ ಸಾರ್ವಜನಿಕರು ನೀಡಿದ ಗಣೇಶ ವಿಗ್ರಹಗಳನ್ನು ಬಿಬಿಎಂಪಿ ನೌಕರರು ವಿಸರ್ಜಿಸಿದರು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಮೈಸೂರು ರೇಸ್

ಪ್ರೈಸ್‌ಲೆಸ್ ಗೋಲ್ಡ್ ಗೆಲ್ಲುವ ನಿರೀಕ್ಷೆ

ಕೃಷ್ಣರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪ್ರೈಸ್‌ಲೆಸ್ ಗೋಲ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಡಿ ಅಡ್ಮಿರಲ್ 6, ವಿಜಯ ಮಿರಾಕಲ್ 4, ಮಿರಾಕ್ಯುಲಸ್ ಗರ್ಲ್ 1
2ನೇ ರೇಸ್: ಡಿ ಫೈರ್ 2, ಸೆವೆನ್ತ್ ಸ್ಟಾರ್ 7, ಮಾರ್ವೆಲ್ ಪ್ರಿನ್ಸೆಸ್ 1
3ನೇ ರೇಸ್: ಕೋರ್ಟ್ ಜೆಸ್ಟರ್ 3, ಬ್ರನ್‌ಹಿಲ್ಡ್ 8, ಕಿಂಗ್ ಟಿ'ಚಾಲ 2
4ನೇ ರೇಸ್: ಅಸ್ಟ್ರಾಲಜರ್ 5, ಪರ್ಫೆಕ್ಟ್ ಇಮ್ಯಾಜಿನೇಶನ್ 11, ನಿಚೆ ಕೆನ್ನಾಬಿಸ್ 7
5ನೇ ರೇಸ್: ಪ್ರೈಸ್‌ಲೆಸ್ ಗೋಲ್ಡ್ 4, ಜೇಕ್ 3, ಮೈ ಒಪಿನಿಯನ್ 1
6ನೇ ರೇಸ್: ಪಾರ್ಕರ್ 2, ಸಮಯ್ ಬಲ್ವಾನ್ 10, ಫನ್ ಅಂಡ್ ಲಾಟರ್ 5
7ನೇ ರೇಸ್: ನೊಟೊರೈಟಿ 1, ಗ್ಯಾಲರಿ ಕ್ವೀನ್ 7, ಫ್ಲೆಮಿಂಗೊ ಡ್ಯಾನ್ಸರ್ 11

ಉತ್ತಮ ಬೆಟ್: ಅಸ್ಟ್ರಾಲಜರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

INVEST KARNATAKA

TiE FOSTERING ENTREPRENEURSHIP

VentuRISE Global Startup Challenge

Powered by amazon

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಡಾ. ಮುರುಗೇಶ್ ಆರ್ ನಿರಾಣಿ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು
ವ್ಯಚುರೈಸ್ - 2022 ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವುದು

ಸೆಪ್ಟೆಂಬರ್ 1 - 25, 2022

ಉತ್ಪಾದನೆ ಮತ್ತು ಸುಸ್ಥಿರತೆಯ ಭವಿಷ್ಯವನ್ನು ರೂಪಿಸುವ ಯುವ ವ್ಯವಹಾರಗಳಿಗಾಗಿ ಭಾರತದ ಪ್ರೀಮಿಯಂ ಆರಂಭಿಕ ಸವಾಲಿನಲ್ಲಿ ಭಾಗವಹಿಸಿ.

#BuildForTheWorld

100,000 ಯುಎಸ್ ಡಾಲರ್ ಗಳಷ್ಟು ಮೊತ್ತದ ನಗದು ಬಹುಮಾನಗಳನ್ನು ಅತ್ಯುನ್ನತ 3 ನವೋದ್ಯಮಗಳು ಗೆಲ್ಲಬಹುದು!

ಸಂಭಾವ್ಯ ಹೂಡಿಕೆದಾರರನ್ನು ಭೇಟಿ ಮಾಡಿ ಮತ್ತು ಜಾಗತಿಕ ಪ್ರೇಕ್ಷಕರನ್ನು ಗಳಿಸಿ.

ಇಂದೇ ಭಾಗವಹಿಸಿ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ ಸೆಪ್ಟೆಂಬರ್ 25, 2022, ಸಂಜೆ 5 ಗಂಟೆಗೆ

https://investkarnataka.co.in/gim2022/venturise

ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಲ್ಪಟ್ಟಂತೆ, "ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಯ ಎಲ್ಲಾ ಕ್ಷೇತ್ರಗಳಲ್ಲಿ ಉತ್ಕೃಷ್ಟತೆಯ ಕಡೆಗೆ ಶ್ರಮಿಸಬೇಕು, ಇದರಿಂದ ರಾಷ್ಟ್ರವು ನಿರಂತರವಾಗಿ ಉನ್ನತ ಮಟ್ಟದ ಪ್ರಯತ್ನ ಮತ್ತು ಸಾಧನೆಗೆ ಏರುತ್ತದೆ" ಎಂಬುದು ಭಾರತದ ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯವಾಗಿದೆ.

ಗುಂಜನ್ ಕೃಷ್ಣ, ಐಎಎಸ್
ಕೈಗಾರಿಕಾ ಅಭಿವೃದ್ಧಿ ಆಯುಕ್ತರು;
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ನಿರ್ದೇಶಕರು
ಕರ್ನಾಟಕ ಸರ್ಕಾರ

ಡಾ.ಇ.ವಿ.ರಮಣ ರೆಡ್ಡಿ, ಐಎಎಸ್
ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕೈಗಾರಿಕೆಗಳು ಮತ್ತು ವಾಣಿಜ್ಯ ಇಲಾಖೆ ಕರ್ನಾಟಕ ಸರ್ಕಾರ

ಶುಕ್ರವಾರ • ಸೆಪ್ಟೆಂಬರ್ 2, 2022 ಪ್ರಜಾವಾಣಿ

ರಾಜಕಾಲುವೆ: 'ಬಿಡಿಎ ಅಭಿವೃದ್ಧಿಗೊಳಿಸಿದ ಬಡಾವಣೆ' ಎಂಬ ಷರಾ

'ಬಿಡಿಎ, ಬಿಬಿಎಂಪಿಯಿಂದ ಒತ್ತುವರಿ'

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ ರಾಜಕಾಲುವೆ ಒತ್ತುವರಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೊಳೆಗೇರಿ ಅಭಿವೃದ್ಧಿ ಮಂಡಳಿ ಕೂಡ ಭಾಗಿಯಾಗಿವೆ. ಇದರಲ್ಲಿ ಬಿಡಿಎಯದ್ದೇ ಸಿಂಹಪಾಲು.

ಕಳೆದ ವರ್ಷ ಡಿಸೆಂಬರ್ 31ರಂತೆ ರಾಜಕಾಲುವೆ ಒತ್ತುವರಿಯನ್ನು ಪಟ್ಟಿ ಮಾಡಿರುವ ಬಿಬಿಎಂಪಿ ವರದಿಯಲ್ಲಿ ಇದು ದಾಖಲಾಗಿದೆ. ನಗರದಲ್ಲಿ ಒಟ್ಟಾರೆ 2,626 ಸ್ಥಳಗಳಲ್ಲಿ ರಾಜಕಾಲುವೆ ಒತ್ತುವರಿಯಾಗಿದೆ. ಇದರಲ್ಲಿ ಇನ್ನೂ 696 ಸ್ಥಳಗಳಲ್ಲಿ ಒತ್ತುವರಿ ತೆರವಾಗಬೇಕಿದೆ. ಇನ್ನೂ 52 ಪ್ರಕರಣಗಳು ನ್ಯಾಯಾಲಯದಲ್ಲಿವೆ.

ಅತಿ ಹೆಚ್ಚು ಮಳೆಯಿಂದ ಸಂಕಷ್ಟಕ್ಕೆ ಒಳಗಾಗಿರುವ ನಗರದ ಮಹದೇವಪುರ ವಲಯದಲ್ಲೇ ರಾಜಕಾಲುವೆ ಅತಿ ಹೆಚ್ಚು ಒತ್ತುವರಿಯಾಗಿದೆ. ಅಲ್ಲದೆ, ಪೂರ್ವ ವಲಯದಲ್ಲಿ ಬಿಡಿಎ ಅತಿ ಹೆಚ್ಚು ಒತ್ತುವರಿ ಮಾಡಿದೆ. ಬಿಬಿಎಂಪಿ ರಾಜಕಾಲುವೆ ವಿಭಾಗದ ವರದಿಯ ಪ್ರಕಾರ, ಪೂರ್ವ ವಲಯದಲ್ಲಿ ಬಿಡಿಎ 124 ಸ್ಥಳಗಳಲ್ಲಿ ಎಕರೆ, ಗುಂಟೆ ಹಾಗೂ ಚದರ ಮೀಟರ್ ಲೆಕ್ಕಾಚಾರದಲ್ಲಿ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡಿದೆ. ಈ ಸ್ಥಳಗಳಲ್ಲಿ ಕಟ್ಟಡಗಳು ನಿರ್ಮಾಣವಾಗಿವೆ. ಕೆಲವು ಕಡೆ ಖಾಲಿ ಪ್ರದೇಶವಿದೆ. ಇದಲ್ಲದೆ ರಾಜಕಾಲುವೆ ಒತ್ತುವರಿ ಪ್ರದೇಶದಲ್ಲಿ ಬಿಡಿಎ ರಸ್ತೆ, ಮೈದಾನಗಳನ್ನು ಅಭಿವೃದ್ಧಿ ಮಾಡಿದೆ.

ಕೋನೇನ ಅಗ್ರಹಾರ, ದೂಕನಹಳ್ಳಿ, ದೊಮ್ಮಲೂರು, ಲಿಂಗರಾಜಪುರ, ಕಾಚರಕನಹಳ್ಳಿ, ಕಾಡುಗೊಂಡನಹಳ್ಳಿ, ಹೆಣ್ಣೂರು ಪ್ರದೇಶಗಳಲ್ಲಿ ಬಿಡಿಎ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡಿದೆ. ಈ ಎಲ್ಲ ಒತ್ತುವರಿಯನ್ನು 'ತೆರವು-ಗೊಳಿಸಲಾಗಿದೆ' ಎಂದು ಹೇಳದೆ, 2018-19ರಿಂದೀಚೆಗೆ 'ಪರಿಹರಿಸಲಾದ ಒತ್ತುವರಿ ಪಟ್ಟಿ'ಯಲ್ಲಿ ಬಿಬಿಎಂಪಿ ದಾಖಲಿಸಿದೆ. ರಾಜಕಾಲುವೆಯ ಒತ್ತುವರಿ ಪ್ರದೇಶವನ್ನು ಪಟ್ಟಿಯ ಷರಾದಲ್ಲಿ 'ಬಿಡಿಎ ಅಭಿವೃದ್ಧಿಪಡಿಸಿದ ಭೂಮಿ', 'ಬಿಡಿಎ ಬಡಾವಣೆ', 'ಬಿಡಿಎ' ಎಂದು ನಮೂದಿಸಿದೆ. ಇದೇ ಪೂರ್ವ ವಲಯದಲ್ಲಿ ಮೂರು ಪ್ರಕರಣಗಳಲ್ಲಿ ಖಾಸಗಿ ವ್ಯಕ್ತಿಗಳು ಮಾಡಿಕೊಂಡಿದ್ದ ಒತ್ತುವರಿಯನ್ನು ತೆರವುಗೊಳಿಸಿದ-ರುವ ಬಿಬಿಎಂಪಿ, ಪಟ್ಟಿಯ ಷರಾದಲ್ಲಿ 'ಒತ್ತುವರಿ ತೆರವುಗೊಳಿಸಲಾಗಿದೆ' ಎಂದು ನಮೂದಿಸಿದೆ.

ಇನ್ನು ಬಿಬಿಎಂಪಿಯೇ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡಿರುವ ಪ್ರಕರಣವನ್ನೂ ಈ ಪಟ್ಟಿಯಲ್ಲಿ ತೋರಿಸಲಾಗಿದೆ. ಚಿಕ್ಕಪೇಟೆಯಲ್ಲಿರುವ ವಾಣಿಜ್ಯ ಕಟ್ಟಡಗಳ ಎರಡು ಪ್ರಕರಣಗಳು ನ್ಯಾಯಾಲಯದಲ್ಲಿವೆ. ಇದಲ್ಲದೆ, ಹೆಬ್ಬಾಳ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಗಂಗೇನಹಳ್ಳಿಯಲ್ಲಿ 23 ಹಾಗೂ 1-4 ಗುಂಟೆ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡಿರುವ ಬಿಬಿಎಂಪಿಯು ಶೌಚಾಲಯ ಮತ್ತು ಕಟ್ಟಡವನ್ನು ನಿರ್ಮಿಸಿದೆ. ಇದಕ್ಕೂ ಷರಾದಲ್ಲಿ 'ಬಿಬಿಎಂಪಿ ಶೌಚಾಲಯ' ಹಾಗೂ 'ಬಿಬಿಎಂಪಿ ಕಟ್ಟಡ' ಎಂದು ನಮೂದಿಸಿದೆ. ಇದು ಬಾಕಿ ಪ್ರಕರಣಗಳ ಪಟ್ಟಿಯಲ್ಲಿದೆ.

ಕೊಳೆಗೇರಿ ಅಭಿವೃದ್ಧಿ ಮಂಡಳಿ ಕೂಡ ಪುಲಕೇಶಿನಗರ ವಿಧಾನಸಭೆ ಕ್ಷೇತ್ರದ ಕಾವಲಬೈರಸಂದ್ರದಲ್ಲಿ ಒಟ್ಟು 38 ಗುಂಟೆ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡಿದ್ದು, ಮನೆಗಳನ್ನು ನಿರ್ಮಿಸಿದೆ. ಷರಾದಲ್ಲಿ 'ಸ್ಲಂ ಬೋರ್ಡ್' ಎಂದು ಬಿಬಿಎಂಪಿ ರಾಜಕಾಲುವೆ ಒತ್ತುವರಿ ಪಟ್ಟಿಯಲ್ಲಿ ನಮೂದಿಸಿದೆ.

ಪ್ರಜಾವಾಣಿ ವಿಶೇಷ

32 ಮನೆ ತೆರವು: ಆಯುಕ್ತ

ತುಷಾರ್ ಗಿರಿನಾಥ್

'ರೈನ್‌ಬೊ ಬಡಾವಣೆಯಲ್ಲಿ ಕೆಲವರು ನಕ್ಷೆ ಉಲ್ಲಂಘಿಸಿ ರಾಜಕಾಲುವೆ ಮೇಲೆಯೇ ಮನೆ ಕಟ್ಟಿದ್ದಾರೆ. 32 ಮನೆಗಳು ರಾಜಕಾಲುವೆ ಮೇಲೆ ಇವೆ. ಅವರದ್ದೇ ತಪ್ಪಿನಿಂದ ಅವಾಂತರ ಆಗುತ್ತಿದೆ. ಅವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು, ತೆರವು ಮಾಡಲಾಗುತ್ತದೆ. ಪ್ರಮುಖವಾಗಿ ಹೆಚ್ಚು ಸಮಸ್ಯೆ ಎಲ್ಲಿ ಆಗುತ್ತಿದೆಯೋ ಅಲ್ಲಿ ನಾವು ತೆರವು ಕಾರ್ಯ ಮಾಡುತ್ತೇವೆ. ನಂತರ ಎಲ್ಲ ಒತ್ತುವರಿಯನ್ನೂ ತೆರವು ಮಾಡಲಾಗುತ್ತದೆ. 500ಕ್ಕೂ ಹೆಚ್ಚು ಸ್ಥಳಗಳಲ್ಲಿ ರಾಜಕಾಲುವೆ ಒತ್ತುವರಿಯಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಅವರದ್ದು ಮಾತ್ರ ಸಕ್ರಮವೇ?

ಗೋಪಾಲರೆಡ್ಡಿ

'ಬಾಣಸವಾಡಿ-ಕಾಚರಕನಹಳ್ಳಿ ವ್ಯಾಪ್ತಿಯಲ್ಲಿ ರಾಜಕಾಲುವೆ, ಕೆರೆ ಪ್ರದೇಶವನ್ನು ಬಿಡಿಎ ಒತ್ತುವರಿ ಮಾಡಿಕೊಡಿಕೊಂಡು ಬಡಾವಣೆ ನಿರ್ಮಿಸಿದೆ. ಆ ಒತ್ತುವರಿಯನ್ನು ತೆರವು ಮಾಡಲು ಯಾರೂ ಮುಂದಾಗುತ್ತಿಲ್ಲ. ಜನ ಮಾಡಿಕೊಂಡರೆ ಮಾತ್ರ ಒತ್ತುವರಿಯೇ? ಬಿಡಿಎ, ಬಿಬಿಎಂಪಿ ಒತ್ತುವರಿ ಮಾಡಿಕೊಂಡರೆ ಅದು ಸಕ್ರಮವೇ? ಹೀಗೆ ಮಳೆ ಬಂದಾಗ ಮಾತ್ರ ಎಲ್ಲ ಒತ್ತುವರಿ ತೆಗೆಯುತ್ತೇವೆ ಎಂದು ಮುಖ್ಯಮಂತ್ರಿಯಾದಿಯಾಗಿ ಎಲ್ಲರೂ ಹೇಳುತ್ತಾರೆ. ಮಳೆ ನಿಂತ ಮೇಲೆ ಯಾರೂ ಬರೋಲ್ಲ, ಏನೂ ಹೇಳೊಲ್ಲ. ಮುಂದಿನ ವರ್ಷ ಮಳೆಯಾದಾಗ ಮತ್ತೆ ಬರುತ್ತಾರೆ, ಹೇಳುತ್ತಾರೆ ಅಷ್ಟೆ' ಎಂದು ಬಾಣಸವಾಡಿಯ ಗೋಪಾಲರೆಡ್ಡಿ ಕೋಪದಿಂದ ಪ್ರತಿಕ್ರಿಯಿಸಿದರು.

ರಾಜಕಾಲುವೆ ಒತ್ತುವರಿ ವಿವರ

ವಲಯ	ಒಟ್ಟು ಒತ್ತುವರಿ	2016-17ರಲ್ಲಿ ತೆರವು	2018-19ರ ನಂತರ ತೆರವು	ಬಾಕಿ
ಪೂರ್ವ	237	3	124	110
ಪಶ್ಚಿಮ	71	11	1	59
ದಕ್ಷಿಣ	20	0	0	20
ಕೋರಮಂಗಲ ಕಣಿವೆ	10	7	0	3
ಯಲಹಂಕ	588	215	277	96
ಮಹದೇವಪುರ	1,101	98	867	136
ಮಹದೇವಪುರ (ಹೊಸ)	45	0	0	45
ಬೊಮ್ಮನಹಳ್ಳಿ	276	40	210	26
ಬೊಮ್ಮನಹಳ್ಳಿ (ಹೊಸ)	66	0	0	66
ಆರ್.ಆರ್. ನಗರ	47	38	0	9
ದಾಸರಹಳ್ಳಿ	165	16	23	126
ಒಟ್ಟು	2,626	428	1,502	696

ಸಮಸ್ಯೆಗೆ ಹಿಂದಿನ ಸರ್ಕಾರಗಳೇ ಕಾರಣ: ಸಿ.ಎಂ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಳೆಯಿಂದ ಉಂಟಾದ ಪ್ರವಾಹ ಮತ್ತು ಸಮಸ್ಯೆಗಳಿಗೆ ಹಿಂದಿನ ಸರ್ಕಾರಗಳು ಹಾಗೂ ಆ ಅವಧಿಯಲ್ಲಿ ನಡೆಸಿರುವ ಭ್ರಷ್ಟಾಚಾರವೇ ಕಾರಣ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪರೋಕ್ಷವಾಗಿ ಸಿದ್ದರಾಮಯ್ಯ ಮತ್ತು ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಹರಿಹಾಯ್ದಿದ್ದಾರೆ.

ಮಳೆಯಿಂದ ಹಾನಿಗೀಡಾದ ಪ್ರದೇಶಗಳಿಗೆ ಗುರುವಾರ ಭೇಟಿ ನೀಡಿದ ಬಳಿಕ ಅವರು ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ, 'ರಾಜಕಾಲುವೆಗಳು ಮತ್ತು ಕೆರೆಗಳ ಒತ್ತುವರಿಗೆ ಅವಕಾಶ ನೀಡಿದ್ದು ಯಾವ ಸರ್ಕಾರಗಳು? ದೊಡ್ಡ ಬಿಲ್ಡರ್‌ಗಳು ಬೇಕಾಬಿಟ್ಟಿ ಒತ್ತುವರಿ ಮಾಡಿದ್ದಾರೆ. ಈ ಒತ್ತುವರಿಗಳ ಬಗ್ಗೆ ತನಿಖೆ ನಡೆಸಿ, ತಪ್ಪಿತಸ್ಥರನ್ನು ಶಿಕ್ಷೆಗೊಳಪಡಿಸುತ್ತೇವೆ' ಎಂದು ಗುಡುಗಿದರು.

'ಬೆಂಗಳೂರಿನಲ್ಲಿ ಈಗ ಉದ್ಭವಿಸಿರುವ ಸಮಸ್ಯೆಗಳಿಗೆ ಕಳೆದ 8- 10 ವರ್ಷ ಆಡಳಿತ ನಡೆಸಿರುವ ಸರ್ಕಾರಗಳೇ ಕಾರಣ. ಅಂದು ನಡೆಸಿ ದುರಾಡಳಿತದ ಪರಿಣಾಮವನ್ನು ಇಂದು ನಾಗರಿಕರು ಸಮಸ್ಯೆ ಅನುಭವಿಸು-ತ್ತಿದ್ದಾರೆ. ಅವರ ಆಡಳಿತದ 6-7 ವರ್ಷಗಳು ನಗರದಲ್ಲಿ ಮಳೆ ಮತ್ತು ಪ್ರವಾಹದ ಸಮಸ್ಯೆ ಉದ್ಭವಿಸಿರಲಿಲ್ಲ. ಆಗ ರಾಜಕಾಲುವೆಗಳನ್ನು ದುರಸ್ತಿಗೊ-ಳಿಸಬಹುದಿತ್ತು. ದುರಸ್ತಿಗೆಂದು ₹800 ಕೋಟಿ ತೆಗೆದಿಟ್ಟರು. ಆದರೆ, ಆ ಹಣ ಎಲ್ಲಿ ಹೋಯಿತು? ಅಂದು ನಡೆಸಿದ ಭ್ರಷ್ಟಾಚಾರ ಮತ್ತು ಕಳಪೆ ಕಾಮಗಾರಿಗಳೇ ಇಂದಿನ ಸ್ಥಿತಿಗೆ ಕಾರಣ' ಎಂದು ಬೊಮ್ಮಾಯಿ ದೂರಿದರು.

'ರಾಜಕಾಲುವೆಗಳು ಮತ್ತು ಕೆರೆಗಳ ಒತ್ತುವರಿ ನಮ್ಮ ಸರ್ಕಾರದ ಅವಧಿಯಲ್ಲಿ ಆಗಿದ್ದಲ್ಲ. ಹಿಂದಿನ ಸರ್ಕಾರಗಳ ಅವಧಿಯಲ್ಲಿ ಆಗಿದ್ದು, ಇದಕ್ಕೆ ದಾಖಲೆಗಳು ಇವೆ. 10-15 ದೊಡ್ಡ ಬಿಲ್ಡರ್‌ಗಳು ರಾಜಕಾಲುವೆಗಳ ಮೇಲೆ ಕಟ್ಟಡಗಳನ್ನು ಕಟ್ಟಿದರೂ ಆಗ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿದ್ದು ಏಕೆ? ಪರ ವಾನಗಿ ಕೊಟ್ಟು ಕಟ್ಟಡಗಳನ್ನು ನಿರ್ಮಿಸಲು ಏಕೆ ಬಿಟ್ಟಿರಿ?' ಎಂದು ಬಿಬಿಎಂಪಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

'ನಗರದ ಕೆರೆಗಳು ಮತ್ತು ರಾಜಕಾಲುವೆಗಳ ಬಗ್ಗೆ ಹಸಿರು ನ್ಯಾಯ ಪೀಠ ಆದೇಶ ನೀಡಿದ್ದು ಯಾವಾಗ? ಅದನ್ನು ಏಕೆ ಪಾಲನೆ ಮಾಡಿಲ್ಲ? ಬಫರ್ ವಲಯಕ್ಕೆ ಏಕೆ ಬಿಟ್ಟಿಲ್ಲ? ಇದು ನಮ್ಮ ಸರ್ಕಾರದ ತಪ್ಪೇ, ಅಂದಿನ ಸರ್ಕಾರ ಏಕೆ ಸುಮ್ಮನೆ ಕುಳಿತಿದ್ದವು? ಸಮಸ್ಯೆಗಳಿಗೆ ಹಿಂದಿನ ಸರ್ಕಾರಗಳನ್ನು ದೂರಿ ಪಲಾಯನ ಮಾಡುವವನು ನಾನಲ್ಲ. ಹಿಂದೆ ಆಡಳಿತ ಮಾಡಿದವರು ಈ ಸಮಸ್ಯೆಗೆ ಉತ್ತರ ನೀಡಬೇಕು' ಎಂದು ಆಗ್ರಹಿಸಿದರು.

ಸಭೆಯಲ್ಲಿ ಸಚಿವರಾದ ಡಾ. ಸಿ.ಎನ್.ಅಶ್ವತ್ಥ್ ನಾರಾಯಣ, ಬೈರತಿ ಬಸವರಾಜ, ಶಾಸಕ ಅರವಿಂದ ಲಿಂಬಾವಳಿ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಇದ್ದರು.

ನಗರ ಪ್ರದಕ್ಷಿಣೆಯಿಂದ ಪ್ರಯೋಜನ ಇಲ್ಲ: ಎಚ್‌ಡಿಕೆ

ಬೆಂಗಳೂರು: 'ರಾಜಕಾಲುವೆ, ಉಪ ಕಾಲುವೆಗಳನ್ನು ಒತ್ತುವರಿ ಮಾಡಿ ಪ್ರವಾಹಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳದ ಬಿಬಿಎಂಪಿ, ಕೆಲ ರಾಜಕಾರಣಿಗಳನ್ನು ಮೆಚ್ಚಿಸುವ ಕಾರ್ಯದಲ್ಲಿ ತೊಡಗಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ದೂರಿದರು.

'ರಾಜಕಾಲುವೆ ಒತ್ತುವರಿ ತೆರವುಗೊಳಿಸಿ, ಇದಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಹೇಳಿಕೆಗಳಿಂದ ಯಾವುದೇ ಉಪಯೋಗ ಇಲ್ಲ' ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ಮಳೆ ಅನಾಹುತ ರಾಜ್ಯದೆಲ್ಲೆಡೆಯಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಭೆಗಳನ್ನು ಮಾಡಿದ್ದಾರೆ. ಆದರೆ, ಇಂಥ ಸಭೆಗಳಿಂದ ಏನು ಉಪಯೋಗ? ಬೊಮ್ಮಾಯಿ ಅವರು ನಗರ ಪ್ರದಕ್ಷಿಣೆ ಮಾಡಿದರು. ಇದರಿಂದ ಫಲಶೃತಿ ಏನು? ಏನಾದರೂ ಪರಿಹಾರ ದೊರೆತಿದೆಯೇ' ಎಂದು ಪ್ರಶ್ನಿಸಿದರು.

'ಅನೇಕ ಬಲಿಷ್ಠರು ರಾಜಕಾಲುವೆ, ಉಪಕಾಲುವೆ ಮುಚ್ಚಿ ಅರಮನೆಗಳನ್ನು ಕಟ್ಟಿಕೊಂಡಿದ್ದಾರೆ. ಕೆರೆಗಳನ್ನು ನುಂಗಿ ಹಾಕಿದ್ದಾರೆ. ಈ ರೀತಿ ಜಲಾವೃತವಾಗಲು ದುರಾಸೆಯೇ ಕಾರಣ. ಪ್ರತಿ ಬಾರಿ ಮಳೆ ಬಂದಾಗಲೂ ಬೆಂಗಳೂರಿನ ಅನೇಕ ಪ್ರದೇಶಗಳು ನೀರಿನಲ್ಲಿ ತೇಲುತ್ತಿವೆ. ಈಗಲೂ ಸಹ ಸರ್ಕಾರ ಕಠಿಣ ಕ್ರಮಕೈಗೊಳ್ಳದೆ ಮೀನಮೇಷ ಎಣಿಸುತ್ತಿದೆ' ಎಂದು ಕಿಡಿಕಾರಿದರು.

ಅಚ್ಚರಿ ಇಲ್ಲ: ಮಾಜಿ ಸಂಸದ ಮುದ್ದಹನುಮೇಗೌಡ ರಾಜೀನಾಮೆ ವಿಚಾರ ಆಶ್ಚರ್ಯ ತರುವ ಘಟನೆ ಅಲ್ಲ. ಅನೇಕರು ಕಾಂಗ್ರೆಸ್ ತ್ಯಜಿಸುತ್ತಾರೆ ಎಂಬ ಸುದ್ದಿ ಹಬ್ಬಿತ್ತು. ಮುಂದಿನ ದಿನಗಳಲ್ಲಿ ಬಹಳ ಬದಲಾವಣೆಯಾಗಲಿದೆ' ಎಂದರು. 'ನಮ್ಮ ಪಕ್ಷದ ಸಂಘಟನೆ ನಾವೇ ಮಾಡಬೇಕು. ಇನ್ನೊಂದು ಪಕ್ಷದ ಮನೆ ಮುರಿದು ಸಂಘಟನೆ ಮಾಡುವುದಿಲ್ಲ. ಪ್ರಾಮಾಣಿಕವಾಗಿ ಸಂಘಟನೆ ಮಾಡುತ್ತೇವೆ' ಎಂದರು.

ಸೇರ್ಪಡೆ: ಬೀದರ್ ಜಿಲ್ಲೆಯ ಅಲ್ಪಸಂಖ್ಯಾತ ಸಮುದಾಯದ ನೂರಾರು ಮುಖಂಡರು ಗುರುವಾರ ಜೆಡಿಎಸ್ ಪಕ್ಷ ಸೇರಿದರು.

ಬೆಳ್ಳಂದೂರು ಬಳಿಯ ಎಜಿಆರ್ ಗಾರ್ಡ್‌ನ ರಸ್ತೆಯಲ್ಲಿ ನೀರು ತುಂಬಿಕೊಂಡಿರುವುದು

ರೈನ್‌ಬೋ ಡ್ರೈವ್ ಲೇಔಟ್‌ನಲ್ಲಿ ನೀರು ನಿಂತಿರುವುದು

'ಬೆಂಗಳೂರೀಗ ರಸ್ತೆ ಗುಂಡಿ, ಮುಳುಗುತ್ತಿರುವ ನಗರ'

ಬೆಂಗಳೂರು: 'ಜಾಗತಿಕ ಮಟ್ಟದಲ್ಲಿ ಐಟಿ, ಸ್ಟಾರ್ಟ್ ಅಪ್ ರಾಜಧಾನಿ ಎಂದು ಗುರುತಿಸಿಕೊಂಡಿದ್ದ ಬೆಂಗಳೂರು ನಗರ, ಇಂದು ಅತಿ ಹೆಚ್ಚು ರಸ್ತೆ ಗುಂಡಿ, ಮುಳುಗುತ್ತಿರುವ ನಗರವಾಗುತ್ತಿದೆ. ಡ್ರಗ್ಸ್ ರಾಜಧಾನಿ ಆಗುತ್ತಿದೆ. ಮೈದಾನ, ಮಸೀದಿ, ದೇವಾಲಯ ವಿಚಾರವಾಗಿ ಟೆನ್ಷನ್ ಸಿಟಿ ಆಗಿ ಬದಲಾಗುತ್ತಿದೆ' ಎಂದು ಕಾಂಗ್ರೆಸ್ ಶಾಸಕ ಕೃಷ್ಣ ಬೈರೇಗೌಡ ಕಳವಳ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಭ್ರಷ್ಟಾಚಾರ, ದುರಾಡಳಿತದಿಂದ ಬೆಂಗಳೂರಿನ ಜಾಗತಿಕ ನಾಯಕತ್ವ ದಿನೇ ದಿನೇ ಕುಸಿಯುತ್ತಿದೆ. ಇಲ್ಲಿನ ಉಸ್ತುವಾರಿಯನ್ನು ಮುಖ್ಯಮಂತ್ರಿ ಯಾರಿಗೂ ವಹಿಸಿಲ್ಲ. ಈ ಹೊಣೆ ವಹಿಸಿಕೊಳ್ಳಲು ಬಿಜೆಪಿಯಲ್ಲಿ ಆಂತರಿಕ ಗುದ್ದಾಟ ನಡೆಯುತ್ತಿದೆ' ಎಂದರು.

'ಬೆಂಗಳೂರಿನ ಇಂದಿನ ಸ್ಥಿತಿಗೆ ಶೇ 40ರಷ್ಟು ಕಮಿಷನ್ ಕಾರಣ. ಬಿಬಿಎಂಪಿ ಗುತ್ತಿಗೆದಾರರು ಹೇಳಿರುವಂತೆ ಶೇ 50 ಲಂಚ ಸ್ವೀಕರಿಸಿದ ಯಾವ ರಸ್ತೆಗಳು, ಮೇಲ್ಸೇತುವೆಗಳು, ಕಾಲುವೆಗಳು ಉಳಿಯಲು ಸಾಧ್ಯ? ಕೇವಲ ಐದು ವರ್ಷಗಳಲ್ಲಿ ಭ್ರಷ್ಟಾಚಾರದ ಆಡಳಿತದಿಂದ ಬೆಂಗಳೂರಿಗೆ ಕುಖ್ಯಾತಿ ಬಂದಿದೆ. ಅದಕ್ಕೆ ಜನರ ಕಷ್ಟ ಹಾಗೂ ಶಾಪ ಸಾಕ್ಷಿ' ಎಂದು ಕಿಡಿಕಾರಿದರು.

'ಬಿಜೆಪಿಗೆ ಹತ್ತಿರವಾಗಿರುವ ಮೋಹನ್ ದಾಸ್ ಪೈ, ಬೆಂಗಳೂರಿನ ಐಕಾನ್ ಆಗಿರುವ ಕಿರಣ್ ಮಜುಂದಾರ್ ಶಾ ಅವರು ನೇರವಾಗಿ ಪ್ರಧಾನಿಗೆ ಹಲವು ಬಾರಿ ಬೆಂಗಳೂರು ರಕ್ಷಿಸುವಂತೆ ಮನವಿ ಮಾಡಿದ್ದಾರೆ. ಆದರೂ ಮೋದಿ ಹಾಗೂ ಅಮಿತ್ ಶಾ ಅವರಿಗೆ ಬೆಂಗಳೂರು ರಕ್ಷಿಸುವ ಮನಸ್ಸಿಲ್ಲ' ಎಂದು ದೂರಿದರು.

ಬೆಂಗಳೂರು ಡ್ರಗ್ಸ್ ನಗರ ಆಗುತ್ತಿರುವುದಕ್ಕೆ ಯಾರು ಕಾರಣ ಎಂಬ ಪ್ರಶ್ನೆಗೆ, 'ಸರ್ಕಾರದ ಪ್ರಾಯೋಜಕತ್ವವೇ ಕಾರಣ. ಆರಂಭದಲ್ಲಿ ಸಿನಿಮಾ ತಾರೆಯರನ್ನು ಬಂಧಿಸಿ ನಾಟಕ ಮಾಡಿದರು. ನಂತರ ಡ್ರಗ್ಸ್ ಹಾವಳಿ ಕಡಿಮೆಯಾಗಿದೆಯೇ ಅಥವಾ ಐದು ಪಟ್ಟು ಹೆಚ್ಚಾಗಿದೆಯೇ? ಬಿಜೆಪಿಯವರು ತಮ್ಮ ಹತೋಟಿಗೆ ತೆಗೆದುಕೊಳ್ಳಲು ಈ ನಾಟಕ ಮಾಡಿದ್ದರು' ಎಂದು ಆರೋಪಿಸಿದರು.

ಕೆಪಿಸಿಸಿ ಸಂವಹನ ಮತ್ತು ಸಾಮಾಜಿಕ ಜಾಲ ತಾಣದ ಅಧ್ಯಕ್ಷರಾದ ಪ್ರಿಯಾಂಕ್ ಖರ್ಗೆ, 'ರಾಜ್ಯದಲ್ಲಿ ಡ್ರಗ್ಸ್ ನಿಗ್ರಹ ಕಾಯ್ದೆ ಅಡಿ 2018ರಲ್ಲಿ 1,030 ಪ್ರಕರಣ ದಾಖಲಾಗಿದ್ದರೆ, ಕಳೆದ ಎರಡು ವರ್ಷಗಳಲ್ಲಿ 5,587 ಪ್ರಕರಣಗಳು ದಾಖಲಾಗಿವೆ. ಡ್ರಗ್ಸ್ ಪ್ರಕರಣಗಳ ಸಂಖ್ಯೆ ಶೇ 462ರಷ್ಟು ಹೆಚ್ಚಾಗಿದೆ. ಇದು ಬಿಜೆಪಿ ಸರ್ಕಾರದ ಅವಧಿಯಲ್ಲಿ ಆಗಿರುವ ಏರಿಕೆ' ಎಂದರು.

ಬೆಂಗಳೂರು ಕಾಪಾಡಿ: ಮೋದಿಗೆ ಪೈ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್, ದಯವಿಟ್ಟು ಬೆಂಗಳೂರು ಕಾಪಾಡಿ. ಬೆಂಗಳೂರಿಗೆ ನೆರವಾಗಿ' ಎಂದು ಉದ್ಯಮಿ ಟಿ.ವಿ. ಮೋಹನ್‌ದಾಸ್ ಪೈ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಟ್ವೀಟ್ ಮೂಲಕ ಮನವಿ ಮಾಡಿದ್ದಾರೆ.

'ನಮ್ಮ ರಸ್ತೆಗಳಲ್ಲಿ ಗುಂಡಿಗಳಿವೆ. ಹಲವೆಡೆ ಕಸದ ರಾಶಿ ಬಿದ್ದಿದೆ. ರಾಜಕಾಲುವೆಗಳು ಹೂಳಿನಿಂದ ತುಂಬಿವೆ. ಇಂತಹ ಸಮಸ್ಯೆಗಳಿಂದ ಮುಕ್ತಿ ಪಡೆದು ಜನರ ಜೀವನಮಟ್ಟ ಸುಧಾರಿಸಲು ಹೆಚ್ಚು ಹಣದ ಅಗತ್ಯವಿದೆಯೇ ಅಥವಾ ಉತ್ತಮ ಆಡಳಿತ ಅಗತ್ಯವಿದೆಯೇ' ಎಂದು ಪ್ರಶ್ನಿಸಿದ್ದಾರೆ.

'ನಮ್ಮ ಮೆಟ್ರೊ ಯೋಜನೆ ನಿಗದಿತ ಅವಧಿಯಲ್ಲಿ ಮುಗಿಯುತ್ತಿಲ್ಲ. ನಿಧಾನವಾಗಿ ಅನುಷ್ಠಾನಗೊಳ್ಳುತ್ತಿದೆ. ಇದು ಸಂಪೂರ್ಣ ಆಡಳಿತದ ವೈಫಲ್ಯ. ಒಟ್ಟಾರೆಯಾಗಿ ದುರಾಡಳಿತ. ದಯವಿಟ್ಟು ನಮ್ಮ ಪ್ರಮುಖ ಯೋಜನೆಗಳನ್ನು ಪರಿಶೀಲಿಸಿ' ಎಂದು ಕೋರಿದ್ದಾರೆ.

'ಸಚಿವರ ಮಧ್ಯದ ಕಿತ್ತಾಟವೇ ಬೆಂಗಳೂರಿಗೆ ಕಂಟಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವರ ಮಧ್ಯದ ಕಿತ್ತಾಟವೇ ಬೆಂಗಳೂರು ಅಭಿವೃದ್ಧಿಗೆ ಕಂಟಕವಾಗಿದೆ ಎಂದು ವಿಧಾನಪರಿಷತ್ತಿನ ಜೆಡಿಎಸ್ ಸದಸ್ಯ ಟಿ.ಎ. ಶರವಣ ಟೀಕಿಸಿದ್ದಾರೆ.

ಬೆಂಗಳೂರನ್ನು ಪ್ರತಿನಿಧಿಸುವ ಏಳು ಮಂತ್ರಿಗಳು ಏಳು ದಿಕ್ಕಿಗೆ ಮುಖ ಮಾಡಿ, ಸಮನ್ವಯದಿಂದ ಕೆಲಸವನ್ನೇ ಮಾಡದೇ ಬೆಂಗಳೂರು ದುರಂತಕ್ಕೆ ಕೊಡುಗೆ ನೀಡುತ್ತಿದ್ದಾರೆ. ಮಂತ್ರಿಗಳ ದಂಡೆ ಇದ್ದರೂ ಜನ ನರಳುತ್ತಿರುವುದು ವಿಷಾದಕರ ಎಂದು ಅವರು ಹೇಳಿದ್ದಾರೆ.

ಸ್ವಚ್ಛ ಹಾಗೂ ಸುಂದರ ಬೆಂಗಳೂರು, ಸಿಲಿಕಾನ್ ಸಿಟಿ ಎಂಬೆಲ್ಲ ಘೋಷಣೆಗಳು ಸಂಪೂರ್ಣ ಬೋಗಸ್ ಎನ್ನುವುದನ್ನು ಈ ಮಹಾಮಳೆ ಬಯಲು ಮಾಡಿದೆ. ಚುನಾಯಿತ ಪ್ರತಿನಿಧಿಗಳಿಲ್ಲದೇ ಇಲ್ಲದ ಮಹಾನಗರ ಪಾಲಿಕೆ, ಮಳೆಯಲ್ಲಿ ಬಡವರು, ಮಧ್ಯಮ ವರ್ಗದ ಬದುಕು ಕೊಚ್ಚಿ ಹೋಗುತ್ತಿದ್ದರೂ ಕುಂಭಕರ್ಣ ನಿದ್ದೆಗೆ ಶರಣಾದ ಅಧಿಕಾರಿಗಳು, ಇದು ಬೆಂಗಳೂರಿನ ದುರವಸ್ಥೆ ಅಲ್ಲ, ಮಹಾ ದುರಂತ ಎಂದು ಅವರು ಹೇಳಿದ್ದಾರೆ.

'ಭೂಗಳ್ಳರು, ಅಕ್ರಮ ಲೇ ಔಟ್ ಕಳ್ಳರು, ಕೆರೆ ಕಬಳಿಕೆ ಕೇಡಿಗಳ ಪಡೆ ಬೆಂಗಳೂರಿನ ಈ ಸ್ಥಿತಿಗೆ ಕಾರಣ. ಬೆಂಗಳೂರು ಉಸ್ತುವಾರಿಯೂ ಆಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಈ ಬಗ್ಗೆ ತನಿಖೆಗೆ ಆದೇಶ ಕೊಟ್ಟರೆ ಬಡಾವಣೆಗಳಿಗೆ ನೀರು ನುಗ್ಗುವ ರಹಸ್ಯ ಬಯಲಾಗುತ್ತದೆ' ಎಂದಿದ್ದಾರೆ.

ರಚ್ಚೆ ಹಿಡಿದ ಮಳೆಗೆ ನಲುಗಿದ ಐ.ಟಿ ಸಿಟಿ • ನೀರಿನ ನಡುವೆಯೇ ವಾಹನಗಳ ಸಂಚಾರ

ಮಳೆ ನಿಂತರೂ ತಗ್ಗದ ನೀರಿನ ಹರಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಚ್ಚೆ ಹಿಡಿದು ಸುರಿಯುತ್ತಿರುವ ಮಳೆ ನಗರದ ಐ.ಟಿ ಕಂಪನಿಗಳ ಸುತ್ತಮುತ್ತಲ ಪ್ರದೇಶಗಳ ಜನರನ್ನು ಬೆಚ್ಚಿ ಬೀಳಿಸಿದೆ. ಕೆರೆಯಿಂದ ಕೆರೆಗೆ ಮಳೆ ನೀರು ಹರಿಯುವ ರಾಜಕಾಲುವೆ ಒತ್ತುವರಿಯಿಂದ ಉಕ್ಕುತ್ತಿರುವ ನೀರು, ಮೂರು ದಿನಗಳಿಂದ ಬೆಳ್ಳಂದೂರು ಬಳಿ ಹೊರ ವರ್ತುಲ ರಸ್ತೆಯಲ್ಲಿ ಹರಿಯುತ್ತಿದೆ.

ಹಾಲನಾಯಕನಹಳ್ಳಿ, ಕೈಕೊಂಡ್ರಹಳ್ಳಿ, ಸವಳುಕೆರೆ ಮೂಲಕ ವರ್ತೂರು ಕೆರೆಗೆ ನೀರು ಹರಿಯುವ ರಾಜಕಾಲುವೆಗಳು ರಸ್ತೆ ಬದಿಯ ಚರಂಡಿಗಳಷ್ಟು ಕಿರಿದಾಗಿವೆ. ವರ್ತೂರು ಕೆರೆಗೆ ಸಾಗಬೇಕಾದ ರಾಜಕಾಲುವೆ ಹೊರ ವರ್ತುಲ ರಸ್ತೆಯ ಬಳಿ 10 ಅಡಿಗಳಿಗಿಂತ ಕಡಿಮೆ ಇದೆ. ರಸ್ತೆಯ ಕೆಳಭಾಗದಲ್ಲಿ ಮೂರು ಚಿಕ್ಕದಾದ ಪೈಪ್‌ಗಳನ್ನು ಅಳವಡಿಸಲಾಗಿದೆ. ಅವುಗಳ ಮೂಲಕವೇ ನೀರು ಹರಿದು ಹೋಗಬೇಕಿದೆ.

ಜೋರು ಮಳೆ ಬಂದಿದ್ದರಿಂದ ಆ ಪೈಪ್‌ಗಳಲ್ಲಿ ನೀರು ಹರಿದು ಹೋಗಲು ಸಾಧ್ಯವಾಗದೆ, ರಸ್ತೆಯ ಮೇಲೆ ಉಕ್ಕಿದೆ. ರಸ್ತೆಯ ಮೂಲಕ ಸುತ್ತಮುತ್ತಲ ಐ.ಟಿ ಕಂಪನಿಗಳ ಬಾಗಿಲಿಗೂ ಹೋಗಿ ಅವಾಂತರ ಸೃಷ್ಟಿಸಿದೆ. ಮೂರು ದಿನಗಳಿಂದ ರಸ್ತೆಯಲ್ಲಿ ಹರಿಯುತ್ತಿರುವ ನೀರಿನ ಪ್ರಮಾಣ ಗುರುವಾರದ ವೇಳೆಗೆ ಕೊಂಚ ಕಡಿಮೆಯಾಗಿತ್ತು. ಕಳೆದ ಎರಡು ದಿನ ನೀರು ರಭಸವಾಗಿ ಹರಿದಿದ್ದರಿಂದ ರಸ್ತೆಗಳಲ್ಲಿ ಗುಂಡಿಗಳು ಬಿದ್ದಿದ್ದು, ಅದರ ನಡುವೆಯೇ ವಾಹನಗಳು ಸಂಚರಿಸುತ್ತಿವೆ.

ರಾಜಕಾಲುವೆ ಪಕ್ಕದಲ್ಲೇ ಬಿದ್ದಿರುವ ಗುಂಡಿ ಹೊಂಡವಾಗಿ ಮಾರ್ಪಟ್ಟಿದ್ದು, ನೀರಿನೊಳಗೆ ಸಂಚರಿಸುವಾಗ ಗುಂಡಿ ಕಾಣಿಸದೆ ದ್ವಿಚಕ್ರ ವಾಹನ ಸವಾರರು ಬಿದ್ದು ಎದ್ದು ಮುಂದೆ ಸಾಗುವಂತಾಗಿದೆ.

'ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ರಾಜಕಾಲುವೆಗಳ ನಿರ್ವಹಣೆ ಆಗಿಲ್ಲ. ಐ.ಟಿ ಕಂಪನಿಗಳೇ ರಾಜಕಾಲುವೆ ಒತ್ತುವರಿ ಮಾಡಿಕೊಂಡಿವೆ. ಈಗ ನೀರು ರಸ್ತೆಗೆ ಬಂದು ಜನ ಪರದಾಡುವಂತಾಗಿದೆ. ತೆರವುಗೊಳಿಸಲು ಅಧಿಕಾರಿಗಳು ಅಥವಾ ಶಾಸಕರು ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಕಾಂಗ್ರೆಸ್ ಮುಖಂಡ ನಲ್ಲೂರಹಳ್ಳಿ ನಾಗೇಶ್ ಅಸಮಾಧಾನ ವ್ಯಕ್ತಪಡಿಸಿದರು.

ಬೆಳ್ಳಂದೂರು ಬಳಿ ಹೊರ ವರ್ತುಲ ರಸ್ತೆಯಲ್ಲಿ ಹರಿಯುತ್ತಿರುವ ನೀರಿನಲ್ಲೇ ವಾಹನಗಳು ಸಂಚರಿಸಿದವು –ಪ್ರಜಾವಾಣಿ ಚಿತ್ರ/ಬಿ.ಕೆ.ಜನಾರ್ಧನ್

ಆಗಸ್ಟ್‌ನಲ್ಲಿ ದಾಖಲೆ ಮಳೆ

ಈ ಬಾರಿ ಆಗಸ್ಟ್ ಮಳೆ ನಗರದಲ್ಲಿ ಹೆಚ್ಚು ಅವಾಂತರ ಸೃಷ್ಟಿಸಿದೆ. ಆದರೆ, 1998ರ ಆಗಸ್ಟ್‌ನಲ್ಲಿ ಇದಕ್ಕಿಂತ ಹೆಚ್ಚಿನ ಮಳೆಯಾಗಿತ್ತು ಎಂದು ಅಂಕಿ-ಅಂಶಗಳು ಹೇಳುತ್ತಿವೆ.

1998ರ ಆಗಸ್ಟ್‌ನಲ್ಲಿ 38.71 ಸೆ. ಮೀಟರ್ ಮಳೆಯಾಗಿತ್ತು. ಈ ಬಾರಿ ಆಗಸ್ಟ್ 30ರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡು 36.99 ಸೆ. ಮೀಟರ್ ಮಳೆಯಾಗಿದೆ.

ಮುಖ್ಯಮಂತ್ರಿ ಭೇಟಿಗೂ ಮುನ್ನ ಗೋಡೆ ತೆರವು

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೇಟಿ ನೀಡುವ ಮುನ್ನ ನಾರಾಯಣಪುರ- ರಾಮಗೊಂಡನಹಳ್ಳಿ ಪ್ರದೇಶದಲ್ಲಿ ರಾಜಕಾಲುವೆ ಅಕ್ಕ-ಪಕ್ಕದ ಕೆಲವು ಗೋಡೆಗಳನ್ನು ಬಿಬಿಎಂಪಿ ಅಧಿಕಾರಿಗಳು ತರಾತುರಿಯಲ್ಲಿ ತೆರವುಗೊಳಿಸಿದರು.

ನಲ್ಲೂರಹಳ್ಳಿ ಕೆರೆಯಿಂದ ಶೀಲವಂತನಕೆರೆ ಮೂಲಕ ವರ್ತೂರು ಕೆರೆಗೆ ನೀರು ಹರಿಯುತ್ತದೆ. ನ್ಯಾಮಗೊಂಡನಹಳ್ಳಿ ಬೋರ್‌ವೆಲ್ ಲಿಂಕ್ ರಸ್ತೆಯಲ್ಲಿ 10ರಿಂದ 12 ಅಪಾರ್ಟ್‌ಮೆಂಟ್ ಸಮುಚ್ಚಯಗಳಿದ್ದು, ಅಲ್ಲಿನ ಕೆಲವು ಕಾಂಪೌಂಡ್‌ಗಳನ್ನು ಅಧಿಕಾರಿಗಳು ಗುರುವಾರ ಏಕಾಏಕಿ ಜೆಸಿಬಿ ಯಂತ್ರದ ಮೂಲಕ ಬೀಳಿಸಿದರು.

'ರಾಜಕಾಲುವೆ ಒತ್ತುವರಿ ಮಾಡಲಾಗಿದೆ ಎಂದು ಏಕಾಏಕಿ ಕಾಂಪೌಂಡ್ ಬೀಳಿಸಿದ್ದಾರೆ. ಪ್ರವಾಹಕ್ಕೆ ತಡೆಗೋಡೆಯಂತಿದ್ದ ಕಾಂಪೌಂಡ್ ಬೀಳಿಸಿರುವುದರಿಂದ ಜೋರು ಮಳೆ ಬಂದರೆ ನೀರು ಮನೆಗಳಿಗೆ ಸರಾಗವಾಗಿ ಹರಿದು ಬರುತ್ತದೆ' ಎಂದು ನಿವಾಸಿಗಳು ಹೇಳಿದರು.

'ಮಳೆಹಾನಿ ಪ್ರದೇಶ ವೀಕ್ಷಣೆಗೆ ಬರುವ ಮುಖ್ಯಮಂತ್ರಿ ಅವರಿಂದ ಮೆಚ್ಚುಗೆ ಪಡೆಯಲು ಅಧಿಕಾರಿಗಳು ಏಕಾಏಕಿ ಕೆಲವು ಗೋಡೆಗಳನ್ನು ತೆರವು ಮಾಡಿದ್ದಾರೆ. ಇದರಿಂದ ಸಮಸ್ಯೆ ಸರಿಯಾಗುವುದಕ್ಕಿಂತ ತೊಂದರೆಯೇ ಹೆಚ್ಚು' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಇದೇ ಮೊದಲಲ್ಲ'

ಹೊರ ವರ್ತುಲ ರಸ್ತೆಗೆ ಈ ಹಿಂದೆ ಎರಡು ಬಾರಿ ಇದೇ ರಾಜಕಾಲುವೆಯಿಂದ ನೀರು ನುಗ್ಗಿ ಅವಾಂತರ ಸೃಷ್ಟಿಸಿತ್ತು ಎಂದು ಸ್ಥಳೀಯರು ನೆನಪಿಸಿಕೊಳ್ಳುತ್ತಾರೆ.

'ಮಳೆಯ ಪ್ರಮಾಣ ಇಷ್ಟು ಜಾಸ್ತಿ ಇಲ್ಲದಿದ್ದರಿಂದ ರಸ್ತೆಗೆ ಹರಿದ ನೀರಿನ ಪ್ರಮಾಣ ಕಡಿಮೆ ಇತ್ತು. ಈ ಬಾರಿ ವಿಪರೀತ ಮಳೆ ಆಗಿರುವುದರಿಂದ ಹೆಚ್ಚು ನೀರು ರಸ್ತೆಗೆ ಹರಿದಿದೆ. ಈ ಹಿಂದೆಯೇ ಸರಿಪಡಿಸಿದ್ದರೆ ಸಮಸ್ಯೆ ಮರುಳಿಸುತ್ತಿರಲಿಲ್ಲ' ಎಂದು ರಸ್ತೆ ಬದಿ ಗೂಡಂಗಡಿ ನಡೆಸುತ್ತಿರುವ ಮಹೇಶ್ ಹೇಳಿದರು.

ಮಹದೇವಪುರ: 4 ಸೆಂ.ಮೀ ಮಳೆ

ಬೆಂಗಳೂರು: ನಗರದಲ್ಲಿ ಗುರುವಾರ ಮಳೆ ಮುಂದುವರಿದಿದ್ದು, ಮಹದೇವಪುರ ವಲಯದಲ್ಲಿ ಅತಿ ಹೆಚ್ಚು 4.3 ಸೆಂ.ಮೀ ಮಳೆಯಾಗಿದೆ. ಆರ್.ಆರ್. ನಗರ ವಲಯದಲ್ಲಿ 4 ಸೆಂ.ಮೀ, ದಾಸರಹಳ್ಳಿ- 3.15, ಯಲಹಂಕ- 2.7, ದಕ್ಷಿಣ- 2.3, ಪೂರ್ವ- 1.9, ಪಶ್ಚಿಮ-1.7, ಬೊಮ್ಮನಹಳ್ಳಿ ವಲಯದಲ್ಲಿ 1 ಸೆಂ.ಮೀ. ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.35	21,004	14,635
ಹಾರಂಗಿ	2,859	2,857.72	11,473	9,700
ಕಬಿನಿ	2,284	2,283.02	6,286	5,000
ಹೇಮಾವತಿ	2,922	2,921.75	10,651	12,830
ಲಿಂಗನಮಕ್ಕಿ	1,819	1,814	12,311	5,212
ಸೂಪಾ (ಮೀ)	564	550.44	6,186	712
ಮಾಣಿ	595	588	951	590
ತುಂಗಭದ್ರಾ	1,633	1,632.40	98,429	96,257
ಮಲಪ್ರಭಾ	2,079.50	2,079.50	7,319	1,794
ಘಟಪ್ರಭಾ	2,175	2,175	3,815	815
ಭದ್ರಾ	186	185	10,883	5,432
ಆಲಮಟ್ಟಿ (ಮೀ)	519.60	519.59	16,458	15,000
ನಾರಾಯಣಪುರ (ಮೀ)	492.25	492.20	25,000	24,960

* ನೆಲಮಟ್ಟದಿಂದ

'ಕೆಳ ಸೇತುವೆಗಳಲ್ಲಿ ವಾಹನ ನಿಲ್ಲಿಸಿದರೆ ದಂಡ'

ಬೆಂಗಳೂರು: ಮಳೆ ಸಂದರ್ಭದಲ್ಲಿ ಕೆಳ-ಸೇತುವೆಗಳಲ್ಲಿ ವಾಹನ ನಿಲುಗಡೆಯನ್ನು ಸಂಚಾರ ಪೊಲೀಸರು ನಿರ್ಬಂಧಿಸಿದ್ದು, ನಿಯಮ ಉಲ್ಲಂಘಿಸುವವರಿಗೆ ದಂಡ ವಿಧಿಸುವುದಾಗಿ ಎಚ್ಚರಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ, 'ನಗರದಲ್ಲಿ ಸಂಚಾರ ಸುರಕ್ಷತೆಯನ್ನು ಕಾಪಾಡುವ ಉದ್ದೇಶದಿಂದ ಕೆಳಸೇತುವೆಯಲ್ಲಿ ವಾಹನಗಳ ನಿಲುಗಡೆ ನಿರ್ಬಂಧಿಸಲಾಗಿದೆ' ಎಂದಿದ್ದಾರೆ.

'ಮಳೆ ಸುರಿಯುವ ವೇಳೆ ಸಾರ್ವಜನಿಕರು ತಮ್ಮ ದ್ವಿಚಕ್ರ ವಾಹನಗಳನ್ನು ಕೆಳಸೇತುವೆಗಳಲ್ಲಿ ನಿಲ್ಲಿಸಿ ಆಶ್ರಯ ಪಡೆ-ಯುತ್ತಿದ್ದಾರೆ. ಇದರ ಜೊತೆಯಲ್ಲೇ ಪಾದಚಾರಿಗಳು ಕೆಳಸೇತುವೆಯಲ್ಲಿ ನಿಲ್ಲುತ್ತಿದ್ದಾರೆ. ಇದರಿಂದಾಗಿ ಕೆಳಸೇತುವೆ ಮೂಲಕ ಸಾಗುವ ಇತರೆ ವಾಹನಗಳ ಸಂಚಾರಕ್ಕೆ ಅಡ್ಡಿ ಆಗುತ್ತಿದೆ. ಹಲವೆಡೆ ಅಪಘಾತಗಳೂ ಸಂಭವಿಸುತ್ತಿವೆ.'

'ಇಂಥ ಕೆಳಸೇತುವೆಗಳಲ್ಲಿ ಸಿಬ್ಬಂದಿ ನಿಯೋಜಿಸಿ, ವಾಹನಗಳನ್ನು ನಿಲ್ಲಿಸದಂತೆ ಜನರಿಗೆ ಸೂಚನೆ ನೀಡಲಾಗುತ್ತಿದೆ' ಎಂದು ಹೇಳಿದ್ದಾರೆ.

ಬಿದರಹಳ್ಳಿ: ರಾಷ್ಟ್ರೀಯ ಹಸಿರು ಪೀಠ (ದಕ್ಷಿಣ ವಲಯ) ಆತಂಕ

ರಾಜಕಾಲುವೆ ಒತ್ತುವರಿ ತೆರವುಗೊಳಿಸದ ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಪೂರ್ವಭಾಗದ ಬಿದರಹಳ್ಳಿಯ ಕುಂಬೇನ ಅಗ್ರಹಾರದಲ್ಲಿ ಬಿಲ್ಡರ್ ಒಬ್ಬರು ಒತ್ತುವರಿ ಮಾಡಿಕೊಂಡಿರುವ ರಾಜಕಾಲುವೆಯನ್ನು ಬಿಬಿಎಂಪಿ ಇನ್ನೂ ತೆರವು ಮಾಡದಿರುವ ಬಗ್ಗೆ ರಾಷ್ಟ್ರೀಯ ಹಸಿರು ಪೀಠ (ಎನ್‌ಜಿಟಿ) ಆತಂಕ ವ್ಯಕ್ತಪಡಿಸಿದೆ.

ಕುಂಬೇನ ಅಗ್ರಹಾರ ಸರ್ವೆ ನಂ. 2/1 ಮತ್ತು 2/7ನಲ್ಲಿ ಎಸ್.ವಿ. ಎಲಿಗೆಂಟ್ ಅಪಾರ್ಟ್‌ಮೆಂಟ್ ನಿರ್ಮಿಸಿರುವ ಬಗ್ಗೆ ವಿ. ಪರಮೇಶ್ ಅವರು ಎನ್‌ಜಿಟಿ ದಕ್ಷಿಣ ವಲಯ ಪೀಠಕ್ಕೆ ದೂರು ನೀಡಿದ್ದರು. ಇದಾದ ಮೇಲೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಏಪ್ರಿಲ್ 27ರಂದು ವರದಿ ನೀಡಿ, 'ರಾಜಕಾಲುವೆಯ ಬಫರ್ ಝೋನ್‌ನಲ್ಲಿ ಬಿಲ್ಡರ್ ಈಜುಕೊಳ, ಬಾತ್‌ರೂಂ ನಿರ್ಮಿಸುತ್ತಿದ್ದಾರೆ' ಎಂದಿತ್ತು. ಈ ಬಗ್ಗೆ ಬಿಬಿಎಂಪಿಯಿಂದ ಪೀಠ ಕಳೆದ ತಿಂಗಳು ಪ್ರತಿಕ್ರಿಯೆ ಬಯಸಿತ್ತು. 'ಎನ್‌ಜಿಟಿ ಮುಂದೆ ಪ್ರಕರಣ ಇದ್ದರೂ ಅಧಿಕಾರಿಗಳು ಬಿಲ್ಡರ್ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದು ಅಚ್ಚರಿ ತಂದಿದೆ. ಯೋಜನೆ ಮುಂದೂಡುವ ಯಾವುದೇ ಪ್ರಕ್ರಿಯೆಗೂ ಆತ ಸಿದ್ಧನಿಲ್ಲ' ಎಂದು ಪೀಠ ಹೇಳಿದೆ.

ಬೆಂಗಳೂರು ಪೂರ್ವ ವಲಯದ ರಾಜಕಾಲುವೆ ಒತ್ತುವರಿ ಪ್ರಕರಣದಲ್ಲಿ ಎಸ್.ವಿ. ಎಲಿಗೆಂಟ್‌ನದ್ದು ಎರಡನೇ ಪ್ರಕರಣವಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಳೆದ ತಿಂಗಳು ಸಲ್ಲಿಸಿದ ವರದಿಯಲ್ಲಿ, ಕುಂಬೇನ ಅಗ್ರಹಾರದಲ್ಲಿ ರಾಜಕಾಲುವೆಗಳೂ ಒತ್ತುವರಿಯಾಗಿವೆ. ಸರ್ವೆ ನಂ. 46, 47, 49, 57, 58 ಮತ್ತು 61ರಲ್ಲಿ 15 ಎಕರೆ 24 ಗುಂಟೆಯಲ್ಲಿ ಅಪಾರ್ಟ್‌ಮೆಂಟ್ ನಿರ್ಮಾಣವಾಗುತ್ತಿದ್ದು, ಈ ಬಗ್ಗೆ ವರದಿ ಸಲ್ಲಿಸಲು ಬಿಡಿಎಗೆ ಎನ್‌ಜಿಟಿ ಸೂಚಿಸಿತ್ತು. ಬಫರ್ ಝೋನ್‌ನಲ್ಲಿ ನಡೆಯುತ್ತಿದ್ದ ಕೆಲಸವನ್ನು ಬಿಲ್ಡರ್ ತಾತ್ಕಾಲಿಕವಾಗಿ ನಿಲ್ಲಿಸಿದ್ದು, ಕ್ಲಬ್ ಹೌಸ್, ಮಾಕ್ ಫ್ಲಾಟ್ಸ್ ಇತರೆ ನಿರ್ಮಾಣವನ್ನು ನಕ್ಷೆ ಅನುಮೋದನೆ ಇಲ್ಲದೆ ಕೈಗೆತ್ತಿಕೊಂಡಿದ್ದಾರೆ ಎಂದು ಬಿಡಿಎಯು ಇತ್ತೀಚೆಗೆ ಸಲ್ಲಿಸಿದ ವರದಿಯಲ್ಲಿ ತಿಳಿಸಿತ್ತು.

ಕೆರೆ ಪ್ರದೇಶ: 33 ಒತ್ತುವರಿ ತೆರವು

ಬೆಂಗಳೂರು: 'ಬೇಗೂರು ಕೆರೆ ಪ್ರದೇಶದಲ್ಲಿ ಒಟ್ಟು 81 ಒತ್ತುವರಿಗಳನ್ನು ಪತ್ತೆ ಹಚ್ಚಲಾಗಿದ್ದು, ಅವುಗಳಲ್ಲಿ 33 ಒತ್ತುವರಿ ತೆರವುಗೊಳಿಸಲಾಗಿದೆ' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹೈಕೋರ್ಟ್‌ಗೆ ತಿಳಿಸಿದೆ.

ಈ ಕುರಿತಂತೆ 'ಸಿಟಿಜನ್ಸ್ ಆ್ಯಕ್ಷನ್ ಗ್ರೂಪ್' ಕಾರ್ಯದರ್ಶಿ ನೊಮಿತಾ ಚಾಂಡಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಪಾಲಿಕೆ ಪರ ವಕೀಲರು ನಿಯೋಜಿತ ಅಧಿಕಾರಿಯು ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ನೀಡಿರುವ ಪ್ರಮಾಣ ಪತ್ರವನ್ನು ನ್ಯಾಯಪೀಠಕ್ಕೆ ಸಲ್ಲಿಸಿ, ಒತ್ತುವರಿ ತೆರವು ಕಾರ್ಯಾಚರಣೆ ಹಾಗೂ ತಂತಿ ಬೇಲಿ ಅಳವಡಿಸಿರುವುದಕ್ಕೆ ಸಂಬಂಧಿಸಿದ ಫೋಟೋಗಳನ್ನು ನೀಡಿದರು.

ಪ್ರಮಾಣ ಪತ್ರದಲ್ಲಿ ಏನಿದೆ?: 'ಹೈಕೋರ್ಟ್ ನಿರ್ದೇಶನದಂತೆ ಬೇಗೂರು ಕೆರೆ ಪ್ರದೇಶದ ಸರ್ವೆ ನಡೆಸಲಾಗಿದೆ. ಜುಲೈ 26ರಂದು ಸರ್ವೆ ಪೂರ್ಣಗೊಂಡಿದ್ದು, ಒಟ್ಟು 81 ಒತ್ತುವರಿಗಳು ಪತ್ತೆಯಾಗಿವೆ. ಎಲ್ಲಾ ಒತ್ತುವರಿದಾರರಿಗೆ ಜುಲೈ 27ರಂದು ನೋಟಿಸ್ ಜಾರಿಗೊಳಿಸಲಾಗಿದೆ. ಕೆರೆ ಪ್ರದೇಶದಲ್ಲಿ ಅರಳಿ ಮರವೊಂದು ಇದ್ದು, ಅದರ ಸುತ್ತ ಕಲ್ಲಿನ ಕಟ್ಟೆ ಕಟ್ಟಲಾಗಿದೆ. ಅದರ ಸಮೀಪದಲ್ಲೇ ದೇವಸ್ಥಾನವೂ ಇದ್ದು, ಇವುಗಳ ಬಗ್ಗೆ ಸೂಕ್ತ ದಾಖಲೆ ಒದಗಿಸುವ ಬಗ್ಗೆ ಕಂದಾಯ ಇಲಾಖೆಗೆ ಮಾಹಿತಿ ಕೋರಲಾಗಿದೆ' ಎಂದು ತಿಳಿಸಲಾಗಿದೆ.

'ಅರಕೆರೆಯ ಬಫರ್ ಝೋನ್‌ನಲ್ಲಿ ಹೆಬಿಟೇಟ್ ಹೆಸರಿನ ವಸತಿ ಸಮುಚ್ಚಯವೊಂದನ್ನು ನಿರ್ಮಾಣ ಮಾಡಲಾಗಿದೆ. ಈ ಕಟ್ಟಡ ನಿರ್ಮಾಣಕ್ಕೆ ಬಿಬಿಎಂಪಿ ದಕ್ಷಿಣ ವಲಯದ ಜಂಟಿ ನಿರ್ದೇಶಕರಿಂದ (ನಗರ ಯೋಜನೆ) ನಕ್ಷೆ ಮಂಜೂರಾತಿ ನೀಡಲಾಗಿದೆ. ಹಾಗಾಗಿ, ಸರ್ವೆ ನಡೆಸಿ ಬಫರ್ ಜೋನ್ ಬಗ್ಗೆ ಮಾಹಿತಿ ಒದಗಿಸುವಂತೆ ಜಂಟಿ ನಿರ್ದೇಶಕರನ್ನು ಕೋರಲಾಗಿದೆ' ಎಂದು ತಿಳಿಸಲಾಗಿದೆ.

'ಕನ್ನಹಳ್ಳಿ ಕೆರೆ ಬಿಬಿಎಂಪಿ ವ್ಯಾಪ್ತಿಯಿಂದ ಹೊರಗಿದ್ದು, ಇತ್ತೀಚೆಗಷ್ಟೇ ಸರ್ಕಾರ ಅಭಿವೃದ್ಧಿಯ ನಿಟ್ಟಿನಲ್ಲಿ ಈ ಕೆರೆಯನ್ನು ಬಿಬಿಎಂಪಿಗೆ ಹಸ್ತಾಂತರಿಸಿದೆ. ಕೆರೆ ಮಾಲಿನ್ಯ ತಡೆಗಟ್ಟುವ ದಿಸೆಯಲ್ಲಿ ಪಾಲಿಕೆಯು ಜಲಮಂಡಳಿ ಜೊತೆಗೆ ಕೈಜೋಡಿಸಿ ತುರ್ತು ಕ್ರಮ ಜರುಗಿಸುತ್ತಿದೆ. ಯಾವುದೇ ಅನುದಾನ ದೊರೆಯದಿದ್ದರೂ ತರಿಹೋಬನ ಕೆರೆ ಅಭಿವೃದ್ಧಿಗೆ ಅಮೃತ್ ನಗರೋತ್ಥಾನ ಕ್ರಿಯಾ ಯೋಜನೆಯಡಿ ₹ 4.5 ಕೋಟಿ ಮಂಜೂರಾತಿಗೆ ಅನುಮೋದನೆ ಸಿಕ್ಕಿದೆ' ಎಂದು ಪ್ರಮಾಣಪತ್ರದಲ್ಲಿ ವಿವರಿಸಲಾಗಿದೆ.

ಹದಿನೈದು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣ

ಸುದ್ದಿವಾಹಿನಿ ಕಾರು ಚಾಲಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹದಿನೈದು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದಲ್ಲಿ ಆರೋಪಿಗಳಾದ ಮನೋಜ್ (29) ಹಾಗೂ ಸುರೇಶ್ (25) ಎಂಬುವರನ್ನು ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮಂಡ್ಯ ಜಿಲ್ಲೆಯ ಮನೋಜ್, ರಾಜ್ಯಮಟ್ಟದ ಸುದ್ದಿವಾಹಿನಿಯೊಂದರ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ. ಸ್ನೇಹಿತ ಸುರೇಶ್ ಸಹಾಯದಿಂದ ಕೃತ್ಯ ಎಸಗಿದ್ದ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಇಬ್ಬರನ್ನೂ ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘10ನೇ ತರಗತಿಯಲ್ಲಿ ಓದುತ್ತಿದ್ದ ಬಾಲಕಿಯನ್ನು ಆರೋಪಿ ಮನೋಜ್ ಪರಿಚಯ ಮಾಡಿಕೊಂಡಿದ್ದ. ಸ್ನೇಹ ಬೆಳೆಸಿ, ಆಗಾಗ ಭೇಟಿಯಾಗುತ್ತಿದ್ದ. ಕನಕಪುರದ ಕಬ್ಬಾಳಮ್ಮ ದೇವಸ್ಥಾನಕ್ಕೆ ಹೋಗೋಣವೆಂದು ಬಾಲಕಿಯನ್ನು ಪುಸಲಾಯಿಸಿದ್ದ. ಆತನ ಮಾತು ನಂಬಿದ್ದ ಬಾಲಕಿ, ದೇವಸ್ಥಾನಕ್ಕೆ ಹೋಗಲು ಒಪ್ಪಿದ್ದಳು.’

‘ಆಗಸ್ಟ್ 26ರಂದು ಆರೋಪಿ ಬಾಲಕಿಯನ್ನು ತನ್ನ ಬಳಿ ಕರೆಸಿಕೊಂಡಿದ್ದ. ದೇವಸ್ಥಾನಕ್ಕೆ ತೆರಳದ ಆರೋಪಿ, ಬನ್ನೇರುಘಟ್ಟ ಬಳಿಯ ಮನೆಯೊಂದಕ್ಕೆ ಬಾಲಕಿಯನ್ನು ಕರೆದೊಯ್ದಿದ್ದ. ಅದೇ ಮನೆಯಲ್ಲೇ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ. ಸಂಜೆಯಾದರೂ ಬಾಲಕಿ ಮನೆಗೆ ವಾಪಸು ಹೋಗಿರಲಿಲ್ಲ. ಗಾಬರಿಗೊಂಡ ಪೋಷಕರು, ಬಾಲಕಿ ನಾಪತ್ತೆ ಬಗ್ಗೆ ಠಾಣೆಗೆ ದೂರು ನೀಡಿದ್ದರು’ ಎಂದೂ ಮೂಲಗಳು ತಿಳಿಸಿವೆ.

‘ಅಪಹರಣ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ, ಬಾಲಕಿಯನ್ನು ಪತ್ತೆ ಮಾಡಲಾಯಿತು. ತನ್ನ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವುದಾಗಿ ಬಾಲಕಿ ಹೇಳಿಕೆ ನೀಡಿದ್ದಾಳೆ. ಹೀಗಾಗಿ, ಪೋಕ್ಸೊ ಕಾಯ್ದೆಯಡಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ?

ಬೆಂಗಳೂರು: ಡ್ರಾಪ್ ನೀಡುವ ನೆಪದಲ್ಲಿ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ ಎನ್ನಲಾಗುತ್ತಿದ್ದು, ಈ ಸಂಬಂಧ ವಿವೇಕನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಬುಧವಾರ ರಾತ್ರಿ ನಡೆದಿರುವ ಕೃತ್ಯದ ಬಗ್ಗೆ 25 ವರ್ಷದ ಯುವತಿ ದೂರು ನೀಡಿದ್ದಾರೆ. ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಗರದ ನಿವಾಸಿಯಾಗಿರುವ ಯುವತಿ ಈಜಿಪುರ ಬಳಿ ಹೊರಟಿದ್ದರು. ಡ್ರಾಪ್ ನೀಡುವ ನೆಪದಲ್ಲಿ ಅವರನ್ನು ಬೈಕ್‌ನಲ್ಲಿ ಹತ್ತಿಸಿಕೊಂಡಿದ್ದ ಆರೋಪಿಗಳು, ಹುಸ್ಕೂರು ಬಳಿ ಕರೆದೊಯ್ದಿದ್ದರು. ಇಬ್ಬರೂ ಆರೋಪಿಗಳು ಸೇರಿ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದರು. ನಂತರ ವಿಷಯವನ್ನು ಯಾರಿಗೂ ಹೇಳದಂತೆ ಜೀವ ಬೆದರಿಕೆಯೊಡ್ಡಿದ್ದರು. ಗುರುವಾರ ಠಾಣೆಗೆ ಯುವತಿ ದೂರು ನೀಡಿದ್ದಾರೆ’ ಎಂದು ತಿಳಿಸಿವೆ.

‘ಆರೋಪಿಗಳು ಕಂಪನಿಯೊಂದರ ಕ್ಯಾಬ್ ಚಾಲಕರೆಂದು ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

ಸಾಕ್ಷಿದಾರರಿಗೆ ಕೊಲೆ ಬೆದರಿಕೆ: 5 ವರ್ಷ ಜೈಲು ಶಿಕ್ಷೆ

ಬೆಂಗಳೂರು: ತನ್ನ ವಿರುದ್ಧ ದಾಖಲಾಗಿದ್ದ ಪ್ರಕರಣದಲ್ಲಿ ಸಾಕ್ಷಿ ಹೇಳದಂತೆ ಸಾಕ್ಷಿದಾರರಿಗೆ ಕೊಲೆ ಬೆದರಿಕೆಯೊಡ್ಡಿದ್ದ ಅಪರಾಧಿ ರಮೇಶ್ (30) ಎಂಬಾತನಿಗೆ 5 ವರ್ಷ ಜೈಲು ಶಿಕ್ಷೆ ವಿಧಿಸಿ ನಗರದ ಸಿಸಿಎಚ್ 57ನೇ ನ್ಯಾಯಾಲಯ ಆದೇಶ ಹೊರಡಿಸಿದೆ.

‘2016ರಲ್ಲಿ ದಾಖಲಾಗಿದ್ದ ಅಪರಾಧ ಪ್ರಕರಣವೊಂದರಲ್ಲಿ ಮರಿಯಪ್ಪನಪಾಳ್ಯ ನಿವಾಸಿ ರಮೇಶ್‌ನನ್ನು ಬಂಧಿಸಲಾಗಿತ್ತು. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ರಮೇಶ್, ಪ್ರಕರಣದ ಸಾಕ್ಷಿದಾರರಿಗೆ ಕರೆ ಮಾಡಿ ಕೊಲೆ ಬೆದರಿಕೆಯೊಡ್ಡಿದ್ದ. ಈ ಬಗ್ಗೆ ಕೆ.ಪಿ.ಅಗ್ರಹಾರ ಠಾಣೆಯಲ್ಲಿ 2018ರಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಪ್ರಕರಣದ ತನಿಖೆ ಕೈಗೊಂಡಿದ್ದ ಕೆ.ಪಿ. ಅಗ್ರಹಾರ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಧೀಶರಾದ ಟಿ. ಗೋವಿಂದಯ್ಯ ವಿಚಾರಣೆ ನಡೆಸಿ ಆದೇಶ ಹೊರಡಿಸಿದ್ದಾರೆ. ಪಬ್ಲಿಕ್ ಪ್ರಾಸಿಕ್ಯೂಟರ್ ವೀಣಾ ವಾದಿಸಿದ್ದರು.

ಗುದದ್ವಾರದಲ್ಲಿದ್ದ 442 ಗ್ರಾಂ ಚಿನ್ನ ಜಪ್ತಿ

ಬೆಂಗಳೂರು: ವಿಮಾನ ನಿಲ್ದಾಣ ಮೂಲಕ ಅಕ್ರಮವಾಗಿ ಸಾಗಿಸುತ್ತಿದ್ದ ₹ 22 ಲಕ್ಷ ಮೌಲ್ಯದ ಚಿನ್ನಾಭರಣವನ್ನು ವೈಮಾನಿಕ ಗುಪ್ತಚರ ದಳದ (ಎಐಯು) ಅಧಿಕಾರಿಗಳು ಜಪ್ತಿ ಮಾಡಿದ್ದು, ಪ್ರಯಾಣಿಕರೊಬ್ಬರನ್ನು ಬಂಧಿಸಿದ್ದಾರೆ.

‘ಬ್ಯಾಂಕಾಕ್‌ನಿಂದ ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದ ಪ್ರಯಾಣಿಕ, ಮಾತ್ರೆ ರೂಪದಲ್ಲಿದ್ದ ಚಿನ್ನವನ್ನು ಗುದದ್ವಾರದಲ್ಲಿ ಬಚ್ಚಿಟ್ಟುಕೊಂಡಿದ್ದ. ತಪಾಸಣೆ ನಡೆಸಿದಾಗ ಸಿಕ್ಕಿಬಿದ್ದ’ ಎಂದು ವಿಮಾನ ನಿಲ್ದಾಣದ ಮೂಲಗಳು ಹೇಳಿವೆ.

‘ವಿಮಾನದ ಮೂಲಕ ಚಿನ್ನ ಸಾಗಣೆ ಬಗ್ಗೆ ಆಗಸ್ಟ್ 30ರಂದು ಮಾಹಿತಿ ಬಂದಿತ್ತು. ಪ್ರಯಾಣಿಕರನ್ನು ಪರಿಶೀಲಿಸಿದಾಗ ಯಾವುದೇ ಸುಳಿವು ಸಿಕ್ಕಿರಲಿಲ್ಲ. ಆದರೆ, ಆರೋಪಿ ನಡೆಯಿಂದ ಹೆಚ್ಚಿನ ಅನುಮಾನ ಬಂದಿತ್ತು. ವೈದ್ಯರ ಸಹಾಯದಿಂದ ದೇಹದ ಸ್ಕ್ಯಾನಿಂಗ್ ಮಾಡಿದಾಗ ಗುದದ್ವಾರದಲ್ಲಿ 442 ಗ್ರಾಂ ಚಿನ್ನವಿತ್ತು’ ಎಂದು ತಿಳಿಸಿವೆ.

ಕದ್ದ ವಾಹನ ಮಾರಿ ಮೋಜು– ಮಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುವ ದ್ವಿಚಕ್ರ ವಾಹನ ಕದಿಯುತ್ತಿದ್ದ ಆರೋಪಿ ಶಬ್ಬೀರ್ ಪಾಷಾ ಎಂಬುವರನ್ನು ಮಹಾಲಕ್ಷ್ಮಿ ಲೇಔಟ್ ಪೊಲೀಸರು ಬಂಧಿಸಿದ್ದಾರೆ.

‘ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ ಆರೋಪಿ, ಕದ್ದ ವಾಹನಗಳ ಮಾರಾಟದಿಂದ ಬರುತ್ತಿದ್ದ ಹಣದಲ್ಲಿ ಮೋಜು-ಮಸ್ತಿ ಮಾಡುತ್ತಿದ್ದ. ಹಣ ಖಾಲಿಯಾಗುತ್ತಿದ್ದಂತೆ ಪುನಃ ವಾಹನ ಕದಿಯುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಪಶ್ಚಿಮ ಕಾರ್ಡ್ ರಸ್ತೆ ಬಳಿಯ ಮನೆಯೊಂದರ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ಇತ್ತೀಚೆಗೆ ಕಳ್ಳತನವಾಗಿತ್ತು. ಈ ಬಗ್ಗೆ ದಾಖಲಾದ ಪ್ರಕರಣದ ತನಿಖೆ ಕೈಗೊಂಡಾಗ ಆರೋಪಿ ಶಬ್ಬೀರ್ ಸಿಕ್ಕಿಬಿದ್ದ. ಈತನಿಂದ ₹ 2 ಲಕ್ಷ ಮೌಲ್ಯದ 5 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ. ಬಸವೇಶ್ವರನಗರ, ಎಸ್. ಜೆ.ಪಾರ್ಕ್ ಹಾಗೂ ಕಾಡುಗೊಂಡನಹಳ್ಳಿ (ಕೆ. ಜಿ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿದ್ದ’ ಎಂದು ತಿಳಿಸಿದರು.

ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು ಆರೋಪಿಯಿಂದ ಜಪ್ತಿ ಮಾಡಿರುವ ಬೈಕ್‌ಗಳು

ಬಿಎಂಟಿಸಿ ಬಸ್ ಡಿಕ್ಕಿ: ಶಿಕ್ಷಕಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರವರ್ತುಲ ರಸ್ತೆಯ ನಾಗರಬಾವಿ ವೃತ್ತದ ಬಳಿ ಬಿಎಂಟಿಸಿ ಬಸ್ ಡಿಕ್ಕಿಯಾಗಿದ್ದರಿಂದ ಸರ್ಕಾರಿ ಶಾಲೆಯ ಶಿಕ್ಷಕಿ ಸಂತೋಷಿ (54) ಎಂಬುವರು ಮೃತಪಟ್ಟಿದ್ದಾರೆ.

‘ನಾಗರಬಾವಿ ನಿವಾಸಿ ಸಂತೋಷಿ, ಹೊಸಕೆರೆಹಳ್ಳಿಯ ಸರ್ಕಾರಿ ಶಾಲೆ ಶಿಕ್ಷಕಿ. ಶಾಲೆ ಮುಗಿಸಿಕೊಂಡು ಮನೆಗೆ ವಾಪಸು ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಹೊಸಕೆರೆಹಳ್ಳಿಯಿಂದ ವಾಹನದಲ್ಲಿ ನಾಗರಬಾವಿ ವೃತ್ತಕ್ಕೆ ಸಂಜೆ 5 ಗಂಟೆ ಸುಮಾರಿಗೆ ಬಂದಿಳಿದಿದ್ದ ಸಂತೋಷಿ, ರಸ್ತೆಯಲ್ಲಿ ನಡೆದುಕೊಂಡು ಮನೆಯತ್ತ ಹೊರಟಿದ್ದರು. ಅದೇ ಮಾರ್ಗದಲ್ಲಿ ಹೊರಟಿದ್ದ ಬಿಎಂಟಿಸಿ ಬಸ್, ಶಿಕ್ಷಕಿಗೆ ಗುದ್ದಿ ಮೈ ಮೇಲೆ ಹರಿದಿತ್ತು. ತೀವ್ರ ಗಾಯಗೊಂಡು ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.

‘ಬಿಎಂಟಿಸಿ ಬಸ್ ಚಾಲಕನ ನಿರ್ಲಕ್ಷ್ಯದಿಂದಲೇ ಅಪಘಾತ ಸಂಭವಿಸಿದೆ. ಚಾಲಕ ತಿಮ್ಮಯ್ಯ ಅವರನ್ನು ಬಂಧಿಸಲಾಗಿದ್ದು, ಬಸ್ ಜಪ್ತಿ ಮಾಡಲಾಗಿದೆ’ ಎಂದೂ ಹೇಳಿದರು.

‘ಬಸ್ ಪಾಸ್ ಕೇಳಿದ್ದಕ್ಕೆ ದೌರ್ಜನ್ಯ’

ಬೆಂಗಳೂರು: ಹಿರಿಯ ನಾಗರಿಕರ ಬಸ್ ಪಾಸ್ ಕೇಳಿದ್ದಕ್ಕೆ ಬಿಎಂಟಿಸಿ ಶ್ರೀ ವಿದ್ಯಾ ನಗರ ಬಸ್ ಡಿಪೊ ಸಿಬ್ಬಂದಿ ಅವಾಚ್ಯ ಶಬ್ದಗಳಿಂದ ನಿಂದಿಸಿ ದೌರ್ಜನ್ಯವೆಸಗಿದ್ದಾರೆ ಎಂದು ಪ್ರಯಾಣಿಕ ಸಿ.ಎ. ಕೃಷ್ಣಮೂರ್ತಿ ಅವರು ದೂರಿದ್ದಾರೆ.

ಬಿಎಂಟಿಸಿ ಹಿರಿಯ ಅಧಿಕಾರಿಗಳಿಗೆ ಈ ಬಗ್ಗೆ ಅವರು ದೂರು ಸಲ್ಲಿಸಿದ್ದಾರೆ.

‘ಪ್ರತಿ ದಿನ ಶ್ರೀವಿದ್ಯಾನಗರದಿಂದ ಸಂಚರಿಸುತ್ತೇನೆ. ತಿಂಗಳ ಮೊದಲ ದಿನ ಗುರುವಾರ ಹಿರಿಯ ನಾಗರಿಕರ ಬಸ್ ಪಾಸ್ ನೀಡುವಂತೆ ಕೋರಿದಾಗ ಸಿಬ್ಬಂದಿ ಏಕವಚನದಲ್ಲಿ ಮಾತನಾಡಿ, ತಳ್ಳಿದರು. ಪಾಸ್‌ಗಳು ಇನ್ನೂ ಬಂದಿಲ್ಲ. ಬಂದಾಗ ತೆಗೆದುಕೊಂಡು ಹೋಗು ಎಂದು ನಿಂದಿಸಿದರು. ಕೆಲವರು ನಾಲ್ಕೈದು ಕಿಲೋ ಮೀಟರ್ ದೂರದಿಂದ ಬಸ್‌ಪಾಸ್‌ಗಾಗಿ ಬಂದಿದ್ದರು. ಅವರು ನಿರಾಶೆಯಿಂದ ತೆರಳಿದರು. ಪ್ರಶ್ನೆ ಮಾಡಿದ್ದಕ್ಕೆ ದೌರ್ಜನ್ಯವೆಸಗಿದ್ದಾರೆ’ ಎಂದು ತಿಳಿಸಿದ್ದಾರೆ.

‘ಈ ನಿಲ್ದಾಣದಿಂದ ಸಮಯಕ್ಕೆ ಸರಿಯಾಗಿ ಬಸ್‌ಗಳು ಇಲ್ಲ. ನಿಗದಿಪಡಿಸಿದ ಸಮಯಕ್ಕಿಂತ 15 ನಿಮಿಷ ಮೊದಲೇ ತೆರಳುತ್ತವೆ. ಪ್ರಯಾಣಿಕರ ಸಮಸ್ಯೆಗಳಿಗೆ ಸಿಬ್ಬಂದಿ ಸ್ಪಂದಿಸುವುದೇ ಇಲ್ಲ’ ಎಂದು ದೂರಿದ್ದಾರೆ.

‘ಸಿಬ್ಬಂದಿಯ ವರ್ತನೆಯ ಬಗ್ಗೆ ಘಟಕದ ವ್ಯವಸ್ಥಾಪಕರಾದ ಮಹೇಶ್ ಅವರಿಗೆ ದೂರು ಸಲ್ಲಿಸಿದ್ದೇನೆ. ಹಿರಿಯ ನಾಗರಿಕರಿಗೆ ಅಗೌರವ ತೋರಿರುವ ಸಿಬ್ಬಂದಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕೋರಿದ್ದೇನೆ’ ಎಂದು ತಿಳಿಸಿದ್ದಾರೆ.

ಆಂಬುಲೆನ್ಸ್ ಅಪಘಾತ: ಚಾಲಕ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾನಮತ್ತರಾಗಿ ಅಡ್ಡಾದಿಡ್ಡಿ ಆಂಬುಲೆನ್ಸ್ ಚಲಾಯಿಸಿ ಅಪಘಾತವನ್ನು ಉಂಟು ಮಾಡಿರುವ ಆರೋಪದಡಿ ಚಾಲಕ ಸಂಜೀವ್ ಎಂಬುವರನ್ನು ವಿಲ್ಸನ್ ಗಾರ್ಡನ್ ಸಂಚಾರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ವಿಲ್ಸನ್ ಗಾರ್ಡನ್ 10ನೇ ಅಡ್ಡರಸ್ತೆಯಲ್ಲಿ ಬುಧವಾರ ರಾತ್ರಿ ಅಪಘಾತ ಸಂಭವಿಸಿದೆ. ಎರಡು ಬೈಕ್ ಹಾಗೂ ಎರಡು ಕಾರುಗಳು ಭಾಗಶಃ ಜಖಂಗೊಂಡಿವೆ. ಅಪಘಾತಕ್ಕೆ ಕಾರಣವಾದ ಆಂಬುಲೆನ್ಸ್ ಚಾಲಕನನ್ನು ಸಾರ್ವಜನಿಕರೇ ಹಿಡಿದು, ಥಳಿಸಿ ಠಾಣೆಗೆ ಒಪ್ಪಿಸಿದ್ದಾರೆ’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

‘ಪಾನಮತ್ತನಾಗಿದ್ದ ಚಾಲಕ ಸಂಜೀವ್, ನಡುರಸ್ತೆಯಲ್ಲೇ ಅಡ್ಡಾದಿಡ್ಡಿಯಾಗಿ ವಾಹನ ಚಲಾಯಿಸಿದ್ದ. ಬೈಕ್ ಹಾಗೂ ಕಾರುಗಳಿಗೆ ಆಂಬುಲೆನ್ಸ್ ಡಿಕ್ಕಿ ಹೊಡೆದಿತ್ತು. ಇದರಿಂದಾಗಿ ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು’ ಎಂದು ತಿಳಿಸಿದರು.

‘ಆಂಬುಲೆನ್ಸ್‌ನಲ್ಲಿ ಚಾಲಕ ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಚಾಲಕ ಸಂಜೀವ್ ವಿಪರೀತ ಮದ್ಯ ಕುಡಿದಿದ್ದ. ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಪೊಲೀಸರು ಆಂಬುಲೆನ್ಸ್ ಸಹ ಜಪ್ತಿ ಮಾಡಿದ್ದಾರೆ’ ಎಂದು ಹೇಳಿದರು.

ರೈಲಿನಲ್ಲಿ ಗಾಂಜಾ ಸಾಗಣೆ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಇಲಾಖೆ ನೌಕರನೆಂದು ಹೇಳಿಕೊಂಡು ಗಾಂಜಾ ಸಾಗಿಸುತ್ತಿದ್ದ ಆರೋಪಿ ಮೊಹಮ್ಮದ್ ಅಶ್ಫಕ್ ಎಂಬುವವರನ್ನು ಉಪ್ಪಾರಪೇಟೆ ಪೊಲೀಸರು ಬಂಧಿಸಿದ್ದಾರೆ.

‘ಅಸ್ಸಾಂನ ಅಶ್ಫಕ್ ಕೆಲ ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದ. ತನ್ನದೇ ಊರಿನಿಂದ ಬೆಂಗಳೂರಿಗೆ ಗಾಂಜಾ ತಂದು ಮಾರುತ್ತಿದ್ದ. ಈತನ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ರೈಲ್ವೆ ಇಲಾಖೆಯ ನೌಕರನೆಂದು ನಕಲಿ ಗುರುತಿನ ಚೀಟಿ ಇಟ್ಟುಕೊಂಡಿದ್ದ ಆರೋಪಿ, ನಿಲ್ದಾಣದಲ್ಲಿ ಯಾರಾದರೂ ಪ್ರಶ್ನಿಸಿದರೆ ಅದನ್ನು ತೋರಿಸಿ ಪಾರಾಗುತ್ತಿದ್ದ’ ಎಂದು ತಿಳಿಸಿವೆ.

ಸಿಬ್ಬಂದಿ ಜೊತೆ ಒಡನಾಟ: ‘ರೈಲು ನಿಲ್ದಾಣದಲ್ಲಿ ಸ್ವಚ್ಛತೆ ಕೆಲಸ ಮಾಡುತ್ತಿದ್ದ ಸಿಬ್ಬಂದಿ ಜೊತೆ ಒಡನಾಟ ಹೊಂದಿದ್ದ ಆರೋಪಿ, ಅವರ ಸಹಾಯದಿಂದಲೇ ಗಾಂಜಾ ಸಾಗಿಸುತ್ತಿದ್ದ ಮಾಹಿತಿ ಇದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಸ್ಸಾಂನಿಂದ ರೈಲಿನ ಶೌಚಾಲಯಗಳಲ್ಲಿ ಗಾಂಜಾ ಪೊಟ್ಟಣ ಬಚ್ಚಿಟ್ಟು ಬೆಂಗಳೂರಿಗೆ ತರಿಸಲಾಗುತ್ತಿತ್ತು. ಸಿಬ್ಬಂದಿ ಸಹಾಯದಿಂದ ಪೊಟ್ಟಣವನ್ನು ಆರೋಪಿ ಪಡೆಯುತ್ತಿದ್ದ. ಸಿಬ್ಬಂದಿಗೆ ಹಣ ನೀಡುತ್ತಿದ್ದ’ ಎಂದು ತಿಳಿಸಿವೆ.

ಗದಗ ಯುವತಿ ಮದುವೆ: ‘ಅಸ್ಸಾಂನಲ್ಲಿ ಒಂದು ಮದುವೆಯಾಗಿದ್ದ ಆರೋಪಿ, ಆ ವಿಷಯ ಮುಚ್ಚಿಟ್ಟು ಗದಗ ಯುವತಿಯನ್ನು ಎರಡನೇ ಮದುವೆಯಾಗಿದ್ದ. ಎರಡೂ ಕುಟುಂಬಗಳ ನಿರ್ವಹಣೆಗೆ ಹಣ ಹೊಂದಿಸಲು ಆರೋಪಿ ಗಾಂಜಾ ಮಾರಾಟಕ್ಕೆ ಇಳಿದಿದ್ದನೆಂದು ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

ನಾಯಿ ಕಚ್ಚಿ ಬಾಲಕನಿಗೆ ತೀವ್ರ ಗಾಯ

ಕೆ.ಆರ್.ಪುರ: ಆವಲಹಳ್ಳಿ ಠಾಣೆ ವ್ಯಾಪ್ತಿಯ ಮಾರಗೊಂಡನಹಳ್ಳಿ ಬಳಿಯ ಆರ್‌ಕೆಎಂ ಲೇಔಟ್‌ನಲ್ಲಿ ನಾಯಿ ಕಚ್ಚಿ ಬಾಲಕ ಲಿತಿನ್ (7) ಎಂಬಾತ ತೀವ್ರ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

‘ನಾಯಿ ಕಚ್ಚಿರುವ ಘಟನೆ ಸಂಬಂಧ ಬಾಲಕನ ತಂದೆ ಎಂ. ಅರುಣ್ ದೂರು ನೀಡಿದ್ದಾರೆ. ನಾಯಿ ಸಾಕಿರುವ ಮಾಲೀಕ ರಂಜಿತ್ ಹಾಗೂ ಅನಿಲ್‌ಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮಹಿಳೆ ಅಡ್ಡಗಟ್ಟಿ ಸುಲಿಗೆ: ತೃತೀಯ ಲಿಂಗಿಗಳ ಬಂಧನ

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ ಮಹಿಳೆಯನ್ನು ಅಡ್ಡಗಟ್ಟಿ ಪರ್ಸ್ ಕಿತ್ತುಕೊಂಡು ಸುಲಿಗೆ ಮಾಡಿದ್ದ ಆರೋಪದಡಿ ಇಬ್ಬರು ತೃತೀಯ ಲಿಂಗಿಗಳನ್ನು ವೈಟ್‌ಫೀಲ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಚನ್ನಸಂದ್ರದ ನಿವಾಸಿ ನಿಧನ್ಯಾ ಅಲಿಯಾಸ್ ಗುಣಶೇಖರ್ (20) ಹಾಗೂ ಪ್ರವೀಣ್ಯಾ (21) ಬಂಧಿತರು. ಘಟನೆ ನಡೆದ ಮೂರು ಗಂಟೆಯಲ್ಲೇ ಆರೋಪಿಗಳನ್ನು ಬಂಧಿಸಲಾಗಿದೆ. ಇವರಿಂದ ₹ 2,600 ನಗದು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರರಾದ ಸ್ವಾತಿ ಎಂಬುವರು ಬಾಡಿಗೆ ಮನೆ ಹುಡುಕಲೆಂದು ವೈಟ್‌ಫೀಲ್ಡ್‌ನ ಪ್ರಶಾಂತ್ ಲೇಔಟ್‌ನ ರಸ್ತೆಯಲ್ಲಿ ಆಗಸ್ಟ್ 30ರ ಮಧ್ಯಾಹ್ನ ಓಡಾಡುತ್ತಿದ್ದರು. ಅವರನ್ನು ಅಡ್ಡಗಟ್ಟಿದ್ದ ಆರೋಪಿಗಳು, ಹಣ ನೀಡುವಂತೆ ಒತ್ತಾಯಿಸಿದ್ದರು.’

‘ಹಣ ನೀಡಲೆಂದು ಸ್ವಾತಿ ಅವರು ಪರ್ಸ್ ಹೊರಗೆ ತೆಗೆದಿದ್ದರು. ಅದನ್ನು ಕಸಿದುಕೊಂಡಿದ್ದ ಆರೋಪಿಗಳು, ಅದರಲ್ಲಿದ್ದ ₹3,000 ಸುಲಿಗೆ ಮಾಡಿ ಪರಾರಿಯಾಗಿದ್ದರು. ಮಹಿಳೆ ಪೊಲೀಸ್ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿದ್ದರು. ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾದರು’ ಎಂದೂ ಮೂಲಗಳು ತಿಳಿಸಿವೆ.

ನಗದು ಬಹುಮಾನ...

ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ (ಎಚ್‌ಐಎಚ್) ಫೈನಲ್‌ನಲ್ಲಿ ಸಿಎಂಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವಿದ್ಯಾರ್ಥಿಗಳು ವಿಜೇತರಾಗಿ ₹1 ಲಕ್ಷ ನಗದು ಬಹುಮಾನ ಪಡೆದುಕೊಂಡರು.

ರಘುನಾಥ ಗುರೂಜಿ ನಿಧನ

ರಿಪ್ಪನ್‌ಪೇಟೆ: ‘ಟೆಂಪಲ್ ಆಫ್ ಸಕ್ಸಸ್’ ಆಶ್ರಮದ ಸಂಸ್ಥಾಪಕ ಸಾಯಿದತ್ತ ರಘುನಾಥ್ ಗುರೂಜಿ ಅವರು ಅನಾರೋಗ್ಯದಿಂದ ಬೆಂಗಳೂರಿನಲ್ಲಿ ಮಂಗಳವಾರ ರಾತ್ರಿ ನಿಧನರಾದರು.

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ರಿಪ್ಪನ್‌ಪೇಟೆ ಸಮೀಪದ ಮೂಗೂಡ್ತಿ ಗ್ರಾಮದ ಶಾಮರಾಯ ಅವರ ಇಬ್ಬರು ಪುತ್ರರಲ್ಲಿ ಹಿರಿಯರಾದ ಗುರೂಜಿ ಅವರ ಅಂತ್ಯಕ್ರಿಯೆ ಶುಕ್ರವಾರ ಮಣಿಪಾಲದಲ್ಲಿ ನಡೆಯಲಿದೆ.

ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ. ಗುರೂಜಿಯವರ ಪಾರ್ಥಿವ ಶರೀರವನ್ನು ಬೆಂಗಳೂರಿನ ಬಸವನಗುಡಿಯ ವಾಣಿವಿಲಾಸ ರಸ್ತೆಯಲ್ಲಿರುವ ‘ಟೆಂಪಲ್ ಆಫ್ ಸಕ್ಸಸ್’ ಆಶ್ರಮದ ಆವರಣದಲ್ಲಿ ಗುರುವಾರ ಭಕ್ತರ ದರ್ಶನಕ್ಕೆ ಇಡಲಾಗಿತ್ತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಪ್ರಮುಖ ರಾಜಕಾರಣಿಗಳಿಗೆ ವಾಟರ್ ಥೆರಪಿ ಮೂಲಕ ಚಿಕಿತ್ಸೆ ನೀಡಿದ್ದ ಗುರೂಜಿ, ‘ಅಮೃತ್ ಚಿಕಿತ್ಸೆ’ ಹೆಸರಲ್ಲಿ ಪುರಾತನ ಚಿಕಿತ್ಸಾ ಪದ್ಧತಿಯ ಪುನರುಜ್ಜೀವನ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಈ ಹಬ್ಬದ ಋತುವಿನಲ್ಲಿ ನಿಮ್ಮ ಮನೆ ಮತ್ತು ಇಂಟೀರಿಯರ್ ಅಪ್‌ಡೇಟ್ ಮಾಡಲು 4 ದಿನಗಳ
FURNITURE FAIR®
LIFESTYLE & INTERIOR EXPO
Presented By HDFC BANK
ಇಂದಿನಿಂದ ಆರಂಭ
2 | 3 | 4 | 5 ಸೆಪ್ಟೆಂಬರ್ 2022
ಬೆಳಗ್ಗೆ 10.00 ರಿಂದ ರಾತ್ರಿ 8.30
ತ್ರಿಪುರವಾಸಿನಿ ಅರಮನೆ ಮೈದಾನ
(ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು)
ಲಿವಿಂಗ್ ರೂಮ್ • ಡೈನಿಂಗ್ ಸೆಟ್ • ಬೆಡ್‌ರೂಮ್ • ಪಾಟರಿ • ಹೋಮ್ ಡೆಕೋರ್ • ಬ್ರಾಸ್ & ಆರ್ಟ್‌ಕ್ರಾಫ್ಟ್ಸ್ • ರಿಕ್ಲೈನರ್ ಸೋಫಾ ಸೆಟ್ಸ್ • ಕಾರ್ಪೆಟ್ & ಕುಷನ್ಸ್ • ಮ್ಯಾಟ್ರೆಸ್ಸಸ್ • ಕರ್ಟನ್ಸ್ • ವಾಟರ್ ಫೌಂಟೇನ್ಸ್

exhibitions_iadsnevents
iadsnevents
ಎಲ್ಲಾ ಪ್ರಮುಖ ಕ್ರೆಡಿಟ್/ಡೆಬಿಟ್ ಕಾರ್ಡ್‌ಗಳನ್ನು ಸ್ವೀಕರಿಸಲಾಗುತ್ತದೆ
ಪ್ರವೇಶ ಉಚಿತ
+91 93425 77908
AN EVENT BY iads & events COMPLETE BUSINESS SOLUTIONS

INTERNATIONAL SHOPPING & LIFESTYLE FESTIVAL
Presented By HDFC BANK
ವಿಭಿನ್ನ ದೇಶಗಳ ಎಕ್ಸ್‌ಕ್ಲೂಸಿವ್ ಪೆವಿಲಿಯನ್
ಇಂದಿನಿಂದ ಪ್ರಾರಂಭ
INDONESIA MALAYSIA THAILAND AFGHANISTAN TURKEY
• ಜುವೆಲ್ಲರಿ • ಸ್ಪಾ ಪ್ರಾಡಕ್ಟ್ಸ್ • ಅಕ್ಸೆಸರೀಸ್ • ಥೈಲ್ಯಾಂಡ್ ಹೋಮ್ ಡೆಕೋರೇಶನ್ • ಥೈಲ್ಯಾಂಡ್ ಮಸಾಜ್ • ಥೈಲ್ಯಾಂಡ್ ಹ್ಯಾಂಡಿಕ್ರಾಫ್ಟ್ಸ್ • ಅರೋಮಾ ಪ್ರಾಡಕ್ಟ್ಸ್ • ಲೈಫ್‌ಸ್ಟೈಲ್ ಪ್ರಾಡಕ್ಟ್ಸ್ • ಮ್ಯಾಂಗೋ ವುಡ್ ಪ್ರಾಡಕ್ಟ್ಸ್ • ಇಂಡೋನೇಷ್ಯಾ ಫರ್ನಿಚರ್ • ಥೈಲ್ಯಾಂಡ್ ಹರ್ಬಲ್ ಪ್ರಾಡಕ್ಟ್ಸ್ • ಥೈಲ್ಯಾಂಡ್ ಗಿಫ್ಟ್ಸ್ • ಆಟೋಮೊಬೈಲ್ • ಥೈಲ್ಯಾಂಡ್ ಕಾಸ್ಮೆಟಿಕ್ ಪ್ರಾಡಕ್ಟ್ಸ್
2 | 3 | 4 | 5 ಸೆಪ್ಟೆಂಬರ್ 2022
ಬೆಳಗ್ಗೆ 10.00 ರಿಂದ ರಾತ್ರಿ 8.30
ತ್ರಿಪುರವಾಸಿನಿ ಅರಮನೆ ಮೈದಾನ
(ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು)



ಎಕ್ಸ್‌ಕ್ಲೂಸಿವ್ ಕಾರ್ ಪೆವಿಲಿಯನ್
exhibitions_iadsnevents
iadsnevents
ಎಲ್ಲಾ ಪ್ರಮುಖ ಕ್ರೆಡಿಟ್/ಡೆಬಿಟ್ ಕಾರ್ಡ್‌ಗಳನ್ನು ಸ್ವೀಕರಿಸಲಾಗುತ್ತದೆ
ಪ್ರವೇಶ ಉಚಿತ
+91 93425 77908
AN EVENT BY iads & events COMPLETE BUSINESS SOLUTIONS

ಕೆಪಿಸಿಸಿ ಪದಾಧಿಕಾರಿಗಳು, ಮುಖಂಡರ ಸಭೆಯಲ್ಲಿ ದಿಗ್ವಿಜಯ ಸಿಂಗ್ ಹೇಳಿಕೆ

ಪಕ್ಷದ ತತ್ವದಡಿ 'ಭಾರತ ಒಗ್ಗೂಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ಗುರುವಾರ ನಡೆದ ಭಾರತ್ ಜೋಡೋ ಯಾತ್ರೆ ಕುರಿತ ಕೆಪಿಸಿಸಿ ಪದಾಧಿಕಾರಿಗಳ ಸಭೆಯಲ್ಲಿ ದಿಗ್ವಿಜಯಸಿಂಗ್ ಜೊತೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ ಕೆ ಶಿವಕುಮಾರ್ ಸಂತಸ ಹಂಚಿಕೊಂಡ ಕ್ಷಣ. ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ,ಜೈರಾಂ ರಮೇಶ್ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಇದ್ದಾರೆ

ಬೆಂಗಳೂರು: 'ಪಕ್ಷದ ಸಿದ್ಧಾಂತವಾದ ಸರ್ವಧರ್ಮ ಸಹಬಾಳ್ವೆ ಮುಂದಿಟ್ಟುಕೊಂಡು ರಾಹುಲ್ ಗಾಂಧಿ ನೇತೃತ್ವದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ 'ಭಾರತ ಒಗ್ಗೂಡಿಸಿ' (ಭಾರತ್ ಜೋಡೊ) ಯಾತ್ರೆ ನಡೆಯಲಿದೆ' ಎಂದು ಯಾತ್ರೆಯ ರಾಷ್ಟ್ರೀಯ ಸಮಿತಿ ಅಧ್ಯಕ್ಷ ದಿಗ್ವಿಜಯ ಸಿಂಗ್ ಹೇಳಿದರು.

'ಭಾರತ ಒಗ್ಗೂಡಿಸಿ' ಯಾತ್ರೆ ಕುರಿತು ಅಂಬೇಡ್ಕರ್ ಭವನದಲ್ಲಿ ಗುರುವಾರ ನಡೆದ ಕೆಪಿಸಿಸಿ ಪದಾಧಿಕಾರಿಗಳು, ಮುಂಚೂಣಿ ಘಟಕಗಳ ಪದಾಧಿಕಾರಿಗಳು, ಸಮನ್ವಯಕಾರರು, ಪಕ್ಷದ ಮುಖಂಡರ ಸಭೆಯಲ್ಲಿ ಮಾತನಾಡಿದರು.

'ಭ್ರಷ್ಟಾಚಾರ, ಜಿಎಸ್‌ಟಿ, ನಿರುದ್ಯೋಗ, ಬಡತನ ಇವುಗಳನ್ನು ಮುಂದಿಟ್ಟುಕೊಂಡು ಈ ಯಾತ್ರೆ ಮಾಡುತ್ತೇವೆ. ಆ ಮೂಲಕ, ಇಡೀ ದೇಶದ ಜನರನ್ನು ಒಂದುಗೂಡಿಸಲು ಹೊರಟಿದ್ದೇವೆ' ಎಂದರು.

'ಬಿಜೆಪಿ ಕೋಮುವಾದ ರಾಜಕಾರಣ ಮಾಡುತ್ತಿದೆ. ಆದರೆ, ನಮ್ಮದು ಸರ್ವರನ್ನು ಒಳಗೊಂಡ ಅಭಿವೃದ್ಧಿ ಸಿದ್ಧಾಂತ. ಮೂರು ಹಂತ ಗಳಲ್ಲಿ ಈ ಯಾತ್ರೆ ನಡೆಯಲಿದೆ. ಪ್ರತಿದಿನ 7 ಗಂಟೆಗೆ ಪಾದಯಾತ್ರೆ ಆರಂಭವಾಗಲಿದೆ. ಮಧ್ಯಾಹ್ನ 2 ಗಂಟೆಗೆ ವಿಭಿನ್ನ ಸಮುದಾಯಗಳ ಜನರ ಜೊತೆ ರಾಹುಲ್ ಗಾಂಧಿ ಸಂವಾದ ನಡೆಸಲಿದ್ದಾರೆ. 3.30ಕ್ಕೆ ಮತ್ತೆ ಪಾದಯಾತ್ರೆ ಮುಂದುವರೆಯಲಿದೆ' ಎಂದು ಅವರು ಹೇಳಿದರು.

ರಾಜ್ಯಸಭೆ ಸದಸ್ಯ ಜೈರಾಂ ರಮೇಶ್, 'ತಮಿಳುನಾಡು 3, ಕೇರಳ 18, ಕರ್ನಾಟಕ 21, ತೆಲಂಗಾಣ 21, ಆಂಧ್ರಪ್ರದೇಶ 3, ಮಹಾರಾಷ್ಟ್ರ 16, ಮಧ್ಯಪ್ರದೇಶ 16, ರಾಜಸ್ಥಾನ 21, ಉತ್ತರಪ್ರದೇಶ 3, ಹರಿಯಾಣ 2, ಜಮ್ಮು- ಕಾಶ್ಮೀರದಲ್ಲಿ 2 ದಿನ, ಹೀಗೆ ಒಟ್ಟು 3,570 ಕಿ.ಮೀ ಈ ಯಾತ್ರೆ ಸಾಗಲಿದೆ' ಎಂದು ಅವರು ಮಾಹಿತಿ ನೀಡಿದರು.

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, 'ಲೋಕತಂತ್ರ, ಪ್ರಜಾತಂತ್ರ ಉಳಿವಿಗೆ ಪಕ್ಷ ಈ ಯಾತ್ರೆ ಹಮ್ಮಿಕೊಂಡಿದೆ' ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಯಾತ್ರೆ ಆರಂಭವಾಗುವ ದಿನ (ಸೆ. 7) ಸಂಜೆ 5 ಗಂಟೆಗೆ ಜಿಲ್ಲಾ ಮಟ್ಟದಲ್ಲಿ ಸಭೆ ಮಾಡಿ ಸದ್ಭಾವನಾ ಯಾತ್ರೆ ಮಾಡಬೇಕು. 8, 9 ಹಾಗೂ 10ರಂದು ಎಲ್ಲ 224 ಕ್ಷೇತ್ರಗಳಲ್ಲಿ ಒಂದೊಂದು ದಿನ ಈ ಯಾತ್ರೆ ವಿಚಾರವಾಗಿ ಬ್ಲಾಕ್ ಮಟ್ಟದಲ್ಲಿ ತಯಾರಿ ಸಭೆ ಮಾಡಬೇಕು. ಜಿಲ್ಲಾ, ಬ್ಲಾಕ್, ಪಂಚಾಯಿತಿ ಮಟ್ಟದಲ್ಲಿ ಎಲ್ಲರಿಗೂ ಉಸ್ತುವಾರಿ ಜವಾಬ್ದಾರಿ ನೀಡಬೇಕು' ಎಂದು ಸಲಹೆ ನೀಡಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಈಶ್ವರ್ ಖಂಡ್ರೆ, ಸಲೀಂ ಅಹ್ಮದ್, ರಾಮಲಿಂಗಾರೆಡ್ಡಿ, ಆರ್. ಧ್ರುವನಾರಾಯಣ್, ಶಾಸಕರಾದ ಎಚ್.ಕೆ. ಪಾಟೀಲ, ಕೆ.ಜೆ. ಜಾರ್ಜ್, ಯು.ಟಿ. ಖಾದರ್, ಸಂಸದ ಡಿ.ಕೆ. ಸುರೇಶ್ ಹಾಗೂ ಮತ್ತಿತರರು ಇದ್ದರು.

ಪಶ್ಚಿಮಘಟ್ಟ: ಕೃಷಿ, ಪ್ಲಾಂಟೇಷನ್ ಭೂಪರಿವರ್ತನೆ ತಡೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಘಟ್ಟ ಪ್ರದೇಶದಲ್ಲಿ ಕೃಷಿ ಮತ್ತು ಪ್ಲಾಂಟೇಷನ್ ಭೂಮಿಯನ್ನು ಅನ್ಯ ಉದ್ದೇಶಗಳ ಪರಿವರ್ತನೆಗೆ ಅವಕಾಶ ನೀಡಬಾರದು ಎಂದು ಸಂಯುಕ್ತ ಸಂರಕ್ಷಣಾ ಆಂದೋಲನ ಸರ್ಕಾರವನ್ನು ಒತ್ತಾಯಿಸಿದೆ.

ಶಿವಮೊಗ್ಗ, ಚಿಕ್ಕಮಗಳೂರು, ಉತ್ತರಕನ್ನಡ, ದಕ್ಷಿಣಕನ್ನಡ, ಹಾಸನ ಜಿಲ್ಲೆಗಳ ಪಶ್ಚಿಮಘಟ್ಟದ ತಪ್ಪಲು ಪ್ರದೇಶ ರಕ್ಷಿಸಲು ಮತ್ತು ಅಲ್ಲಿ ವಾಸಿಸುವ ಸ್ಥಳೀಯರ ಬದುಕಿನ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು, ಈ ಪ್ರದೇಶಕ್ಕೆ ಒಪ್ಪಿತವಾಗುವ ನೀತಿ-ನಿಯಮಗಳನ್ನು ರೂಪಿಸಬೇಕು ಎಂದು ಒತ್ತಾಯಿಸಿದೆ.

ಪಶ್ಚಿಮಘಟ್ಟ ಪ್ರದೇಶದಲ್ಲಿ ವಾಸಿಸುತ್ತಿರುವ ದಲಿತ, ಕೃಷಿ-ಕಾರ್ಮಿಕ, ಆದಿವಾಸಿಗಳಿಗೆ ಭೂಮಿ ಹಕ್ಕು ಸಿಕ್ಕಿಲ್ಲ. ಈ ಮಧ್ಯೆ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ಕಾಫಿ ಬೆಳೆಯುವ ಪ್ರದೇಶಗಳಲ್ಲಿ ನೂರಾರು ಎಕರೆ ಕಾಫಿ ತೋಟಗಳು ಮಾರಾಟವಾಗುತ್ತಿವೆ. ಇಂತಹ ಜಮೀನನ್ನು ಸರ್ಕಾರ ಸೂಕ್ತ ಬೆಲೆ ಕೊಟ್ಟು ಖರೀದಿಸಿ, ಅದನ್ನು ಭೂರಹಿತರಿಗೆ ಹಂಚುವ ಕೆಲಸ ಮಾಡಬೇಕು. ರೈತರು ಬೆಳೆಯುವ ಭತ್ತಕ್ಕೆ ಅತಿ ಹೆಚ್ಚು ಬೆಂಬಲ ಬೆಲೆ ನೀಡುವ ಮೂಲಕ ಅವರು ಕೃಷಿಯಿಂದ ವಿಮುಖರಾಗುವುದನ್ನು ತಡೆಯುವ ಕೆಲಸ ಆಗಬೇಕು ಎಂದು ಹೇಳಿದೆ.

ಪಶ್ಚಿಮಘಟ್ಟ ಇಡೀ ದೇಶಕ್ಕೆ ಸೇರಿದ ಅಮೂಲ್ಯ ಸಂಪತ್ತು. ಇಲ್ಲಿನ ಭೌಗೋಳಿಕ ರಚನೆಯನ್ನೇ ಬದಲಿಸಿ, ಆ ಮೂಲಕ ಅಪಾಯಕ್ಕೆ ಆಹ್ವಾನ ನೀಡುವ ಅಭಿವೃದ್ಧಿ ಕಲ್ಪನೆಗಳು ಬದಲಾಗಬೇಕು. ಮುಖ್ಯವಾಗಿ, ಪ್ರವಾಸೋದ್ಯಮ ಉತ್ತೇಜಿಸುವ ಉದ್ದೇಶದಿಂದ ಭೂಪರಿವರ್ತನೆ ನಿಯಮಗಳಿಗೆ ತಿದ್ದುಪಡಿ ತರಬೇಕು ಎಂದೂ ಹೇಳಿದೆ.

ಗುಡ್ಡಗಾಡುಗಳಿಗೆ ಸೂಕ್ತವಾಗುವಂತೆ ವೈಜ್ಞಾನಿಕ ಆಧಾರಿತ ನಿಯಮಗಳಿಗೆ ಅನುಗುಣವಾಗಿಯೇ ಮನೆ ನಿರ್ಮಿಸಬೇಕು. ಭೂಮಿ ಕುಸಿಯದಂತೆ ಕಾಪಾಡುವ ಪೂರಕ ಅರಣ್ಯ ಬೆಳೆಸುವಂತೆ ನೋಡಿಕೊಳ್ಳಬೇಕು. ಪರಿಸರ ಸೂಕ್ಷ್ಮ ಪ್ರದೇಶದ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು, ತಹಶೀಲ್ದಾರ್ ಮಟ್ಟದ ಅಧಿಕಾರಿಗಳಿಗೆ ಇಲ್ಲಿನ ಜೀವವೈವಿಧ್ಯದ ಕುರಿತಾಗಿ ಜಾಗೃತಿ ಮೂಡಿಸಬೇಕು ಎಂದು ಸಲಹೆ ನೀಡಿದೆ.

3ನೇ ಆರೋಪಪಟ್ಟಿ ಸಲ್ಲಿಸಿದ ಸಿಐಡಿ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿಗೆಸಂಬಂಧಿಸಿದಂತೆಸಿಐಡಿಅಧಿಕಾರಿಗಳು ನಗರದ ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಗುರುವಾರ ಮೂರನೇ ಚಾರ್ಜ್‌ಶೀಟ್ ಸಲ್ಲಿಸಿದರು.

6 ಸಂಪುಟಗಳಲ್ಲಿ 2060 ಪುಟಗಳ ಚಾರ್ಜ್‌ಶೀಟ್‌ನ್ನು ಸಿಐಡಿ ಡಿವೈಎಸ್ಪಿಗಳಾದ ಶಂಕರಗೌಡ ಪಾಟೀಲ, ಪ್ರಕಾಶ ರಾಠೋಡ, ಡಿಟೆಕ್ಟಿವ್ ಇನ್‌ಸ್ಪೆಕ್ಟರ್ ಆನಂದ ಮತ್ತು ಸಿಬ್ಬಂದಿ ನಿಗದಿತ ಅವಧಿಗಿಂತ 8 ದಿನ ಮೊದಲೇ ನ್ಯಾಯಾಲಯಕ್ಕೆ ಸಲ್ಲಿಸಿದರು. ಇದರಲ್ಲಿ 124 ಕಡತಗಳು, 104 ಜನರ ಸಾಕ್ಷಿಗಳನ್ನು ದಾಖಲಿಸಿಕೊಳ್ಳಲಾಗಿದೆ.

ನಗರದ ನೊಬೆಲ್ ಸ್ಕೂಲ್ ಪರೀಕ್ಷಾ ಕೇಂದ್ರದಲ್ಲಿ ನಡೆದ ಪರೀಕ್ಷಾ ಅಕ್ರಮಕ್ಕೆ ಸಂಬಂಧಿಸಿದಂತೆ ಈಗಾಗಲೇ ಏಳು ಆರೋಪಿಗಳ ಬಂಧನವಾಗಿದೆ.

ಟಿಇಟಿಗೆ ಅರ್ಜಿ ಸಲ್ಲಿಕೆ

ಬೆಂಗಳೂರು: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ 'ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಗೆ (ಟಿಇಟಿ) ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಸೆ.30 ಕೊನೆಯ ದಿನ.

ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗೆ ಇಲಾಖೆಯ ವೆಬ್‌ಸೈಟ್ www.schooleducation.kar.nic.in ಸಂಪರ್ಕಿಸಬಹುದು.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ನವೋದ್ಯಮಗಳ ಉತ್ತೇಜನಕ್ಕೆ 'ವೆಂಚುರೈಸ್' ಸ್ಪರ್ಧೆಗೆ ಚಾಲನೆ

ಬೆಂಗಳೂರು: ಉತ್ಪಾದನೆ ಮತ್ತು ಸುಸ್ಥಿರ ಸಂಬಂಧಿತ ವಲಯಗಳಲ್ಲಿ ನವೋದ್ಯಮಗಳನ್ನು ಗುರುತಿಸಿ, ಬೆಂಬಲಿಸುವ 'ವೆಂಚುರೈಸ್' ಸ್ಪರ್ಧೆಗೆ ರಾಜ್ಯ ಸರ್ಕಾರ ಗುರುವಾರ ಚಾಲನೆ ನೀಡಿದೆ.

'ವೆಂಚುರೈಸ್' ಲೋಗೋ ಬಿಡುಗಡೆ ಮಾಡಿ ಮಾತನಾಡಿದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ, 'ಉತ್ಪಾದನೆ ಮತ್ತು ಸಂಬಂಧಿತ ವಲಯಗಳಲ್ಲಿನ ನವೋದ್ಯಮಗಳಿಗೆ ರಾಜ್ಯವನ್ನು ಆದ್ಯತೆ ತಾಣವಾಗಿ ರೂಪಿಸುವುದು ನಮ್ಮ ಆದ್ಯತೆ. ಉದ್ಯಮಿಗಳಿಗೆ ಪೂರಕ ವಾತಾವರಣ ಕಲ್ಪಿಸಲು ಅತ್ಯುತ್ತಮ ಮೂಲ ಸೌಕರ್ಯ ನಿರ್ಮಿಸಲು ನಮ್ಮ ಸರ್ಕಾರ ಬದ್ಧ' ಎಂದು ಹೇಳಿದರು.

ಬೆಂಗಳೂರಿನಲ್ಲಿ ನವೆಂಬರ್‌ನಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶದ ಭಾಗವಾಗಿ 'ವೆಂಚುರೈಸ್-ಗ್ಲೋಬಲ್ ಸ್ಟಾರ್ಟ್‌ಅಪ್ ಪಿಚ್ ಚಾಲೆಂಜ್' ಆಯೋಜಿಸಲಾಗಿದೆ. ನವೋದ್ಯಮಗಳ ಬೆಳವಣಿಗೆಯನ್ನು ಬೆಂಬಲಿಸಿ, ಅವರಿಗೆ ಹೂಡಿಕೆದಾರರು ಮತ್ತು ಉದ್ಯಮ ಪಾಲುದಾರರ ಜತೆ ಸಂಪರ್ಕ ಕಲ್ಪಿಸುವ ಪ್ರಯತ್ನವಾಗಿ ಈ ಕಾರ್ಯಕ್ರಮ ಆಯೋಜಿಸಿದ್ದೇವೆ' ಎಂದು ನಿರಾಣಿ ಹೇಳಿದರು.

'ಸ್ಟಾರ್ಟ್‌ಅಪ್ ಪಿಚ್ ಚಾಲೆಂಜ್' ಅನ್ನು ಅಮೆಜಾನ್ ಆಯೋಜಿಸಿದೆ. ಮುಂದಿನ 2 ತಿಂಗಳ ಅವಧಿಯಲ್ಲಿ ನಡೆಯಲಿರುವ ಈ ಸ್ಪರ್ಧೆಯ ಮೊದಲ ಹಂತ ಆನ್‌ಲೈನ್ ಅರ್ಜಿ ಸಲ್ಲಿಕೆ. ಆನ್‌ಲೈನ್ ಪಿಂಚಿಂಗ್ ಎರಡನೇ ಭಾಗವಾದರೆ, ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಅಂತಿಮ ಸುತ್ತಿನ ಸ್ಪರ್ಧೆ ನಡೆಯಲಿದೆ. ವಿಶ್ವದ ವಿವಿಧೆಡೆಯಿಂದ 2,000 ಕ್ಕೂ ಹೆಚ್ಚು ಅರ್ಜಿಗಳು ಬರಲಿವೆ. 2022 ರ ಸೆಪ್ಟೆಂಬರ್ 1 ರಿಂದ ಸೆಪ್ಟೆಂಬರ್ 25 ರವರೆಗೆ ಅರ್ಜಿ ಸಲ್ಲಿಸಲು ಅವಕಾಶವಿದ್ದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿಳಾಸ – https://investkarnataka.co.in/gim2022/venturise

'ಕೈ' ತ್ಯಜಿಸಿ, ಕುಣಿಗಲ್‌ನಿಂದ ಸ್ಪರ್ಧೆ

ಪ್ರಜಾವಾಣಿ ವಾರ್ತೆ



ಎಸ್‌.ಪಿ.ಮುದ್ದ ಹನುಮೇಗೌಡ

ಬೆಂಗಳೂರು: ಮಾಜಿ ಸಂಸದ ಎಸ್‌.ಪಿ. ಮುದ್ದಹನುಮೇಗೌಡ ಕಾಂಗ್ರೆಸ್ ಪಕ್ಷದ ಸದಸ್ಯತ್ವಕ್ಕೆ ಗುರುವಾರ ರಾಜೀನಾಮೆ ನೀಡಿದ್ದಾರೆ. ತಮ್ಮ ರಾಜೀನಾಮೆ ಪತ್ರವನ್ನು ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್‌ಗೆ ರವಾನಿಸಿದ್ದಾರೆ.

ಮುಂಬರುವ ಚುನಾವಣೆಯಲ್ಲಿ ಕುಣಿಗಲ್ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಕಣಕ್ಕಿಳಿಯಲು ಮುದ್ದಹನುಮೇಗೌಡ ಬಯಸಿದ್ದರು. ಆದರೆ, ಪಕ್ಷದಿಂದ ಟಿಕೆಟ್ ಸಿಗುವ ಭರವಸೆ ಸಿಗದೇ ಇರುವುದರಿಂದ ಈ ತೀರ್ಮಾನ ತೆಗೆದುಕೊಂಡಿದ್ದಾರೆ.

'ಹಲವು ವರ್ಷಗಳ ಹಿಂದೆಯೇ ಕುಣಿಗಲ್ ಕ್ಷೇತ್ರದ ಶಾಸಕನಾಗಿದ್ದೆ. ಮುಂದಿನ ಚುನಾವಣೆಯಲ್ಲಿ ನಾನು ಅಲ್ಲಿಂದಲೇ ಸ್ಪರ್ಧಿಸಬೇಕೆಂದು ಜನ ಬಯಸಿದ್ದಾರೆ. ಹೀಗಾಗಿ, ಸ್ಪರ್ಧಿಸಲು ನಿರ್ಧರಿಸಿದ್ದು, ಯಾವ ಪಕ್ಷದಿಂದ ಎಂದು ಇನ್ನೂ ತೀರ್ಮಾನಿಸಿಲ್ಲ' ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಸೋದರ ಸಂಬಂಧಿಯೂ ಆಗಿರುವ ಹಾಲಿ ಶಾಸಕ ಡಾ. ರಂಗನಾಥ್ ಅವರಿಗೆ ಕುಣಿಗಲ್ ಕ್ಷೇತ್ರದ ಟಿಕೆಟ್ ಮತ್ತೊಮ್ಮೆ ಸಿಗುವುದು ಬಹುತೇಕ ಖಚಿತ.

ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಗುರುವಾರ ಭೇಟಿ ಮಾಡಿದ ಮುದ್ದಹನುಮೇಗೌಡ, ಪಕ್ಷದಿಂದ ತಮ್ಮನ್ನು ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದರು.

ಬಳಿಕ ಮಾತನಾಡಿದ ಅವರು, '1989ರಲ್ಲಿ ಕಾಂಗ್ರೆಸ್ 'ಬಿ' ಫಾರಂ ಕೊಟ್ಟು ಬಳಿಕ ಬೇರೆಯವರಿಗೆ ಕೊಟ್ಟಿದ್ದರು. 2019ರಲ್ಲಿ ಸಂಸದನಾಗಿದ್ದರೂ ಟಿಕೆಟ್ ನೀಡಲಿಲ್ಲ. ಚುನಾವಣೆಗೆ ಸ್ಪರ್ಧೆ ಮಾಡುವುದನ್ನು ನಾಲ್ಕು ಬಾರಿ ತಪ್ಪಿಸಲಾಗಿದೆ. ಅತ್ಯಂತ ಕ್ರಿಯಾಶೀಲವಾಗಿ ಪಕ್ಷ ಸಂಘಟಿಸಿದ್ದೇನೆ. ಪಕ್ಷ ಅಧಿಕಾರಕ್ಕೆ ಬರಲು ನನ್ನ ಸೇವೆಯೂ ಇದೆ. ಆದರೆ, ನಾಯಕರ ಇತ್ತೀಚಿನ ಧೋರಣೆಗಳು ನಾನು ಪಕ್ಷ ತ್ಯಜಿಸಲು ಕಾರಣ' ಎಂದರು.

ಕಾಂಗ್ರೆಸ್ ತೊರೆದ ಲಕ್ಷ್ಮಿನಾರಾಯಣ

ಲಕ್ಷ್ಮಿನಾರಾಯಣ

ತುರುವೇಕೆರೆ: ಕಾಂಗ್ರೆಸ್‌ನ ಇತ್ತೀಚಿನ ಬೆಳವಣಿಗೆಗಳಿಂದ ಬೇಸತ್ತು ಕಾಂಗ್ರೆಸ್‌ಗೆ ರಾಜೀನಾಮೆ ಸಲ್ಲಿಸಿದ್ದೇನೆ ಎಂದು ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎಂ.ಡಿ.ಲಕ್ಷ್ಮಿನಾರಾಯಣ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ಮತ್ತು ಆ ಪಕ್ಷದ ನಾಯಕರ ಹಿಂದೂ ವಿರೋಧಿ ನಿಲುವು ವಿರೋಧಿಸಿ ಗೌರಿ, ಗಣೇಶ ಹಬ್ಬದ ದಿನವೇ ಪಕ್ಷಕ್ಕೆ ರಾಜೀನಾಮೆ ನೀಡಿದ್ದೇನೆ. ಕ್ಷೇತ್ರದ ಮತದಾರರು, ರಾಜ್ಯದ ಎಲ್ಲ ನೇಕಾರ, ಹಿಂದುಳಿದ ವರ್ಗಗಳ ಪ್ರಮುಖರ ಜೊತೆ ಚರ್ಚಿಸಿ ತೀರ್ಮಾನ ತೆಗೆದುಕೊಂಡಿದ್ದೇನೆ. ಬಿ.ಎಸ್. ಯಡಿಯೂರಪ್ಪ ಭೇಟಿ ಮಾಡಿ ಅವರು ಹೇಳಿದ ದಿನ ಬಿಜೆಪಿ ಸೇರುತ್ತೇನೆ. ನನ್ನ ಜೊತೆಗೆ ಅನೇಕರು ಬಿಜೆಪಿ ಸೇರಲಿದ್ದಾರೆ' ಎಂದರು.

ಕರ್ನಾಟಕವೇ ಹನುಮನ ಜನ್ಮಸ್ಥಳ: ಯೋಗಿ ಬೆಂಬಲ

ಪ್ರಜಾವಾಣಿ ವಾರ್ತೆ

ಯೋಗಿ ಆದಿತ್ಯನಾಥ

ಬೆಂಗಳೂರು: ಸಂಜೀವಿನಿ ಪರ್ವತವನ್ನೇ ಹೊತ್ತುತಂದ, ಲಂಕೆಗೆ ಸೇತುವೆ ಕಟ್ಟಲು ಶ್ರಮಿಸಿದ ಸಂಕಷ್ಟ ನಿವಾರಕ ಹನುಮನ ನಾಡು ಕರ್ನಾಟಕ ಎಂದು ಹೊಗಳುವ ಮೂಲಕ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಹನುಮನ ಜನ್ಮಭೂಮಿ ಕರ್ನಾಟಕ ಎನ್ನುವ ವಾದಕ್ಕೆ ಪರೋಕ್ಷ ಸಮ್ಮತಿ ನೀಡಿದರು.

ನೆಲಮಂಗಲ ಸಮೀಪದ ಮಹದೇವಪುರದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಕೃತಿ ಚಿಕಿತ್ಸಾ ಕೇಂದ್ರ 'ಕ್ಷೇಮವನ' ಉದ್ಘಾಟಿಸಿ ಅವರು ಮಾತನಾಡಿದರು.

'ಕರ್ನಾಟಕ, ಉತ್ತರ ಪ್ರದೇಶದ ಮಧ್ಯೆ ಸುದೀರ್ಘ ಕಾಲದಿಂದ ಗಟ್ಟಿ ಸಂಬಂಧವಿದೆ. ಬಜರಂಗಬಲಿ ಕರ್ನಾಟಕದವನು. ರಾಮಸೇತುವೆ ನಿರ್ಮಾಣದ ಕೆಲಸ ಆಂಜನೇಯನಿಂದಲೇ ಆಯಿತು' ಎಂದು ಹೇಳಿದರು.

ಆಂಧ್ರಪ್ರದೇಶ ಸೇರಿದಂತೆ ಹಲವು ರಾಜ್ಯಗಳು ಹನುಮನ ಜನ್ಮಭೂಮಿ ತಮ್ಮ ರಾಜ್ಯದಲ್ಲಿದೆ ಎಂದು ಪ್ರತಿಪಾದಿಸಿವೆ. ಆಂಧ್ರಪ್ರದೇಶ ತಿರುಪತಿ ತಿರುಮಲ ಹನುಮಂತನ ಜನ್ಮಸ್ಥಳ ಎಂದು ದೇವಸ್ಥಾನದ ಆಡಳಿತ ಮಂಡಳಿ ಪ್ರತಿಪಾದಿಸಿದೆ.

ಸಿಇಟಿ: ದಾಖಲೆ ತಿದ್ದುಪಡಿಗೆ ಅವಕಾಶ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹರಾಗಿರುವ (ಸಿಇಟಿ) ಅಭ್ಯರ್ಥಿಗಳ ದಾಖಲೆಗಳಲ್ಲಿ ತಪ್ಪುಗಳಿದ್ದರೆ ತಿದ್ದುಪಡಿ ಮಾಡಿಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮತ್ತೆ ಅವಕಾಶ ಕಲ್ಪಿಸಿದೆ.

ಶಾಲಾ ವಿವರಗಳು ಅಪೂರ್ಣವಾಗಿದ್ದರೆ ಸೆ.1ರಿಂದ 7ರವರೆಗೆ ಪ್ರತಿ ದಿನ ರಾತ್ರಿ 10ರಿಂದ ಮರುದಿನ ಬೆಳಿಗ್ಗೆ 8ರವರೆಗೆ ತಿದ್ದುಪಡಿ ಮಾಡಿಕೊಳ್ಳಬಹುದು. ಪೂರ್ಣ ಭರ್ತಿ ಮಾಡದೆ ಖಾಲಿ ಬಿಟ್ಟಿದ್ದಲ್ಲಿ ಸೆ.1ರಿಂದ 7ರವರೆಗೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಲ್ಲಿ ಸರಿಪಡಿಸಿಕೊಳ್ಳಬಹುದು. ಒಂದು ಅಥವಾ 2 ವರ್ಷ ವಿವರ ಸೇರಿಸಲು ಸೆ. 8ರ ನಂತರ ಅವಕಾಶ ನೀಡಲಾಗುವುದು. ಜಾತಿ, ಆದಾಯ ಪ್ರಮಾಣಪತ್ರಗಳ ಆರ್‌ಡಿ ಸಂಖ್ಯೆ ತಿದ್ದುಪಡಿಗೆ ಸೆ.4ರ ಬೆಳಿಗ್ಗೆ 8ರಿಂದ ಸೆ.5ರಂದು ಸಂಜೆ 5ರವರೆಗೆ ಅವಕಾಶ ನೀಡಲಾಗಿದೆ.

ಜಿಲ್ಲಾ ಪಂಚಾಯತ, ಗದಗ.
ಕಾರ್ಯನಿರ್ವಾಹಕ ಇಂಜಿನೀಯರ, ಪಂ.ರಾಜ್.ಇಂ. ವಿಭಾಗ, ಗದಗ.

ನಂ:ಪಂ.ರಾಜ್.ಇಂ.ವಿ/ಗದಗ/ಪಿ.ಬಿ.2/ಟೆಂಡರ/2022-23/ 1584 ದಿನಾಂಕ: 26-08-2022

ಇ-ಪ್ರೊಕ್ಯೂರಮೆಂಟ ಟೆಂಡರ ಪ್ರಕಟಣೆ
Standard Bid Document KW- 1&2 [ಏಕಲಕೋಟಿ ಪದ್ಧತಿ]

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್-2000 ನಿಯಮದಂತೆ Standard Bid Document KW-1&2ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಇ-ಪ್ರೋಕ್ಯೂರಮೆಂಟ್ ಪೋರ್ಟಲ್, ಮುಖಾಂತರ 18 ಕಾಮಗಾರಿಯ ಟೆಂಡರನ್ನು ಆಹ್ವಾನಿಸಲಾಗಿದೆ. **ಲೆಕ್ಕ ಶೀರ್ಷಿಕೆ: 2022-23ನೇ ಸಾಲಿನ 2403 ಪಶುಪಾಲನಾ ಇಲಾಖೆ/2210 ಆಯುಷ ಇಲಾಖೆ/ಆರೋಗ್ಯ ಇಲಾಖೆ/2515 ಯೋಜನೆ/2022-23 ಗ್ರಾ.ಪಂ. ಅನುದಾನ ಅಡಿ/2022-23ನೇ ಸಾಲಿನ ಮೀನುಗಾರಿಕೆ ಇಲಾಖೆ/2022-23ನೇ ಸಾಲಿನ ಕೃಷಿ ಇಲಾಖೆ ಯೋಜನೆ ಅಡಿ** ಪಿಡಬ್ಲ್ಯುಡಿ.ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ್ ಪೋರ್ಟಲ್, https://eproc.karnataka.gov.in ಮುಖಾಂತರ ಭಾಗವಹಿಸಬಹುದು. ವಿವರ ಈ ಕೆಳಗಿನಂತಿದೆ.

ಅ ನಂ	ಕಾಮಗಾರಿಯ ಹೆಸರು/ ವರ್ಕ ಇಂಡೆಂಟ್	ಟೆಂಡರಿಗಿಟ್ಟ ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ. ಮೊತ್ತ (ಇ-ಪೋರ್ಟ ಮುಖಾಂತರ)	ಕಾಮಗಾರಿ ಅವಧಿ (ಮಳೆಗಾಲ ಸೇರಿ)	ಗುತ್ತಿಗೆದಾರರ ದರ್ಜೆ
1	REPAIRS TO ASST. DIRECTOR'S VETERNARY HOSPITAL BUILDING, RAMP, PAINTING AND OTHER WORKS @ RON TALUK (RESRERVE TO ST)UNDER 2022-23 2403 VETERNARY DEPT. **WORK_INDENT93029**	517182.23	6470.00	3 ತಿಂಗಳು	Valid PWD contractor can participate KW-1
2	CONSTRUCTION OF COMPOUND WALL TO VETERNARY HOSPITAL @ NARAGUND TOWN UNDER 2022-23 2403 VETERNARY DEPT. **WORK_INDENT93030**	297497.85	7440.00	3 ತಿಂಗಳು	Valid PWD contractor can participate KW-1
3	CONSTRUCTION OF YOGA ROOM @ GOVT. AYURVED CHIKITSALAYA IN ITAGI VILLAGE OF RON TALUK (RESERVE TO SC) UNDER 2210 AYUSH DEPT. **WORK_INDENT93031**	987352.31	12650.00	3 ತಿಂಗಳು	Valid PWD contractor can participate KW-1
4	CONSTRUCTION OF ADDITIONAL ROOM FOR POST METRIC BOY'S HOSTEL(SW) LAKKUNDI IN LAKKUNDI VILLAGE OF GADAG TALUK, GADAG DISTRICT. UNDER 2022-23 ZP 2515-00-196-1-22-300 UNTIED GRANT. (RESERVE TO SC) **WORK_INDENT92532/Call-2**	995688.29	12450.00	3 ತಿಂಗಳು	Valid PWD contractor can participate KW-1
5	CONSTRUCTION OF PANCHAKARMA ROOM AT GOVT AYURVEDIC HOSPITAL IN PETALUR VILLAGE OF MUNDARAGI TALUK (UNDER 2022-23 2210) **WORK_INDENT92258**	1529107.00	38250.00	3 ತಿಂಗಳು	Valid PWD contractor can participate KW-1
6	CONSTRUCTION OF PANCHAKARMA ROOM AT GOVT AYURVEDIC HOSPITAL IN MEVUNDI VILLAGE OF MUNDARAGI TALUK (UNDER 2022-23 2210) **WORK_INDENT92259**	1473774.00	36850.00	3 ತಿಂಗಳು	Valid PWD contractor can participate KW-1
7	CONSTRUCTION OF FLOOD CONTROLLING RETAINING WALL NEAR SHRI VEERBHADRESHWARA SAMUDAHYA BHAVAN IN SINGATALUR VILLAGE OF GADAG TALUK IN GADAG DISTRICT. UNDER 2022-23 GP GRANT **WORK_INDENT93181**	3995083.62	79910.00	6 ತಿಂಗಳು	Valid PWD contractor can participate KW-2
8	CONSTRUCTION OF YOGA ROOM @ GOVT HOMIYOPATHI CHIKITSALAYA MALAVAD VILLAGE IN RON TALUK UNDER 2022-23 2210 AYUSH DEPT **WORK_INDENT93236**	981398.85	24600.00	3 ತಿಂಗಳು	Valid PWD contractor can participate KW-1
9	CONSTRUCTION OF ADDL ROOM IN IN 1ST FLOOR AND PAINTING FOR PRE METRIC BOYS HOSTEL HIREHAL(554) IN RON TALUK UNDER 2022-23 ZP GRANT **WORK_INDENT93238**	893655.95	22400.00	3 ತಿಂಗಳು	Valid PWD contractor can participate KW-1
10	CONSTRUCTION ONE ADDL ROOM, FIXING OF SOLAR WATER HITER,PAINTING @ PRE METRIC GIRLS HOSTEL (559) ITAGI VILLAGE IN RON TALUK UNDER 2022-23 ZP GRANT **WORK_INDENT93239**	948807.26	23800.00	3 ತಿಂಗಳು	Valid PWD contractor can participate KW-1
11	REPAIRS TO JHPGS SCHOOL STAGE IN MARANABASARI VILLAGE OF RON TALUK (RESERVE TO SC) UNDER 2022-23 2515 ZP GRANT **WORK_INDENT93241**	560869.67	7100.00	3 ತಿಂಗಳು	Valid PWD contractor can participate KW-1
12	CONSTRUCTION OF GP LIBRARY @ SUDI VILLAGE OF RON TALUK UNDER 2022-23 2515 ZP GRANT **WORK_INDENT93242**	988139.24	24800.00	3 ತಿಂಗಳು	Valid PWD contractor can participate KW-1
13	CONSTRUCTION OF GRAM PANCHAYAT BUILDING IN KOUJAGERI VILLAGE OF RON TALUK (RESERVED TO ST) UNDER ZP GRANT **WORK_INDENT93258**	1986490.59	24900.00	3 ತಿಂಗಳು	Valid PWD contractor can participate KW-1
14	REPAIRS TO AYUSH HOSPITAL SLAB AND OTHER REPAIRS IN BETEGERI GOVERNMENT AYURVEDIC HOSPITAL IN GADAG TOWN IN GADAG TALUK OF GADAG DIST. UNDER 2022-23 2210-0-101-0-36 AYUSH DEPT.**WORK_INDENT93257**	903873.19	22600.00	3 ತಿಂಗಳು	Valid PWD contractor can participate KW-1
15	CONSTRUCTION OF AUCTION HALL/ TRAINING HALL IN PREMISES OF FISHERY DEPUTY DIRECTOR OFFICE IN GADAG TALUK OF GADAG DIST. UNDER 2022-23 2407-00-101-0-27 FISHERY DEPT. **WORK_INDENT93256**	596064.63	7500.00	3 ತಿಂಗಳು	Valid PWD contractor can participate KW-1
16	CONSTRUCTION OF CC DRAIN FOR EXIT OF RAIN WATER , PROVIDING OF INTERLOCKPAVERS INSIDE OFFICE PREMISES, SHAJJA CONSTRUCTION AND PAINTING IN JOINT DIRECTOR OFFICE AGRICULTURE IN GADAG TOWN IN GADAG TALUK IN GADAG DIST. UNDER 2022-23 2435-00-101-0-33 AGRI DEPT. **WORK_INDENT93255**	523637.97	13100.00	3 ತಿಂಗಳು	Valid PWD contractor can participate KW-1
17	REPAIRS TO OFFICE BUILDING, PAINTING, SLAB REPAIR AND CONSTRUCTION OF SHED FOR 2 WHEELER PARLING IN PREMISES OF ASSISTANT KRISHI DIRECTOR OFFICE IN GADAG TOWN, IN GADAG TALUK GADAG DIST. UNDER 2022-23 2435-00-101-0-33-AGRI DEPT.**WORK_INDENT93254**	537771.52	13450.00	3 ತಿಂಗಳು	Valid PWD contractor can participate KW-1
18	REAPIRS TO MULAGUNDA -A & B SUB CENTER BUILDING AND PROVIDING BASIC FACILITY IN GADAG TALUKA IN GADAG DISTRICT. UNDER 2022-23-00-101-0-36 HEALTH DEPT.**WORK_INDENT93259**	398129.10	9600.00	3 ತಿಂಗಳು	Valid PWD contractor can participate KW-1

ಇ-ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್-ಬಿ ಯನ್ನು ವೆಬಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ:**29-08-2022** ರಿಂದ **05-09-2022** ರಂದು **16.00** ಗಂಟೆಗೆ ಗಂಟೆಯವರೆಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ **:07-09-2022** ರಂದು **16.30** ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ **20** ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ-ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾಜ್.ಇಂಜಿನೀಯರಿಂಗ್ ವಿಭಾಗ, ಗದಗ.

ವಾ.ಸಾ.ಇ/ಗದಗ/271/2022-23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.

www:eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821-2420810

ಕೆಳಗೆ ಸೂಚಿಸಿರುವ ಐಟಂವಾರು ಟೆಂಡರ್ ಪ್ರಕಟಣೆಗಳ ಅಧಿಸೂಚನೆ ದಿನಾಂಕ: 29.08.2022

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ಈ ಕೆಳಗಿನಂತೆ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (http://eproc.karnataka.gov.in) ಸಂಜೆ 4:00ರ ವರೆಗೆ ಈ ಕೆಳಗಿನಂತೆ ಸಲ್ಲಿಸಬಹುದಾಗಿರುತ್ತದೆ. ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ. 33.88 ಲಕ್ಷಗಳು ಹಾಗೂ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ. 366.50 ಲಕ್ಷಗಳಾಗಿರುತ್ತದೆ. ಕನಿಷ್ಠ ಇ.ಎಂ.ಡಿ ರೂ.67800/- ಹಾಗು ಗರಿಷ್ಠ ಇ.ಎಂ.ಡಿ ಮೊತ್ತ ರೂ 5,50,000/-ಗಳಾಗಿರುತ್ತದೆ. ಕ್ರ.ಸಂ 02 & 03 ಟೆಂಡರ್ ಪ್ರಕಟಣೆಯಲ್ಲಿನ ಕಾಮಗಾರಿಗಳಿಗೆ ಪೂರ್ವಭಾವಿ ಸಭೆಯನ್ನು ದಿ:09.09.2022ರಂದು ಈ ಕೆಳಗೆ ಸಹಿ ಮಾಡಿರುವ ಕಛೇರಿಯಲ್ಲಿ ಪೂರ್ವಾಹ್ನ 11.30 ಘಂಟೆಗೆ ನಿಗಧಿಪಡಿಸಲಾಗಿರುತ್ತದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕ್ರಮ ಸಂಖ್ಯೆ	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ಪ್ರಕಟಣೆಯಲ್ಲಿನ ಕಾಮಗಾರಿಗಳ ಕ್ರಮ ಸಂಖ್ಯೆ	ಕರೆಯ/ಕಾರಿಗೆಂಡಂ ಸಂಖ್ಯೆ	ಗುತ್ತಿಗೆದಾರರ ಅರ್ಹತೆ	ಮೀಸಲಾತಿ ವಿವರ	ಕೊನೆಯ ದಿನಾಂಕ
1.	07/2022-22	04,05,06,07 & 08	ಕರೆ-2	3ನೇ ದರ್ಜೆ & ಮೇಲ್ಪಟ್ಟು	-	08.09.2022
2.	06/2022-23	05	ಕರೆ-2	2ನೇ ದರ್ಜೆ & ಮೇಲ್ಪಟ್ಟು	-	15.09.2022
3.	10/2022-23	01, 02 & 03	ಕರೆ-1	ಕ್ರ.ಸಂ 01 & 03 -2ನೇ ದರ್ಜೆ & ಮೇಲ್ಪಟ್ಟು ಹಾಗೂ ಕ್ರ.ಸಂ 03- 3ನೇ ದರ್ಜೆ & ಮೇಲ್ಪಟ್ಟು	-	19.09.2022

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ,
ಮೈಸೂರು ವಿಭಾಗ, ಮೈಸೂರು.

ಆಕ್ಸಿಸ್ ಬ್ಯಾಂಕ್
ಸಾರ್ವಜನಿಕ ಸೂಚನೆ
ಅಡಮಾನ ಚಿನ್ನಾಭರಣಗಳ ಇ-ಹರಾಜು ನೋಟೀಸ್

ಸಾಲಗಾರರು ಹಾಗೂ ಸಾರ್ವಜನಿಕರಿಗೆ ನಿರ್ದಿಷ್ಟವಾಗಿ ಈ ಮೂಲಕ ತಿಳಿಸುವುದೇನೆಂದರೇ ಕೆಳಗಿನ ಖಾತೆಗಳಲ್ಲಿನ ಚಿನ್ನಾಭರಣಗಳ ಒತ್ತೆಯ ಸಾರ್ವಜನಿಕ ಹರಾಜನ್ನು ಆಕ್ಸಿಸ್ ಬ್ಯಾಂಕ್ ಕೆಳಗೆ ಸೂಚಿಸಿದ ಶಾಖೆಯಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಸೂಚಿಸಲಾಗಿದೆ.

ಈ ಕೆಳಗೆ ತಿಳಿಸಲಾದ ಸಾಲಗಾರರು ಭದ್ರತೆಗಾಗಿ ಬ್ಯಾಂಕ್ ಪರವಾಗಿ ಚಿನ್ನದ ಆಭರಣಗಳ ("ಚಿನ್ನದ ಸಾಲ ಸೌಲಭ್ಯ") ಭರವಸೆಯ ವಿರುದ್ಧ **ಆಕ್ಸಿಸ್ ಬ್ಯಾಂಕ್ ಲಿಮಿಟೆಡ್**‌ನಿಂದ ಕ್ರೆಡಿಟ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಾಲಗಾರರು/ಜಾಮೀನುದಾರರಿಗೆ ಡಿಮ್ಯಾಂಡ್ ನೋಟಿಸ್‌ಗಳನ್ನು ನೀಡಲಾಗಿದ್ದು, ಪಡೆದ ಚಿನ್ನದ ಸಾಲ ಸೌಲಭ್ಯಕ್ಕೆ ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ಸಾಲಗಾರರು/ಜಾಮೀನುದಾರರಿಗೆ ಈ ಮೂಲಕ ತಿಳಿಸಲಾಗಿದೆ. ಸಾಲಗಾರರು/ಜಾಮೀನುದಾರರು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, ಬ್ಯಾಂಕ್ ಈ ಮೂಲಕ ನಿರ್ಬಂಧಿಸಲಾದ ಆಸ್ತಿಯ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಗಿರವಿ ಇಟ್ಟಿರುವ ಚಿನ್ನದ ಆಭರಣಗಳ ಇ-ಹರಾಜು ಮಾರಾಟವನ್ನು **"ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ" "ಯಾವುದೇ ಆಧಾರ ಇಲ್ಲದೆ" ದಿನಾಂಕ : 12.09.2022** ರಂದು **ಮಧ್ಯಾಹ್ನ 12:30 ಗಂಟೆಯಿಂದ ನಿಂದ 3:30 ವರೆಗೆ** ಹರಾಜು ನಡೆಸಲು ಪ್ರಸ್ತಾಪಿಸಲಾಗಿದೆ.

ಸಾಲಗಾರರ ಮತ್ತು ಬಾಕಿ ಮೊತ್ತಗಳ ವಿವರಗಳು

ಕ್ರ. ಸಂ.	ಶಾಖೆಯ ಹೆಸರು	ಖಾತೆ ಸಂಖ್ಯೆ	ಗ್ರಾಹಕರ ಹೆಸರು	ಬರಬೇಕಾದ ಬಾಕಿ ಮೊತ್ತ	ಡಿಮ್ಯಾಂಡ್ ನೋಟೀಸ್ ದಿ:	ಒಟ್ಟು ತೂಕ	ನಿವ್ವಳ ತೂಕ
1	ಬನಶಂಕರಿ, ಬೆಂಗಳೂರು (ಕ)	XXXXXXXXXXX4490	ಚೇತನ ನವೀನ್	217002	24-Mar-22	129.3	121
2	ಬನಶಂಕರಿ, ಬೆಂಗಳೂರು (ಕ)	XXXXXXXXXXX2400	ಜಯಲಲಿತ ಪಿ	581721.58	13-Apr-22	215.9	196
3	ಬನಶಂಕರಿ, ಬೆಂಗಳೂರು (ಕ)	XXXXXXXXXXX4986	ರಜತ್ ಎಸ್	102368.49	22-Jul-22	33.2	30
4	ಬನಶಂಕರಿ, ಬೆಂಗಳೂರು (ಕ)	XXXXXXXXXXX3850	ಉದಯ ಶಂಕರ್ ಎ.ಎಸ್.	932026	22-Jun-22	334.3	291.5
5	ಬಂಗಾರಪೇಟೆ (ಕ)	XXXXXXXXXXX2022	ಚೇತನ್ ಸಿ	60512	26-Jul-22	15.8	15.6
6	ಬಸವೇಶ್ವರನಗರ, ಬೆಂಗಳೂರು (ಕ)	XXXXXXXXXXX9581	ರಮ್ಯ ಆರ್	102604	28-Jul-22	33.27	31.81
7	ಬಸವೇಶ್ವರನಗರ, ಬೆಂಗಳೂರು (ಕ)	XXXXXXXXXXX8290	ಎಸ್ ಶ್ರೀಕಾಂತ್	153812	28-Jul-22	48.2	46.7
8	ಬಿಡದಿ ಬೆಂಗಳೂರು (ಕ)	XXXXXXXXXXX7074	ಕಾಂತರಾಜು	89863	26-Jul-22	25	24
9	ಬಿಟಿಎಂ ಲೇಔಟ್, ಬೆಂಗಳೂರು (ಕ)	XXXXXXXXXXX7580	ಸಿಜು ಜೋಸೆಫ್	60829.71	28-Jul-22	20.1	19.3
10	ಚಾಮರಾಜಪೇಟೆ, ಬೆಂಗಳೂರು (ಕ)	XXXXXXXXXXX1021	ಜ್ಯೋತಿ ಕೆ	107188.86	9-Jun-22	43.8	33.8
11	ಚಾಮರಾಜಪೇಟೆ, ಬೆಂಗಳೂರು (ಕ)	XXXXXXXXXXX1430	ರಾಕೇಶ್ ಕುಮಾರ್	212199.1	26-Jul-22	95.6	63
12	ಕಾಕ್ಸ್‌ಟೌನ್, ಬೆಂಗಳೂರು (ಕ)	XXXXXXXXXXX8523	ಶೀಲಾ ಎಸ್	684054.37	22-Jul-22	211.3	209.5
13	ಕಾಕ್ಸ್‌ಟೌನ್, ಬೆಂಗಳೂರು (ಕ)	XXXXXXXXXXX1797	ವನಜ ಎಸ್	206268	22-Jul-22	67.3	64
14	ಎಲೆಕ್ಟ್ರಾನಿಕ್‌ಸಿಟಿ, ಬೆಂಗಳೂರು (ಕ)	XXXXXXXXXXX2576	ಮುನಿಕೃಷ್ಣ ಎಂ	127074.00	24-Jan-22	36.3	35
15	ಎಲೆಕ್ಟ್ರಾನಿಕ್‌ಸಿಟಿ, ಬೆಂಗಳೂರು (ಕ)	XXXXXXXXXXX3515	ಪ್ರಭು ಸಿ	162816.78	26-Jul-22	55.9	54.5
16	ಹೆಗ್ಡೆನಗರ, ಬೆಂಗಳೂರು (ಕ)	XXXXXXXXXXX8597	ಆರ್ ವಡಿವೇಲ್	38999.36	28-Jul-22	12.69	12
17	ಹೊಸಕೋಟೆ, ಬೆಂಗಳೂರು (ಕ)	XXXXXXXXXXX4447	ನಯಾಜ್ ಪಾಷ	107153	28-Jul-22	36.6	35.8
18	ಹೆಚ್‌ಎಸ್‌ಆರ್ ಲೇವಟ್, ಬೆಂ. (ಕ)	XXXXXXXXXXX7735	ನಾರಾಯಣ್ ಸಿ	597119.39	5-Feb-22	198.7	191.4
19	ಇಂದ್ರಾನಗರ, ಬೆಂಗಳೂರು (ಕ)	XXXXXXXXXXX3581	ಚನ್ನಪ್ಪ ಕೆ ಎಸ್	1946573	18-Jul-22	868.8	859.4
20	ಇಂದ್ರಾನಗರ, ಬೆಂಗಳೂರು (ಕ)	XXXXXXXXXXX5903	ತರುಣ್ ಜಿ ಮೂರ್ತಿ	118554.00	18-Jul-22	43.8	37
21	ಜೆ. ಪಿ. ನಗರ, ಬೆಂಗಳೂರು (ಕ)	XXXXXXXXXXX2440	ಹರೀಶ್ ರೆಡ್ಡಿ ತಿಯ್ಯಗುರ	81400.93	28-Jul-22	38.4	38
22	ಕಲ್ಯಾಣನಗರ, ಬೆಂಗಳೂರು (ಕ)	XXXXXXXXXXX0478	ಅವಿನಾಶ್ ಯು	77773	28-Jul-22	24	23.1
23	ಕಸ್ತೂರಿನಗರ, ಬೆಂಗಳೂರು (ಕ)	XXXXXXXXXXX3502	ರಾಘವರಾಜು ಶಿವ ಚೈತನ್ಯ	78748	18-Jul-22	26.8	24.5
24	ಮಹದೇವಪುರ, ಬೆಂಗಳೂರು (ಕ)	XXXXXXXXXXX2924	ಕೊಟ್ರೇಶ ಕೊಲ್ಲಿ	46991.55	28-Jul-22	15	14.3
25	ಮಹಾಲಕ್ಷ್ಮಿ ಲೇಔಟ್, ಬೆಂ. (ಕ)	XXXXXXXXXXX1023	ಉದಯ ಹೆಚ್	389257.21	22-Jul-22	151.4	120.8
26	ಮಹಾಲಕ್ಷ್ಮಿ ಲೇಔಟ್, ಬೆಂ. (ಕ)	XXXXXXXXXXX1052	ಉದಯ ಹೆಚ್	336567	22-Jul-22	112.8	102.4
27	ಮಾರತಹಳ್ಳಿ, ಬೆಂಗಳೂರು (ಕ)	XXXXXXXXXXX8736	ಗಿರೀಶ	588486.63	7-Jan-22	203.2	194.2
28	ಮಾರತಹಳ್ಳಿ, ಬೆಂಗಳೂರು (ಕ)	XXXXXXXXXXX9185	ನೀಲ್ ಗಣಪತಿ ಎಂ ಎಂ.	57966.00	24-Mar-22	16	15.5
29	ಮಾರತಹಳ್ಳಿ, ಬೆಂಗಳೂರು (ಕ)	XXXXXXXXXXX2225	ಶಶಾಂಕ್ ವಿ	885520.87	20-May-21	286.3	271
30	ನಾಗರಭಾವಿ, ಬೆಂಗಳೂರು (ಕ)	XXXXXXXXXXX3777	ಕಿರಣ್ ಹೆಚ್ ಆರ್	317758.75	18-Jul-22	101.1	95.2
31	ನಾಗರಭಾವಿ, ಬೆಂಗಳೂರು (ಕ)	XXXXXXXXXXX9441	ವಿ ಗೋವಿಂದ ರಾಜು	85600.77	28-Jul-22	25.8	25.2
32	ಪೀಣ್ಯ, ಬೆಂಗಳೂರು (ಕ)	XXXXXXXXXXX8734	ಮಹೇಶ ಸಿಂಗಾಪುರ	81120.00	18-Jul-22	28.6	25.6
33	ಪೀಣ್ಯ, ಬೆಂಗಳೂರು (ಕ)	XXXXXXXXXXX8045	ಶ್ವೇತಾ ಎಸ್ ಸಿ	82287	26-Jul-22	24.7	24.4
34	ಪ್ರಶಾಂತ್‌ನಗರ, ಬೆಂಗಳೂರು (ಕ)	XXXXXXXXXXX0110	ಭೂಪತಿ ಜಿ	173837	18-Jun-22	57.7	55.8
35	ಆರ್‌ಬಿಐ ಲೇಔಟ್, ಬೆಂಗಳೂರು (ಕ)	XXXXXXXXXXX9595	ಕೆ ಲೋಕೇಶ್	79766	14-Jul-22	26.1	25.1
36	ಆರ್‌ಬಿಐ ಲೇಔಟ್, ಬೆಂಗಳೂರು (ಕ)	XXXXXXXXXXX9608	ಆರ್ ಶ್ರೀನಿವಾಸಲು ರೆಡ್ಡಿ	261243.96	26-Jul-22	97.1	79.5
37	ಸಹಕಾರನಗರ, ಬೆಂಗಳೂರು (ಕ)	XXXXXXXXXXX7967	ಇಶ್ರದ್ ಇಸ್ಮಾಯಿಲ್ ಟಿಯು	217962	26-Jul-22	67.9	66.7
38	ಸಂಜಯ್‌ನಗರ, ಬೆಂಗಳೂರು (ಕ)	XXXXXXXXXXX4365	ವರದರಾಜು ಸುನೀತ	1642246.68	22-Jul-22	584.9	549
39	ಸರ್ಜಾಪುರ ರಸ್ತೆ, ಬೆಂಗಳೂರು (ಕ)	XXXXXXXXXXX0178	ಎಂ ಗೋಡ್ವಿನ್ ನಾಥನ್	91619.86	18-Jun-22	40.3	28
40	ವಿದ್ಯಾರಣ್ಯಪುರ, ಬೆಂಗಳೂರು (ಕ)	XXXXXXXXXXX9787	ಮಂಜುನಾಥ ಹೆಚ್	101148	26-Jul-22	33.8	33
41	ವಿದ್ಯಾರಣ್ಯಪುರ, ಬೆಂಗಳೂರು (ಕ)	XXXXXXXXXXX6200	ಶಿಲ್ಪಾ ಕೆ ಎಸ್	100232	28-Jul-22	31.4	31
42	ಯಲಹಂಕ, ಬೆಂಗಳೂರು (ಕ)	XXXXXXXXXXX7146	ದಿಲೀಪ್ ರೆಡ್ಡಿ	39763	26-Jul-22	13.5	12.8
43	ಯಲಹಂಕ, ಬೆಂಗಳೂರು (ಕ)	XXXXXXXXXXX8212	ಹೆಚ್ ಪ್ರದೀಪ್	158401	22-Jul-22	63.4	62.8
44	ರಾಮನಗರ (ಕ)	XXXXXXXXXXX5191	ಮಹೇಶ ಟಿ ಎಂ	91785.00	26-Jul-22	25.1	24.5

ಆಕ್ಸಿಸ್ ಬ್ಯಾಂಕ್. ಯಾವುದೇ ಪೂರ್ವ ಸೂಚನೆ ಇಲ್ಲದೆ ಖಾತೆಯನ್ನು ತೆಗೆದುಹಾಕುವ/ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಹೊಂದಿದೆ. ಹರಾಜು ಆನ್‌ಲೈನ್ https://gold.samil.in ನಲ್ಲಿ ದಿನಾಂಕ : 12.09.2022 ರಂದು ಮಧ್ಯಾಹ್ನ 12:30 ರಿಂದ 3:30ಕ್ಕೆ ನಡುವೆ ನಡೆಯಲಿದೆ.
ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ https://gold.samil.in ಗೆ ಲಾಗ್ ಇನ್ ಮಾಡಿ (ಆನ್‌ಲೈನ್ ಮಾರಾಟಗಾರರ ವೆಬ್‌ಸೈಟ್)

ಸ್ಥಳ: ಬೆಂಗಳೂರು ಸಹಿ/- ಅಧಿಕೃತ ಅಧಿಕಾರಿ, ಆಕ್ಸಿಸ್ ಬ್ಯಾಂಕ್ ಲಿಮಿಟೆಡ್.,

ಸಿಡಿಲು ಬಡಿದು ಮೂವರು, ಗೋಡೆ ಕುಸಿದು ಒಬ್ಬರು ಸಾವು • ಮಹಿಳೆ ಶವ ಪತ್ತೆ

ಮಳೆ: ತಪ್ಪದ ಪಡಿಪಾಟಲು

ಪ್ರಜಾವಾಣಿ ವಾರ್ತೆ

ಕನಕಪುರ ತಾಲ್ಲೂಕಿನ ಮುಳ್ಳಳ್ಳಿ ಗ್ರಾಮದ ಬಳಿ ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ಸೇತುವೆ ಭಾಗಶಃ ಹಾನಿಗೀಡಾಗಿದೆ

ಹುಬ್ಬಳ್ಳಿ / ಮಂಗಳೂರು / ಚಾಮರಾಜನಗರ: ನಿರಂತರ ಮಳೆ, ಪ್ರವಾಹ ಪರಿಸ್ಥಿತಿಯು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಜನರ ಪರಿತಾಪ ಮುಂದುವರಿದಿದೆ. ಜನಜೀವನ, ಸಂಚಾರ ಅಸ್ತವ್ಯಸ್ತಗೊಂಡಿದ್ದು, ಬೆಳೆ, ಆಸ್ತಿ ಹಾನಿ ಜನರ ನೆಮ್ಮದಿಯನ್ನು ಕದಲಿದೆ. ಕಲಕಿದೆ.

ಉತ್ತರ ಕರ್ನಾಟಕದ ಧಾರವಾಡ–ಹುಬ್ಬಳ್ಳಿ, ಬೆಳಗಾವಿ, ಹಾವೇರಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆ ಮುಂದುವರಿದಿದೆ. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ದಡೇರಕೊಪ್ಪದಲ್ಲಿ ಹೊಲಕ್ಕೆ ಹೋಗಿದ್ದ ಸವಿತಾ ಕರಿಕಟ್ಟಿ (23) ಬುಧವಾರ ಸಿಡಿಲು ಬಡಿದು ಸತ್ತಿದ್ದಾರೆ. ಗದಗ ಜಿಲ್ಲೆಯ ನರಗುಂದ ಪಟ್ಟಣದಲ್ಲಿ ಗುರುವಾರ ಮರದ ಕೆಳಗೆ ನಿಂತಿದ್ದ ಅಶೋಕ್ ಶಿವಪ್ಪಯ್ಯನಮಠ ಶಿರಸಂಗಿ (56) ಮತ್ತು ಬುಧವಾರ ಹೊಲದಲ್ಲಿ ಹತ್ತಿ ಬಿಡಿಸುತ್ತಿದ್ದ ಚಿಕ್ಕನರಗುಂದದ ಮಾಲಾ ಮಲ್ಲಿಕಾರ್ಜುನ (31) ಕೂಡ ಸಿಡಿಲಿಗೆ ಬಲಿಯಾಗಿದ್ದಾರೆ.

ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಹಳೆವೀರಾಪುರ ಗ್ರಾಮದಲ್ಲಿ ತುಂಬಿ ಹರಿಯುತ್ತಿದ್ದ ಹಳ್ಳದಲ್ಲಿ ಬುಧವಾರ ಕೊಚ್ಚಿಕೊಂಡು ಹೋಗಿದ್ದ ಬಡಿಮಾ ಕಾಶೀಂಸಾಬ್ ದಾಸನಕೊಪ್ಪ (66) ಗುರುವಾರ ಶವವಾಗಿ ಪತ್ತೆಯಾಗಿದ್ದಾರೆ.

ಗದಗ ಜಿಲ್ಲೆಯಲ್ಲಿ ಬೆಣ್ಣೆಹಳ್ಳ ಉಕ್ಕಿ ಹರಿದು ಸಂಚಾರ ಸ್ಥಗಿತಗೊಂಡಿತ್ತು. ಉತ್ತರ ಕನ್ನಡ ಜಿಲ್ಲೆಯ ಕುಳವೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಕಾನು ಗ್ರಾಮದಲ್ಲಿ ಮನೆಯೊಂದರ ಮೇಲೆ ಮರ ಬಿದ್ದು ಮೂವರು ಗಾಯಗೊಂಡಿದ್ದಾರೆ. ರೋಣ ತಾಲ್ಲೂಕಿನ ಬೆನಹಾಳದಲ್ಲಿ ಸರ್ಕಾರಿ ಶಾಲೆಗೆ ನೀರು ನುಗ್ಗಿದ್ದು ಬಿಸಿಯೂಟದ ಪಡಿತರ, ಶಾಲಾ ದಾಖಲಾತಿಗಳು ನೀರು ಪಾಲಾದವು.

ಮನೆಗೆ ನೀರು, ರಾತ್ರಿಯಿಡೀ ಜಾಗರಣೆ

(ಹುಬ್ಬಳ್ಳಿ ವರದಿ): ಬೆಳಗಾವಿ ತಾಲ್ಲೂಕು, ಸವದತ್ತಿ, ಯರಗಟ್ಟಿ, ರಾಮದುರ್ಗ, ನಿಪ್ಪಾಣಿ, ಚಿಕ್ಕೋಡಿ ತಾಲ್ಲೂಕುಗಳಲ್ಲಿಯೂ ಎರಡು ದಿನಗಳಿಂದ ನಿರಂತರ ಮಳೆಯಾಗಿದೆ. ಸವದತ್ತಿ ತಾಲ್ಲೂಕಿನ ಯಲ್ಲಮ್ಮನ ಗುಡ್ಡದ ಮಾರ್ಗದಲ್ಲಿ ಎರಡು ತಾಸು ಸಂಚಾರ ಸ್ಥಗಿತವಾಗಿತ್ತು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಅಂಡಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆಬ್ಬತ್ತಿ ಗ್ರಾಮದ ಕೆರೆ ಭರ್ತಿಯಾಗಿ 46 ಮನೆಗಳಿಗೆ ನೀರು ನುಗ್ಗಿತ್ತು. ಸಂತ್ರಸ್ತ 211 ಜನರನ್ನು ಸಮೀಪದ ಸರ್ಕಾರಿ ಶಾಲೆಯಲ್ಲಿ ತೆರೆಯಲಾದ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ದಾಂಡೇಲಿ ನಗರದಲ್ಲಿ 28 ಮನೆಗಳಿಗೆ, ಆಲೂರು, ಕೇರವಾಡ ಗ್ರಾಮಗಳ 19 ಮನೆಗಳಿಗೆ ನೀರು ನುಗ್ಗಿದೆ. ಹಾಲಮಡ್ಡಿ ಶಾಲಾವರಣದ ಗೋಡೆ ಕುಸಿದಿದೆ.

ಕೊಳ್ಳೇಗಾಲ– ತಮಿಳುನಾಡು ಹೆದ್ದಾರಿ ಬಂದ್

ಚಾಮರಾಜನಗರ ವರದಿ: ಬಿಆರ್‌ಟಿ ಅರಣ್ಯ ಪ್ರದೇಶದಲ್ಲಿ ಭಾರಿ ಮಳೆ ಕಾರಣದಿಂದ ಕೊಳ್ಳೇಗಾಲ–ತಮಿಳುನಾಡು ಅಂತರರಾಜ್ಯ ಹೆದ್ದಾರಿಯಲ್ಲಿ ಒಡೆಯರಪಾಳ್ಯ ಬಳಿ ಮಸಕತ್ತಿ ಉಡುತೊರೆ ಹಳ್ಳ ತುಂಬಿಹರಿಯುತ್ತಿದ್ದು, ಸಂಚಾರ ಸ್ಥಗಿತಗೊಂಡಿದೆ. ಪಿ.ಜಿ.ಪಾಳ್ಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೇತುವೆ ಮುಳುಗಡೆಯಾಗಿದೆ. ವಾಹನ ಸವಾರರು, ಶಾಲೆ ಮಕ್ಕಳು, ಶಿಕ್ಷಕರು ಪರದಾಡುವಂತಾಯಿತು.

ಧಾರಾಕಾರ ಮಳೆ: ರಸ್ತೆ ಜಲಾವೃತ

ಸುಳ್ಯ (ದಕ್ಷಿಣ ಕನ್ನಡ) ವರದಿ: ತಾಲ್ಲೂಕಿನಲ್ಲಿ ಧಾರಾಕಾರ ಮಳೆಯಾಗಿದೆ. ದುಗ್ಗಲಡ್ಕ-ದೊಡ್ಡತೋಟ ರಸ್ತೆಯು ಜಲಾವೃತವಾಗಿ ಭಾಗಶಃ ಸಂಚಾರ ಸ್ಥಗಿತವಾಗಿತ್ತು. ಬೆಳ್ಳಾರೆಯ ಮಹಾಲಿಂಗೇಶ್ವರ ದೇವಸ್ಥಾನಕ್ಕೂ ನೀರು ನುಗ್ಗಿದ್ದು, ಸಮಸ್ಯೆಯಾಗಿತ್ತು.

ರಾಮನಗರದಲ್ಲಿ ರಾಜಕಾರಣಿಗಳ ದಂಡು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಸಂಸದ ಡಿ.ಕೆ. ಸುರೇಶ್ ಬುಧವಾರ ಕನಕಪುರ ತಾಲ್ಲೂಕಿನಾದ್ಯಂತ ಮಳೆ ಹಾನಿ ಪರಿಶೀಲಿಸಿದರು. ಗುರುವಾರ ಚನ್ನಪಟ್ಟಣದಲ್ಲಿ ಶಾಸಕ ಎಚ್.ಡಿ.ಕುಮಾರಸ್ವಾಮಿ ಹಾಗೂ ರಾಮನಗರ ಮತ್ತು ಕನಕಪುರದಲ್ಲಿ ಕಾನೂನು ಸಚಿವ ಮಾಧುಸ್ವಾಮಿ ನೆರೆ ಹಾನಿ ವೀಕ್ಷಿಸಿದರು.

ಕೊಡಗು: ಭಾರಿ ಮಳೆ

ಮಡಿಕೇರಿ: ನಗರ ಸೇರಿದಂತೆ ಕೊಡಗು ಜಿಲ್ಲೆಯಲ್ಲಿ ಗುರುವಾರ ಸಂಜೆಯ ನಂತರ ಭಾರಿ ಮಳೆ ಸುರಿದಿದ್ದು, ಹಲವು ಮನೆಗಳಿಗೆ ನೀರು ನುಗ್ಗಿದೆ.

ವಿವಿಧ ಬಡಾವಣೆಗಳು ಜಲಾವೃತಗೊಂಡಿದ್ದವು. ಸೋಮವಾರಪೇಟೆಯ ತಾಲ್ಲೂಕು ಹರದೂರು ವ್ಯಾಪ್ತಿಯಲ್ಲಿ 14 ಸೆಂ.ಮೀ ಮಳೆ ಸುರಿದಿದೆ.

ಗಂಗಾವತಿ ತಾಲ್ಲೂಕಿನ ಶ್ರೀರಾಮನಗರದಲ್ಲಿ ಮುಸ್ಲಿಂ ಮತ್ತು ಹಿಂದೂ ಸಮುದಾಯದ ಗ್ಯಾರೇಜ್ ಮಾಲೀಕರು ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿಗೆ ಮುಸ್ಲಿಮರು ಪೂಜೆ ಸಲ್ಲಿಸಿದರು

ಸಂತೇಬೆನ್ನೂರಿನಲ್ಲಿ ಕ್ರೇಜಿಸ್ಟಾರ್ ಹಿಂದೂ ಮುಸ್ಲಿಂ ಸಂಘದ ವತಿಯಿಂದ ಜಾಮಿಯಾ ಮಸೀದಿ ಆವರಣದಲ್ಲಿ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿ

ಹಿಂದೂ – ಮುಸ್ಲಿಮರ ಭಾವೈಕ್ಯ ಗಣೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಲವೆಡೆ ಹಿಂದೂ– ಮುಸ್ಲಿಂ ಸಮುದಾಯದವರು ಜೊತೆ ಜೊತೆಯಾಗಿ ಗಣೇಶ ಮೂರ್ತಿ ಪ್ರತಿಷ್ಠಾಪಿಸಿ, ಪೂಜಿಸುವ ಮೂಲಕ ಭಾವೈಕ್ಯ ಮೆರೆದಿದ್ದಾರೆ.

ಬಾಗಲಕೋಟೆಯ ನವನಗರದ ಸೆಕ್ಟರ್ ನಂ.5ರಲ್ಲಿ ಎರಡೂ ಕೋಮಿನವರು ಪೆಂಡಾಲ್ ಹಾಕಿ, ಮೆರವಣಿಗೆಯಲ್ಲಿ ಗಣೇಶ ಮೂರ್ತಿಯನ್ನು ತಂದು ಕೂಡಿಸಿ ಎಲ್ಲರೂ ಸೇರಿಕೊಂಡು ಪೂಜಿಸಿದರು.

‘ಕೋವಿಡ್‌ನಿಂದಾಗಿ ಎರಡು ವರ್ಷ ಗಣೇಶ ಮೂರ್ತಿಯನ್ನು ಕೂಡಿಸಿರಲಿಲ್ಲ. ಈ ವರ್ಷವೂ ಹಿಂದೂ– ಮುಸ್ಲಿಮರು ಸೇರಿಕೊಂಡೇ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಿದ್ದೇವೆ’ ಎಂದು ಆಯೋಜಕರಾದ ಪ್ರಮೋದ ಹೇಳಿದರು. ‘ನಮ್ಮಲ್ಲಿ ಮೊದಲಿನಿಂದಲೂ ಭೇದಭಾವ ಇಲ್ಲ. ಎಲ್ಲರೂ ಒಂದಾಗಿಯೇ ಇದ್ದೇವೆ. ನಾವೂ ಗಣೇಶ ಪ್ರತಿಷ್ಠಾಪನೆಗೆ ಕೈಜೋಡಿಸಿದ್ದೇವೆ’ ಎಂದು ಮುಸ್ಲಿಂ ಸಮುದಾಯದ ಸಿರಾಜ್ ಹೇಳಿದರು.

‘ಗ್ಯಾರೇಜ್ ಗಣೇಶ’ (ಗಂಗಾವತಿ, ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಶ್ರೀರಾಮನಗರದಲ್ಲಿ ಹಿಂದೂ ಮತ್ತು ಮುಸ್ಲಿಂ ಸಮುದಾಯದ ಗ್ಯಾರೇಜ್ ಮಾಲೀಕರು ಸೌಹಾರ್ದದಿಂದ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. 13 ವರ್ಷಗಳಿಂದ ಅವರ ಈ ಕಾಯಕ ಮುಂದುವರೆದಿದ್ದು, ಮೂರ್ತಿಗೆ ‘ಗ್ಯಾರೇಜ್ ಗಣೇಶ’ ಎಂದು ಹೆಸರಿಡಲಾಗಿದೆ.

‘ಎರಡೂ ಧರ್ಮಗಳ ಗ್ಯಾರೇಜ್ ಮಾಲೀಕರು ಮತ್ತು ಕೆಲಸಗಾರರು ಸೇರಿ ಹಣ ಸಂಗ್ರಸಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದೇವೆ. ಸ್ಥಳೀಯ ಅರ್ಚಕರಿಂದ ವಿಶೇಷ ಪೂಜೆ ಸಲ್ಲಿಸಿದ್ದೇವೆ’ ಎಂದು ಗ್ಯಾರೇಜ್ ಗಣೇಶ ಮಂಡಳಿ ಅಧ್ಯಕ್ಷ ಮುನ್ನಾಭಾಯ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಇಲ್ಲಿ ಒಂದೇ ಕಡೆ 14 ಗ್ಯಾರೇಜ್‌ಗಳಿವೆ. ಮೂರ್ತಿ ಇರುವ ಐದು ದಿನ ಎಲ್ಲಾ ಗ್ಯಾರೇಜ್‌ಗಳು ಬಂದ್ ಇರುತ್ತವೆ. ತುರ್ತು ಸಂದರ್ಭದಲ್ಲಿ ರೈತರ ಸಲುವಾಗಿ ಮಾತ್ರ ಗ್ಯಾರೇಜ್ ತೆರೆಯುತ್ತೇವೆ’ ಎಂದರು.

ಮಸೀದಿ ಆವರಣದಲ್ಲಿ ಗಣೇಶೋತ್ಸವ (ಸಂತೇಬೆನ್ನೂರು, ದಾವಣಗೆರೆ ಜಿಲ್ಲೆ): ಹಿರೇಕೋಗಲೂರು ಗ್ರಾಮದ ಜಾಮಿಯಾ ಮಸೀದಿ ಆವರಣದಲ್ಲಿ ಕ್ರೇಜಿಸ್ಟಾರ್ ಹಿಂದೂ-ಮುಸ್ಲಿಂ ವಿನಾಯಕ ಯುವಕ ಸಂಘದ ವತಿಯಿಂದ ಬುಧವಾರ ಗಣೇಶ ಮೂರ್ತಿ ಪ್ರತಿಷ್ಠಾಪಿಸಿದರು.

‘ಹಿಂದೂ-ಮುಸ್ಲಿಂ ಎಂಬ ಭೇದವಿಲ್ಲದೇ 30 ವರ್ಷಗಳಿಂದ ಮಸೀದಿ ಆವರಣದಲ್ಲಿಯೇ ಗಣೇಶ ಹಬ್ಬ ಆಚರಿಸುತ್ತಿದ್ದೇವೆ. ಮೂರು ದಿನ ವಿಭಿನ್ನ ಧಾರ್ಮಿಕ ಕಾರ್ಯಕ್ರಮ, ಅನ್ನ ದಾಸೋಹ ನಡೆಸುವ ಮೂಲಕ ಎಲ್ಲರೂ ಸಹೋದರರು ಎಂಬ ಸಂದೇಶ ಸಾರುತ್ತಿದ್ದೇವೆ. ನಮ್ಮಲ್ಲಿ ಎಂದಿಗೂ ವೈಮನಸ್ಸು ಸೃಷ್ಟಿಯಾಗಿಲ್ಲ’ ಎಂದು ಸಂಘದ ಅಧ್ಯಕ್ಷ ಇಮ್ರಾನ್ ತಿಳಿಸಿದರು.

ಇತಿಹಾಸಕಾರ ಪ್ರೊ. ಷೇಕ್ ಅಲಿ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಮೈಸೂರು: ಇತಿಹಾಸಕಾರ ಪ್ರೊ.ಬಿ.ಷೇಕ್ ಅಲಿ (98) ಗುರುವಾರ ಮಧ್ಯಾಹ್ನ ನಗರದ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ.

ಸರಸ್ವತಿಪುರಂನ ನ್ಯೂ ಮುಸ್ಲಿಂ ಹಾಸ್ಟೆಲ್‌ನಲ್ಲಿ ಮೃತರ ಅಂತಿಮ ದರ್ಶನವನ್ನು ವಿದ್ಯಾರ್ಥಿಗಳು ಹಾಗೂ ಜನಪ್ರತಿನಿಧಿಗಳು ಪಡೆದರು. ಕೇಂದ್ರ ಕಾರಾಗೃಹದ ಬಳಿಯಿರುವ ಖಬ್ರಸ್ತಾನದಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು.

ಹಾಸನದ ಸಕಲೇಶಪುರ ತಾಲ್ಲೂಕಿನ ಬೆಳ್ಗೋಡಿನಲ್ಲಿ 1925, ನ.10ರಂದು ಜನಿಸಿದ ಅವರು, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪದವಿ, ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿದ್ದರು.

ಅಲಿಗಡ ಹಾಗೂ ಲಂಡನ್ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಪಡೆದ ನಂತರ ಮೈಸೂರು ವಿಶ್ವವಿದ್ಯಾಲಯದ ಇತಿಹಾಸ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥರಾಗಿದ್ದರು. ಮಂಗಳೂರು ಹಾಗೂ ಗೋವಾ ವಿಶ್ವವಿದ್ಯಾಲಯಗಳ ಮೊದಲ ಕುಲಪತಿಯಾಗಿ ಸೇವೆ ಸಲ್ಲಿಸಿದ್ದರು.

50ಕ್ಕೂ ಹೆಚ್ಚು ಇತಿಹಾಸ ಪುಸ್ತಕಗಳನ್ನು ಬರೆದಿದ್ದ ಅವರು, ನೂರಾರು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದರು. ಕರ್ನಾಟಕದ ಸಾಂಸ್ಕೃತಿಕ ಇತಿಹಾಸ, ಬಹುಮನಿ, ಹೊಯ್ಸಳರು, ಬ್ರಿಟಿಷರ ಇತಿಹಾಸದ ಕುರಿತೂ ಅವರು ಬೆಳಕು ಚೆಲ್ಲಿದ್ದಾರೆ.

‘ಹಿಸ್ಟರಿ; ಇಟ್ಸ್ ಥಿಯರಿ ಅಂಡ್ ಮೆಥೆಡ್’, ‘ಹಿಸ್ಟರಿ ಆಫ್ ದ ವೆಸ್ಟ್ರನ್ ಗಂಗಾಸ್’, ‘ಗೋವಾ ವಿನ್ಸ್ ಫ್ರೀಡಂ’, ಬ್ರಿಟಿಷ್ ರಿಲೇಷನ್ಸ್ ವಿತ್ ಹೈದರ್ ಪ್ರಮುಖ ಕೃತಿಗಳು. ‘ಟಿಪ್ಪು ಸುಲ್ತಾನ್, ಎ ಗ್ರೇಟ್ ಮಾರ್ಟಿಯರ್’ ಅವರ ಪ್ರಸಿದ್ಧ ಕೃತಿ. ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ್ದ ‘ಕರ್ನಾಟಕ ಚರಿತ್ರೆ’ ಸಂಪುಟಗಳ ಪ್ರಧಾನ ಸಂಪಾದಕರಾಗಿದ್ದರು.

‘ಪ್ರವಾದಿ ಮೊಹಮ್ಮದ್ ಕುರಿತು ‘ಅಪಾಸ್ಟಲ್ ಆಫ್ ಮರ್ಸಿ’ ಬೃಹತ್ ಗ್ರಂಥವನ್ನು ಮೂರು ತಿಂಗಳ ಹಿಂದೆ ಬರೆದು ಮುಗಿಸಿದ್ದರು. ಪುಸ್ತಕ ಮುದ್ರಣಗೊಂಡಿದ್ದು, ಬಿಡುಗಡೆಯ ದಿನ ನಿಗದಿಯಾಗಬೇಕಿತ್ತು’ ಎಂದು ಅವರ ಪುತ್ರ ಜಾಕೀರ್ ಹುಸೇನ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸಾಲಾರ್’ ಉರ್ದು ದಿನಪತ್ರಿಕೆಯ ಮುಖ್ಯ ಸಂಪಾದಕರಾಗಿದ್ದ ಅವರು, ಮುಸ್ಲಿಂ ಎಜುಕೇಷನ್ ಸೊಸೈಟಿ, ಸುಲ್ತಾನ್ ಶಹೀದ್ ಶಿಕ್ಷಣ ಸಂಸ್ಥೆ ಹಾಗೂ ನ್ಯೂ ಮುಸ್ಲಿಂ ಹಾಸ್ಟೆಲ್ ಸಂಸ್ಥಾಪಕ ಅಧ್ಯಕ್ಷರಾಗಿ ಸಮುದಾಯದ ವಿದ್ಯಾರ್ಥಿಗಳ ಏಳಿಗೆಗೆ ಶ್ರಮಿಸಿದ್ದರು.

ಧಾರಾಕಾರ ಮಳೆ: ಶವಸಂಸ್ಕಾರಕ್ಕೂ ತೊಡಕು

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ‘ರೈನ್ ಬೋ ಡ್ರೈವ್’ ಬಡಾವಣೆಯಲ್ಲಿ ಸಂಬಂಧಿಕರು ನೀರಿನಲ್ಲೇ ಶವ ಸಾಗಿಸುತ್ತಿರುವುದು

ಬೆಂಗಳೂರು: ನಿರಂತರ ಧಾರಾಕಾರ ಮಳೆ, ರಸ್ತೆ ಹಾಗೂ ಬಡಾವಣೆಯು ಜಲಾವೃತವಾಗಿದ್ದ ಕಾರಣ ರಾಜಧಾನಿ ಬೆಂಗಳೂರು ಹಾಗೂ ವಿಜಯನಗರ ಜಿಲ್ಲೆಯ ಹರಪನಹಳ್ಳಿ, ಚಾಮರಾಜನಗರ ಜಿಲ್ಲೆ ಮಾಂಬಳ್ಳಿಯಲ್ಲಿ ಶವಸಂಸ್ಕಾರಕ್ಕೂ ಸಂಬಂಧಿಕರು ಪರದಾಡಿದರು.

ಬೆಂಗಳೂರಿನಲ್ಲಿ 300 ಮನೆಗಳಿರುವ ‘ರೈನ್ ಬೋ ಡ್ರೈವ್’ ಬಡಾವಣೆ ನಡುಗಡ್ಡೆಯಾಗಿದೆ. ಹೃದಯಾಘಾತಕ್ಕೆ ಒಳಗಾಗಿದ್ದ ವ್ಯಕ್ತಿಯೊಬ್ಬರನ್ನು ಆಸ್ಪತ್ರೆಗೆ ಕರೆದೊಯ್ಯಲಾಗದೇ ಮೃತಪಟ್ಟಿದ್ದು, ಬಳಿಕ ಹರಿವ ನೀರಿನಲ್ಲೇ ಶವ ಹೊತ್ತೊಯ್ಯಲು ಕುಟುಂಬದವರು ಪರದಾಡಿದರು.

ಶ್ರೀನಿವಾಸ್ ರಾಮರಾವ್ ಎಂಬವರನ್ನು ಸಕಾಲದಲ್ಲಿ ಆಸ್ಪತ್ರೆಗೆ ಒಯ್ಯಲು ಕುಟುಂಬ ಸದಸ್ಯರಿಗೆ ಆಗಲಿಲ್ಲ. ನೀರು ಆವರಿಸಿದ್ದರಿಂದ ಆಂಬುಲೆನ್ಸ್ ಕೂಡಾ ಬರಲಾಗಲಿಲ್ಲ. ತುರ್ತು ಚಿಕಿತ್ಸೆ ಸಿಗದೆ ಮೃತಪಟ್ಟ ಅವರ ಶವವನ್ನು ಸಂಬಂಧಿಕರು ಹರಿವ ನೀರಿನಲ್ಲೇ ಹೆಗಲ ಮೇಲೆ ಹೊತ್ತೊಯ್ದರು.

‘ಹಾಲನಾಯಕನಹಳ್ಳಿ ಕೆರೆ ಪಕ್ಕದಲ್ಲೇ ಇರುವ ಬಡಾವಣೆಗೆ ನೀರು ನುಗ್ಗಿದೆ. ಕೆರೆಯಲ್ಲಿ ಹೂಳು ತುಂಬಿದೆ. ನೀರು ಹರಿದು ಹೋಗುವ ರಾಜಕಾಲುವೆಗಳೂ ಇಲ್ಲ. ಕೆರೆಯ ನೀರೆಲ್ಲವೂ ಬಡಾವಣೆಗೆ ತುಂಬಿಕೊಂಡಿದೆ’ ಎಂದು ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದರು.

ಹಳ್ಳದಲ್ಲೇ ಶವ ಹೊತ್ತೊಯ್ದರು

ಹರಪನಹಳ್ಳಿ (ವಿಜಯನಗರ) ವರದಿ: ತಾಲ್ಲೂಕಿನ ಸುಮಾರು 345 ಮನೆಗಳಿರುವ ‘ಶೃಂಗಾರ ತೋಟ’ ಗ್ರಾಮದಲ್ಲಿ ಗುರುವಾರ ಅಂತ್ಯಕ್ರಿಯೆಗೆ ಶವವನ್ನು ತುಂಬಿದ ಹಳ್ಳದಲ್ಲೇ ಗ್ರಾಮಸ್ಥರು ಕಷ್ಟಪಟ್ಟು ಹೊತ್ತುಕೊಂಡು ಹೋದರು.

ಗ್ರಾಮದಲ್ಲಿನ ಒಂದೇ ರುದ್ರಭೂಮಿ ಇದ್ದು, ಸ್ಮಶಾನದ ಹಾದಿಯಲ್ಲಿ ಸೊಂಟದವರೆಗೂ ನೀರು ಆವರಿಸಿತ್ತು. ಗ್ರಾಮದ ಮೂಕವ್ವನವರ ವಿರೂಪಾಕ್ಷಪ್ಪ (56) ಬುಧವಾರ ಮೃತಪಟ್ಟಿದ್ದರು. ಗ್ರಾಮದಿಂದ ಅರ್ಧ ಕಿ.ಮೀ ದೂರದ ಸ್ಮಶಾನಕ್ಕೆ ಸಂಬಂಧಿಕರು ಶವ ಹೊತ್ತೊಯ್ದರು.

ಶವ ಹೊತ್ತು ಸಾಗುತ್ತಿರುವ ವಿಡಿಯೊ ಜಾಲತಾಣಗಳಲ್ಲಿ ವೈರಲ್ ಆಗಿದೆ. ‘ತಾಲ್ಲೂಕು ಕೇಂದ್ರದಿಂದ 4 ಕಿ.ಮೀ ದೂರದಲ್ಲಿದೆ. ರುದ್ರಭೂಮಿಗೆ ಹೋಗಿ ಬರಲು ಉತ್ತಮ ರಸ್ತೆಯಿಲ್ಲ’ ಎಂದು ಗ್ರಾಮಸ್ಥರಾದ ಬಸವರಾಜ, ಅಜೀಜ್ ಸಾಬ್, ನಿಂಗರಾಜ್, ತಿಮ್ಮಪ್ಪ ಬೇಸರ ವ್ಯಕ್ತಪಡಿಸಿದರು.

‘ಶೀಘ್ರ ಶೃಂಗಾರ ತೋಟ ಗ್ರಾಮಕ್ಕೆ ತೆರಳಿ, ಸ್ಥಳ ಪರಿಶೀಲಿಸಿ ಮೇಲಧಿಕಾರಿಗಳ ಗಮನಕ್ಕೆ ತರಲಾಗುವುದು’ ಎಂದು ತಹಶೀಲ್ದಾರ್ ಶಿವಕುಮಾರ ಬಿರಾದಾರ್ ತಿಳಿಸಿದರು.

ಗ್ರಾ.ಪಂ ಆವರಣದಲ್ಲೇ ಅಂತ್ಯಕ್ರಿಯೆ

ಯಳಂದೂರು (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಮಾಂಬಳ್ಳಿಯಲ್ಲಿ ಸ್ಮಶಾನಕ್ಕೆ ಹೋಗುವ ದಾರಿಯಲ್ಲಿ ಸಿಗುವ ಕಾಲುವೆಗೆ ಸೇತುವೆ ಇಲ್ಲದ್ದರಿಂದ, ಗ್ರಾಮಸ್ಥರು ಗುರುವಾರ ಗ್ರಾಮ ಪಂಚಾಯಿತಿ ಕಚೇರಿ ಆವರಣದಲ್ಲೇ ಶವದ ಅಂತ್ಯಸಂಸ್ಕಾರ ನೆರವೇರಿಸಿದರು.

ಚಂದ್ರಮ್ಮ (48) ಬುಧವಾರ ರಾತ್ರಿ ನಿಧನರಾಗಿದ್ದರು. ಸ್ಮಶಾನದ ಜಾಗಕ್ಕೆ ತೆರಳಲು ಕಾಲುವೆಯನ್ನು ದಾಟಿ ಹೋಗಬೇಕು. ಸುವರ್ಣಾವತಿ ನದಿ ಉಕ್ಕಿಹರಿಯುತ್ತಿದ್ದ ಪರಿಣಾಮ ಕಾಲುವೆಯಲ್ಲೂ ನೀರು ಸಾಕಷ್ಟಿದ್ದು, ದಾಟಲು ಆಗುತ್ತಿಲ್ಲ.

ಸ್ಮಶಾನಕ್ಕೆ ಮೃತದೇಹ ಸಾಗಿಸಲು ಸಾಧ್ಯವಾಗದೇ ಆಕ್ರೋಶಗೊಂಡ ಗ್ರಾಮಸ್ಥರು ಪಂಚಾಯಿತಿ ಆವರಣದಲ್ಲೇ ಅಂತ್ಯಸಂಸ್ಕಾರ ನಡೆಸಿದರು.

ಮಾಂಬಳ್ಳಿಯಲ್ಲಿ ಪರಿಶಿಷ್ಟರಿಗೇ ಸ್ಮಶಾನ ಇಲ್ಲ. ವ್ಯಕ್ತಿಯೊಬ್ಬರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಸಲಾಗುತ್ತಿದೆ. ಈ ಜಾಗಕ್ಕೂ ತೆರಳಲು ಕಾಲುವೆ ದಾಟಿ ಹೋಗಬೇಕು. ಜಿಲ್ಲಾಡಳಿತ, ಶಾಸಕರಿಗೆ ಹತ್ತಾರು ವರ್ಷಗಳಿಂದ ಮನವಿ ಮಾಡಿದ್ದರೂ, ಸೇತುವೆ ನಿರ್ಮಿಸಿಲ್ಲ ಎಂದು ಆರೋಪಿಸಿದರು.

ಎಸ್ಪಿ ಟಿ.ಪಿ.ಶಿವಕುಮಾರ್, ಉಪವಿಭಾಗಾಧಿಕಾರಿ ಗೀತಾ ಹುಡೇದ ಮೊದಲಾದವರು ಮನವೊಲಿಸಲು ಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಪೊಲೀಸರೊಂದಿಗೆ ವಾಗ್ವಾದ ಮಾಡುತ್ತಲೇ ಗ್ರಾಮಸ್ಥರು ಅಂತ್ಯಕ್ರಿಯೆ ಪೂರ್ಣಗೊಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಯಳಂದೂರು ತಾಲ್ಲೂಕಿನ ವಿವಿಧೆಡೆ ಮಳೆ ಹಾನಿ ವೀಕ್ಷಿಸುತ್ತಿದ್ದರು. ವಿಷಯ ತಿಳಿದ ಅವರು, ಅಧಿಕಾರಿಗಳನ್ನು ‘ಅಂತ್ಯಕ್ರಿಯೆಗೆ ಪರ್ಯಾಯ ವ್ಯವಸ್ಥೆ ಮಾಡಲು ಆಗುತ್ತಿರಲಿಲ್ಲವೇ’ ಎಂದು ತರಾಟೆಗೆ ತೆಗೆದುಕೊಂಡರು.

‘ಹೆದ್ದಾರಿ ಕಾಮಗಾರಿಯಿಂದಲೇ ಪ್ರವಾಹ’

ಪ್ರಜಾವಾಣಿ ವಾರ್ತೆ

ರಾಮನಗರ: ‘ಬೆಂಗಳೂರು ಮತ್ತು ಮೈಸೂರು ನಡುವೆ ನಿರ್ಮಾಣ ಆಗುತ್ತಿರುವ ದಶಪಥ ಹೆದ್ದಾರಿ ನಿರ್ಮಾಣದ ಅವೈಜ್ಞಾನಿಕ ಕಾಮಗಾರಿಗಳಿಂದಲೇ ಜಿಲ್ಲೆಯಲ್ಲಿ ಪ್ರವಾಹ ಉಂಟಾಗಿದೆ’ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಗುರುವಾರ ಚನ್ನಪಟ್ಟಣದಲ್ಲಿ ಮಳೆಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ್ದ ಅವರು, ‘ಮೊದಲು ಒತ್ತುವರಿಯಾದ ಕಾಲುವೆ ತೆರವು ಮಾಡಲಿ’ ಎಂಬ ಸಂಸದ ಪ್ರತಾಪ ಸಿಂಹ ಟ್ವೀಟ್ ಕುರಿತು ‘ರಾಜಕೀಯ ಸ್ವೇಚ್ಛಾಚಾರದಿಂದ ಆಗಿರುವ ಅನಾಹುತಗಳಿವು’ ಎಂದರು.

> **‘ಹೆದ್ದಾರಿ ಕಾಮಗಾರಿ ಕುರಿತು ಕುಮಾರಣ್ಣ ಅವರು ತಮ್ಮದೇ ತಂಡದಿಂದ ಅಧ್ಯಯನ ಮಾಡಿಸಿ ಎಲ್ಲಿ ಕಳಪೆಯಾಗಿದೆ ಎಂದು ಹೇಳಲಿ. ಸಚಿವರಾಗಿದ್ದ, ತಮ್ಮ ರೇವಣ್ಣ ಅವರಿಂದಲೇ ತನಿಖೆ ಮಾಡಿಸಲಿ’**
> **ಪ್ರತಾಪ ಸಿಂಹ,** ಸಂಸದ

‘ಎಕ್ಸ್‌ಪ್ರೆಸ್ ವೇ ಕಾಮಗಾರಿ ಪ್ರಾರಂಭ ಆದಮೇಲೆ ಸಮಸ್ಯೆ ಸೃಷ್ಟಿಯಾಗಿದೆ. ಪ್ರತಾಪ ಸಿಂಹ ದೊಡ್ಡ ಎಂಜಿನಿಯರ್ ಏನ್ರೀ? ಅದೆಲ್ಲೋ ಬರವಣಿಗೆ ಮಾಡಿಕೊಂಡಿದ್ದ ವ್ಯಕ್ತಿ ಈಗ ಮೋದಿ ಹೆಸರಿನಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಅವರಿಂದ ನಾನು ಕಲಿಯಬೇಕಾ? ಅವರು ಸುಖಾ ಸುಮ್ಮನೆ ನನ್ನನ್ನು ಕೆರಳಿಸುವುದು ಬೇಡ. ಹೆದ್ದಾರಿಯಲ್ಲಿ ನೀರು ನಿಂತದ್ದು ಕಳಪೆ ಕಾಮಗಾರಿಯಿಂದ’ ಎಂದು ಕಿಡಿಕಾರಿದರು.

‘ಪ್ರತಾಪ ಸಿಂಹ ಹತ್ತಿರ ನಾನು ರಾಜಕೀಯ, ಜನರ ಬದುಕೇನು ಎಂದು ಈತನಿಂದ ಕಲಿಯಬೇಕಿಲ್ಲ. ಜನರ ಕಷ್ಟ ಸುಖ ನೋಡಿ ರಾಜಕೀಯ ಮಾಡಿದ್ದರೆ ವಸ್ತುಸ್ಥಿತಿ ಏನೆಂದು ಗೊತ್ತಾಗುತ್ತಿತ್ತು’ ಎಂದು ವಾಗ್ದಾಳಿ ನಡೆಸಿದರು.

ಕುಮಾರಸ್ವಾಮಿ ಯಾರಿಗಾದರೂ ದೂರು ನೀಡಲಿ ಎಂಬ ಮುಖ್ಯಮಂತ್ರಿ ಬೊಮ್ಮಾಯಿ ಹೇಳಿಕೆ ಕುರಿತಂತೆ ಅವರು, ‘ಮುಖ್ಯಮಂತ್ರಿಗೆ ಅಲ್ಲದೆ ನಾನು ಯಾರಿಗೆ ಹೇಳಲಿ? ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ಸಮಯ ಕೇಳಿದ್ದೇನೆ. ಎಕ್ಸ್‌ಪ್ರೆಸ್‌ವೇ ವಿಡಿಯೊ ಮಾಡಿಸಿದ್ದೇನೆ. ಎಲ್ಲವನ್ನು ಅವರಿಗೆ ತಲುಪಿಸುತ್ತೇನೆ, ಅವರು ತೀರ್ಮಾನಿಸಲಿದೆ. ಜನ ರಸ್ತೆಗೆ ಬಂದು ದೊಣ್ಣೆ ಹಿಡಿದು ಕೂರುವ ಕಾಲ ದೂರವಿಲ್ಲ’ ಎಂದು ಎಚ್ಚರಿಸಿದರು.

ಸೇತುವೆಗಳಿಗೆ ಹಾನಿ: ಸಂಪರ್ಕ ಕಡಿತ

ರಾಮನಗರ: ಜಿಲ್ಲೆಯಲ್ಲಿ ಗುರುವಾರವು ಧಾರಾಕಾರ ಮಳೆಯಾಗಿದ್ದು, ಕೆರೆಗಳು ಕೋಡಿ ಬಿದ್ದಿವೆ. ಸೇತುವೆಗಳು ಕೊಚ್ಚಿ ಹೋಗಿದ್ದು, ಬಹುತೇಕ ಸಂಪರ್ಕ ಕಡಿತಗೊಂಡಿದೆ.

ಚನ್ನಪಟ್ಟಣ ತಾಲ್ಲೂಕಿನ ಕನ್ನಮಂಗಲದಲ್ಲಿ ಕೆರೆ ಕೋಡಿ ಒಡೆದು ರಸ್ತೆಯೇ ಕೊಚ್ಚಿ ಹೋಗಿದ್ದು, ಕೆಂಗಲ್– ಕಣ್ವ ಜಲಾಶಯ ರಸ್ತೆ ಸಂಪರ್ಕ ಕಡಿತವಾಗಿದೆ. ಕನಕಪುರ ತಾಲ್ಲೂಕಿನ ಬೂದಗುಪ್ಪೆ–ಬರಡನಹಳ್ಳಿ ಬಳಿ ಎರಡು ಸೇತುವೆ, ಮುಳ್ಳಳ್ಳಿ ಬಳಿ ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ಸೇತುವೆಗಳು ಭಾಗಶಃ ಹಾನಿಗೀಡಾಗಿವೆ. ಹಾರೋಬೆಲೆ ಜಲಾಶಯದ ಬಳಿ ಸುವಣ್ಣಮಕ್ಕಿ ಕೆರೆ ಏರಿ ಒಡೆಯುವ ಆತಂಕ ಎದುರಾಗಿದೆ.

ಜಿಲ್ಲೆಯಲ್ಲಿ 600 ಹೆಕ್ಟೇರ್‌ನಲ್ಲಿನ ಕೃಷಿ ಹಾಗೂ 500 ಹೆಕ್ಟೇರ್‌ನಲ್ಲಿನ ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದೆ. ತೆಂಗು, ರೇಷ್ಮೆ, ರಾಗಿ, ಭತ್ತದ ಬೆಳೆಗಳು ಕೊಚ್ಚಿ ಹೋಗಿವೆ. ರೇಷ್ಮೆ ನೂಲು ಉದ್ಯಮಕ್ಕೂ ಭಾರಿ ಹೊಡೆತ ಬಿದ್ದಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅಮಾನಿಗೋಪಾಲಕೃಷ್ಣ ಕೆರೆಯ ಕೋಡಿ ಬಿದ್ದಿದ್ದು, ಹಲವು ಗ್ರಾಮಗಳ ಜಮೀನು ಜಲಾವೃತವಾಗಿವೆ. ಗೌರಿಬಿದನೂರು ತಾಲ್ಲೂಕಿನ ಉತ್ತರಪಿನಾಕಿನಿ, ಗುಡಿಬಂಡೆ ತಾಲ್ಲೂಕಿನಲ್ಲಿ ಕುಶಾವತಿ ನದಿ ಉಕ್ಕಿ ಹರಿಯುತ್ತಿವೆ.

ಪ್ರೊ.ಕೆ.ಎಸ್.ರಂಗಪ್ಪ ರಾಯಭಾರಿ

ಮೈಸೂರು: ಜಪಾನ್‌ನ ಹೊಕ್ಕೈಡೋ ವಿಶ್ವವಿದ್ಯಾಲಯದ ರಾಯಭಾರಿಯಾಗಿ ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ, ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಾಮಾಜಿಕ ಕಾರ್ಯಕರ್ತೆ ಮೇರಿ ರಾಯ್ ನಿಧನ

ಕೊಟ್ಟಾಯಂ (ಪಿಟಿಐ): ಖ್ಯಾತ ಶಿಕ್ಷಣ ತಜ್ಞೆ, ಸಾಮಾಜಿಕ ಕಾರ್ಯಕರ್ತೆ ಮೇರಿರಾಯ್ (89) ಅವರು ವಯೋಸಹಜ ಕಾಯಿಲೆಗಳಿಂದ ಗುರುವಾರ ನಿಧನರಾದರು.

ಅವರಿಗೆ ಮಗಳು, ಲೇಖಕಿ, ಬೂಕರ್ ಪ್ರಶಸ್ತಿ ವಿಜೇತೆ ಅರುಂಧತಿ ರಾಯ್ ಮತ್ತು ಮಗ ಲಲಿತ್ ರಾಯ್ ಇದ್ದಾರೆ. ಮೇರಿ ಅವರು ಪಳ್ಳಿಕೂಡಂ ಶಾಲೆಯ ಸ್ಥಾಪಕರೂ ಹೌದು.

ಕೊಟ್ಟಾಯಂ ಸಮೀಪದ ಐಮನಂ ಗ್ರಾಮದಲ್ಲಿ 1933ರಲ್ಲಿ ಜನಿಸಿದ ಮೇರಿ ಅವರು ದೆಹಲಿಯಲ್ಲಿ ಶಾಲಾ ಶಿಕ್ಷಣ ಹಾಗೂ ಚೆನ್ನೈನಲ್ಲಿ ಕಾಲೇಜು ಪದವಿ ಪಡೆದರು. ಬಳಿಕ ಕೋಲ್ಕತ್ತದ ಕಂಪನಿಯೊಂದರಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾಗ ಅವರು ರಾಜೀಬ್ ರಾಯ್ ಅವರನ್ನು ವಿವಾಹವಾದರು.

1980ರಲ್ಲಿ ಕೇರಳದ ಸಿರಿಯನ್ ಕ್ರಿಶ್ಚಿಯನ್ ಕುಟುಂಬಗಳ ಪಿತ್ರಾರ್ಜಿತ ಆಸ್ತಿಯಲ್ಲಿ ಮಹಿಳೆಯರಿಗೆ ಲಿಂಗ ಸಮಾನತೆಯನ್ನು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಮೇರಿ ಅವರು ಕಾನೂನು ಹೋರಾಟವನ್ನು ಪ್ರಾರಂಭಿಸಿದರು. 1986ರಲ್ಲಿ ಕೋರ್ಟ್ ಇವರ ಮನವಿಯನ್ನು ಪುರಸ್ಕರಿಸಿತ್ತು.

ಪ್ರೌಢಶಾಲೆ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣ

ಪೊಲೀಸ್ ವಶಕ್ಕೆ ಹಾಸ್ಟೆಲ್ ವಾರ್ಡನ್

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಪೋಕ್ಸೊ ಕಾಯ್ದೆಯಡಿ ದಾಖಲಾಗಿರುವ ಪ್ರಕರಣದ ಎರಡನೇ ಆರೋಪಿಯಾಗಿರುವ ಹಾಸ್ಟೆಲ್ ವಾರ್ಡನ್‌ಅನ್ನು ತನಿಖಾ ತಂಡ ಗುರುವಾರ ವಶಕ್ಕೆ ಪಡೆದಿದೆ.

ಮುರುಘಾ ಮಠದ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ವಿರುದ್ಧ ದಾಖಲಾಗಿರುವ ಪ್ರಕರಣದ ದೂರುದಾರರಾಗಿ ನ್ಯಾಯಾಲಯಕ್ಕೆ ಹಾಜರಾದ ಅವರು ಸಿಆರ್‌ಪಿಸಿ 164 ಸೆಕ್ಷನ್ ಅಡಿ ಹೇಳಿಕೆ ದಾಖಲಿಸಿದರು. ನ್ಯಾಯಾಲಯದ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ತನಿಖಾ ತಂಡ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿತು.

'ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಾರ್ಡನ್‌ಅನ್ನು ತನಿಖಾಧಿಕಾರಿ ವಿಚಾರಣೆಗೆ ಒಳಪಡಿಸಿದ್ದಾರೆ. ವಿಚಾರಣೆ ಪೂರ್ಣಗೊಳ್ಳದ್ದರಿಂದ ಸಾಂತ್ವನ ಕೇಂದ್ರದಲ್ಲಿ ಆಶ್ರಯ ನೀಡಲಾಗಿದೆ. ಅವರನ್ನು ಬಂಧಿಸುವ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ಪರಶುರಾಮ್ ತಿಳಿಸಿದ್ದಾರೆ.

ತಕರಾರು ಸಲ್ಲಿಕೆ ಇಂದು: ಲೈಂಗಿಕ ಕಿರುಕುಳದ ಆರೋಪ ಎದುರಿಸುತ್ತಿರುವ ಶಿವಮೂರ್ತಿ ಮುರುಘಾ ಶರಣರು ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಗೆ ತಕರಾರು ಸಲ್ಲಿಸಲು ಅವಕಾಶ ಕಲ್ಪಿಸಿ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ವಿಚಾರಣೆಯನ್ನು ಸೆ.2ಕ್ಕೆ ಮುಂದೂಡಿತು.

ಮುರುಘಾಶ್ರೀ ಪರ ವಕೀಲರು ಆ.29ರಂದು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಾಧೀಶೆ ಬಿ.ಕೆ. ಕೋಮಲಾ ಗುರುವಾರ ಕೈಗೆತ್ತಿಕೊಂಡರು. ಕಲಾಪ ಆರಂಭ ಆಗುತ್ತಿದ್ದಂತೆಯೇ ಸಂತ್ರಸ್ತ ಬಾಲಕಿಯರನ್ನು ಕೋರ್ಟ್‌ಗೆ ಹಾಜರುಪಡಿಸಲಾಯಿತು. ಇತರ ಪ್ರಕರಣದಲ್ಲಿದ್ದ ವಕೀಲರನ್ನು ಹೊರ ಕಳುಹಿಸಿದ ನ್ಯಾಯಾಧೀಶರು, ಪ್ರಕರಣಕ್ಕೆ ಸಂಬಂಧಿಸಿದವರನ್ನು ಮಾತ್ರ ಉಳಿಸಿಕೊಂಡು ವಿಚಾರಣೆ ಕೈಗೆತ್ತಿಕೊಂಡರು.

ಸಂತ್ರಸ್ತೆಯರ ಪರವಾಗಿ ಹೈಕೋರ್ಟ್ ವಕೀಲ ಶ್ರೀನಿವಾಸ್ ಹಾಗೂ ಕಾನೂನು ಸೇವಾ ಪ್ರಾಧಿಕಾರದ ವಕೀಲರು ಹಾಜರಾಗಿದ್ದರು. ಸಂತ್ರಸ್ತೆಯರು ಹಾಗೂ ಒಬ್ಬ ಪಾಲಕರ ಅಭಿಪ್ರಾಯ ಪರಿಗಣಿಸಿ ಶ್ರೀನಿವಾಸ್ ಅವರ ಅರ್ಜಿಯನ್ನು ನ್ಯಾಯಾಲಯ ಪರಿಗಣಿಸಿತು. ಆಕ್ಷೇಪಣೆ ಸಲ್ಲಿಕೆಗೆ ಒಂದು ದಿನ ಕಾಲಾವಕಾಶ ನೀಡಿ ವಿಚಾರಣೆಯನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

ಆಡಳಿತಾಧಿಕಾರಿ ಹುದ್ದೆಯಿಂದ ವಜಾ

ಚಿತ್ರದುರ್ಗ: ಷರತ್ತುಗಳನ್ನು ಉಲ್ಲಂಘಿಸಿ ಮಠ ಹಾಗೂ ಪೀಠಾಧಿಪತಿಯ ಘನತೆ, ಗೌರವಕ್ಕೆ ಧಕ್ಕೆ ತರಲು ಒಳಸಂಚು ರೂಪಿಸಿದ ಆರೋಪದ ಮೇರೆಗೆ ಮಾಜಿ ಶಾಸಕ ಎಸ್.ಕೆ. ಬಸವರಾಜನ್ ಅವರನ್ನು ಮುರುಘಾ ಮಠದ ಆಡಳಿತಾಧಿಕಾರಿ ಮತ್ತು ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿ ಹುದ್ದೆಯಿಂದ ವಜಾ ಮಾಡಲಾಗಿದೆ.

ಮಾರ್ಚ್ 7ರಂದು ಅವರು ಈ ಹುದ್ದೆಗೆ ನೇಮಕಗೊಂಡಿದ್ದರು. ಈ ವೇಳೆ ಬಸವರಾಜನ್ ಅವರಿಗೆ 8ಕ್ಕೂ ಹೆಚ್ಚು ಷರತ್ತುಗಳನ್ನು ವಿಧಿಸಲಾಗಿತ್ತು. 2007ರಲ್ಲಿಯೂ ಇವರನ್ನು ಇದೇ ಹುದ್ದೆಯಿಂದ ಕಿತ್ತುಹಾಕಲಾಗಿತ್ತು.

'ಬಸವರಾಜನ್ ಅವರು ಆಡಳಿತಾತ್ಮಕವಾಗಿ ಸಹಕಾರ ನೀಡುತ್ತಿರಲಿಲ್ಲ. ಮಠದ ಪರವಾಗಿ ಖರೀದಿಸಿದ್ದ ಆಸ್ತಿಗಳನ್ನು ಹಿಂದಿರುಗಿಸದೇ ಸಮಸ್ಯೆ ಸೃಷ್ಟಿಸಿದರು. ಪೀಠಾಧಿಪತಿ ಶಿವಮೂರ್ತಿ ಮುರುಘಾ ಶರಣರು ವಿದೇಶ ಪ್ರವಾಸದಲ್ಲಿದ್ದಾಗ ಮಠದ ವಿರೋಧಿ ಚಟುವಟಿಕೆಯಲ್ಲಿ ತೊಡಗಿದರು' ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಲಾಗಿದೆ.

ನಿವೃತ್ತ ನ್ಯಾಯಾಧೀಶರೊಬ್ಬರನ್ನು ಎಸ್‌ಜೆಎಂ ವಿದ್ಯಾಪೀಠದ ನೂತನ ಕಾರ್ಯದರ್ಶಿಯಾಗಿ ನೇಮಕ ಮಾಡಲು ಆಡಳಿತ ಮಂಡಳಿ ತೀರ್ಮಾನಿಸಿದೆ. ಈ ಬಗ್ಗೆ ಮಠ ಅಧಿಕೃತ ಮಾಹಿತಿ ನೀಡಿಲ್ಲ.

ಬಸವರಾಜನ್ ದಂಪತಿಗೆ ಜಾಮೀನು

ಚಿತ್ರದುರ್ಗ: ಇಲ್ಲಿನ ಮುರುಘಾ ಮಠದ ಆಡಳಿತಾಧಿಕಾರಿ ಎಸ್.ಕೆ.ಬಸವರಾಜನ್ ಹಾಗೂ ಪತ್ನಿ ಸೌಭಾಗ್ಯ ವಿರುದ್ಧ ದಾಖಲಾಗಿದ್ದ ಕಿರುಕುಳ, ಮಕ್ಕಳ ಅಪಹರಣ ಪ್ರಕರಣದಲ್ಲಿ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಗುರುವಾರ ಜಾಮೀನು ಮಂಜೂರು ಮಾಡಿತು.

ಮುರುಘಾ ಮಠದ ಹಾಸ್ಟೆಲ್ ವಾರ್ಡನ್ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಮೀನು ಕೋರಿ ಬಸವರಾಜನ್ ದಂಪತಿ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆಯನ್ನು ನ್ಯಾಯಾಧೀಶೆ ಅನಿತಾ ಕುಮಾರಿ ಅವರು ಗುರುವಾರ ಕೈಗೆತ್ತಿಕೊಂಡರು.

ವಾರ್ಡನ್ ಪರ ಹಾಜರಾದ ವಕೀಲರು ತಕರಾರು ಸಲ್ಲಿಸಿದರು. ನ್ಯಾಯಾಧೀಶರ ಸೂಚನೆಯ ಮೇರೆಗೆ ಆರೋಪಿಗಳು ನ್ಯಾಯಾಲಯಕ್ಕೆ ಹಾಜರಾದರು. ವಿಚಾರಣೆ ನಡೆಸಿದ ನ್ಯಾಯಾಧೀಶರು ಷರತ್ತುಬದ್ಧ ಜಾಮೀನು ಮಂಜೂರು ಮಾಡಿ ಆದೇಶಿಸಿದರು.

ಅಧಿಕಾರಿಗೆ ನೋಟಿಸ್

ಮಕ್ಕಳ ಮೇಲಿನ ಲೈಂಗಿಕ ಕಿರುಕುಳ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರಿಗೆ ಮಕ್ಕಳ ಹಕ್ಕುಗಳ ಸಂರಕ್ಷಣೆಗಾಗಿ ಇರುವ ರಾಷ್ಟ್ರೀಯ ಆಯೋಗ ನೋಟಿಸ್ ಜಾರಿ ಮಾಡಿದೆ.

'ಎಫ್‌ಐಆರ್ ಆಧರಿಸಿ ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಲಾಗಿದೆ. ತನಿಖೆಯಲ್ಲಿ ಸಂತ್ರಸ್ತರ ಗುರುತು ಬಹಿರಂಗವಾಗದಂತೆ ಎಚ್ಚರವಹಿಸಬೇಕು. ಪ್ರಕರಣದ ಸಂಪೂರ್ಣ ಮಾಹಿತಿಯನ್ನು ಏಳು ದಿನಗಳ ಒಳಗಾಗಿ ಸಲ್ಲಿಸಿ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಆಯೋಗ ಸೂಚಿಸಿದೆ. 'ಇಂಥ ಯಾವುದೇ ನೋಟಿಸ್ ಈವರೆಗೆ ನಮಗೆ ತಲುಪಿಲ್ಲ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ್ ಮಾಹಿತಿ ನೀಡಿದ್ದಾರೆ.

ಪೋಕ್ಸೊ ತಪ್ಪಿಸಿಕೊಳ್ಳಲಾಗುವುದಿಲ್ಲ: ಶ್ರೀನಿವಾಸ ಪ್ರಸಾದ್

ಮೈಸೂರು: 'ಪೋಕ್ಸೊ ಪ್ರಕರಣದಲ್ಲಿ ಆರೋಪಿಯು ತಪ್ಪಿಸಿಕೊಳ್ಳಲಾಗುವುದಿಲ್ಲ' ಎಂದು ಚಾಮರಾಜನಗರದ ಬಿಜೆಪಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಹೇಳಿದರು.

ಮಾಧ್ಯಮದೊಂದಿಗೆ ಗುರುವಾರ ಮಾತನಾಡಿದ ಅವರು, 'ದೂರು ದಾಖಲಾಗಿರುವುದರಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಒಂದಲ್ಲ, ಎರಡು ದಿನ ನಿಧಾನವಾಗಬಹುದು. ಪ್ರಕರಣ ಮುಚ್ಚಿ ಹಾಕಲಾಗುವುದಿಲ್ಲ; ಅಂತಹ ಪ್ರಯತ್ನ ನಡೆದಿಲ್ಲ ಎಂದು ಸರ್ಕಾರ ಹೇಳಿದೆ. ಸಂತ್ರಸ್ತರಿಗೆ ನ್ಯಾಯ ಸಿಗಲೇಬೇಕು. ಅದೊಂದು ಪ್ರಗತಿಪರ ಮಠ. ಬಹಳ ಗೌರವ ಇರುವಂಥದ್ದು. ಆ ಮಠದವರು, ಅನೇಕ ಖ್ಯಾತನಾಮರಿಗೆ ಪ್ರಶಸ್ತಿ ನೀಡಿದ್ದಾರೆ. ಆದರೆ, ಅಲ್ಲಿ ಈ ರೀತಿಯ ಘಟನೆಯಿಂದ ಎಲ್ಲರಿಗೂ ನೋವಾಗಿದೆ. ನಿಷ್ಪಕ್ಷಪಾತವಾಗಿ ತನಿಖೆ ಆಗಬೇಕು ಎನ್ನುವುದು ಎಲ್ಲರ ಒತ್ತಾಯ. ತನಿಖೆಯಾಗುತ್ತದೆ ಎಂಬ ವಿಶ್ವಾಸವೂ ಇದೆ' ಎಂದರು.

ನ್ಯಾಯ ಎತ್ತಿ ಹಿಡಿಯಬೇಕು: ಡಾ. ಎಚ್‌.ಸಿ.ಮಹದೇವಪ್ಪ

ಮೈಸೂರು: 'ಮುರುಘಾ ಮಠದ ಸುತ್ತ ನಡೆಯುತ್ತಿರುವ ಸದ್ಯದ ಬೆಳವಣಿಗೆಗಳು ನನ್ನಲ್ಲಿ ನೋವು ಮತ್ತು ದಿಗ್ಭ್ರಮೆಯನ್ನು ಉಂಟು ಮಾಡಿವೆ' ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್‌.ಸಿ.ಮಹದೇವಪ್ಪ ಹೇಳಿದ್ದಾರೆ.

ಪ್ರಕಟಣೆ ನೀಡಿರುವ ಅವರು, 'ಮಠದ ಶ್ರೀಗಳು ತಮ್ಮ ಮೇಲಿನ ಪಿತೂರಿಯ ಬಗ್ಗೆ ಪ್ರಸ್ತಾಪಿಸಿದ್ದು ಈ ನೆಲದ ಕಾನೂನನ್ನು ಗೌರವಿಸುತ್ತೇನೆ ಎಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಹೆಚ್ಚಿನ ಗೌರವ ಹೊಂದಿರುವ ಮಠ-ಮಾನ್ಯಗಳ ಮೇಲಿನ ನಂಬಿಕೆ, ವಿಶ್ವಾಸದ ಉಳಿಯಬೇಕು. ಬಾಲಕಿಯರ ಮೇಲಿನ ದೌರ್ಜನ್ಯ ಆರೋಪದ ಕುರಿತು ಕಾನೂನು ಪ್ರಕಾರ ನಿಷ್ಪಕ್ಷಪಾತ ತನಿಖೆ ನಡೆಸಿ ನ್ಯಾಯ ಪ್ರಜ್ಞೆಯನ್ನು ಎತ್ತಿ ಹಿಡಿಯಬೇಕು' ಎಂದಿದ್ದಾರೆ.



ಮುರುಘಾಶ್ರೀ ಪ್ರಕರಣ: ಹೈಕೋರ್ಟ್‌ಗೆ ಕೋರಿಕೆ ಸಲ್ಲಿಕೆ

ಕೋರ್ಟ್ ನಿಗಾದಲ್ಲಿ ತನಿಖೆಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠದ ಪೀಠಾಧಿಪತಿ ಶಿವಮೂರ್ತಿ ಮುರುಘಾ ಶರಣರ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣದ ಪೊಲೀಸ್ ತನಿಖೆಯು ಕೋರ್ಟ್ ನಿಗಾದಲ್ಲಿ ನಡೆಯುವಂತೆ ನಿರ್ದೇಶನ ನೀಡಬೇಕು' ಎಂದು ಕೋರಿ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ವಕೀಲರು ಮನವಿ ಮಾಡಿದ್ದಾರೆ.

ಈ ಸಂಬಂಧ ಗುರುವಾರ ರಿಜಿಸ್ಟ್ರಾರ್ ಜನರಲ್ ಅವರಿಗೆ ಬೆಂಗಳೂರಿನ ವೃತ್ತಿಪರ ವಕೀಲರಾದ ಸಿದ್ಧಾರ್ಥ ಭೂಪತಿ, ಶ್ರೀರಾಮ್ ಟಿ. ನಾಯಕ್, ಬಿ.ಎಸ್.ಗಣೇಶ ಪ್ರಸಾದ್, ವಿ.ಗಣೇಶ್ ಹಾಗೂ ಕೆ.ಎ.ಪೊನ್ನಣ್ಣ ಲಿಖಿತ ಮನವಿ ಸಲ್ಲಿಸಿದ್ದಾರೆ.

'ಮುರುಘಾ ಶರಣರು ಇಬ್ಬರು ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. 16 ವರ್ಷದ ಬಾಲಕಿಯ ಮೇಲೆ ಕಳೆದ ಮೂರೂವರೆ ವರ್ಷಗಳಿಂದ ಹಾಗೂ 15ರ ಬಾಲಕಿಗೆ ಒಂದೂವರೆ ವರ್ಷದಿಂದ ನಿರಂತರವಾಗಿ ಲೈಂಗಿಕ ಕಿರುಕುಳ ನೀಡಿದ್ದಾರೆ. ಈ ಸಂಬಂಧ ಎಫ್‌ಐಆರ್ ದಾಖಲಾಗಿದ್ದರೂ ಪೊಲೀಸರ ತನಿಖೆ ಸಂಪೂರ್ಣ ಲೋಪಗಳಿಂದ ಕೂಡಿದೆ' ಎಂದು ವಕೀಲರು ಮನವಿಯಲ್ಲಿ ಆಕ್ಷೇಪಿಸಿದ್ದಾರೆ.

'ಮುರುಘಾ ಶರಣರು ನಾಡಿನ ಪ್ರಭಾವಿ ಮಠಾಧೀಶರಾಗಿದ್ದಾರೆ. ಹೀಗಾಗಿ, ಈ ಪ್ರಕರಣದಲ್ಲಿ ತನಿಖೆ ನಡೆಸಬೇಕಾದ ಪೊಲೀಸರು ಇನ್ನೂ ಅವರನ್ನು ವಿಚಾರಣೆಗೆ ಒಳಪಡಿಸಿಲ್ಲ. ದಸ್ತಗಿರಿ ಮಾಡಿಲ್ಲ. ಏತನ್ಮಧ್ಯೆ, ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ಬಿಜೆಪಿಯ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ, ಆರೋಪಿ ಮುರುಘಾ ಶರಣರನ್ನು ಅವರಿದ್ದ ಮುರುಘಾ ಮಠಕ್ಕೆ ಹೋಗಿ ಭೇಟಿ ಮಾಡಿ ಬಂದಿದ್ದಾರೆ. ಅವರನ್ನು ಬೆಂಬಲಿಸುವ ಮಾತುಗಳನ್ನಾಡಿ ಅವರ ರಕ್ಷಣೆಗೆ ನಿಂತಿದ್ದಾರೆ. ಅಂತೆಯೇ, ರಾಜ್ಯ ಗೃಹ ಸಚಿವ ಆರಗ ಜ್ಞಾನೇಂದ್ರ ಅವರೂ ಹೇಳಿಕೆಯೊಂದನ್ನು ನೀಡಿ, ಈ ಪ್ರಕರಣದಲ್ಲಿ ಮಠದ ನೌಕರನ ಪಿತೂರಿ ಇದೆ ಎಂಬ ಶಂಕೆ ವ್ಯಕ್ತಪಡಿಸಿದ್ದಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಸರ್ಕಾರ ಆರೋಪಿಯ ಹಿತ ಕಾಪಾಡುವಲ್ಲಿ ಸಜ್ಜಾಗಿ ನಿಂತಿರುವುದು ಕಂಡು ಬರುತ್ತಿದೆ' ಎಂದು ವಕೀಲರು ಆರೋಪಿಸಿದ್ದಾರೆ.

ಸಿಪಿಎಂನಿಂದ ವಕೀಲ ಶಂಕರಪ್ಪ ಉಚ್ಚಾಟನೆ

ಬೆಂಗಳೂರು: ವಕೀಲ ಶಂಕರಪ್ಪ ಅವರನ್ನು ಭಾರತ ಕಮ್ಯುನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲಾಗಿದೆ.

'ಮುರುಘಾ ಮಠದಲ್ಲಿ ನಡೆದಿದೆ ಎನ್ನಲಾದ ಲೈಂಗಿಕ ದೌರ್ಜನ್ಯದ ಪ್ರಕರಣಕ್ಕೆ ಸಂಬಂಧಿಸಿದಂತೆ ಪಕ್ಷದ ನಿಲುವು ಹಾಗೂ ಧೋರಣೆಯ ವಿರುದ್ಧವಾಗಿ ನಡೆದುಕೊಂಡ ಕಾರಣಕ್ಕೆ ಶಂಕರಪ್ಪ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲಾಗಿದೆ' ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕಾರ್ಯದರ್ಶಿ ಯು. ಬಸವರಾಜ ತಿಳಿಸಿದ್ದಾರೆ.

₹3,783 ಕೋಟಿ ಮೊತ್ತದ ಯೋಜನೆಗಳ ಲೋಕಾರ್ಪಣೆ ಮತ್ತು ಶಿಲಾನ್ಯಾಸ

ಕಡಲ ನಗರಿಗೆ ಮೋದಿ ಇಂದು

ಪ್ರಜಾವಾಣಿ ವಾರ್ತೆ

ಮಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಲು ಕಡಲ ನಗರಿ ಸಜ್ಜಾಗಿದೆ. ನವ ಮಂಗಳೂರು ಬಂದರು ಪ್ರಾಧಿಕಾರ (ಎನ್‌ಎಂಪಿಎ) ಮತ್ತು ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೊಕೆಮಿಕಲ್ಸ್ ಲಿಮಿಟೆಡ್‌ನ (ಎಂಆರ್‌ಪಿಎಲ್) ಒಟ್ಟು ₹3,783 ಕೋಟಿ ಮೊತ್ತದ ಎಂಟು ಅಭಿವೃದ್ಧಿ ಯೋಜನೆಗಳ ಲೋಕಾರ್ಪಣೆ ಮತ್ತು ಶಿಲಾನ್ಯಾಸ ಕಾರ್ಯಕ್ರಮವನ್ನು ಪ್ರಧಾನಿ ನೆರವೇರಿಸುವರು.

ಶುಕ್ರವಾರ (ಸೆ. 2) ಕೇರಳ ಕೊಚ್ಚಿಯಿಂದ ಮಧ್ಯಾಹ್ನ 1 ಗಂಟೆಗೆ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸುವರು. 1.20ಕ್ಕೆ ಹೆಲಿಕಾಪ್ಟರ್ ಮೂಲಕ ಎನ್‌ಎಂಪಿಎ ಹೆಲಿಪ್ಯಾಡ್ ತಲುಪುವರು. 1.30ರಿಂದ 2.45ರವರೆಗೆ ಬಂಗ್ರಕುಳೂರಿನ ಗೋಲ್ಡ್ ಫಿಂಚ್ ಸಿಟಿ ಮೈದಾನದಲ್ಲಿ ನಡೆಯುವ ಫಲಾನುಭವಿಗಳ ಸಮಾವೇಶದಲ್ಲಿ ಭಾಗವಹಿಸುವರು. 2.45ರಿಂದ 3.45ರವರೆಗೆ ಎನ್‌ಎಂಪಿಎದಲ್ಲಿ ಬಿಜೆಪಿ ರಾಜ್ಯ ಪ್ರಮುಖರ ಜೊತೆ ಚರ್ಚಿಸುವರು.

ಸಮಾವೇಶದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಸರ್ಬಾನಂದ ಸೋನೊವಾಲ್, ಶಂತನು ಠಾಕೂರ್, ಶೋಭಾ ಕರಂದ್ಲಾಜೆ ಭಾಗವಹಿಸುವರು. 'ಪ್ರಧಾನಿ ಸಮಾವೇಶದಲ್ಲಿ ಪಕ್ಷದ ಒಂದು ಲಕ್ಷಕ್ಕೂ ಅಧಿಕ ಕಾರ್ಯಕರ್ತರು, ವಿವಿಧ ಯೋಜನೆಗಳ 70 ಸಾವಿರಕ್ಕೂ ಅಧಿಕ ಫಲಾನುಭವಿಗಳು ಭಾಗವಹಿಸಲಿದ್ದಾರೆ. ಅಭಿವೃದ್ಧಿ ದೃಷ್ಟಿಯಿಂದ ಮೋದಿ ಭೇಟಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಮೈಲಿಗಲ್ಲು ಆಗಲಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ. ಸುನಿಲ್ ಕುಮಾರ್ ಪ್ರತಿಕ್ರಿಯಿಸಿದರು.

ಸರ್ಕಾರಿ ಕಾರ್ಯಕ್ರಮ ಇದೇ ಮೊದಲು

ನಾಲ್ಕೂವರೆ ದಶಕಗಳ ಬಳಿಕ ಪ್ರಧಾನಿಯೊಬ್ಬರು ಅಧಿಕೃತ ಸರ್ಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸಲು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸುತ್ತಿದ್ದಾರೆ. 1975ರಲ್ಲಿ ಆಗಿನ ಪ್ರಧಾನಿ ಇಂದಿರಾ ಗಾಂಧಿ ಅವರು ಎನ್‌ಎಂಪಿಟಿ ಉದ್ಘಾಟನೆಗೆ ಬಂದಿದ್ದರು.

ಈ ಹಿಂದೆ ನರೇಂದ್ರ ಮೋದಿ, ಚುನಾವಣಾ ಪ್ರಚಾರ, ಉಡುಪಿಯ ಧರ್ಮ ಸಂಸತ್ ಸಭೆ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಾರ್ಯಕ್ರಮ, ಲಕ್ಷದ್ವೀಪ ಭೇಟಿ ವೇಳೆ ಮಂಗಳೂರಿನಲ್ಲಿ ವಾಸ್ತವ್ಯ ಮಾಡಿದ್ದರೂ, ಇಲ್ಲಿ ಅಧಿಕೃತ ಸರ್ಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು ಇದೇ ಮೊದಲು.

ತುಳುಗೆ ಸ್ಥಾನಮಾನ ನೀಡಿ

'ಬಹುವರ್ಷಗಳ ಬೇಡಿಕೆಯಾಗಿರುವ ತುಳು ಭಾಷೆಯನ್ನು 8ನೇ ಪರಿಚ್ಛೇದಕ್ಕೆ ಸೇರಿಸುವ, ತುಳುವನ್ನು ರಾಜ್ಯಭಾಷೆ ಎಂದು ಘೋಷಿಸುವ ನಿರ್ಧಾರ ಪ್ರಕಟಿಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಯು.ಟಿ.ಖಾದರ್ ಅವರು ಒತ್ತಾಯಿಸಿದ್ದಾರೆ.

ಪ್ರಧಾನಿ ಮೋದಿಗೆ ಪ್ರಶ್ನೆಗಳ ಸ್ವಾಗತ

ಒಂದನೇ ಪುಟದಿಂದ

'ಶೇ 40ರಷ್ಟು ಲಂಚದ ಸರ್ಕಾರ' ಎಂದು ರಾಜ್ಯ ಸರ್ಕಾರವನ್ನು ದೂಷಿಸುತ್ತಿರುವ ಕಾಂಗ್ರೆಸ್, ಇದರ ವಿರುದ್ಧ ಸರಣಿ ಹೋರಾಟಕ್ಕೆ ಸಜ್ಜುಗೊಳ್ಳುತ್ತಿದೆ. ಈ ವಿಷಯ ಆಡಳಿತಾರೂಢ ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರ ಮಧ್ಯೆ ವಾಕ್ಸಮರಕ್ಕೂ ಕಾರಣವಾಗಿದೆ. ಬಿಜೆಪಿ ಹಮ್ಮಿಕೊಂಡಿರುವ ಜನೋತ್ಸವಕ್ಕೆ ಪರ್ಯಾಯವಾಗಿ '90% ವಚನ ವಂಚನೆ; ಬಿಜೆಪಿ ನಿಮ್ಮಲ್ಲಿದೆಯಾ ಉತ್ತರ' ಎಂಬ ಅಭಿಯಾನವನ್ನು ಕಾಂಗ್ರೆಸ್ ಆರಂಭಿಸಿದ್ದು, ಪ್ರಶ್ನೆ ಕೇಳಲು ಶುರು ಮಾಡಿದೆ. ಮೋದಿ ಅವರು ಭೇಟಿ ನೀಡುವ ಮುನ್ನ ಟ್ವೀಟ್ ಮಾಡಿರುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯಕ್ಕೆ ನೀಡಿದ ಕೊಡುಗೆಯೇನು ಎಂದು ಐದು ಪ್ರಶ್ನೆಗಳನ್ನು ಕೇಳಿದ್ದಾರೆ.

ಮಳೆಯಿಂದ ಹಾನಿಗೊಳಗಾಗಿರುವ 'ಬೆಂಗಳೂರನ್ನು ಕಾಪಾಡಿ' ಎಂದು ಪ್ರಧಾನಿಯವರನ್ನು ಟ್ಯಾಗ್ ಮಾಡಿ ಬುಧವಾರ ಟ್ವೀಟ್ ಮಾಡಿ, ಗಮನ ಸೆಳೆದಿದ್ದ ಉದ್ಯಮಿ ಟಿ.ವಿ. ಮೋಹನದಾಸ್ ಪೈ, 'ಭ್ರಷ್ಟಾಚಾರ ಮುಕ್ತ ಸರ್ಕಾರ ಬೇಕು' ಎಂದು ಪ್ರತಿಪಾದಿಸಿರುವ ಮತ್ತೊಂದು ಟ್ವೀಟನ್ನು ಗುರುವಾರ ಮಾಡಿದ್ದಾರೆ.

ಇದನ್ನು ಉಲ್ಲೇಖಿಸಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, 'ಪ್ರಧಾನಿ ಮೋದಿ ಅವರನ್ನು ಟ್ಯಾಗ್ ಮಾಡಿ ಟ್ವೀಟ್ ಮಾಡಿದರೆ ಬೆಂಗಳೂರಿಗೆ ಪರಿಹಾರ ಸಿಗುವುದಿಲ್ಲ. ಬೆಂಗಳೂರು ರಕ್ಷಣೆ ಮಾಡುವ ಕೆಲಸ ಪ್ರಧಾನಿ ಕೈಯಲ್ಲಿ ಇಲ್ಲ. ಆ ರೀತಿ ಭಾವಿಸಿದರೆ ಅವರಿಗೆ ನಿರಾಶೆಯಾಗುವುದು ಖಚಿತ' ಎಂದು ಕುಟುಕಿದ್ದಾರೆ.

ಈ ಎಲ್ಲ ಪ್ರಶ್ನೆ, ಮನವಿಗಳಿಗೆ ಮೋದಿ ಉತ್ತರ ನೀಡುವರೇ ಎಂಬ ಕುತೂಹಲ ರಾಜಕೀಯ ವಲಯದಲ್ಲಿ ಮೂಡಿದೆ. ಗುರುವಾರ ಕೇರಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ ಎಂಬುದಾಗಿ ಮೋದಿ ಗುಡುಗಿರುವುದು ಪ್ರಶ್ನೆಗಳ ಮಹತ್ವವನ್ನು ಹೆಚ್ಚಿಸಿದೆ.

'ಭ್ರಷ್ಟಾಚಾರ ರಹಿತ ಸರ್ಕಾರ ಬೇಕು'

ಒಂದನೇ ಪುಟದಿಂದ...

'ನೀವು ದೆಹಲಿಯಿಂದ ನಡೆಸುತ್ತಿರುವ ಭ್ರಷ್ಟಾಚಾರ ಮುಕ್ತ ಸರ್ಕಾರವು ಇಲ್ಲಿಯೂ ಬೇಕು. ಭ್ರಷ್ಟ ಅಧಿಕಾರಿಗಳನ್ನು ವಜಾಗೊಳಿಸಬೇಕು. ಭ್ರಷ್ಟ ರಾಜಕಾರಣಿಗಳಿಗೆ ಅವಕಾಶಗಳನ್ನು ಕಲ್ಪಿಸದೆ ಮೂಲೆಗುಂಪು ಮಾಡಬೇಕು. ಎಲ್ಲ ಯೋಜನೆಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸಬೇಕು. ಭವಿಷ್ಯದಲ್ಲಿ ಉತ್ತಮ ಆಡಳಿತ ದೊರೆಯಲಿ' ಎಂದು ಅವರು ಆಶಿಸಿದ್ದಾರೆ.

ಈ ಟ್ವೀಟ್ ಅನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೂ ಲಗತ್ತಿಸಿದ್ದಾರೆ.

ವಿಶ್ವ ಪತ್ರಿಕಾ ವಿತರಕರ ದಿನಾಚರಣೆ: ಸಂಘಟಿತ ಹೋರಾಟಕ್ಕೆ ಸಲಹೆ

ಪತ್ರಿಕಾ ವಿತರಕರಿಗೆ ಸೌಲಭ್ಯ ಕಲ್ಪಿಸುವ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪತ್ರಿಕಾ ವಿತರಕರ ಬೇಡಿಕೆಗಳಿಗೆ ಸರ್ಕಾರ ಪೂರಕವಾಗಿ ಸ್ಪಂದಿಸಲಿದೆ' ಎಂದು ವಾರ್ತಾ ಇಲಾಖೆ ಆಯುಕ್ತ ಡಾ. ಪಿ.ಎಸ್.ಹರ್ಷ ಭರವಸೆ ನೀಡಿದರು.

ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ನಗರದಲ್ಲಿ ಗುರುವಾರ ಆಯೋಜಿಸಿದ್ದ 'ವಿಶ್ವ ಪತ್ರಿಕಾ ದಿನಾಚರಣೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪತ್ರಿಕಾ ವಿತರಕರಿಗೆ ಸೌಲಭ್ಯಗಳನ್ನು ಕಲ್ಪಿಸುವ ಕುರಿತು ಸಂಬಂಧಪಟ್ಟ ಇಲಾಖೆಗಳ ಜತೆ ಚರ್ಚಿಸಲಾಗುತ್ತಿದೆ. ವಾರ್ತಾ ಇಲಾಖೆಯು ಕಾರ್ಮಿಕ ಇಲಾಖೆ ಜತೆ ಸಂಪರ್ಕದಲ್ಲಿದೆ' ಎಂದು ತಿಳಿಸಿದರು.

'ರಾಜ್ಯದಲ್ಲಿ ಪತ್ರಿಕಾ ವಿತರಕರ ಸಂಖ್ಯೆ ದೊಡ್ಡದು. ಸರ್ಕಾರ ವಿತರಕರ ಜತೆಗಿದೆ. ಸೌಲಭ್ಯ ಕಲ್ಪಿಸಲು ಅನುದಾನದ ಕೊರತೆ ಇಲ್ಲ' ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ಗುರುವಾರ ಆಯೋಜಿಸಿದ್ದ ವಿಶ್ವ ಪತ್ರಿಕಾ ವಿತರಕರ ದಿನಾಚರಣೆಯಲ್ಲಿ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ನೂತನ ಧ್ವಜ ಬಿಡುಗಡೆ ಮಾಡಲಾಯಿತು. ಅಖಿಲ ಕರ್ನಾಟಕ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಕೆ. ಶಂಭುಲಿಂಗ, ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಬಿ.ವಿ.ಮಲ್ಲಿಕಾರ್ಜುನಯ್ಯ, ಕಸಾಪ ಅಧ್ಯಕ್ಷ ಮಹೇಶ ಜೋಶಿ, ಸ್ವಾಮಿ ಜಪಾನಂದಜೀ ಮಹಾರಾಜ್, ಪತ್ರಕರ್ತ ರವಿ ಹೆಗಡೆ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಇದ್ದರು –ಪ್ರಜಾವಾಣಿ ಚಿತ್ರ

ಪಾವಗಡದ ರಾಮಕೃಷ್ಣ ಸೇವಾಶ್ರಮದ ಅಧ್ಯಕ್ಷ ಸ್ವಾಮಿ ಜಪಾನಂದಜೀ ಮಹಾರಾಜ್ ಮಾತನಾಡಿ, 'ರಾಜ್ಯದಲ್ಲಿ 70ಸಾವಿರಕ್ಕೂ ಹೆಚ್ಚು ಪತ್ರಿಕಾ ವಿತರಕರಿದ್ದಾರೆ. ಎಲ್ಲ ವಿತರಕರು ಸಂಘಟಿತರಾಗಿ ಹೋರಾಟ ನಡೆಸುವ ಮೂಲಕ ಸೌಲಭ್ಯಗಳನ್ನು ಪಡೆಯಬೇಕು' ಎಂದು ಹೇಳಿದರು.

ಅಖಿಲ ಕರ್ನಾಟಕ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಕೆ. ಶಂಭುಲಿಂಗ ಅವರು ಬೇಡಿಕೆಗಳ ಮನವಿ ಪತ್ರವನ್ನು ಪಿ.ಎಸ್. ಹರ್ಷಗೆ ಸಲ್ಲಿಸಿದರು. ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ ಇದ್ದರು.

ಪತ್ರಿಕಾ ವಿತರಕರ ಬೇಡಿಕೆಗಳು

- ಕ್ಷೇಮಾಭಿವೃದ್ಧಿ ನಿಧಿ ಸ್ಥಾಪನೆ.
- ಕೆಲಸದ ವೇಳೆಯಲ್ಲಿ ಮೃತಪಟ್ಟರೆ ಕುಟುಂಬಕ್ಕೆ ₹10 ಲಕ್ಷ ಪರಿಹಾರ ನೀಡಬೇಕು.
- ಮಕ್ಕಳಿಗೆ ಶೈಕ್ಷಣಿಕ ಸಹಾಯಧನ ನೀಡಬೇಕು.
- ವೈದ್ಯಕೀಯ ಚಿಕಿತ್ಸೆ ಮತ್ತು ಅಪಘಾತದ ಪರಿಹಾರ ಮತ್ತು ಪ್ರಮುಖ ಕಾಯಿಲೆಗಳಿಗೆ ಚಿಕಿತ್ಸೆಗಾಗಿ ಸರ್ಕಾರದಿಂದ ಪರಿಹಾರ ಕಂಡುಕೊಳ್ಳಲು ಸಹಾಯ ನೀಡಬೇಕು.
- ಪತ್ರಿಕೆ ಹಂಚುವ ವಿತರಕರಿಗೆ ಎಲೆಕ್ಟ್ರಿಕ್ ಬೈಕ್ ಖರೀದಿಸಲು ಸಬ್ಸಿಡಿ ರೂಪದಲ್ಲಿ ಸಹಾಯಧನ ನೀಡಬೇಕು ಹಾಗೂ ಶೂನ್ಯ ಬಡ್ಡಿದರದಲ್ಲಿ ವಾಹನ ಖರೀದಿಸಲು ಸಹಾಯಧನ ನೀಡಬೇಕು.

ಹಾಸನ ಮಂಗಳೂರು ರೈಲು ಅಭಿವೃದ್ಧಿ ಕಂಪನಿ ನಿಯಮಿತ

(ರೈಲ್ವೆ ಸಚಿವಾಲಯ ಮತ್ತು ಕರ್ನಾಟಕ ಸರ್ಕಾರ ಜಂಟಿ ಉದ್ಯಮ)
ನೋಂದಾಯಿತ ಕಚೇರಿ: 1ನೇ ಮಹಡಿ, ಸಂಪರ್ಕ ಸೌಧ, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, 1ನೇ ಬ್ಲಾಕ್, ಬೆಂಗಳೂರು–560010 ಮೊ: +91 9945152469
ಇ–ಮೇಲ್: ceohmrdc@gmail.com CIN: U45203KA2003PLC032183

ಇ–ಟೆಂಡರ್ ಸೂಚನೆ

Tender No: HMRDC/Accounts/14/Insurance Policy/2022 Date: 01.09.2022

ಕಾಮಗಾರಿಯ ಹೆಸರು: ಎಚ್‌ಎಂಆರ್‌ಡಿಸಿ 2022–23 ವರ್ಷಕ್ಕೆ ಈ ಕೆಳಗಿನ ವಿಮಾ ಪಾಲಿಸಿಗಳನ್ನು ನೀಡಲು ಹೆಸರಾಂತ ಮತ್ತು ಅನುಭವಿ ವಿಮಾ ಕಂಪನಿಗಳಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ.

(1) ಸ್ಟ್ಯಾಂಡರ್ಡ್ ಫೈರ್ ಮತ್ತು ಸ್ಪೆಷಲ್ ಪೆರಿಲ್ಸ್ ಪಾಲಿಸಿ. (2) ಬೆಂಕಿ ಮತ್ತು ಲಾಭದ ನಷ್ಟ (FLOP) (3) ಮೆಷಿನರಿ ಬ್ರೇಕ್–ಡೌನ್ ಪಾಲಿಸಿ (4) ಸಾರ್ವಜನಿಕ ಹೊಣೆಗಾರಿಕೆ ಪಾಲಿಸಿ.

ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **03.10.2022 ಮಧ್ಯಾಹ್ನ 2.30**. ವಿವರಗಳಿಗಾಗಿ **https://eproc.karnataka.gov.in** ಮತ್ತು **www.hmrdc.com** ಗೆ ಭೇಟಿ ನೀಡಿ.

ವಾಸಾಸಂಇ/ ಉನಿ.ನ/2017/ ಎಂಪಿಎ/ 2022–23 ಸಹಿ/– ಸಿಎಫ್‌ಒ/ಎಚ್‌ಎಂಆರ್‌ಡಿಸಿ

Ref No : ADM/ICTD/ 5477 /2022 Date : 01.09.2022

THE BAGALKOT DISTRICT CENTRAL CO-OP BANK., BAGALKOT

HO : Sector No – 24, Navanagar, BAGALKOT - 587103
Tel : 08354 – 236443, 235573, E-Mail : shrikant.801@bagalkotdccbank.com

E-Proc No. DOC/2022-23/IND267 Date : 01.09.2022

Tender Notification

(Through e-procurement portal only)

Item rate tender is invited as per through E-Procurement platform. The details of the Notification of E-Tender for Providing ATM Switching Services and End-to-End, Supply, Installation, Testing Commissioning and Maintenance of 30 Automation Teller Machines (ATMs), Lockable Cassettes at various branches/office and of event and specification can be had, by visiting the link https://eproc.karnataka.gov.in, there by registering with e-procurement platform. Last date & Time for Receipt of Tender is 20.09.2022 at 06:00 PM. All Vendor are requested to get updated with corrigendum/ addendum (if any) issued online at the following E-Procurement.

Sd/-
CHIEF EXECUTIVE OFFICER

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ–6, ಘನ ತ್ಯಾಜ್ಯ ನಿರ್ವಹಣೆ, 4ನೇ ಮಹಡಿ, ಅನೆಕ್ಸ್ ಕಟ್ಟಡ–3, ಎನ್.ಆರ್. ಚೌಕ, ಬೆಂಗಳೂರು–02.

ಸಂಖ್ಯೆ:ಬೃಬೆಂಮಪಾ/ಕಾಪಾಅ-6/ಘತ್ಯಾನಿ/ಟೆಂಡರ್/10/2022-23 ದಿನಾಂಕ: 01-09-2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರವು ಶುಭ್ರ ಬೆಂಗಳೂರಿನಡಿಯಲ್ಲಿ ಅನುದಾನ ಮಂಜೂರು ಮಾಡಿದ್ದು ಕೆಳಗಿನ ಯಂತ್ರಗಳನ್ನು ತೆಗೆದುಕೊಳ್ಳಲು ಯೋಜಿಸಲಾಗಿದೆ.

ಕಾರ್ಯಪಾಲಕ ಅಭಿಯಂತರರು, ಘನ ತ್ಯಾಜ್ಯ ನಿರ್ವಹಣೆ, ಬೃಬೆಂಮಪಾ, ಬೆಂಗಳೂರು ಇವರು ಕೆಲಸಕ್ಕಾಗಿ ಅರ್ಹ ಬಿಡ್ಡರ್‌ಗಳು/ಏಜೆನ್ಸಿಗಳು/ಸಂಸ್ಥೆಗಳು/ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ದಾರರು ಭಾರತ ಸರ್ಕಾರದ GeM ಪೋರ್ಟಲ್ ಮೂಲಕ ಕೋಷ್ಟಕದಲ್ಲಿ ನೀಡಲಾದ ಕೆಲಸಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು **(viz.https://gem.gov.in)** GeM ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಪ್ರಮಾಣಿತ ಬಿಡ್ಡಿಂಗ್ ಡಾಕ್ಯುಮೆಂಟ್‌ನ ಪ್ರಕಾರ ಒಪ್ಪಂದದ ಪ್ರಶಸ್ತಿಗೆ ಅರ್ಹತೆ ಪಡೆಯಲು ಟೆಂಡರ್‌ದಾರರು RFPಯ ಷರತ್ತುಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಗಮನಿಸಲು ಟೆಂಡರ್‌ದಾರರಿಗೆ ಸೂಚಿಸಲಾಗಿದೆ.

ಕ್ರ. ಸಂ.	ಕೆಲಸದ ಹೆಸರು	ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ. ಗಳಲ್ಲಿ)	ಇಎಂಡಿ ಮೊತ್ತ (ಲಕ್ಷ ರೂ. ಗಳಲ್ಲಿ)
1.	Supply, Installation, Commissioning and Operation & Maintenance of Shredders and Chopper for a period of 01 year along with Infrastructure at selected locations in BBMP.	1500.00	15.00
2.	Supply, Installation, Commissioning and Three years of operation and maintenance of Decentralised Mini In-Situ Wet/ Organic Municipal Solid waste Composting units in Bruhat Bengaluru Mahanagara Palike.	1550.00	15.50

ಟೆಂಡರ್‌ನ ಕಾರ್ಯಸೂಚಿ: (1) ಪ್ರಸ್ತಾವನೆ ದಾಖಲೆಯ ವಿನಂತಿಯ ಲಭ್ಯತೆ ದಿನಾಂಕ: 02-09-2022 ಮಧ್ಯಾಹ್ನ 12:00 ರ ನಂತರ. (2) ವಿಚಾರಣೆಗಳನ್ನು ಸ್ವೀಕರಿಸುವ ದಿನಾಂಕ: 12-09-2022ರ ಸಂಜೆ 4:00 ಗಂಟೆಯವರೆಗೆ. (3) ಭರ್ತಿ ಮಾಡಿದ ಪ್ರಸ್ತಾವನೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 16-09-2022 ರ ಸಂಜೆ 4:30 ಗಂಟೆಯವರೆಗೆ. (4) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: 16-09-2022 ಸಂಜೆ 5:00 ಗಂಟೆಯ ನಂತರ (5) GeM ಪೋರ್ಟಲ್ ಮೂಲಕ ತಾಂತ್ರಿಕ ಪ್ರಸ್ತಾವನೆಗಳನ್ನು ಅನುಮೋದಿಸಿದ ನಂತರ ಆರ್ಥಿಕ ಪ್ರಸ್ತಾವನೆಯನ್ನು ತೆರೆಯುವುದು. ಇಚ್ಛೆಯುಳ್ಳ ಬಿಡ್ಡರ್‌ಗಳು / ಗುತ್ತಿಗೆದಾರರು GeM ಪೋರ್ಟಲ್‌ನಲ್ಲಿ ನೋಂದಾಯಿತರಾಗಿಲ್ಲದವರು ಟೆಂಡರ್‌ನಲ್ಲಿ ಭಾಗಿಯಾಗುವ ಮುಂಚೆ ವೆಬ್‌ಸೈಟ್ **https://gem.gov.in** ರಲ್ಲಿ ನೋಂದಾಯಿತರಾಗಬೇಕು.

ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ದಿನದಂದು ಕಛೇರಿ ವೇಳೆಯಲ್ಲಿ ಪಡೆಯಬಹುದು ಅಥವಾ ವೆಬ್‌ಸೈಟ್ **https://gem.gov.in** ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು–6, ಘನ ತ್ಯಾಜ್ಯ ನಿರ್ವಹಣೆ, ಬೃಬೆಂಮಪಾ.

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ನಂ.1, ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ, ಬೆಂಗಳೂರು–560001.
ಫೋನ್: 080–29701510, ಇ–ಮೇಲ್: dce.tender2017@gmail.com

DCE/ITS/PUR/16/2022-INFO- (Computer No. 867658) Date: 01.09.2022

ಇ–ಟೆಂಡರ್ ಅಧಿಸೂಚನೆ

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಕೆಳಕಂಡ ಸಾಮಗ್ರಿಗಳನ್ನು ಪೂರೈಸುವ ಸಂಬಂಧ ಆಸಕ್ತ ಬಿಡ್‌ದಾರರಿಂದ ಇ–ಸಂಗ್ರಹಣೆ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಬಿಡ್‌ಗಳನ್ನು ಆಹ್ವಾನಿಸಿರುತ್ತಾರೆ. ಟೆಂಡರ್ ದಸ್ತಾವೇಜು ಮತ್ತು ಇತರ ವಿವರಗಳಿಗಾಗಿ https://eproc.karnataka.gov.in. ಅನ್ನು ಸಂಪರ್ಕಿಸಬಹುದಾಗಿದೆ.

ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿದೆ

ಟೆಂಡರ್ ಸಂಖ್ಯೆ: ಡಿಸಿಇ/2021–22/ಐಎನ್‌ಡಿ1124 "ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಕಾಲೇಜುಗಳಿಗೆ 6500 ಐಸಿಟಿಯುಕ್ತ ತರಗತಿಗಳಿಗೆ ಅಗತ್ಯ ಉಪಕರಣಗಳ ಸರಬರಾಜು, ಅನುಸ್ಥಾಪನೆ, ಕಾರ್ಯಾರಂಭ ಮತ್ತು ನಿರ್ವಹಣೆ".

ಇ–ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಅಪ್‌ಲೋಡ್ ಮಾಡುವ ದಿನಾಂಕ : 01-09-2022, ಪ್ರೀಬಿಡ್ ಸಭೆಯ ದಿನಾಂಕ : 06-09-2022, 11.00 AM, ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 01-10-2022, 5.30 PM

ಸಹಿ/–
DIPR/DDU/Zen/R.O:2018/2021-22 ಕಾಲೇಜು ಶಿಕ್ಷಣ ನಿರ್ದೇಶಕರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಚಾಮರಾಜಪೇಟೆ ವಿಭಾಗ, ಬೃ.ಬೆಂ.ಮ.ಪಾಲಿಕೆ ಅಂಗನವಾಡಿ ಕೇಂದ್ರ, 2ನೇ ಮುಖ್ಯ, ಟಿ.ಆರ್.ಮಿಲ್ ರಸ್ತೆ, ಬೆಂಗಳೂರು – 18

ಸಂಖ್ಯೆ: ಕಾಪಾಅ/ಚಾಪೇ/ಟೆಂಡರ್/ಇ–ಪ್ರೊಕ್/10/2022–23 ದಿನಾಂಕ: 01.09.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ ಪದ್ಧತಿ)

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ, ಬೆಂಗಳೂರು ಇವರು, ಕೆಪಿಡಬ್ಲ್ಯೂಡಿ/ಬೃ.ಬೆಂ.ಮ.ಪಾಲಿಕೆ ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ 1ನೇ ದರ್ಜೆಯಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **(ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ–ಕೆಡಬ್ಲ್ಯೂ–4)**

ಕ್ರ ಸಂ	ಕಾಮಗಾರಿಗಳ ಹೆಸರು	ಪ್ಯಾಕೇಜ್ ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹. ಲಕ್ಷಗಳಲ್ಲಿ)
1.	ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಜೆ.ಜೆ.ಆರ್ ನಗರ ಉಪ ವಿಭಾಗದಲ್ಲಿ ರಸ್ತೆಗಳು, ಚರಂಡಿಗಳು, ಪಾದಚಾರಿ ಮಾರ್ಗಗಳು, ಉದ್ಯಾನವನಗಳು, ಆಟದ ಮೈದಾನ ಮತ್ತು ಕಟ್ಟಡಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಹಳೆ ವಾರ್ಡ್ ಸಂಖ್ಯೆ.135 & 136) ಪ್ಯಾಕೇಜ್–1ರಂತೆ ಒಳಗೊಂಡಿದೆ. (1ನೇ ಕರೆ)	2080.00	20.80
2.	ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಜೆ.ಜೆ.ಆರ್ ನಗರ ಉಪ ವಿಭಾಗದಲ್ಲಿ ರಸ್ತೆಗಳು, ಚರಂಡಿಗಳು, ಪಾದಚಾರಿ ಮಾರ್ಗಗಳು, ಉದ್ಯಾನವನಗಳು, ಆಟದ ಮೈದಾನಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು ಮತ್ತು ವಿವಿಧ ಇಲಾಖೆಗಳಿಗಾಗಿ ಬೃ.ಬೆಂ.ಮ.ಪಾಲಿಕೆ ಕಟ್ಟಡಗಳನ್ನು ನಿರ್ಮಾಣ ಮಾಡುವುದು. (ಹಳೆ ವಾರ್ಡ್ ಸಂಖ್ಯೆ.137 & 138) ಪ್ಯಾಕೇಜ್–2ರಂತೆ ಒಳಗೊಂಡಿದೆ. (1ನೇ ಕರೆ)	1600.00	16.00
3.	ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಜೆ.ಜೆ.ಆರ್ ನಗರ ಉಪ ವಿಭಾಗದಲ್ಲಿ ರಸ್ತೆಗಳು, ಚರಂಡಿಗಳು, ಪಾದಚಾರಿ ಮಾರ್ಗಗಳು, ಉದ್ಯಾನವನಗಳು, ಆಟದ ಮೈದಾನಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು ಮತ್ತು ವಿವಿಧ ಇಲಾಖೆಗಳಿಗಾಗಿ ಬೃ.ಬೆಂ.ಮ.ಪಾಲಿಕೆ ಕಟ್ಟಡಗಳನ್ನು ನಿರ್ಮಾಣ ಮಾಡುವುದು. (ಹಳೆ ವಾರ್ಡ್ ಸಂಖ್ಯೆ.139, 140 & 141) ಪ್ಯಾಕೇಜ್–3ರಂತೆ ಒಳಗೊಂಡಿದೆ. (1ನೇ ಕರೆ)	4320.00	43.20

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **05.09.2022**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **15.09.2022**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **08.09.2022**ರ ಬೆಳಿಗ್ಗೆ **11:00** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, **(ಪಶ್ಚಿಮ)** ಬಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು ಇಲ್ಲಿ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಚಾಮರಾಜಪೇಟೆ ವಿಭಾಗದಲ್ಲಿ ದಿನಾಂಕ **17.09.2022**ರ ಬೆಳಿಗ್ಗೆ **11:30** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್: **https://eproc.karnataka.gov.in**ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕುಳ್ಳ @ 80

ಕನ್ನಡದ ಬೆಳ್ಳಿ ತೆರೆಯಲ್ಲಿ ಕಪ್ಪು ಬಿಳುಪು ಯುಗದಲ್ಲೇ ಹತ್ತಾರು ಹೊಸ ಪ್ರಯೋಗಗಳನ್ನು ಮಾಡಿದ ಹರಿಕಾರ, ನಾಡಿನ ನಗೆಗಾರ, ದಿಗ್ಗಜರಿಂದ ಹಿಡಿದು ಹೊಸ ತಲೆಮಾರಿನವರ ಜತೆಗೂ ಸಿನಿರಂಗದಲ್ಲಿ ಹೆಜ್ಜೆ ಹಾಕಿದ ನಟ, ನಿರ್ಮಾಪಕ ದ್ವಾರಕೀಶ್ ಅವರು ಇತ್ತೀಚೆಗೆ 80ರ ಹರೆಯಕ್ಕೆ ಕಾಲಿಟ್ಟಿದ್ದಾರೆ. ಈ ಹೊತ್ತಿನಲ್ಲಿ ಅಂದಿನಿಂದ ಇಂದಿನವರೆಗಿನ ನೆನಪುಗಳ ರೀಲು ತೆರೆದುಕೊಂಡದ್ದು ಹೀಗೆ...

ಶರತ್ ಹೆಗ್ಡೆ

• 80ರ ಬದುಕು ಹೇಗನ್ನಿಸುತ್ತಿದೆ?

ಅಚ್ಚರಿ, ಸಣ್ಣ ಬೇಸರ ಒಟ್ಟಿಗೇ ಆಗುತ್ತಿದೆ. ಇಷ್ಟು ಬೇಗ ಆಗಿ ಹೋಯ್ತಲ್ಲಾ ಅಂತ. ಬದುಕಿನಲ್ಲಿ ಸಾಕಷ್ಟು ಅನುಭವ, ಏಳು ಬೀಳುಗಳನ್ನು ಕಂಡಿದ್ದೇನೆ. ಅದೇ ಉತ್ಸಾಹದಲ್ಲೂ ಇದ್ದೇನೆ. ಈಗಲೂ ಸಿನಿಮಾ ಎಂದಾಗ ಪುಟಿದು ನಿಲ್ಲುವ ಚೈತನ್ಯ ಹೊಂದಿದ್ದೇನೆ.

• ಸ್ಪೇರ್ ಪಾರ್ಟ್ ಅಂಗಡಿ ಇಟ್ಟಿದ್ದವರು ಸಿನಿಮಾ ಜಗತ್ತು ಪ್ರವೇಶಿಸಿದ ದಿನಗಳು ಹೇಗಿದ್ದವು?

ನಾನು ಸಿನಿಮಾಕ್ಕೆ ಹೋಗುವುದು ನನ್ನ ಅಣ್ಣನಿಗೆ ಒಂದು ಚೂರೂ ಇಷ್ಟವಿರಲಿಲ್ಲ. ಅದಕ್ಕಾಗಿ ನನ್ನನ್ನು ಡಿಪ್ಲೊಮಾ ಇನ್ ಮೆಕ್ಯಾನಿಕಲ್ ಎಂಜಿನಿಯರಿಂಗ್‌ಗೆ (ಸಿಪಿಸಿ) ಸೇರಿಸಿದ್ದರು. ಮೈಸೂರಿನಲ್ಲಿ ಓದು ಮುಗಿದ ಬಳಿಕ ಅಣ್ಣ ನನಗಾಗಿ ಭಾರತ್ ಆಟೊ ಸ್ಪೇರ್ ಸ್ಟೋರ್ಸ್ ಎಂಬ ಅಂಗಡಿ ಹಾಕಿಕೊಟ್ಟಿದ್ದ. ತುಂಬಾ ಚೆನ್ನಾಗಿಯೇ ವ್ಯಾಪಾರ ನಡೆಯಿತು. ಈಗಲೂ ಅಣ್ಣನ ಮಕ್ಕಳು ಆ ವ್ಯವಹಾರ ಮುಂದುವರಿಸಿದ್ದಾರೆ. ಹಲವು ಶಾಖೆಗಳೂ ಇವೆ. ಉದ್ಯಮದಲ್ಲಿ ಒಳ್ಳೆಯ ಹೆಸರು ಮಾಡಿದ್ದಾನೆ. ಆದರೆ ನನಗೆ ಸಿನಿಮಾ ತುಡಿತ ಇತ್ತಲ್ಲಾ. ಹಾಗಾಗಿ ನಾನು, ಮಾವ ಹುಣಸೂರು ಕೃಷ್ಣಮೂರ್ತಿ ಅವರಿಗೆ ಪುಟ್ಟ ಪಾತ್ರಕ್ಕಾಗಿ ದುಂಬಾಲು ಬಿದ್ದಿದ್ದೆ. ಕೊನೆಗೂ ಸಿಕ್ಕಿತು. 1962ರಲ್ಲಿ ಸಿನಿಮಾದಲ್ಲೇ ಕೆಲಸ ಮಾಡಬೇಕು ಎಂಬ ಕಾರಣಕ್ಕೆ ಮದ್ರಾಸ್‌ಗೆ ಹೋದೆ. ಮಾವನೊಂದಿಗೆ ನೆಲೆಸಿದೆ. ನನ್ನ ಸಿನಿಮಾ ಗೀಳು ನೋಡಿದ ಅಣ್ಣ ನನ್ನನ್ನು ವ್ಯಾಪಾರದಿಂದ ಬಿಡಿಸಿದ. ಸುಮಾರು ಎರಡೂವರೆ ಸಾವಿರ ಕೊಟ್ಟು ನನ್ನನ್ನು ಕಳುಹಿಸಿದ. ಆ ಕಾಲದಲ್ಲಿ ಎಲ್ಲ ಹಿರಿಕಿರಿಯ ಕಲಾವಿದರು ಒಟ್ಟಿಗೇ ಇದ್ದೆವು. ಸಿನಿಮಾ ಕೈ ಹಿಡಿಯಿತು.

• ಸಿನಿಮಾ ಕ್ಷೇತ್ರದ ಮಾನದಂಡಗಳಿಗೆ ಹೊರತಾದ ನಿಮ್ಮನ್ನು ಈ ಕ್ಷೇತ್ರ ಸ್ವೀಕರಿಸಿತೇ?

ಹಾಸ್ಯಗಾರನಿಗೇನು ಮಾನದಂಡ ಹೇಳಿ? ನಾನು ಬಂದದ್ದೇ ಹಾಸ್ಯ ಪಾತ್ರಕ್ಕಾಗಿ. ಒಂದೆರಡು ಚಿತ್ರಗಳಲ್ಲಿ ಪಾತ್ರ ಮಾಡಿದ ಬಳಿಕ ಅಂದರೆ ಚೆನ್ನೈಗೆ ಹೋದ ಮೂರೇ ವರ್ಷಗಳಲ್ಲಿ ನಾನು ನಿರ್ಮಾಪಕ ಎನಿಸಿಕೊಂಡೆ. 'ಮಮತೆಯ ಮಡಿಲು', 'ಮೇಯರ್ ಮುತ್ತಣ್ಣ', 'ಕುಳ್ಳ ಏಜೆಂಟ್ 000' ಇವೆಲ್ಲಾ ಜಯಭೇರಿ ಬಾರಿಸಿದ ಚಿತ್ರಗಳು. ಕುಳ್ಳ ಏಜೆಂಟ್... ಚಿತ್ರ ಸೆಟ್ಟೇರಿದಾಗ ನನಗೆ ಯಾವ ಹೆಸರು, ಗುರುತೂ ಇರಲಿಲ್ಲ. ಬಾಂಡ್ ಮಾದರಿಯ ಚಿತ್ರವದು. ಅದಕ್ಕಾಗಿ ನಾನು ಎದೆ ಮೇಲೆ ಡಾ.ರಾಜ್‌ಕುಮಾರ್ ಅವರ ಚಿತ್ರವಿರುವ ಅಂಗಿ ಧರಿಸಿದ್ದೆ. ಹೀಗೆ ಒಂದಿಷ್ಟು ಮಸಾಲೆ ಬೆರೆಸಲೇಬೇಕಾಯಿತು. ಚಿತ್ರವನ್ನು ಜನ ಸ್ವೀಕರಿಸಿದರು. ಚಿತ್ರ ಸುಮಾರು ಲಕ್ಷ ರೂಪಾಯಿಯಷ್ಟು ಗಳಿಸಿತು. ಆ ಬಳಿಕ ಡಾ.ರಾಜ್, ವಿಷ್ಣುವರ್ಧನ್, ರಜನಿಕಾಂತ್ ಅವರನ್ನು ಹಾಕಿಕೊಂಡು ಚಿತ್ರಗಳನ್ನು ಮಾಡಿದೆ. ಹಣ, ಕೀರ್ತಿ ಎಲ್ಲವೂ ಬಂದವು.

• ಆರ್ಥಿಕ ಸಂಕಷ್ಟ, ಹೋರಾಟದ ಬದುಕೂ ನಿಮ್ಮದಾಯಿತಲ್ಲಾ? ಎಲ್ಲಿ ಲೆಕ್ಕಾಚಾರ ತಪ್ಪಿತು?

ನಾನು ಸಿನಿಮಾ ಮಾಡುತ್ತಲೇ ಹೋದೆ. ಬ್ಯಾಲೆನ್ಸ್‌ಷೀಟ್ ಮೇಲೆ ಗಮನ ಇರಲಿಲ್ಲ. ಒಂದು ಚಿತ್ರ ವಿಫಲವಾದರೆ ಇನ್ನೊಂದರಲ್ಲಿ ಬರುತ್ತದೆ ಎಂಬ ಆಶಾಭಾವ ಅಷ್ಟೇ ಇತ್ತು. ಸಾಕಷ್ಟು ಸಂಕಷ್ಟಗಳನ್ನು ಎದುರಿಸಿದ್ದೇನೆ. ಮನೆ, ಕಾರು ಎಲ್ಲವನ್ನೂ ಮಾರಬೇಕಾಗಿ ಬಂತು. 1985ರ ಬಳಿಕ ನಾನು ನಿವೃತ್ತಿ ತೆಗೆದುಕೊಂಡಿದ್ದರೆ ಬಹುಶಃ ಬೆಂಗಳೂರಿನಲ್ಲಿ ಅತ್ಯಂತ ಶ್ರೀಮಂತರ ಪೈಕಿ ನಾನೂ ಒಬ್ಬನಾಗಿರುತ್ತಿದ್ದೆ. ಒಟ್ಟಿನಲ್ಲಿ ಚಿತ್ರ ನಿರ್ಮಿಸುವುದಷ್ಟೇ ಗುರಿ ಆಗಿತ್ತು. ಇದರಿಂದಾಗಿ ಹಲವರ ಮಾತುಗಳನ್ನು ಕೇಳಬೇಕಾಯಿತು. ಬದುಕಿನಲ್ಲಿ ಸಾಕಷ್ಟು ಹೋರಾಟ ನಡೆಸಬೇಕಾಯಿತು.

• ಈಗ ಆರ್ಥಿಕ ಸ್ಥಿತಿ ಹೇಗಿದೆ?

ಚೆನ್ನಾಗಿಯೇ ಇದೆ. ಮಕ್ಕಳು, ಸೊಸೆ, ದುಡಿಯುತ್ತಿದ್ದಾರೆ. ಇತ್ತೀಚೆಗಷ್ಟೇ ಹುಸ್ಕೂರು ರಸ್ತೆಯಲ್ಲಿ ಮನೆ ಕಟ್ಟಿದ್ದೇವೆ. ಎರಡನೇ ಪುತ್ರ ಯೋಗೀಶ ಸಿನಿಮಾ ಕ್ಷೇತ್ರದಲ್ಲಿದ್ದಾನೆ. ಬದುಕು ಹೀಗೆ ಸಾಗಿದೆ.

• ಸಾಂಸಾರಿಕ ಬದುಕು?

ಸಾಂಸಾರಿಕ ಬದುಕು ಎಂದರೆ ನಾನು ತುಂಬಾ ನೆನಪಿಸಿಕೊಳ್ಳುವುದು ನನ್ನ ಪತ್ನಿ ಅಂಬುಜಾ. ನಾನೇನೇ ಆಗಿದ್ದರೂ ಅದರ ಹಿಂದಿದ್ದ ಸ್ಫೂರ್ತಿ, ಶಕ್ತಿ ಅವಳು. ಅವಳದ್ದು ಯಾವುದೇ ನಿರ್ಬಂಧಗಳಿಲ್ಲದ ಪ್ರೀತಿ. ಐವರು ಗಂಡುಮಕ್ಕಳನ್ನು ಕೊಟ್ಟಿದ್ದಾಳೆ. ನನ್ನ ಎಲ್ಲ ಒಳಿತು ಕೆಡುಕುಗಳಿಗೆ ಹೆಗಲು ಕೊಟ್ಟವಳು. ಇತ್ತೀಚೆಗೆ ಅಗಲಿದ್ದಾಳೆ. ಅವಳ ನೆನಪಿನಲ್ಲಿ ಕಾಲ ಕಳೆಯುತ್ತಿದ್ದೇನೆ.

• ಡಾ.ರಾಜ್‌ಕುಮಾರ್, ವಿಷ್ಣುವರ್ಧನ್ ಜತೆಗಿನ ನೆನಪುಗಳು?



ಡಾ.ರಾಜ್ ಅಷ್ಟು ದೊಡ್ಡ ನಟನಾದರೂ ನನ್ನ ಜೊತೆ ಅತ್ಯಂತ ಆತ್ಮೀಯತೆಯಿಂದ ಇದ್ದವರು. 'ನೀವೇನು ಮಾಡುತ್ತೀರಿ? ಸರಿ, ನಾನು ಹೀಗೆ ಮಾಡುತ್ತೇನೆ...' ಎಂದೆಲ್ಲಾ ಚರ್ಚಿಸುತ್ತಿದ್ದರು. ಯಾವ ಹಮ್ಮು, ಬಿಮ್ಮೂ ಇರಲಿಲ್ಲ ಅವರಿಗೆ. ಅವರೊಂದು ಅದ್ಭುತ. ಇನ್ನು ವಿಷ್ಣುವರ್ಧನ್. ಅವನನ್ನು ಮರೆಯಲು ಸಾಧ್ಯವಿಲ್ಲ. ಆತ ಈಗಲೂ ನನ್ನ ಜೊತೆಗಿದ್ದಾನೆ. ಹೌದು, ಒಂದಿಷ್ಟು 'ಅಹಂ' ಸಂಘರ್ಷಗಳು ನಮ್ಮ ನಡುವೆ ಬಂದಿದ್ದಿವೆ. ಅಷ್ಟು ದೊಡ್ಡ ನಟನ ಮುಂದೆ ನಾನೇ ತಗ್ಗಿ ನಡೆಯಬೇಕಿತ್ತು. ಹಾಗೆಲ್ಲಾ ಕಿತ್ತಾಟಗಳು ಆಗಬಾರದಿತ್ತು. ಕೊನೆಗೂ ಆತ್ಮೀಯತೆ ಉಳಿಯಿತು. 'ಆಪ್ತ ಮಿತ್ರ'ನ ಮೂಲಕ ನಾವು ಮತ್ತೆ 'ಆಪ್ತಮಿತ್ರ'ರೇ ಆದೆವು. ಅವನ ಬಗ್ಗೆ ಹೇಳುತ್ತಲೇ ಇರಬಹುದು. ಅದು ಮುಗಿಯದು.

• ಬದುಕಿನಲ್ಲಿ ಆಶಾವಾದ ಎಂದರೆ?

ಅದು ಸಿನಿಮಾ. ಯಾವತ್ತಿದ್ದರೂ ಸಿನಿಮಾ. ನೀವು ನನ್ನ ಆರ್ಥಿಕ ಸ್ಥಿತಿ ನೋಡಬೇಡಿ. ನನ್ನ ಸಿನಿಮಾಗಳನ್ನು ನೋಡಿ. ಆ ಸಿನಿಮಾಗಳನ್ನು ನೋಡಿದಾಗ, ಆ ನೆನಪುಗಳನ್ನು ಮಾಡಿಕೊಂಡಾಗ ನನ್ನ ಬದುಕಿನಲ್ಲಿ ಆಶಾವಾದ ಮತ್ತೆ ಮತ್ತೆ ಮೂಡುತ್ತದೆ.

(ಪೂರ್ಣ ಸಂದರ್ಶನ ಸೆ. 4ರಂದು ಪ್ರಜಾವಾಣಿ ಯುಟ್ಯೂಬ್ ಚಾನೆಲ್‌ನಲ್ಲಿ ಪ್ರೀಮಿಯರ್ ಆಗಲಿದೆ) ❖

ಪ್ರಜಾವಾಣಿ ನೋಡಿಯೊ

ಸಿನಿಮಾತು ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ರಮ್ಯಾ

ಮತ್ತೆ ಬೆಳ್ಳಿತೆರೆಗೆ ಸ್ಯಾಂಡಲ್‌ವುಡ್ ಕ್ವೀನ್

ಸಿನಿ ಸಂಕ್ಷಿಪ್ತ

ರಾಜಕೀಯಕ್ಕೆ ಧುಮುಕಿದ ಬಳಿಕ ಬಣ್ಣದ ಲೋಕದಿಂದ ಹಲವು ವರ್ಷ ದೂರವೇ ಉಳಿದಿದ್ದ ನಟಿ ರಮ್ಯಾ, ಇದೀಗ ಮತ್ತೆ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದಾರೆ. ರಮ್ಯಾ ಹೊಸ ಚಿತ್ರದಲ್ಲಿ ನಟಿಸಲಿದ್ದಾರೆ ಎನ್ನುವ ಊಹಾಪೋಹದ ನಡುವೆಯೇ ರಮ್ಯಾ ತಮ್ಮ ನಿರ್ಧಾರವನ್ನು ಪ್ರಕಟಿಸಿದ್ದಾರೆ.

ಗಣೇಶ ಚತುರ್ಥಿಯಂದು ತಮ್ಮ ಟ್ವಿಟರ್ ಖಾತೆಯಲ್ಲಿ ಚಿತ್ರರಂಗದಲ್ಲಿನ ಮುಂದಿನ ಪಯಣದ ಬಗ್ಗೆ ಮಾಹಿತಿ ಹಂಚಿಕೊಂಡಿರುವ ರಮ್ಯಾ, ತಾನು ನಿರ್ಮಾಪಕಿಯಾಗಲಿದ್ದೇನೆ ಎಂದು ಘೋಷಿಸಿದ್ದಾರೆ.

'ನಾನು ಮತ್ತೆ ಚಿತ್ರರಂಗಕ್ಕೆ ಹಿಂತಿರುಗುತ್ತಿದ್ದೇನೆ. ಈ ಬಾರಿ ನನ್ನ ನಿರ್ಮಾಣ ಸಂಸ್ಥೆ ಆ್ಯಪಲ್ ಬಾಕ್ಸ್ ಸ್ಟುಡಿಯೋಸ್ ಮೂಲಕ ನಿರ್ಮಾಪಕಿಯಾಗಲಿದ್ದೇನೆ ಎನ್ನುವುದು ವಿಶೇಷ. ಪ್ರಸ್ತುತ, ಆ್ಯಪಲ್ ಬಾಕ್ಸ್ ಸಂಸ್ಥೆಯು ಎರಡು ಚಿತ್ರಗಳನ್ನು ನಿರ್ಮಿಸಲು ಸಜ್ಜಾಗಿದೆ. ಈ ಎರಡೂ ಚಿತ್ರಗಳು ಕೆ.ಆರ್.ಜಿ ಸಂಸ್ಥೆಯ ವಿತರಣೆಯ ಮೂಲಕ ಚಿತ್ರಮಂದಿರಗಳಲ್ಲಿ ತೆರೆ ಕಾಣಲಿವೆ. ಅದರ ಜೊತೆಯಲ್ಲೇ ಒಟಿಟಿ ವೇದಿಕೆಗಳಿಗೆ ಚಲನಚಿತ್ರಗಳು ಹಾಗೂ ವೆಬ್‌ಸರಣಿಗಳನ್ನು ನಿರ್ಮಾಣ ಮಾಡಲು ಸಂಸ್ಥೆ ಸಿದ್ಧವಾಗುತ್ತಿದೆ' ಎಂದು ರಮ್ಯಾ ತಿಳಿಸಿದ್ದಾರೆ.

ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರಿಗೆ ಜೋಡಿಯಾಗಿ 2003ರಲ್ಲಿ 'ಅಭಿ' ಸಿನಿಮಾ ಮುಖಾಂತರ ಚಿತ್ರರಂಗಕ್ಕೆ ರಮ್ಯಾ ಕಾಲಿಟ್ಟಿದ್ದರು. ಈ ಜೋಡಿ ಸಿನಿ ಪ್ರೇಕ್ಷಕರಲ್ಲಿ ಮೋಡಿ ಮಾಡಿತ್ತು. ಇದಾದ ಬಳಿಕ ಚಂದನವನ ಹಾಗೂ ಕಾಲಿವುಡ್‌ನ ಖ್ಯಾತ ನಟರೊಂದಿಗೆ ಸಾಲು ಸಾಲು ಚಿತ್ರಗಳಲ್ಲಿ ಜೋಡಿಯಾಗಿ ರಮ್ಯಾ ಕಾಣಿಸಿಕೊಂಡರು. ಹೀಗೆ ಸ್ಯಾಂಡಲ್‌ವುಡ್ ಕ್ವೀನ್ ಆದ ರಮ್ಯಾ, ರಾಜಕೀಯದ ಸೆಳೆತಕ್ಕೂ ಒಳಗಾಗಿ ಮಂಡ್ಯ ಲೋಕಸಭೆಯ ಸಂಸದರಾಗಿಯೂ ಆಯ್ಕೆಯಾಗಿದ್ದರು. ರಾಜಕೀಯಕ್ಕೆ ಇಳಿದ ಬಳಿಕ ನಟನೆಯಿಂದ ದೂರವೇ ಉಳಿದಿದ್ದರು. ❖

ಕನ್ನಡದಲ್ಲಿ ಮತ್ತೊಂದು ಒಟಿಟಿ 'ಐರಾಕ್ಸ್'

ಒಟಿಟಿ

ಕನ್ನಡ ಚಿತ್ರೋದ್ಯಮಕ್ಕೆ ಆಸರೆಯಾಗಲು ಸದ್ಯದಲ್ಲೇ ಮತ್ತೊಂದು ಒಟಿಟಿ ಆ್ಯಪ್ ಬರುತ್ತಿದೆ. ಐರಾಕ್ಸ್ ಎಂಬ ಒಟಿಟಿ ಆ್ಯಪನ್ನು ಡಿಎಸ್‌ಕೆ ಒಟಿಟಿ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ರೂಪಿಸಿದೆ.

ಈ ವೇದಿಕೆ ಹತ್ತಾರು ಹೊಸ ವೈಶಿಷ್ಟ್ಯತೆಗಳನ್ನು ಹೊಂದಿದ್ದು ಸಿನಿರಸಿಕರಿಗೆ ಮನರಂಜನೆ ಕೊಡಲು ಸಿದ್ಧವಾಗುತ್ತಿದೆ. ದಸರಾ ಹಬ್ಬದ ವೇಳೆಗೆ ಈ ಹೊಸ ಆ್ಯಪ್ ಲಭ್ಯವಾಗಲಿದೆ. ಹೊಸವರ್ಷಕ್ಕೆ ಈ ಆ್ಯಪ್ ಆ್ಯಪಲ್ ಐಒಎಸ್ ನಲ್ಲೂ ಲಭ್ಯವಾಗಲಿದೆ. ಇದರಲ್ಲಿ ಎಲ್ಲಾ ಭಾಷೆಗಳ ಚಲನಚಿತ್ರಗಳು, ವೆಬ್ ಸೀರೀಸ್, ಹಾಡು, ಕಿರು ಚಿತ್ರಗಳು ಮತ್ತು ಪ್ರಚಾರಕ್ಕೆ ಸಂಬಂಧಪಟ್ಟ ವಿಡಿಯೊಗಳನ್ನೂ ವೀಕ್ಷಿಸಬಹುದು.

ಈಗಾಗಲೇ ಸಾಕಷ್ಟು ನಿರ್ಮಾಪಕರು ತಮ್ಮ ಚಲನಚಿತ್ರಗಳನ್ನು 'ಐರಾಕ್ಸ್' ಒಟಿಟಿ ಆ್ಯಪ್‌ನಲ್ಲಿ ಬಿಡುಗಡೆಗೆ ಮುಂದಾಗಿದ್ದಾರೆ. ಡಾ.ಸುನೀಲ್ ಕುಂಬಾರ್ ಹಾಗೂ ವೆಂಕಟ್ ಸಾಯಿ ಈ ಸಂಸ್ಥೆಯ ಮಾಲೀಕರು. ಐರಾಕ್ಸ್ ಒಟಿಟಿ ಅಲ್ಲದೆ ಇನ್ನೂ 20 ಇತರ ಒಟಿಟಿ ಕಂಪನಿಗಳ ಜೊತೆಗೆ ಒಪ್ಪಂದ ಹೊಂದುತ್ತಿದ್ದು, ತಮ್ಮಲ್ಲಿ ಬರುವ ಚಿತ್ರಗಳನ್ನು ಇತರ ಒಟಿಟಿ ಗಳಲ್ಲೂ ಬಿಡುಗಡೆ ಮಾಡಲಾಗುವುದು ಎಂದು ಸಂಸ್ಥೆಯ ಮಾಲೀಕರು ತಿಳಿಸಿದ್ದಾರೆ. ❖

ಡಿಸಿಪಿ ಆದ ಮೇಘನಾ ಗಾಂವ್ಕರ್

ಗ್ಲ್ಯಾಮರಸ್ ಪಾತ್ರಗಳಿಗೆ ಬಣ್ಣಹಚ್ಚಿದ್ದ ನಟಿ ಮೇಘನಾ ಗಾಂವ್ಕರ್, 'ಶಿವಾಜಿ ಸುರತ್ಕಲ್' ಸಿನಿಮಾದ ಎರಡನೇ ಭಾಗದಲ್ಲಿ ಪೊಲೀಸ್ ಅಧಿಕಾರಿ ಪಾತ್ರಕ್ಕೆ ಬಣ್ಣಹಚ್ಚಲಿದ್ದಾರೆ ಎಂದು ತಂಡ ಈ ಹಿಂದೆಯೇ ಘೋಷಿಸಿತ್ತು. ಇದೀಗ ಸಿನಿಮಾದಲ್ಲಿನ ಅವರ ಲುಕ್ ಬಿಡುಗಡೆ ಆಗಿದೆ.

2020ರಲ್ಲಿ ತೆರೆ ಕಂಡ, ನಟ ರಮೇಶ್ ಅರವಿಂದ್ ನಟನೆಯ 'ಶಿವಾಜಿ ಸುರತ್ಕಲ್' ಚಿತ್ರದ ಮುಂದಿನ ಸರಣಿ, 'ಶಿವಾಜಿ ಸುರತ್ಕಲ್-2'. ಈ ಚಿತ್ರದಲ್ಲಿ ದಕ್ಷ ಪೊಲೀಸ್ ಅಧಿಕಾರಿಯಾಗಿ ಮೇಘನಾ ಕಾಣಿಸಿಕೊಳ್ಳುತ್ತಿದ್ದಾರೆ. ಡಿಸಿಪಿ ಹುದ್ದೆಯಲ್ಲಿರುವ ಯುವ ಐಪಿಎಸ್ ಅಧಿಕಾರಿ 'ದೀಪಾ ಕಾಮತ್' ಎಂಬ ಪಾತ್ರದಲ್ಲಿ ಮೇಘನಾ ನಟಿಸುತ್ತಿದ್ದಾರೆ. ಯುವ ಮಹಿಳಾ ಪೊಲೀಸ್ ಅಧಿಕಾರಿಗಳ ಬಗ್ಗೆ ವಿವರವಾಗಿ ಅಧ್ಯಯನ ನಡೆಸಿ ನಿರ್ದೇಶಕ ಆಕಾಶ್ ಶ್ರೀವತ್ಸ ಈ ಪಾತ್ರವನ್ನು ಸೃಷ್ಟಿಸಿದ್ದಾರೆ. ವಿಶೇಷವೇನೆಂದರೆ ನಿಜ ಜೀವನದಲ್ಲಿ ಮೇಘನಾ ಅವರ ತಂದೆ ಪೊಲೀಸ್ ಅಧಿಕಾರಿಯಾಗಿದ್ದವರು. ಚಿತ್ರದಲ್ಲಿ ಶಿವಾಜಿಯ ಮೇಲಧಿಕಾರಿಯ ಪಾತ್ರದಲ್ಲಿ ಮೇಘನಾ ನಟಿಸುತ್ತಿದ್ದಾರೆ.

ಮೇಘನಾ ಗಾಂವ್ಕರ್

ರಮೇಶ್ ಅರವಿಂದ್ ಅವರ ಜನ್ಮದಿನವಾದ ಸೆಪ್ಟೆಂಬರ್ 10ರಂದು ಚಿತ್ರದ ಟೀಸರ್ ಬಿಡುಗಡೆಯಾಗಲಿದೆ. ಚಿತ್ರದ ಚಿತ್ರೀಕರಣ ಕೊನೆಯ ಹಂತದಲ್ಲಿದ್ದು, ಡಬ್ಬಿಂಗ್ ಕೆಲಸ ಆರಂಭವಾಗಿದೆ. ಚಿತ್ರಕ್ಕೆ ಜೂಡ ಸ್ಯಾಂಡಿಯವರ ಸಂಗೀತ ನಿರ್ದೇಶನವಿದ್ದು, ದರ್ಶನ್ ಅಂಬಟ್, ಗುರು ಪ್ರಸಾದ್ ಎಂ. ಜಿ. ಛಾಯಾಗ್ರಹಣವಿದೆ. ಅಂಜನಾದ್ರಿ ಸಿನಿ ಕ್ರಿಯೇಶನ್ಸ್‌ನಲ್ಲಿ ರೇಖಾ ಕೆ.ಎನ್ ಮತ್ತು ಅನೂಪ್ ಗೌಡ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದು, ಆಕಾಶ್ ಶ್ರೀವತ್ಸ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ❖

ಟೀಸರ್‌ನಲ್ಲಿ ಅವತರಿಸಿದ ರಾಮಾಚಾರಿ 2.0

ನಟ ತೇಜಸ್ ನಿರ್ಮಾಣ ಮತ್ತು ಅಭಿನಯದ 'ರಾಮಾಚಾರಿ 2.0' ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಟೀಸರ್‌ನಲ್ಲಿ ತೇಜ್ ಮಾಸ್ ಹಾಗೂ ಸಾಂಪ್ರದಾಯಿಕ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಪನೋರಮಿಕ್ ಸ್ಟುಡಿಯೋಸ್ ಮತ್ತು ಮೇಘನಾ ಕ್ರಿಯೇಷನ್ಸ್ ಸಹಯೋಗದಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದೆ. ಚಿತ್ರದ ಪೋಸ್ಟ್ ಪ್ರೊಡಕ್ಷನ್ ಭರದಿಂದ ಸಾಗಿದೆ ಎಂದು ತೇಜಸ್ ತಿಳಿಸಿದ್ದಾರೆ.

ಕೌಸ್ತುಭ ಹಾಗೂ ಚಂದನಾ ಈ ಚಿತ್ರದ ನಾಯಕಿಯರು. ವಿಷ್ಣುವರ್ಧನ್ ಅಭಿನಯದ 'ನಾಗರಹಾವು' ಚಿತ್ರದ ರಾಮಾಚಾರಿ, ರವಿಚಂದ್ರನ್ ಅಭಿನಯದ 'ರಾಮಾಚಾರಿ' ಇಲ್ಲಿ ಹೊಸ ಅವತಾರದಲ್ಲಿ 2.0 ಆವೃತ್ತಿ ರೂಪದಲ್ಲಿ ಕಾಣಿಸಿಕೊಂಡಿದ್ದಾನೆ. ಕೊನೆಗೂ ರಾಮಾಚಾರಿಗೆ ಮಾರ್ಗರೆಟ್ ಸಿಗುತ್ತಾಳೋ ಅಥವಾ ಜೊತೆಯಲ್ಲಿ ನಂದಿನಿ ಇರುತ್ತಾಳೋ ಎಂಬ ಕುತೂಹಲವನ್ನು ಈ ಚಿತ್ರ ಇನ್ನೂ ಕಾದಿರಿಸಿದೆ.

ತೇಜಸ್

ರಾಘವೇಂದ್ರ ರಾಜ್‌ಕುಮಾರ್, ಸ್ವಾತಿ, ಸ್ಪರ್ಶರೇಖಾ, ವಿಜಯ್ ಚೆಂಡೂರ್, ಪ್ರಭು ಸೂರ್ಯ, ಶಶಿಧರ್ ತಾರಾಗಣದಲ್ಲಿದ್ದಾರೆ.

ಎಲ್ಲವೂ ಅಂದುಕೊಂಡಂತೆ ನಡೆದರೆ ಈ ಡಿಸೆಂಬರ್‌ನಲ್ಲಿ ಚಿತ್ರ ಬಿಡುಗಡೆಯಾಗಲಿದೆ ಎಂದಿದ್ದಾರೆ ತೇಜಸ್. ಈ ನಡುವೆ ತೇಜಸ್ ಅವರ ಹೊಸ ಚಿತ್ರ 'ಗಾಡ್' ಸೆಟ್ಟೇರಿದ್ದು, ಸದ್ಯದಲ್ಲೇ ಮುಹೂರ್ತ ನೆರವೇರಲಿದೆಯಂತೆ. ❖

ಕಿರುತೆರೆಯಿಂದ ಬೆಳ್ಳಿತೆರೆಗೆ ವಂಶಿಕಾ

ಕಿರುತೆರೆ ಹಾಗೂ ಬೆಳ್ಳಿತೆರೆಯಲ್ಲಿ ಖ್ಯಾತಿ ಪಡೆದಿರುವ ಮಾಸ್ಟರ್ ಆನಂದ್ ಬಗ್ಗೆ ಯಾರಿಗೆ ಗೊತ್ತಿಲ್ಲ ಹೇಳಿ. ಇದೀಗ ಮಾಸ್ಟರ್ ಆನಂದ್ ಪುತ್ರಿಯೂ ಕಿರುತೆರೆಯಿಂದ ಬೆಳ್ಳಿತೆರೆಗೆ ಹೆಜ್ಜೆ ಇಡುತ್ತಿದ್ದಾಳೆ. ಪಟಪಟ ಎಂದು ಮಾತನಾಡುತ್ತಾ ರಿಯಾಲಿಟಿ ಶೋ ಮೂಲಕ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿರುವ ವಂಶಿಕಾ ತಾನೂ 'Love ...ಲಿ'ಯಾಗಿದ್ದೇನೆ ಎಂದಿದ್ದಾಳೆ.

ನಟ ವಸಿಷ್ಠ ಸಿಂಹ ನಟಿಸುತ್ತಿರುವ ಸಿನಿಮಾ Love..ಲಿ ಸೆಟ್‌ಗೆ ವಂಶಿಕಾ ಅಂಜನಿ ಕಶ್ಯಪ್ ಹೆಜ್ಜೆ ಇಟ್ಟಿದ್ದಾಳೆ. ವಂಶಿಕಾ, ತನು ಎಂಬ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದು, ಸೆಪ್ಟೆಂಬರ್ 6ರಿಂದ ವಂಶಿಕಾ ಭಾಗದ ಚಿತ್ರೀಕರಣ ಆರಂಭವಾಗಲಿದೆ. ಪ್ರೇಕ್ಷಕರ ನಿರೀಕ್ಷೆಗೆ ತಕ್ಕಂತೆ ಪಾತ್ರ ಸೃಷ್ಟಿಸಿದ್ದು ನೋಡುಗರಿಗೆ ವಂಶಿಕಾ ಖಂಡಿತವಾಗಿಯೂ ಮನರಂಜನೆ ನೀಡುತ್ತಾಳೆ ಎನ್ನುತ್ತಾರೆ ನಿರ್ದೇಶಕ ಚೇತನ್ ಕೇಶವ್.

ಈಗಾಗಲೇ ಸಿನಿಮಾದ ಶೇ 50 ಚಿತ್ರೀಕರಣ ಪೂರ್ಣಗೊಂಡಿದ್ದು, ಆ್ಯಂಗ್ರಿ ಯಂಗ್ ಮ್ಯಾನ್ ವಸಿಷ್ಠ ಸಿಂಹನಿಗೆ ಜೋಡಿಯಾಗಿ ಜಾರ್ಖಂಡ್ ಮೂಲದ ಸ್ಟೆಫಿ ಪಟೇಲ್ ನಾಯಕಿಯಾಗಿ ನಟಿಸುತ್ತಿದ್ದಾರೆ. 'ಮಫ್ತಿ' ನಿರ್ದೇಶಕ ನರ್ತನ್ ಜೊತೆಗೆ ಕೆಲಸ ಮಾಡಿರುವ ಅನುಭವ ಹೊಂದಿರುವ ಚೇತನ್ ಕೇಶವ್ ಈಗ ನೈಜ ಘಟನೆಗಳನ್ನು ಆಧಾರವಾಗಿಟ್ಟುಕೊಂಡು ಈ ಸಿನಿಮಾ ಮಾಡುತ್ತಿದ್ದಾರೆ. ರೌಡಿಸಂ ಕಥೆ ಜೊತೆಗೆ ಆ್ಯಕ್ಷನ್ ರೊಮ್ಯಾಂಟಿಕ್ ಪ್ರೇಮ ಕಥಾಹಂದರವನ್ನು ಈ ಸಿನಿಮಾ ಹೊಂದಿದ್ದು, ರವೀಂದ್ರ ಕುಮಾರ್ ಚಿತ್ರದ ನಿರ್ಮಾಪಕರು. ಹರೀಶ್ ಕೊಮ್ಮೆ ಸಂಕಲನ, ಅಶ್ವಿನ್ ಕೆನಡಿ ಛಾಯಾಗ್ರಹಣ ಹಾಗೂ ಅನೂಪ್ ಸಿಳೀನ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ❖

ಸುಭಾಷಿತ

ನೀವು ಬೇರೆಯವರಿಗಾಗಿ ಒಂದು ದೀಪ ಹಚ್ಚಿ. ಅದು ನಿಮ್ಮ ದಾರಿಗೂ ಬೆಳಕು ನೀಡುತ್ತದೆ.
–ಗೌತಮ ಬುದ್ಧ

ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಮುಕ್ತ, ನಿಷ್ಪಕ್ಷಪಾತ ತನಿಖೆ ನಡೆಯಲಿ

ಚಿತ್ರದುರ್ಗದ ಮುರುಘಾ ಮಠದ ಪೀಠಾಧ್ಯಕ್ಷ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ದಾಖಲಾಗಿರುವ ಲೈಂಗಿಕ ದೌರ್ಜನ್ಯದ ಪ್ರಕರಣವು ಧರ್ಮ ಮತ್ತು ಅಧಿಕಾರ ಕೇಂದ್ರಗಳ ದುರ್ಬಳಕೆ ಕುರಿತ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿದೆ. ಮಹಿಳೆಯರ ಮೇಲೆ ನಿರಂತರವಾಗಿ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಗಳು ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದು, ಹೆಣ್ಣುಮಕ್ಕಳ ಸುರಕ್ಷತೆಯ ಮರೀಚಿಕೆಯಾಗಿಯೇ ಉಳಿದಿರುವುದನ್ನು ಮತ್ತೆ ಮತ್ತೆ ಸಾಬೀತುಪಡಿಸುತ್ತಿವೆ. ಧಾರ್ಮಿಕ ಸಂಸ್ಥೆಯ ಆವರಣದಲ್ಲಿ, ಅದರಲ್ಲೂ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎನ್ನುವ ಆರೋಪ ಮತ್ತಷ್ಟು ಆತಂಕ ಹುಟ್ಟಿಸುವಂತಹದ್ದು. ಸ್ವಾಮೀಜಿ ಹಾಗೂ ವಸತಿ ನಿಲಯದ ವಾರ್ಡನ್ ಸೇರಿದಂತೆ ಒಟ್ಟು ಐವರ ಮೇಲೆ 'ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ' (ಪೋಕ್ಸೊ) ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ. ಚಿತ್ರದುರ್ಗದ ವಸತಿ ನಿಲಯದ ಇಬ್ಬರು ವಿದ್ಯಾರ್ಥಿನಿಯರು ದೂರು ನೀಡಿದ್ದಾರೆ. ಒಬ್ಬ ವಿದ್ಯಾರ್ಥಿನಿಯ ಮೇಲೆ ಮೂರೂವರೆ ವರ್ಷಗಳಿಂದ ಹಾಗೂ ಮತ್ತೊಬ್ಬ ಬಾಲಕಿಯ ಮೇಲೆ ಒಂದೂವರೆ ವರ್ಷದಿಂದ ಲೈಂಗಿಕ ದೌರ್ಜನ್ಯ ಎಸಗುತ್ತ ಬರಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಪೋಕ್ಸೊ ಕಾಯ್ದೆಯಡಿ ದಾಖಲಾಗುವ ಪ್ರಕರಣವನ್ನು ಜಾಮೀನುರಹಿತ ಅಪರಾಧ ಎಂದು ಪರಿಗಣಿಸಲಾಗಿದೆ. ಕಾನೂನುಕ್ರಮ ವಿಳಂಬವಾದಷ್ಟೂ ಸಾಕ್ಷ್ಯನಾಶದ ಅವಕಾಶಗಳು ಇರುವುದರಿಂದ, ಅತ್ಯಾಚಾರದಂಥ ಆರೋಪಗಳ ಸಂದರ್ಭಗಳಲ್ಲಿ ಆರೋಪಿಗಳ ವಿರುದ್ಧ ತಕ್ಷಣದ ಕಾನೂನುಕ್ರಮ ಜರುಗಿಸುವುದು ಅಗತ್ಯ. ಆದರೆ, ಮುರುಘಾ ಶರಣರ ವಿಷಯದಲ್ಲಿ ಅನುಸರಿಸಿದ ವಿಳಂಬಧೋರಣೆಯು ಪೊಲೀಸ್ ಇಲಾಖೆಯ ನಡವಳಿಕೆಯ ಬಗ್ಗೆ ಹಲವು ಪ್ರಶ್ನೆಗಳಿಗೆ ಆಸ್ಪದ ಕಲ್ಪಿಸುವಂತಿತ್ತು. ಮುರುಘಾ ಶರಣರ ಸರಣಿ ಸಭೆಗಳನ್ನು ನಡೆಸಲು ಹಾಗೂ ಚಿತ್ರದುರ್ಗದಿಂದ ಪ್ರಯಾಣಿಸಲು ಅವಕಾಶ ದೊರೆತ ಘಟನೆಗಳು ಕೂಡ ಸರ್ಕಾರವು ಆರೋಪಿಯ ಬಗ್ಗೆ ಮೃದುಧೋರಣೆ ಹೊಂದಿತ್ತು ಎನ್ನುವುದಕ್ಕೆ ಉದಾಹರಣೆಗಳಾಗಿವೆ. ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಾದ ಆರು ದಿನಗಳ ಬಳಿಕ ಮುರುಘಾ ಶರಣರನ್ನು ಗುರುವಾರ ರಾತ್ರಿ ಪೊಲೀಸರು ಬಂಧಿಸಿದ್ದಾರೆ.

ಈ ಪ್ರಕರಣದಲ್ಲಿ ಸ್ವಾಮೀಜಿ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಸತ್ಯಸಂಗತಿ ಅನಾವರಣಗೊಳ್ಳುವುದು ಮುಖ್ಯವಾದಷ್ಟೇ, ಈ ದೇಶದ ಕಾನೂನಿನ ಮುಂದೆ ಎಲ್ಲರೂ ಸಮಾನರು ಎನ್ನುವ ಸಂದೇಶ ಹೊರಹೊಮ್ಮುವುದೂ ಮುಖ್ಯ

ಮಕ್ಕಳ ಮೇಲೆ ನಡೆದಿದೆ ಎನ್ನಲಾದ ಲೈಂಗಿಕ ಕಿರುಕುಳ, ವಸತಿನಿಲಯಗಳಲ್ಲಿ ನೆಲೆಸಿರುವ ವಿದ್ಯಾರ್ಥಿನಿಯರು ಹಾಗೂ ಅವರ ಪೋಷಕರನ್ನು ಆತಂಕಕ್ಕೆ ದೂಡುವ ವಿದ್ಯಮಾನ. ಹಾಸ್ಟೆಲ್‌ಗಳಲ್ಲಿ ನೆಲೆಸಿರುವ ಮಕ್ಕಳು ಮತ್ತು ಅವರ ಪೋಷಕರಿಗೆ ಧೈರ್ಯ ತುಂಬುವ ಕೆಲಸವನ್ನು ಮಾಡಬೇಕಾದುದು ಸರ್ಕಾರದ ಕರ್ತವ್ಯ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಶಿಕ್ಷಣ ಇಲಾಖೆಯು ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ತಕ್ಷಣ ಸ್ಪಂದಿಸಬೇಕಾಗಿತ್ತು. ಆದರೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾಗಲೀ ಶಿಕ್ಷಣ ಸಚಿವರಾಗಲೀ ಘಟನೆ ತಮಗೆ ಸಂಬಂಧಿಸಿದ್ದಲ್ಲ ಎನ್ನುವಂತೆ ಯಾವುದೇ ಪ್ರತಿಕ್ರಿಯೆ ನೀಡದೆ ಮೌನವಾಗಿದ್ದಾರೆ. ಅಮಾಯಕ ಮಕ್ಕಳು ಹಾಗೂ ಪೋಷಕರಿಗೆ ಧೈರ್ಯ ತುಂಬಬೇಕಾದ ಕೆಲಸವನ್ನು ಮಾಡಬೇಕಾದವರು ಸುಮ್ಮನಿರುವುದು, ಶಿಕ್ಷಣಕ್ಕಾಗಿ ಮನೆಯಿಂದ ಹೊರಗಿರುವ ಬಾಲಕಿಯರು ಮತ್ತು ಅವರ ಪಾಲಕರ ಧೈರ್ಯವನ್ನು ಉಡುಗಿಸುವಂತಿದೆ. ಪ್ರಭಾವಿ ಮಠದ ಮುಖ್ಯಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರ ಮೆದುಧೋರಣೆ ಅನುಸರಿಸುತ್ತಿದೆ ಎಂದು ಮಹಿಳಾ ಮತ್ತು ದಲಿತ ಸಂಘಟನೆಗಳು ಬಹಿರಂಗವಾಗಿಯೇ ಆರೋಪಿಸಿದ್ದವು. ಆ ಆರೋಪಕ್ಕೆ ಪುಷ್ಟಿ ನೀಡುವಂತೆ, ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಸ್ವಾಮೀಜಿ ವಿರುದ್ಧದ ದೂರಿನ ಹಿಂದೆ ಪಿತೂರಿ ಇರುವ ಶಂಕೆ ವ್ಯಕ್ತಪಡಿಸಿದ್ದರು. ತನಿಖೆ ನಡೆಸಬೇಕಾದ ಇಲಾಖೆಯ ಉಸ್ತುವಾರಿ ಹೊಣೆ ಹೊತ್ತವರೇ ಆರೋಪಿ ಬಗ್ಗೆ ಸಹಾನುಭೂತಿ ಸೂಚಿಸುವಂತಾದರೆ, ನಿಷ್ಪಕ್ಷಪಾತ ವಿಚಾರಣೆ ನಡೆಯುತ್ತದೆಂದು ನಿರೀಕ್ಷಿಸುವುದು ಹೇಗೆ?

ಅಧಿಕಾರ ಸ್ಥಾನದಲ್ಲಿ ಇರುವವರು ವೈಯಕ್ತಿಕ ಒಲವುಗಳನ್ನು ನಿಯಂತ್ರಿಸಿಕೊಂಡು, ಕಾನೂನನ್ನು ಪಾಲಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು. ರಾಜ್ಯದಲ್ಲಿ ನಡೆಯುತ್ತಿರುವ ಘಟನಾವಳಿಗಳನ್ನು ಇಡೀ ದೇಶ ಕುತೂಹಲದಿಂದ ಗಮನಿಸುತ್ತಿದೆ. ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು, ತನಿಖೆಯ ವಿವರಗಳನ್ನು ನೀಡುವಂತೆ ಜಿಲ್ಲಾಧಿಕಾರಿಗೆ ನೋಟಿಸ್ ನೀಡಿದೆ. ಪ್ರಸ್ತುತ ನಡೆಯುತ್ತಿರುವ ವಿದ್ಯಮಾನಗಳು ಕಾನೂನಿನ ಘನತೆಯನ್ನಷ್ಟೇ ಒರೆಗೆ ಹಚ್ಚುತ್ತಿಲ್ಲ; ಕಾನೂನಿನ ಸಮ್ಮುಖದಲ್ಲಿ ಬಲಿಷ್ಠರು ಮತ್ತು ಅಸಹಾಯಕರೆಂಬ ಭೇದವಿಲ್ಲ ಎನ್ನುವ ಮಾತನ್ನೂ ಪ್ರಾಯೋಗಿಕ ಪರೀಕ್ಷೆಗೊಳಪಡಿಸುತ್ತಿವೆ. ಮುರುಘಾ ಶರಣರ ವಿರುದ್ಧದ ಆರೋಪವನ್ನು ವ್ಯಕ್ತಿಗತ ನೆಲೆಯಲ್ಲಿ ನೋಡಬೇಕೇ ವಿನಾ ಸಾಮುದಾಯಿಕ ಅಥವಾ ಧಾರ್ಮಿಕ ನೆಲೆಗಟ್ಟಿನಲ್ಲಿ ನೋಡಬಾರದು. ವಿಚಾರಣೆಗೆ ಒಳಪಡಬೇಕಾದುದು ಆರೋಪಿಯೇ ಹೊರತು, ಸಮುದಾಯ ಅಥವಾ ಧಾರ್ಮಿಕ ಸಂಸ್ಥೆಯಲ್ಲ ಎನ್ನುವ ತಿಳಿವಳಿಕೆಯು ಅನಗತ್ಯ ಗೊಂದಲಗಳನ್ನು ನಿವಾರಿಸಬಲ್ಲದು. ಪ್ರಸಕ್ತ ಪ್ರಕರಣದಲ್ಲಿ, ಸ್ವಾಮೀಜಿ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಸತ್ಯ ಸಂಗತಿ ಅನಾವರಣಗೊಳ್ಳುವುದು ಮುಖ್ಯವಾದಷ್ಟೇ, ಈ ದೇಶದ ಕಾನೂನಿನ ಮುಂದೆ ಎಲ್ಲರೂ ಸಮಾನರು ಎನ್ನುವ ಸಂದೇಶ ಹೊರಹೊಮ್ಮುವುದೂ ಮುಖ್ಯ.

ದಿನದ ಟ್ವೀಟ್

ಅಪಾಯ ಅರಿಯಿರಿ

ದಲಿತ ಯುವಕ– ಯುವತಿಯರು ಬಡ ಕೂಲಿಕಾರ್ಮಿಕರಾಗಿಯೇ ಉಳಿದರೆ ಮಾಲೀಕನೊಬ್ಬ ಅವರಿಗೆ ಕೇವಲ ಕೂಲಿ ಕೊಡುವುದಿಲ್ಲ ಜೊತೆಗೆ ನಿತ್ಯ ಅಸ್ಪೃಶ್ಯತೆಯನ್ನು ಕೂಡ ಕೂಲಿಯಾಗಿ ಕೊಡುತ್ತಾನೆ. ಈ ಅಪಾಯ ಅರಿತು ದಲಿತ ಯುವಕ– ಯುವತಿಯರು ಬಡಕಾರ್ಮಿಕ ವಾತಾವರಣದಿಂದ ಹೊರಬಂದು ಮಾಲೀಕರಾಗಬೇಕು. #ದಲಿತ_ಉದ್ಯಮಶೀಲತೆ

ರಘೋತ್ತಮ ಹೊ.ಬ., ಬರಹಗಾರ

ಕಿಡಿನುಡಿ

ಶಿಕ್ಷಣ ಸಾಲದ ಪ್ರಮಾಣವನ್ನು ಹೆಚ್ಚಿಸಲು ಒತ್ತು ನೀಡುವಂತೆ ಸರ್ಕಾರವು ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳಿಗೆ ಸೂಚಿಸಿದೆ ಎಂದು ವರದಿಯಾಗಿದೆ. ಸರ್ಕಾರದ ಉದಾಸೀನ ಧೋರಣೆಯಿಂದಾಗಿ ಬ್ಯಾಂಕುಗಳು ಕಳೆದ ಎಂಟು ವರ್ಷಗಳಿಂದ ಶಿಕ್ಷಣ ಸಾಲ ಮನವಿಗಳನ್ನು ತಿರಸ್ಕರಿಸುತ್ತ ಬಂದಿದ್ದವು. ಐಬಿಸಿ ಪ್ರಕ್ರಿಯೆಯಡಿ 517 ಪ್ರಕರಣಗಳಲ್ಲಿ ಬ್ಯಾಂಕುಗಳು ತ್ಯಾಗ ಮಾಡಿರುವ ₹ 5.24 ಲಕ್ಷ ಕೋಟಿಗೆ ಹೋಲಿಸಿದರೆ ಶಿಕ್ಷಣಕ್ಕಾಗಿ ನೀಡುತ್ತಿರುವ ಸಾಲ ಏನೇನೂ ಅಲ್ಲ. ಕಾರ್ಪೊರೇಟ್ ವಲಯದ ವಿಷಯದಲ್ಲಿ ಸಾಲ ಮನ್ನಾವನ್ನು 'ಹೇರ್‌ಕಟ್' ಎಂದು ಕರೆಯಲಾಗುತ್ತದೆ. ಆದರೆ ವಿದ್ಯಾರ್ಥಿಗಳ ವಿಷಯದಲ್ಲಿ 'ಡಿಫಾಲ್ಟ್' ಎಂದು ಕರೆಯುವುದು ವಿಷಾದನೀಯ.

ಪಿ.ಚಿದಂಬರಂ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ
ಮಂಗಳವಾರ, 2-9-1997

• **ಚಿಂತಾಮಣಿ ಬಳಿ ಗುಂಪು ಘರ್ಷಣೆ: ಪೊಲೀಸರು ಸೇರಿ ನಾಲ್ವರ ಸಾವು**

ಚಿಂತಾಮಣಿ, ಸೆ. 1– ಇಲ್ಲಿಗೆ ಸಮೀಪದ ಆಂಧ್ರ ಗಡಿ ಭಾಗದ ಬಿಲ್ಲಾಂಡ್ಲಹಳ್ಳಿಯ ದಲಿತರು ಮತ್ತು ಸವರ್ಣೀಯರ ನಡುವೆ ನಡೆದ ಗುಂಪು ಘರ್ಷಣೆಯಲ್ಲಿ ಮೂವರು ಪೊಲೀಸರು ಹಾಗೂ ಒಬ್ಬ ನಾಗರಿಕ ಸೇರಿದಂತೆ ಒಟ್ಟು ನಾಲ್ಕು ಮಂದಿಯನ್ನು ಕಲ್ಲಿನಿಂದ ಹೊಡೆದು ಸಾಯಿಸಲಾಗಿದೆ.

ದಂಗೆಕೋರರ ಆಕ್ರಮಣಕ್ಕೆ ಸಿಕ್ಕಿ ಮೀಸಲು ಪಡೆಯ ಮುಖ್ಯ ಪೇದೆ ಅಬ್ದುಲ್ ಬಷೀರ್, ಪೇದೆ ನರಸಿಂಹಪ್ಪ, ಕಾನೂನು ಸುವ್ಯವಸ್ಥೆಯ ಪೊಲೀಸ್ ಪೇದೆ ಸುಧಾಕರ ಮತ್ತು ಓಬಳಾಪುರದ ಸುಧಾಕರ ರೆಡ್ಡಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಾಯಗೊಂಡ 16 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಹಿನ್ನೆಲೆ: ಬಿಲ್ಲಾಂಡ್ಲಹಳ್ಳಿಯಲ್ಲಿ ಚಿಂತಾಮಣಿ ತಾಲ್ಲೂಕು ದಲಿತ ಸಂಘರ್ಷ ಸಮಿತಿಯ ಕಲಾ ಮಂಡಳಿಯ ಶಾಖೆಯನ್ನು ಇಂದು ಆರಂಭಿಸುವ ಕಾರ್ಯಕ್ರಮ ಇತ್ತು. ಇದಕ್ಕೆ ಆ ಪ್ರದೇಶದ ಗ್ರಾಮಸ್ಥರು, ಬಿಲ್ಲಾಂಡ್ಲಹಳ್ಳಿಯ ಸವರ್ಣೀಯರು ವಿರೋಧ ವ್ಯಕ್ತಪಡಿಸಿ, ಚಿಂತಾಮಣಿ ವೃತ್ತನಿರೀಕ್ಷಕರಿಗೆ ಶನಿವಾರವೇ ದೂರು ನೀಡಿದ್ದರು ಎಂದು ತಿಳಿದುಬಂದಿದೆ.

ಪೊಲೀಸರು ದಲಿತ ಮುಖಂಡರನ್ನು ಕರೆಸಿ ಇಂದಿನ ಕಾರ್ಯಕ್ರಮ ರದ್ದುಪಡಿಸುವಂತೆ ಕೇಳಿದ್ದರು. ಅದಕ್ಕೆ ಒಪ್ಪದ ದಲಿತ ಮುಖಂಡರು 'ಸಂಘವನ್ನು ಸಂಘಟಿಸುವುದು ನಮ್ಮ ಜನತಾಂತ್ರಿಕ ಹಕ್ಕು' ಎಂದು ಪ್ರತಿಪಾದಿಸಿದ್ದರು. ಇದರಿಂದ ಗ್ರಾಮದಲ್ಲಿ ಎರಡೂ ಜನಾಂಗದ ನಡುವೆ ಗಲಭೆ ನಡೆಯುವುದೆಂದು ಶಂಕಿಸಿದ ಪೊಲೀಸರು ಸಿಬ್ಬಂದಿಯನ್ನು ಆ ಗ್ರಾಮಕ್ಕೆ ಕಳುಹಿಸಿದ್ದರು.

50 ವರ್ಷಗಳ ಹಿಂದೆ
ಶನಿವಾರ, 2-9-1972

• **ಕಾಂಗ್ರೆಸ್ 'ಶುದ್ಧೀಕರಣ' ಮುಂದುವರಿಸಲು ಕೆಂಗಲ್ ನಿರ್ಧಾರ**

ನವದೆಹಲಿ, ಸೆ. 1– ಕೇಂದ್ರದ ಮಾಜಿ ಸಚಿವ ಶ್ರೀ ಕೆ. ಹನುಮಂತಯ್ಯ ಅವರು ಇಂದು ಇಲ್ಲಿ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರನ್ನು ಭೇಟಿ ಮಾಡಿ ಅರ್ಧಗಂಟೆ ಕಾಲ ಮಾತುಕತೆ ನಡೆಸಿದರು. ತಮ್ಮ ಇತ್ತೀಚಿನ ವಿವಾದಾತ್ಮಕ ಹೇಳಿಕೆಗಳ ಬಗ್ಗೆ ಹನುಮಂತಯ್ಯನವರು ಇಂದಿರಾ ಅವರಿಗೆ ವಿವರಣೆ ನೀಡಿದರೆಂದು ತಿಳಿದುಬಂದಿದೆ.

ಸ್ಥಳೀಯ ಸಮಸ್ಯೆಯೊಂದು ಜಾಗತಿಕ ಸಮಸ್ಯೆಯಾಗಿ ಕಾಡಬಲ್ಲದು!

ರಷ್ಯಾ ಸೃಷ್ಟಿಸಿದ ಎರಡು ಬಿಕ್ಕಟ್ಟು

ವಿಶ್ಲೇಷಣೆ

ಟಿ.ಆರ್. ಅನಂತರಾಮು

ಜಾಗತೀಕರಣದಿಂದ ಅಂತರರಾಷ್ಟ್ರೀಯ ವಾಣಿಜ್ಯ ವ್ಯವಹಾರಗಳಿಗೆ ಬಲ ಬಂತು, ನಿಜ. ಆದರೆ ಅದರ ಕರಾಳ ಮುಖದ ದರ್ಶನವಾಗುವುದು ಯುದ್ಧದ ಸಮಯದಲ್ಲೇ. ಉಕ್ರೇನ್ ಮೇಲಿನ ರಷ್ಯಾದ ದಾಳಿ ಇನ್ನೂ ನಿಂತಿಲ್ಲ. ಯುದ್ಧ ಈಗಲೂ ಮುಂದುವರಿದಿದೆ. ರಷ್ಯಾದ ಸಂಪನ್ಮೂಲಗಳನ್ನು ಆಧರಿಸಿ ತಮ್ಮ ಆರ್ಥಿಕ ಮತ್ತು ಸಾಮಾಜಿಕ ಬದುಕು ಕಟ್ಟಲು ಹೊರಟ ದೇಶಗಳು, ವಿಶೇಷವಾಗಿ ಇಡೀ ಯುರೋಪು ಈಗ ಮೈ ಪರಚಿಕೊಳ್ಳುತ್ತಿವೆ. ಇದರಲ್ಲಿ ರಷ್ಯಾ ಸೃಷ್ಟಿಸಿರುವ ಎರಡು ಮಹಾ ಬಿಕ್ಕಟ್ಟುಗಳು ಎದ್ದುಕಾಣುತ್ತವೆ.

2011ರಲ್ಲೇ ನಾರ್ಡ್ ಸ್ಟ್ರೀಮ್-1 ಎಂಬ, 1,200 ಕಿಲೊಮೀಟರ್ ಉದ್ದದ ಅನಿಲ ಕೊಳಾಯಿ ಮಾರ್ಗವನ್ನು ರಷ್ಯಾ ನಿರ್ಮಿಸಿ ಪ್ರತಿದಿನ 1,700 ಲಕ್ಷ ಘನ ಮೀಟರು ಅನಿಲವನ್ನು ಈಶಾನ್ಯ ಜರ್ಮನಿಗೆ ಕಳಿಸುತ್ತಿತ್ತು. ಈ ಕೊಳವೆಯು ಬಾಲ್ಟಿಕ್ ಸಮುದ್ರದ ಕೆಳಗೇ ಸಾಗುತ್ತದೆ. ಇದನ್ನು ನಿರ್ಮಿಸುವುದು ಹಗ್ಗ ಎಳೆದಷ್ಟು ಸುಲಭವಲ್ಲ. ಜೊತೆಗೆ ಅದು ಹಾದುಹೋಗುವ ಆರ್ಥಿಕ ವಲಯಗಳ ಮೇಲೆ ಬೇರೆ ಬೇರೆ ದೇಶಗಳ ಹಿಡಿತವಿದೆ. ತೆರಿಗೆ ಕಟ್ಟಿದರಷ್ಟೇ ಅಲ್ಲಿ ಅನಿಲ ಹರಿಯುವುದು.

ರಷ್ಯಾವು ಉಕ್ರೇನಿನ ಮೇಲೆ ಯುದ್ಧ ಪ್ರಾರಂಭಿಸಿದಾಗ ಜರ್ಮನಿ ಇದನ್ನು ವಿರೋಧಿಸಿತು. ಪರಿಣಾಮ 'ಜರ್ಮನಿಯ ದನಿಯನ್ನು ಅಡಗಿಸುತ್ತೇವೆ' ಎಂದು ರಷ್ಯಾ ನೇರವಾಗಿ ಕೈಹಾಕಿದ್ದು ಅನಿಲ ಪೂರೈಕೆಯ ನಿಯಂತ್ರಣಕ್ಕೆ. ಶೇಕಡ 75 ಭಾಗ 'ಕಟ್' ಅಂದರೆ 40 ಕೋಟಿ ಘನ ಮೀಟರು ಅನಿಲದ ಹರಿವು ಸ್ಥಗಿತ. ನಿಜವಾದ ಅರ್ಥದಲ್ಲಿ ಜರ್ಮನಿಗೆ ಇದು 'ಗ್ಯಾಸ್ ಟ್ರಬಲ್'. ನಿಮಗೆ ನೆನಪಿರಬಹುದು, ಎರಡನೇ ಮಹಾಯುದ್ಧದಲ್ಲಿ ನಾಜಿಗಳು ಯಹೂದ್ಯರನ್ನು ಕೊಲ್ಲಲು ಗ್ಯಾಸ್ ಚೇಂಬರ್‌ಗೆ ತಳ್ಳುತ್ತಿದ್ದರು. ಈಗ ಅದು ಉಲ್ಟಾ. ಜರ್ಮನಿಯಲ್ಲಿ ಮನೆಯನ್ನು ಬೆಚ್ಚಗಿಡಲು, ಅಡುಗೆಗೆ, ಕೈಗಾರಿಕೆಗೆ ಗ್ಯಾಸ್ ಬೇಕು. ಹೆಚ್ಚಿನಪಾಲು ರಷ್ಯಾದ ಮೇಲೆ ಅವಲಂಬನೆ. ಇಂದಿನ ದಿನಗಳಲ್ಲಿ ಒಂದು ಶತ್ರು ರಾಷ್ಟ್ರವನ್ನು ಹೆಡಮುರಿಗೆ ಕಟ್ಟಬೇಕೆಂದರೆ ಬಾಂಬ್ ದಾಳಿ ಮಾಡಬೇಕಾಗಿಲ್ಲ, ಸಂಪನ್ಮೂಲ ಪೂರೈಕೆಯನ್ನು ಕಡಿತಗೊಳಿಸಿದರೆ ಆಯಿತು. ಜರ್ಮನಿ ಈಗ ವಸ್ತುಶಃ ತತ್ತರಿಸಿಹೋಗಿದೆ.

ಅನಿಲವನ್ನು ಹೇಗೆ ಯುದ್ಧಾಸ್ತ್ರ ಮಾಡಿಕೊಳ್ಳಬಹುದು ಎಂಬ ಗುಟ್ಟು ರಷ್ಯಾಕ್ಕೆ ಗೊತ್ತಿದೆ. ಕೊಳವೆ ಮಾರ್ಗದ ದುರಸ್ತಿಯ ನೆಪ ಒಡ್ಡಿ ಪೂರೈಕೆಯನ್ನು 200 ಲಕ್ಷ ಘನ ಮೀಟರಿಗೆ ಕಡಿತಗೊಳಿಸಿತು. ಇದೇ ಸಮಯದಲ್ಲಿ ಇಡೀ ಯುರೋಪಿಗೆ ಬಿಸಿ ತಾಗಿಸಲು ಅನಿಲದ ಬೆಲೆಯನ್ನು 450 ಪಟ್ಟು ಏರಿಸಿತು. ಇದೇ ಕೊಳವೆ ಮಾರ್ಗದಲ್ಲಿ ರಷ್ಯಾವು ಯುರೋಪಿನ ಹಲವು ದೇಶಗಳಿಗೆ ಅನಿಲ ಪೂರೈಸುತ್ತಿದೆ.

ರಷ್ಯಾದ ಅನಿಲದ ಮೇಲೆ ಬಹುವಾಗಿ ಅವಲಂಬಿಸಿದ್ದ ಜರ್ಮನಿ ಈಗ ನಾರ್ವೆ, ನೆದರ್‌ಲ್ಯಾಂಡ್ಸ್, ಕತಾರ್‌ಗಳತ್ತ ಮುಖಮಾಡಿದೆ. ಇಟಲಿ ಮತ್ತು ಸ್ಪೇನ್‌ಗಳು ಆಲ್ಜೀರಿಯದತ್ತ ಕೈಚಾಚಿವೆ. ತನ್ನ ಕಲ್ಲಿದ್ದಲು ಆಧಾರಿತ ಉಷ್ಣಸ್ಥಾವರಗಳನ್ನು ಹಂತಹಂತವಾಗಿ ಕಡಿಮೆಗೊಳಿಸಲು ಹೊರಟಿದ್ದ ಜರ್ಮನಿ ಈಗ ಮತ್ತೆ ಉಷ್ಣಸ್ಥಾವರಗಳ ಮೊರೆಹೋಗಿದೆ. ಐರೋಪ್ಯ ಒಕ್ಕೂಟ ಈಗ ಅನಿಲ ಬಳಕೆಯನ್ನು ಶೇ 15ರಷ್ಟು ಕಡಿಮೆಗೊಳಿಸಿ ಎಂದು ನಾಗರಿಕರಿಗೆ ಸೂಚಿಸಿದೆ. ರಷ್ಯಾದ ಶೇ 40ರಷ್ಟು ಅನಿಲಕ್ಕೆ ಯುರೋಪೇ ಗಿರಾಕಿ.

ರಷ್ಯಾವು ಜರ್ಮನಿಗೆ ಅನಿಲ ಪೂರೈಸಲೆಂದೇ ಇನ್ನೊಂದು ಕೊಳವೆ ಮಾರ್ಗ ನಿರ್ಮಿಸಿದೆ- ಇದರ ಹೆಸರು ನಾರ್ಡ್-2. ಇದಕ್ಕಾಗಿ ರಷ್ಯಾಕ್ಕೆ ಸುಮಾರು 950 ಕೋಟಿ ಯೂರೊ ಖರ್ಚಾಗಿದೆ. ಈ ಮಾರ್ಗ ರಷ್ಯಾ-ಜರ್ಮನಿ- ಡೆನ್ಮಾರ್ಕ್- ಫಿನ್ಲೆಂಡ್- ಸ್ವೀಡನ್ನಿಗೆ ಸೇರಿದ ಆರ್ಥಿಕ ವಲಯದ ಮೂಲಕ ಸಾಗುತ್ತದೆ. ಬೇಕೆಂದೇ ಬೆಲಾರಸ್, ಉಕ್ರೇನ್, ಸ್ಲೋವಾಕಿಯ, ಜೆಕ್ ಮತ್ತು ಪೋಲೆಂಡ್‌ಗಳನ್ನು ತಪ್ಪಿಸಿ ಅವುಗಳಿಗೆ ಬರಬೇಕಾದ ಕರ ನಷ್ಟ ಮಾಡಿದೆ ಎಂಬ ಆರೋಪವೂ ರಷ್ಯಾದ ಮೇಲಿದೆ. ವರ್ಷಕ್ಕೆ 550 ಕೋಟಿ ಘನ ಮೀಟರು ಅನಿಲ ಹರಿದು ಯುರೋಪಿನ 2,600 ಲಕ್ಷ ಅಡುಗೆ ಮನೆಗಳಿಗೆ ಸರಬರಾಜಾಗಬೇಕಾಗಿತ್ತು. ಸದ್ಯಕ್ಕೆ ಜರ್ಮನಿ ಈ ಯೋಜನೆಗೆ ಹಸಿರು ನಿಶಾನೆ ತೋರಿಸುತ್ತಿಲ್ಲ. ಬಿಕ್ಕಟ್ಟು ಹೆಚ್ಚುತ್ತಿದೆ. ಅಮೆರಿಕ ಮತ್ತು ಯುನೈಟೆಡ್ ಕಿಂಗ್‌ಡಂ, ಈ ಯೋಜನೆಯಿಂದ ರಷ್ಯಾದ ಮೇಲಿನ ಅವಲಂಬನೆ ಹೆಚ್ಚಾಗುತ್ತದೆಂಬ ಅಸಮಾಧಾನ ತೋಡಿಕೊಂಡಿವೆ. ಮಾರ್ಗ ಸಿದ್ಧವಾಗಿದ್ದರೂ, ಅನಿಲ ಹರಿಯಲು ಎಡರು ತೊಡರುಗಳಿವೆ– 25 ವರ್ಷಗಳ ಕಾಲ ಅನಿಲ ಪೂರೈಸುವ ಕರಾರಿಗೆ ರಷ್ಯಾ ಮತ್ತು ಜರ್ಮನಿ ಎರಡೂ ದೇಶಗಳು ಸಹಿ ಹಾಕಿವೆ.

ಇದು ಹೇಗೂ ಇರಲಿ, ಯುರೋಪನ್ನು ಮಾತ್ರ ಬಾಧಿಸುವ ಸಮಸ್ಯೆ ಇದು. ಆದರೆ ಜಗತ್ತು ಬೆಚ್ಚಿ ಬೀಳುತ್ತಿರುವುದು ಪರಮಾಣು ಸ್ಥಾವರಗಳ ಮೇಲೆ ಈ ದಾಳಿ ಬೀರುವ ಪರಿಣಾಮಗಳ ಬಗ್ಗೆ. ಕಳೆದ ಮಾರ್ಚ್ ತಿಂಗಳಲ್ಲೇ ಚೆರ್ನೋಬಿಲ್ ಪರಮಾಣು ಸ್ಥಾವರದ ಬಳಿಯ ಅಧಿಕ ವೋಲ್ಟೇಜ್ ವಿದ್ಯುತ್ ತಂತಿಗಳು ರಷ್ಯಾದ ದಾಳಿಯಿಂದ ಜಖಂಗೊಂಡಿದ್ದವು. ಅದನ್ನು ದುರಸ್ತಿ ಮಾಡಿದ ಮೇಲೆ ಸಮಸ್ಯೆ ಮುಗಿಯಬೇಕಾಗಿತ್ತು. 1986ರಲ್ಲಿ, ರಷ್ಯಾದ ಸುಪರ್ದಿಯಲ್ಲಿದ್ದ ಚೆರ್ನೋಬಿಲ್ ಪರಮಾಣು ಸ್ಥಾವರ ಸೋರಿ ವಿಕಿರಣ ಉತ್ತರ ಧ್ರುವದವರೆಗೆ ಹರಡಿತ್ತು. ಈಗ ಅಂತಹುದೇ ಭೀತಿ ಇಡೀ ಯುರೋಪಿನಲ್ಲಿ ಅತಿದೊಡ್ಡ ಪರಮಾಣು ಸ್ಥಾವರ ಎನಿಸಿರುವ ಝಪೊರಿಜಿಯಾ ಬಳಿ ಸ್ಥಾಪಿಸಿರುವ ಸ್ಥಾವರಕ್ಕೂ ಎದುರಾಗಿದೆ. ಇದನ್ನೂ ರಷ್ಯಾವೇ ಸ್ಥಾಪಿಸಿತ್ತು. ಆದರೆ ಈಗ ಉಕ್ರೇನ್‌ನ ಆಡಳಿತಕ್ಕೆ ಬಂದಿದೆ. ವಾರ್ಷಿಕ 29.3 ಗಿಗಾ ವ್ಯಾಟ್ ವಿದ್ಯುತ್ ಉತ್ಪಾದಿಸಬಲ್ಲ ಸಾಮರ್ಥ್ಯ ಇದಕ್ಕಿದೆ.

ಈ ಆಗಸ್ಟ್ ತಿಂಗಳ ಕೊನೆಯ ಭಾಗದಲ್ಲಿ ರಷ್ಯಾವು ಷೆಲ್‌ಗಳಿಂದ ಈ ಪ್ರದೇಶದ ಮೇಲೆ ದಾಳಿ ಮಾಡಿದೆ. ಇದು ಉಕ್ರೇನ್‌ನ ಕರಾಮತ್ತು ಎಂದು ರಷ್ಯಾ ಉಲ್ಟಾ ಹೊಡೆಯುತ್ತಿದೆ. ಆದರೆ ಜಗತ್ತು ಈ ಕುರಿತು ಭಯವನ್ನು ವ್ಯಕ್ತಪಡಿಸುತ್ತಿದೆ. ಏಕೆಂದರೆ ಪರಮಾಣು ಸ್ಥಾವರಕ್ಕೂ ಝಪೊರಿಜಿಯಾ ನಗರಕ್ಕೂ ಇರುವ ಅಂತರ 40 ಕಿಲೊಮೀಟರು ಮಾತ್ರ. ಅಂದರೆ, ಷೆಲ್ ದಾಳಿಯಿಂದ ಒಂದುವೇಳೆ ಪರಮಾಣು ಸ್ಥಾವರಕ್ಕೆ ಧಕ್ಕೆಯಾದರೆ ವಿಕಿರಣ ಮೊದಲು ತಟ್ಟುವುದೇ ಸುಮಾರು ಏಳೂವರೆ ಲಕ್ಷ ನಾಗರಿಕರಿರುವ ಈ ನಗರಕ್ಕೆ. ಹೀಗಾಗಿ ಅಂತರರಾಷ್ಟ್ರೀಯ ಪರಮಾಣು ಶಕ್ತಿ ಕೂಟ (ಐ.ಎ.ಇ.ಎ) ತ್ವರಿತವಾಗಿ ತಜ್ಞರನ್ನು ಈ ನಗರಕ್ಕೆ ಕಳಿಸುತ್ತಿದೆ.

ಈಗಾಗಲೇ ನಾಗರಿಕರು ನಗರ ತೊರೆದು ಗುಳೆ ಹೊರಡುತ್ತಿದ್ದಾರೆ. ತಜ್ಞರು ಅಯೋಡಿನ್ ಮಾತ್ರೆಗಳನ್ನು ಹೊತ್ತು ಹೋಗುತ್ತಿದ್ದಾರೆ. ಇದು ವಿಕಿರಣವನ್ನು ಹೇಗೆ ತಡೆಯುತ್ತದೆ? ಆದರೆ ಈ ಮಾತ್ರೆಗಳನ್ನು ಸೇವಿಸಿದಾಗ ಥೈರಾಯಿಡ್ ಗ್ರಂಥಿಗಳಲ್ಲಿ ಪೊಟಾಷಿಯಂ ಅಯೋಡೈಡ್ ಸಂಚಯನವಾಗುತ್ತದೆ. ಪರಮಾಣು ಸ್ಥಾವರಗಳಿಂದ ಬಿಡುಗಡೆಯಾಗುವ ವಿಕಿರಣಯುಕ್ತ ಅಯೋಡಿನ್ ಗಂಟಲು ಸೇರಿದಾಗ ಥೈರಾಯಿಡ್ ಗ್ರಂಥಿಗಳಲ್ಲಿ ಅವಕ್ಕೆ ಜಾಗವಿರುವುದಿಲ್ಲ- ಒಂದರ್ಥದಲ್ಲಿ 'ಹೌಸ್ ಫುಲ್'. ಈಗಾಗಲೇ 1986ರಲ್ಲಾದ ಚೆರ್ನೋಬಿಲ್ ಪರಮಾಣು ಸ್ಥಾವರ ದುರಂತದಿಂದ ಬೆಲಾರಸ್, ಉಕ್ರೇನ್ ಮತ್ತು ರಷ್ಯಾದಲ್ಲಿ ಮಕ್ಕಳು ಥೈರಾಯಿಡ್ ಗ್ರಂಥಿಯ ಕ್ಯಾನ್ಸರ್‌ಗೆ ದೊಡ್ಡ ಪ್ರಮಾಣದಲ್ಲಿ ಬಲಿಯಾಗಿರುವುದು ಅಧ್ಯಯನದಿಂದ ತಿಳಿದಿದೆ.

ಈ ಪರಿಹಾರ ಏನೇ ಇರಲಿ, ಪರಮಾಣು ಸ್ಥಾವರಗಳಿಂದ ಹಿಂದೆ ಆಗಿರುವ ಆಘಾತಗಳನ್ನು ಜಗತ್ತು ಸುಲಭವಾಗಿ ಮರೆಯುವುದಿಲ್ಲ. ಆ ಭಯ ಎಂದೂ ಇದ್ದದ್ದೇ. ಮೇಲಾಗಿ, ಜಗತ್ತಿನ ಶಕ್ತಿ ಬೇಡಿಕೆಯಲ್ಲಿ ಪರಮಾಣು ಸ್ಥಾವರಗಳ ಕೊಡುಗೆ ಶೇ 10ರಷ್ಟು ಮಾತ್ರ! ಇಷ್ಟೊಂದು ರಿಸ್ಕ್ ಬೇಕೆ ಎಂಬ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕಬೇಕಿದೆ.

ಇದಕ್ಕೆ ಕಾರಣವೂ ಇಲ್ಲದಿಲ್ಲ. ರಷ್ಯಾದ ಚೆರ್ನೋಬಿಲ್ ದುರಂತ, ಅಮೆರಿಕದ ತ್ರೀಮೈಲ್ ಐಲೆಂಡ್ ದುರಂತ, ಜಪಾನಿನಲ್ಲಾದ ಫುಕುಶಿಮಾ ಪರಮಾಣು ಸ್ಥಾವರ ದುರಂತ ಒಂದೊಂದೂ ಮನುಷ್ಯನ ಅಸಡ್ಡೆಯ ಕಾರಣವಾಗಿಯೋ ಅಜಾಗರೂಕತೆಯ ಕಾರಣವಾಗಿಯೋ ಘಟಿಸಿರುವುದು ಸುಸ್ಪಷ್ಟ. ಇಂಥ ಸಂದರ್ಭದಲ್ಲಿ ರಷ್ಯಾ ಮತ್ತು ಉಕ್ರೇನ್ ನಡುವೆ ಸಿಕ್ಕಿಹಾಕಿಕೊಂಡಿರುವ ಝಪೊರಿಜಿಯಾ ಪರಮಾಣು ಸ್ಥಾವರ ಎಷ್ಟು ಸುರಕ್ಷಿತ ಎಂದು ಯೋಚಿಸುವಂತೆ ಮಾಡಿದೆ. ಸ್ಥಳೀಯ ಸಮಸ್ಯೆಯು ಜಾಗತಿಕ ಸಮಸ್ಯೆಯಾಗಿ ಕಾಡಬಲ್ಲದು.

ಚುರುಮುರಿ

ಸಮುದ್ರ ಕೊರೆತ!

• ತುರುವೇಕೆರೆ ಪ್ರಸಾದ್

'ಸಮುದ್ರದ ನಂಟಸ್ತನ, ಹೆಣ್ಣಿಗೆ ಬಡತನ' ಪೇಪರ್ ಹಿಡಿದು ಗೊಣಗಿದ ಪರ್ಮೇಶಿ.

'ಏನಾಯ್ತೀ?' ಕೇಳಿದ್ರು ಪದ್ದಮ್ಮ.

'ಒಡಿಶಾದಲ್ಲಿ ಸಮುದ್ರದ ಉಬ್ಬರಕ್ಕೆ ಹೆದರಿ ಒಂದು ಊರಿನ ಯುವಕರಿಗೆ ಹೆಣ್ಣೇ ಕೊಡ್ತಿಲ್ಲವಂತೆ'.

'ಹೇಗ್ರೀ ಕೊಡ್ತಾರೆ? ಸಮುದ್ರದ ಅಬ್ಬರಕ್ಕೆ ಮನೇನೂ ಕೊಚ್ಕೊಂಡ್ ಹೋದ್ರೆ ಆ ಹೆಣ್ಣು ಮಕ್ಕಳ ಗತಿ ಏನು?'

'ಸಮುದ್ರದ ಮಧ್ಯನೇ ಇರೋರಿಗೆ ಈಜಿ ಅಭ್ಯಾಸ ಇರುತ್ತೆ, ಸಂಸಾರ ಸಾಗರನ ಸುಲಭವಾಗಿ ಈಜ್ತಾರೆ. ಸಮಸ್ಯೆ ಇರೋದಿಲ್ಲ'.

'ಇವರು ಸಮುದ್ರಜೀವಿಗಳು, ಉಪ್ಪುನೀರಿಗೆ ಹೆಂಡ್ತಿ ಅನ್ನೋ ಚಿನ್ನ ಬಣ್ಣ ಕಳ್ಕೊಳಲ್ವಾ?'

'ಅದಕ್ಕೇನು? ಅವಾಗವಾಗ ಪಾಲಿಶ್ ಮಾಡಿದ್ರಾಯ್ತು. ಅವರು ದುಡ್ಡು, ಕಾಸು ಇಟ್ಕೊಂಡು ಅನುಕೂಲವಾಗೇ ಇದಾರೆ. ಸಮುದ್ರದಿಂದ ಮುತ್ತು, ಹವಳ ಹೊತ್ತು ತಂದು ಹೆಂಡ್ತಿ ಅನ್ನೋ ಚಿನ್ನಕ್ಕೆ ಪೋಣಿಸ್ತಾರಲ್ಲ, ಇನ್ನೇನು?'

'ಸಮುದ್ರದ ಆರ್ಭಟಕ್ಕೆ ಒಗ್ಗಿ ಹೋಗಿರೋರು ಹೆಂಡ್ತಿ ಆರ್ಭಟಕ್ಕೆ ಸೊಪ್ಪು ಹಾಕ್ತಾರಾ?'

'ಸೊಪ್ಪು ಹಾಕದಿದ್ರೆ ಏನಂತೆ? ಸಂಸಾರದ ದೋಣಿಗೆ ಹುಟ್ಟಂತೂ ಹಾಕ್ತಾರೆ'.

'ಅಲೆಗಳ ಮೊರೆತ ಕೇಳಿ ಕಿವಿ ತೂತಾಗಿರುತ್ತೆ. ಹೆಂಡತಿಯರ ಬೇಕು ಬೇಡ ಇವರ ಕಿವಿಗೆ ಬೀಳುತ್ತಾ?'

'ಕಿವಿ ಹಿಂಡಿ, ತಲೆ ಕೆಡಿಸೋ ಮಾತು ಕೇಳದಿದ್ರೆ ಯಾವ ನಷ್ಟನೂ ಇಲ್ಲ ಬಿಡು'.

'ಅದ್ರೂ ಹೆಣ್ಣುಮಕ್ಕಳ ಕಣ್ಣೀರಿಗೆ ಬೆಲೆನೇ ಇರಲ್ಲ. ಎಷ್ಟು ಟಿಎಂಸಿ ಅಡಿ ಕಣ್ಣೀರು ಹಾಕುದ್ರೂ ಸಮುದ್ರದ ನೆರೆ ಅಂತ ಸುಮ್ಮನಾಗಿ ಬಿಡ್ತಾರೆ'.

'ಆದರೂ ಬಂದರು ಇಲ್ಲ, ಲಂಗರು ಹಾಕೋ ಗೋಜಿಲ್ಲ, ಗಂಡಂದಿರು ಕಂಟ್ರೋಲಲ್ಲಿ ಇರ್ತಾರೆ'.

'ಹೌದು, ಅವರು ದುಡ್ಡು ಕಾಸು ಇಟ್ಕೊಂಡು ಚೆನ್ನಾಗಿದಾರಲ್ಲ, ಎಲ್ಲಿಂದ ಬಂತು ಅಷ್ಟೊಂದು ದುಡ್ಡು?'

'ದೋಣಿ ವ್ಯಾಪಾರದಿಂದ! ಸಮುದ್ರದ ಆರ್ಭಟದ ಊರಲ್ಲಿ ಹುಡುಗೀರೇ ಸಿಗಲ್ಲ ಅಂದ್ರೆ ಹುಡುಗರು ಮಾಡೋ ಮೊದಲ ಕೆಲಸ ಯಾವುದು? ಹುಡುಗೀರನ್ನ ಹುಡುಕೋಕೆ ದೋಣಿ ಕಟ್ಟೋದು ತಾನೆ? ಅದನ್ನೇ ಬಿಜಿನೆಸ್ ಮಾಡ್ಕೊಂಡಿದಾರೆ' ಪರ್ಮೇಶಿ ಹುಬ್ಬು ಹಾರಿಸಿ ನಕ್ಕ. ಪದ್ದಮ್ಮ ಅವಾಕ್ಕಾದರು.

ಸಂಗತ

ಮಳೆ ಅವಾಂತರದಲ್ಲಿ ಮಾಯಾನಗರಿ

ಕೆರೆಗಳನ್ನು ಮುಚ್ಚಿ, ರಾಜಕಾಲುವೆಗಳನ್ನು ಬಂದ್ ಮಾಡಿದರೆ ಏನಾಗುತ್ತದೆ ಎಂಬುದು ಈಗ ಬೆಂಗಳೂರಿಗರಿಗೆ ಅರ್ಥವಾಗಿದೆ. ಆದರೆ ಪ್ರಯೋಜನವೇನು?

• ಡಾ. ಎಂ.ವೆಂಕಟಸ್ವಾಮಿ

ಈ ವರ್ಷ ಮುಂಗಾರು ಮಳೆ ಅರ್ಧ ದಾರಿ ಕ್ರಮಿಸಿರುವಾಗಲೇ ರಾಜ್ಯದ ಎಲ್ಲಾ ನದಿಗಳು ಉಕ್ಕಿ ಹರಿದು, ಅಣೆಕಟ್ಟೆಗಳು ತುಂಬಿ ಹರಿದು, ಕೆರೆ ಕೋಡಿಗಳು ಹರಿದುಹೋದವು. ಇನ್ನು ಮಳೆಗಾಲ ಮುಗಿಯುವವರೆಗೂ ಬೀಳುವ ಮಳೆಯೆಲ್ಲ ಸಮುದ್ರಪಾಲಾಗಲಿದೆ. ಜೊತೆಗೆ ಫಲವತ್ತಾದ ಮಣ್ಣು ಕೂಡ ಕೊಚ್ಚಿ ಹೋಗುತ್ತಿದೆ.

ಮಳೆಗಾಲ ಎಂದರೆ ಹಿಂದಿನ ದಿನಗಳಲ್ಲಿ ಅದಕ್ಕೊಂದು ನಿಗದಿತ ಋತುಮಾನ ಇತ್ತು. ಈಗ ಅದೆಲ್ಲ ಯಾವ ವಿಜ್ಞಾನಿಯ ಲೆಕ್ಕಕ್ಕೂ ಸಿಗದಾಗಿದೆ. ಇದು ಬರೀ ಮುಂಗಾರು ಮಳೆಯೇ ಅಥವಾ ಇನ್ನೇನಾದರೂ ನಿಸರ್ಗದ ಅನಾಹುತಗಳು ಇದರ ಜೊತೆಗೆ ಸೇರಿಕೊಂಡಿವೆಯೇ ಎನ್ನುವ ಅನುಮಾನಗಳು ಎಲ್ಲರನ್ನೂ ಕಾಡತೊಡಗಿವೆ. ಹವಾಮಾನ ತಜ್ಞರು ಕಣ್ಣುಬಿಟ್ಟುಕೊಂಡು ನೋಡುವ ಪರಿಸ್ಥಿತಿ ಉಂಟಾಗಿದೆ. ಎಲ್ಲರೂ ಹೇಳುವ ಒಂದೇ ಒಂದು ಕಾರಣವೆಂದರೆ, ಜಾಗತಿಕ ತಾಪಮಾನ ಏರಿಕೆ. ಇದರ ಬಗ್ಗೆ ಹೇಳಿ ಹೇಳಿ, ಜನರು ಕೇಳಿ ಕೇಳಿ ಸಾಕಾಗಿದ್ದಾರೆ.

ಭೂಮಿ ಸೃಷ್ಟಿಯಾದಾಗಿನಿಂದ ನಿಸರ್ಗ ತನ್ನದೇ ಆದ ಒಂದು ವಿಧಾನವನ್ನು ರೂಪಿಸಿಕೊಳ್ಳುತ್ತಾ ಬಂದಿದೆ. ಎಷ್ಟು ಮಳೆ ಬೀಳುತ್ತದೆಯೋ ಆ ಮಳೆ ನೀರನ್ನು ಮುಂದಕ್ಕೆ ಹರಿಸಬೇಕಾದರೆ ಜಲಾನಯನ, ಹಳ್ಳಕೊಳ್ಳ, ಝರಿ, ನದಿಗಳನ್ನು ತಾನೇ ಸೃಷ್ಟಿಸಿಕೊಂಡು ಹರಿಯಬಿಡುತ್ತದೆ. ಜೊತೆಗೆ ಹರಿವ ದಾರಿಯಲ್ಲಿ ಸಸ್ಯಶ್ಯಾಮಲೆಯನ್ನು ಸೃಷ್ಟಿಸಿ, ನೀರನ್ನು ಎಷ್ಟುಬೇಕೋ ಅಷ್ಟು ನೆಲದ ಮೇಲೆ ಉಳಿಸಿಕೊಂಡು, ಉಳಿದದ್ದನ್ನು ನೆಲಕ್ಕೆ ಇಂಗಿಸಿ, ಫಲವತ್ತಾದ ಮಣ್ಣನ್ನು ಉಳಿಸಿಕೊಂಡು, ಯಾವುದೂ ಮಿತಿಮೀರದಂತೆ ನೋಡಿಕೊಂಡು ಹೆಚ್ಚಿನ ನೀರನ್ನು ನದಿಗಳ ಮೂಲಕ ಸಮುದ್ರಕ್ಕೆ ತಲುಪಿಸುತ್ತಿತ್ತು. ಆದರೆ ಮನುಷ್ಯನ ಅವೈಜ್ಞಾನಿಕ ಚಟುವಟಿಕೆಗಳು ನಿಸರ್ಗ ಕಟ್ಟಿಕೊಂಡು ಬಂದಿದ್ದ ಲಕ್ಷಾಂತರ ವರ್ಷಗಳ ಇಂತಹ ವಿಧಾನವನ್ನು ಕೆಲವೇ ಶತಮಾನಗಳಲ್ಲಿ ಛಿದ್ರಛಿದ್ರವಾಗಿಸಿಬಿಟ್ಟವು.

ಇನ್ನು ಬೆಂಗಳೂರಿನ ವಿಷಯಕ್ಕೆ ಬಂದರೆ, ಯಾವಾಗ ಬಿಡಿಎ ಎಂಬ ಸಂಸ್ಥೆ ಹುಟ್ಟಿಕೊಂಡಿತೋ ಅಲ್ಲಿಂದಲೇ ಬೆಂಗಳೂರಿಗೆ ಗಂಡಾಂತರ ಪ್ರಾರಂಭವಾಯಿತು. ಇಂದಿನ ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣ, ರೈಲು ನಿಲ್ದಾಣ ಒಂದು ಕಾಲದಲ್ಲಿ ಕೆರೆಗಳಾಗಿದ್ದವು. ಬೆಂಗಳೂರಿನ ನೂರಾರು ಬಡಾವಣೆಗಳು, ಸರ್ಕಾರಿ ಕಚೇರಿಗಳು, ಮಾಲ್‌ಗಳು, ಐಟಿ-ಬಿಟಿ ಕಂಪನಿಗಳಲ್ಲಿ ಹೆಚ್ಚಿನವು ಕೆರೆಗಳು ಮತ್ತು ಕೆಳಮಟ್ಟದ ಪ್ರದೇಶಗಳಿದ್ದ ಸ್ಥಳಗಳೇ ಆಗಿವೆ. ಸಾವಿರಾರು ರಸ್ತೆಗಳು ಹಾಗೂ ನೂರಾರು ಸೇತುವೆಗಳನ್ನು ಅವೈಜ್ಞಾನಿಕವಾಗಿ ನಿರ್ಮಿಸಲಾಯಿತು. ಸುತ್ತಮುತ್ತಲಿನ ನೂರಾರು ಹಳ್ಳಿಗಳನ್ನು ಸೇರಿಸಿಕೊಂಡು ಬೃಹತ್ ಬೆಂಗಳೂರು ಮಹಾನಗರಪಾಲಿಕೆಯನ್ನು (ಬಿಬಿಎಂಪಿ) ಸ್ಥಾಪಿಸಿ ಬೆಂಗಳೂರಿಗೆ ತಲೆಬುಡ ಇಲ್ಲದಂತೆ ಮಾಡಲಾಯಿತು. ರಾಜಕಾರಣಿಗಳು- ಅಧಿಕಾರಿಗಳು ಎಲ್ಲವನ್ನೂ ತಮ್ಮ ಭ್ರಷ್ಟತೆಯ ತೆಕ್ಕೆಗೆ ತೆಗೆದುಕೊಂಡಿದ್ದರಿಂದ ಬೆಂಗಳೂರಿನ ಪರಿಸ್ಥಿತಿ ಆಯೋಮಯವಾಗತೊಡಗಿತು. ಎಲ್ಲೆಂದರಲ್ಲಿ ಯಾವುದೇ ಮುಂದಾಲೋಚನೆ ಇಲ್ಲದೆ ಬಡಾವಣೆಗಳು ಹುಟ್ಟಿಕೊಂಡವು.

16ನೇ ಶತಮಾನದಲ್ಲಿ ಕೆಂಪೇಗೌಡರು, ನಂತರ ಮೈಸೂರು ಮಹಾರಾಜರು ಮತ್ತು ಬ್ರಿಟಿಷರ ಕಾಲದಲ್ಲಿ ಕೆರೆಗಳನ್ನು ನಿರ್ಮಾಣ ಮಾಡಲಾಯಿತು. 1895ರವರೆಗೆ, ಬೆಳೆಯುತ್ತಿದ್ದ ಬೆಂಗಳೂರಿಗೆ ಸ್ಯಾಂಕಿ ಕೆರೆ, ಧರ್ಮಾಂಬುಧಿ (ಮೆಜೆಸ್ಟಿಕ್ ಪ್ರದೇಶ), ಮಿಲ್ಲರ್ಸ್, ಹಲಸೂರು, ಹೆಸರಘಟ್ಟ ಮತ್ತು ಇತರ ಕೆರೆಗಳಿಂದ ನೀರನ್ನು ಫಿಲ್ಟರ್ ಮಾಡದೆ ನೇರವಾಗಿ ಕುಡಿಯಲು ಸರಬರಾಜು ಮಾಡಲಾಗುತ್ತಿತ್ತು. ಕೆರೆ, ಸರೋವರಗಳ ನೀರನ್ನು ಕುಡಿಯುವುದಕ್ಕಾಗಿ ಮತ್ತು ಕೃಷಿ, ಮೀನುಗಾರಿಕೆಗೆ ಬಳಸಿಕೊಳ್ಳಲಾಗುತ್ತಿತ್ತು.

ಒಂದು ಕಾಲದಲ್ಲಿ ಒಟ್ಟು 920 ಕೆರೆ, ಸರೋವರಗಳಿದ್ದು ಕಾಲಾನಂತರದಲ್ಲಿ ಅವುಗಳ ಸಂಖ್ಯೆ ಕ್ಷೀಣಿಸುತ್ತಾ ಹೋಗಿ 1940-50ರ ದಶಕದಲ್ಲಿ 280 ಕೆರೆಗಳು ಮಾತ್ರ ಉಳಿದುಕೊಂಡಿದ್ದವು. 1995ರಲ್ಲಿ ಬೆಂಗಳೂರಿನ ಹೃದಯಭಾಗದಲ್ಲಿದ್ದ 51 ಮುಖ್ಯ ಕೆರೆಗಳಲ್ಲಿ ಈಗ 17 ಕೆರೆಗಳು ಮಾತ್ರ ಉಳಿದುಕೊಂಡಿವೆ ಎನ್ನಲಾಗಿದೆ. ಬಿಡಿಎ 28 ಕೆರೆಗಳನ್ನು ಮುಚ್ಚಿ ಬಡಾವಣೆಗಳನ್ನಾಗಿ ಪರಿವರ್ತಿಸಿಬಿಟ್ಟಿತು. ಉಳಿದಂತೆ, ತೆರೆದ ಚರಂಡಿಗಳು ಮತ್ತು ಅಳಿದುಳಿದ ರಾಜಕಾಲುವೆಗಳ ಮೂಲಕ ಮಹಾನಗರ ಸೃಷ್ಟಿಸುವ ತ್ಯಾಜ್ಯ ಹಾಗೂ ಕಾರ್ಖಾನೆಗಳು ಕಕ್ಕುವ ವಿಷಯುಕ್ತ ರಾಸಾಯನಿಕಗಳು ಈ ಕೆರೆಗಳನ್ನು ತುಂಬುತ್ತಿವೆ. ಬೆಂಗಳೂರು ನಗರದಲ್ಲಿರುವ ಕೆರೆಗಳು ಹೊತ್ತಿ ಉರಿಯುವುದನ್ನು ಆಗಾಗ ನೋಡಬಹುದು.

ಕೆರೆಗಳನ್ನು ಮುಚ್ಚಿ, ರಾಜಕಾಲುವೆಗಳನ್ನು ಬಂದ್ ಮಾಡಿದರೆ ಏನಾಗುತ್ತದೆ ಎಂಬುದು ಈಗ ಬೆಂಗಳೂರಿಗರಿಗೆ ಅರ್ಥವಾಗಿದೆ. ಆದರೆ ಪ್ರಯೋಜನವೇನೂ ಇಲ್ಲ. ಯಾಕೆಂದರೆ ಎಲ್ಲವೂ ಕೈಮೀರಿ ಹೋಗಿದೆ. ಅಳಿದುಳಿದ ಕೆರೆಗಳ ಅಂಚುಗಳಲ್ಲಿ ಮತ್ತು ಕೆರೆಗಳು ಕೋಡಿ ಹರಿಯುವ ಕೆಳಹಂತಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರುವ ಜನರು ಒಂದೋ ಆ ಸ್ಥಳಗಳನ್ನು ಬಿಟ್ಟು ಪಲಾಯನ ಮಾಡಬೇಕಿದೆ, ಇಲ್ಲವೇ ಪದೇಪದೇ ಇಂತಹ ಪರಿಸ್ಥಿತಿಗೆ ತಮ್ಮನ್ನು ತಾವು ಒಡ್ಡಿಕೊಂಡು ನರಳಾಡಬೇಕಾಗುತ್ತದೆ.

ಜಗತ್ತಿನಲ್ಲಿ ಸಾವಿರಾರು ನಗರ ಮತ್ತು ಮಹಾನಗರಗಳನ್ನು ರೂಪಿಸಲಾಗಿದೆ. ಆದರೆ ನಮ್ಮ ದೇಶದಲ್ಲಿ ಕಟ್ಟಿರುವ ನಗರಗಳು ನೈಸರ್ಗಿಕ ಅನಾಹುತಗಳಿಗೆ ಸಿಲುಕಿಕೊಳ್ಳುತ್ತಲೇ ಇರುತ್ತವೆ. ಅವು ಮುಂದಿನ ದಿನಗಳಲ್ಲಿ ಇನ್ನಷ್ಟು, ಮತ್ತಷ್ಟು ತೀವ್ರ ಸ್ವರೂಪದ ಅನಾಹುತಗಳಿಗೆ ಒಡ್ಡಿಕೊಳ್ಳುತ್ತವೆ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಮನುಷ್ಯನ ದುರಾಸೆ ಮತ್ತು ಭ್ರಷ್ಟತೆ ಮಿತಿಮೀರಿಹೋಗಿ ಅವೈಜ್ಞಾನಿಕವಾಗಿ ಯೋಜನೆಗಳನ್ನು ರೂಪಿಸುತ್ತಿರುವುದೇ ಇದಕ್ಕೆಲ್ಲ ಕಾರಣವಾಗಿದೆ. ಇದೀಗ ನಿಸರ್ಗದ ಸರದಿ. ಅದು ಈಗ ಮನುಷ್ಯನ ವಿರುದ್ಧ ತಿರುಗಿಬಿದ್ದಿದೆ.

ವಾಚಕರ ವಾಣಿ

'ಆಪರೇಷನ್ ಅಧಿಕಾರಿ'!

ಹೂವಿನಹಡಗಲಿ ತಾಲ್ಲೂಕು ಪಂಚಾಯಿತಿಗೆ ಕಾರ್ಯನಿರ್ವಾಹಕ ಅಧಿಕಾರಿಯನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವ ಸುದ್ದಿ ಓದಿ ಆಘಾತವಾಯಿತು.

ಈ ನಡೆಯು ಆಡಳಿತ ವರ್ಗಕ್ಕೆ ಶೋಭೆ ತರುವಂತಹದ್ದಲ್ಲ. ಮುಂದಿನ ದಿನಗಳಲ್ಲಿ ಆಡಳಿತ ನಡೆಸುವ ಪಕ್ಷದ ಕಾರ್ಯಕರ್ತರಿಗೆ ಇಲಾಖೆಯ ಮುಖ್ಯಸ್ಥರ ಹುದ್ದೆಯನ್ನು ಗುತ್ತಿಗೆ ಮೂಲಕ ನೀಡಿದರೂ ಆಶ್ಚರ್ಯವಿಲ್ಲ. ಶಾಸಕರನ್ನು ಖರೀದಿಸಿ 'ಆಪರೇಷನ್ ಕಮಲ'ದಿಂದ ಸರ್ಕಾರ ರಚಿಸಿದ್ದು ಹಳೆ ಸುದ್ದಿಯಾಗಿತ್ತು, ಈಗ ಸ್ವಹಿತಾಸಕ್ತಿಗಾಗಿ 'ಆಪರೇಷನ್ ಅಧಿಕಾರಿ' ಕೆಲಸ ನಡೆಯುತ್ತಿದೆ. ಭ್ರಷ್ಟಾಚಾರಕ್ಕೆ ಇನ್ನೂ ಎಷ್ಟು ಮುಖಗಳಿವೆಯೋ ಆ ದೇವರಿಗೇ ಗೊತ್ತು!

ತಾ.ಸಿ.ತಿಮ್ಮಯ್ಯ, ಬೆಂಗಳೂರು

ವಿದ್ಯಾರ್ಥಿಗಳ ರಂಪಾಟ ತರವೇ?

ಕಡಿಮೆ ಅಂಕ ನೀಡಿದ್ದಾರೆಂಬ ಕಾರಣಕ್ಕೆ ಶಿಕ್ಷಕರು ಮತ್ತು ಗುಮಾಸ್ತರನ್ನು 9ನೇ ತರಗತಿಯ ವಿದ್ಯಾರ್ಥಿಗಳು ಮರಕ್ಕೆ ಕಟ್ಟಿಹಾಕಿ ಹಲ್ಲೆ ನಡೆಸಿರುವ ಕೃತ್ಯ ಜಾರ್ಖಂಡ್‌ನಲ್ಲಿ ನಡೆದಿರುವುದು ವರದಿಯಾಗಿದೆ (ಪ್ರ.ವಾ., ಆ. 31). ಮಕ್ಕಳ ಕಳ್ಳರನ್ನೋ ಕೋಳಿ-ಕುರಿ ಕಳ್ಳರನ್ನೋ ಸರಗಳ್ಳರನ್ನೋ ಸಾರ್ವಜನಿಕರು ಹೀಗೆ ಥಳಿಸುವುದನ್ನು ಮಾಧ್ಯಮಗಳಲ್ಲಿ ನೋಡಿದ್ದೇವೆ. ಅದು ಕೂಡ ತಪ್ಪು. ಆದರೆ ಪ್ರಸ್ತುತ ಘಟನೆಯನ್ನು ತಿಳಿದಾಗ 'ಹೀಗೂ ಉಂಟೇ?' ಎನಿಸದಿರದು. ವಿದ್ಯಾರ್ಥಿಗಳನ್ನು ಈ ಮಟ್ಟಕ್ಕೆ ತಿದ್ದಿ, ತೀಡಿ ಬೆಳೆಸಿದ ಶಿಕ್ಷಕರನ್ನೂ ಗಣನೆಗೆ ತೆಗೆದುಕೊಳ್ಳಲೇಬೇಕು.

ಸದ್ದಿಲ್ಲದೆ ನಕಲಿ ಅಂಕಪಟ್ಟಿಗಳನ್ನೋ ಪದವಿ ಪ್ರಮಾಣಪತ್ರಗಳನ್ನೋ ಡಾಕ್ಟರೇಟ್ ಪದವಿಗಳನ್ನೋ ಪಡೆಯುವ ಸುಲಭೋಪಾಯ ಇರುವಾಗ, ವಿದ್ಯಾರ್ಥಿಗಳು ಇಂಥ ರಂಪಾಟ ಮಾಡಿ, ತಾವು ಇನ್ನೂ ಎಳಸು, ಅಡ್ಡಕಸುಬಿಗಳು ಎಂಬುದನ್ನು ಸಾಬೀತುಪಡಿಸಿದರು. ಸಾಲದೆಂಬಂತೆ, ವ್ಯಾಪ್ತಿ ಪ್ರದೇಶದಿಂದ ಹೊರಗಿರುವ ಗುಮಾಸ್ತರಿಗೂ ಒದ್ದು ಸದ್ದು ಮಾಡುವ ಅಗತ್ಯವಾದರೂ ಏನಿತ್ತು? ಈ ಬಡಪಾಯಿ ಗುಮಾಸ್ತರಿಗೆ, ಶಿಕ್ಷಕರಿಗೆ ಇರುವಂತೆ ಆ ವಿದ್ಯಾರ್ಥಿಗಳಿಗೆ ಚೆನ್ನಾಗಿ ತದುಕಿ ಮುಯ್ಯಿ ತೀರಿಸಿಕೊಳ್ಳುವ ಅವಕಾಶವೂ ಇಲ್ಲ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಮೈಸೂರು

ಹಾಲಿನ ದರ ಏರಿಕೆ: ವಿತಂಡವಾದ

ನಂದಿನಿ ಹಾಲಿನ ದರವನ್ನು ಲೀಟರ್‌ಗೆ ₹ 3 ಹೆಚ್ಚಳ ಮಾಡುವಂತೆ ಕರ್ನಾಟಕ ಹಾಲು ಮಹಾಮಂಡಳಿಯು (ಕೆಎಂಎಫ್) ಸರ್ಕಾರಕ್ಕೆ ಮನವಿ ಮಾಡಿರುವುದಾಗಿ ವರದಿಯಾಗಿದೆ. ಅದಕ್ಕೆ ವ್ಯವಸ್ಥಾಪಕ ನಿರ್ದೇಶಕರು ಕೊಟ್ಟಿರುವ ಕಾರಣ, ಖಾಸಗಿಯವರು ಮಾರಾಟ ಮಾಡುವ ಲೀಟರ್ ಹಾಲಿನ ದರ 40ಕ್ಕೂ ಹೆಚ್ಚು ಹಾಗೂ ಏರಿಕೆ ದರದ ಮೊತ್ತವನ್ನು ರೈತರಿಗೆ ವರ್ಗಾಯಿಸಲಾಗುವುದು ಎನ್ನುವುದು! ಇದೊಂದು ಹಾಸ್ಯಾಸ್ಪದವಾದ ಹೇಳಿಕೆಯಾಗಿದೆ. ಈಗಾಗಲೇ ನಂದಿನಿಯವರು ಹಾಲನ್ನು ಲೀಟರ್‌ಗೆ ₹ 37ರಿಂದ ₹ 44ರವರೆಗೂ ಮಾರಾಟ ಮಾಡುತ್ತಿದ್ದಾರೆ. ಜೊತೆಗೆ ಹಾಲಿನ ಉತ್ಪನ್ನಗಳಾದ ತುಪ್ಪ, ಬೆಣ್ಣೆ, ಚೀಸ್ ಮುಂತಾದವುಗಳ ಬೆಲೆ ಸರ್ಕಾರದ ನಿಯಂತ್ರಣವಿಲ್ಲದೆ ಏರಿಕೆಯಾಗುತ್ತಿದೆ.

ಕೆಎಂಎಫ್ ಕಡಿಮೆ ದರಕ್ಕೆ ಹಾಲು ಮಾರಿದರೆ ಗ್ರಾಹಕರು ನಂದಿನಿ ಹಾಲನ್ನು ಬಿಟ್ಟು ಖಾಸಗಿ ಹಾಲನ್ನೇ ಏಕೆ ಕೊಳ್ಳುತ್ತಾರೆ? ಇವರ ಉತ್ಪನ್ನದ ಗುಣಮಟ್ಟದಲ್ಲಿ ಏನಾದರೂ ಸಮಸ್ಯೆ ಇದೆಯೇ? ಖಾಸಗಿ ಹಾಲು ದುಬಾರಿಯಾದರೂ ಜನ ಅದನ್ನೇ ಕೊಳ್ಳುವುದೇಕೆ? ನಂದಿನಿ ಹಾಲು ಹೆಚ್ಚು ಮಾರಾಟವಾದರೆ, ಈಗ ಉಳಿಯುತ್ತಿರುವ ಲಕ್ಷಾಂತರ ಲೀಟರ್ ಹಾಲನ್ನು ಪುಡಿ ಮಾಡುವ ಖರ್ಚು ಉಳಿಯುವುದಿಲ್ಲವೇ?

ವಾಸ್ತವ ಹೀಗಿರುವಾಗ ಹಾಲಿನ ದರ ಏರಿಕೆ ಮಾತೇಕೆ? ಇನ್ನು ಖಾಸಗಿಯವರು ಏರಿಸಿದ್ದಾರೆ ಎಂದು ಇವರು ಬೆಲೆ ಏರಿಸುವುದು, ಕೆಎಂಎಫ್ ಏರಿಸಿದೆ ಎಂದು ಖಾಸಗಿಯವರು ಬೆಲೆ ಏರಿಸುವುದು. ಇದೊಂದು ಪರಸ್ಪರ ಅಲಿಖಿತ ಒಪ್ಪಂದದಂತಿದೆ. ಉತ್ಪನ್ನದ ಬೆಲೆ ಎಷ್ಟು ಹಾಗೂ ಜಿಎಸ್‌ಟಿ ಎಷ್ಟು ಎನ್ನುವುದನ್ನು ಪ್ರತ್ಯೇಕವಾಗಿ ತೋರಿಸಿ ಮುದ್ರಿಸುವಂತೆ ಸರ್ಕಾರ ಸೂಚನೆ ನೀಡಬೇಕು.

ಮುಳ್ಳೂರು ಪ್ರಕಾಶ್, ಮೈಸೂರು

ಸಮಯಸಾಧಕತನದ ನಡೆ

ತಮ್ಮನ್ನು ಟೀಕಿಸಿದ್ದಕ್ಕೆ ಪ್ರತಿಕ್ರಿಯೆಯಾಗಿ ಸಚಿವ ಸೋಮಣ್ಣನವರು ಸಿದ್ದರಾಮಯ್ಯನವರ ಬೇನಾಮಿ ಆಸ್ತಿ ಹಾಗೂ 'ರೀ ಡೂ' ವ್ಯವಹಾರಗಳ ಬಗೆಗೆ ಪ್ರತ್ಯಾರೋಪ ಮಾಡಿದ್ದಾರೆ (ಪ್ರ.ವಾ., ಆ. 29). ಗೊತ್ತಿದೆ, ಕಾಲ ಬಂದಾಗ ಬಿಚ್ಚುತ್ತೇನೆ- ಎನ್ನುವುದು ಸಮಯಸಾಧಕತನ. ಚುನಾವಣಾ ಪ್ರಚಾರ ಆರಂಭವಾದಾಗ ಸಕಾಲವೇ ಸ್ವಾಮಿ? ಮೈಸೂರಿನ, ಬಾದಾಮಿಯ ಹಾಗೂ ಸಿದ್ದರಾಮಯ್ಯನವರು ಸ್ಪರ್ಧಿಸಲಿರುವ ವಿಧಾನಸಭಾ ಕ್ಷೇತ್ರದ ಮತದಾರರಿಗೆ ಇದು ಆಸಕ್ತಿಯ ವಿಷಯ. ಈಗಲೇ ಬಹಿರಂಗಪಡಿಸಬಾರದೇಕೆ? ಬೇನಾಮಿ ಆಸ್ತಿಗಳ ಬಗೆಗೆ ಪೂರ್ವಾನ್ವಯ ಕ್ರಮ ಕೈಗೊಳ್ಳಲಾಗದು ಎಂಬ ನ್ಯಾಯಾಲಯದ ಇತ್ತೀಚಿನ ತೀರ್ಪು ಇಬ್ಬರಿಗೂ ಗೊತ್ತಿರುತ್ತದೆ.

ಲೋಕಾಯುಕ್ತಕ್ಕೆ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಳ್ಳುವ ಅಧಿಕಾರವನ್ನು ಇನ್ನೂ ಕೊಟ್ಟಿಲ್ಲ. ಜನಪ್ರತಿನಿಧಿಗಳ ಬಗೆಗಿನ ದೂರುಗಳಿಗಾಗಿ ಇರುವ ವಿಶೇಷ ನ್ಯಾಯಾಲಯದಲ್ಲೂ ಅಹವಾಲು ಸಲ್ಲಿಸಿದಾಗ ಪ್ರಕ್ರಿಯೆ ಆರಂಭವಾಗುವುದು ಸ್ವಾಭಾವಿಕ. ಈ ಹಿನ್ನೆಲೆಯಲ್ಲಿ ಸೋಮಣ್ಣನವರು ಅಗತ್ಯ ಅಫಿಡವಿಟ್ ಜತೆಗೆ ದೂರು ದಾಖಲಿಸಿದರೆ ಮೇಲಿನ ಆರೋಪಗಳನ್ನು ಗಂಭೀರವಾಗಿ ಮಾಡಿದ್ದಾರೆ ಎಂದು ಪರಿಗಣಿಸಬಹುದು. ಹಿಂದೊಮ್ಮೆ ನಾಯಕರಿಬ್ಬರು ಧರ್ಮಸ್ಥಳದಲ್ಲಿ ಆಣೆ, ಪ್ರಮಾಣದ ಸವಾಲು ಹಾಕಿದ್ದು ನೆನಪಿಗೆ ಬರುತ್ತಿದೆ. ತಾವು ನಡೆದುಕೊಳ್ಳುವ ಮಠಕ್ಕೆ ಬಂದು ತಮ್ಮ ನಿರಪರಾಧಿತ್ವ ಸಾಬೀತು ಮಾಡಲಿ ಎಂಬ ಸವಾಲನ್ನು ಸೋಮಣ್ಣನವರು ಹಾಕುವುದಿಲ್ಲ ಎಂದು ಆಶಿಸೋಣ. ವಸತಿ ನೀಡಿಕೆ ವಿವಾದದ ಬಗೆಗೆ ಒಂದು ಪ್ರಕ್ರಿಯೆ (ವಿಶೇಷ ಕಾರ್ಯಪಡೆ) ಆರಂಭವಾದಂತೆ ಈ ಹೊಸ ಆರೋಪದ ಬಗೆಗೂ ಕಾರ್ಯಾಚರಣೆ ಆಗುವುದು ಸೋಮಣ್ಣನವರಿಗೆ ಬೇಕಿಲ್ಲವೇ?

ಎಚ್. ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತೋಪು ಸಿನಿಮಾ ಬಸವಳಿದ ಬಾಲಿವುಡ್

ಬಾಲಿವುಡ್ ಮುರಿದು ಬಿದ್ದಿದೆ ಮತ್ತು ಅದಕ್ಕೆ ಬಾಲಿವುಡ್ಡೇ ಹೊಣೆ – ಹಿಂದಿ ಸಿನಿಮಾ ರಂಗದ ಪ್ರಮುಖ ತಾರೆಗಳಲ್ಲಿ ಒಬ್ಬರಾದ ಅಕ್ಷಯ ಕುಮಾರ್ ಅವರ ವಿಶ್ಲೇಷಣೆ ಇದು. ಒಂದು ಕಾಲದಲ್ಲಿ ತನ್ನ ವಿಸ್ಮಯಗೊಳಿಸುವ ಹಾಡುಗಳು, ಬೆರಗುಗೊಳಿಸುವ ಡಾನ್ಸ್‌ನಿಂದ ಭಾರತವನ್ನಷ್ಟೇ ಅಲ್ಲದೆ ಜಗತ್ತನ್ನೇ ಮಂತ್ರಮುಗ್ಧಗೊಳಿಸುತ್ತಿದ್ದ ಬಾಲಿವುಡ್ ಈಗ ಕಳೆಗುಂದಿದೆ.

'ಸಿನಿಮಾಗಳನ್ನು ಜನರು ನೋಡುತ್ತಿಲ್ಲ. ಇದು ನಮ್ಮದೇ ತಪ್ಪು, ನನ್ನದೇ ತಪ್ಪು'–ತಮ್ಮ ಇತ್ತೀಚಿನ ಸಿನಿಮಾ ರಕ್ಷಾಬಂಧನ್ ಬಾಕ್ಸ್ ಆಫೀಸ್‌ನಲ್ಲಿ ಮುಗ್ಗರಿಸಿದ ಬಳಿಕ ಅಕ್ಷಯ ಕುಮಾರ್ ನೀಡಿದ ಪ್ರತಿಕ್ರಿಯೆ ಇದು. 'ನಾನು ಬದಲಾಗಬೇಕು. ಪ್ರೇಕ್ಷಕರಿಗೆ ಏನು ಬೇಕಾಗಿದೆ ಎಂಬುದರ ಅರ್ಥ ಮಾಡಿಕೊಳ್ಳಬೇಕು. ನಾನು ಯಾವ ರೀತಿಯ ಸಿನಿಮಾಗಳನ್ನು ಮಾಡಬೇಕು ಎಂದು ಯೋಚಿಸುತ್ತಿದ್ದೇನೆಯೋ ಆ ಯೋಚನಾ ಕ್ರಮವನ್ನೇ ಬದಲಾಯಿಸಬೇಕು' ಎಂದು ಅಕ್ಷಯ್ ಹೇಳಿದ್ದಾರೆ.

ಹೌದು, ಕಾಲ ಬದಲಾಗಿದೆ. ಆಧುನಿಕ ಭಾರತದ ಪ್ರಮುಖ ಆಕರ್ಷಣೆಯಾಗಿದ್ದ ಬಾಲಿವುಡ್‌ನ ಮೋಹಕತೆ ಮಸುಕಾಗಿದೆ.

ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್ ವಿಡಿಯೊದಂತಹ ಒಟಿಟಿ ಸೇವೆಗಳ ಜನಪ್ರಿಯತೆ ದಿನದಿನಕ್ಕೆ ಹೆಚ್ಚುತ್ತಿದೆ. ಕೋವಿಡ್ ಸಾಂಕ್ರಾಮಿಕವು ಜನರು ಸಿನಿಮಾಮಂದಿರಕ್ಕೆ ಹೋಗುವುದನ್ನೇ ನಿಲ್ಲಿಸುವಂತೆ ಮಾಡಿತು. ಎರಡೂ ಜತೆಯಾಗಿ ಬಾಲಿವುಡ್‌ನ ವಿರುದ್ಧ ಷಡ್ಯಂತ್ರ ಹೂಡಿತೇನೋ ಎಂಬ ರೀತಿಯಲ್ಲಿ ಈ ಎರಡೂ ಕಾರಣಗಳಿಂದಾಗಿ ಬಾಲಿವುಡ್ ಮುದುಡಿ ಬೀಳುವಂತಾಯಿತು. ಯುವ ತಲೆಮಾರು ಬಾಲಿವುಡ್ ಸಿನಿಮಾ ಬಗ್ಗೆ ತಲೆಯೇ ಕೆಡಿಸಿಕೊಳ್ಳದ ಸ್ಥಿತಿ ಇದೆ. ಹಿಂದಿ ಸಿನಿಮಾಗಳು ಈ ಕಾಲಕ್ಕೆ ತಕ್ಕಂತೆ ಇಲ್ಲ, ಆಕರ್ಷಣೆಯನ್ನೂ ಹೊಂದಿಲ್ಲ ಎಂದು ಭಾವಿಸುವವರ ಸಂಖ್ಯೆಯೇ ಬಹಳಷ್ಟಿದೆ. ಅದರ ಜತೆಗೆ, ದಕ್ಷಿಣ ಭಾರತೀಯ ಚಿತ್ರರಂಗದ ಸಿನಿಮಾಗಳು ತಮ್ಮ ಹೊಸತನದಿಂದಾಗಿ ಜಗತ್ತಿನಾದ್ಯಂತ ಗಮನ ಸೆಳೆಯುತ್ತಿವೆ. ಒಟಿಟಿಯಿಂದಾಗಿ ಇವುಗಳ ಲಭ್ಯತೆ ಈಗ ವ್ಯಾಪಕವಾಗಿದೆ. ದಕ್ಷಿಣದ ಗಟ್ಟಿ ಸಿನಿಮಾಗಳ ಮುಂದೆ ಬಾಲಿವುಡ್ ತಿಣುಕಾಡುವಂತಾಗಿದೆ.

ಈ ವರ್ಷ ಬಾಲಿವುಡ್‌ನಲ್ಲಿ ಬಿಡುಗಡೆಯಾದ 26 ಸಿನಿಮಾಗಳ ಪೈಕಿ 20 ಸಿನಿಮಾಗಳ ಬಗ್ಗೆ ಜನರು ಕ್ಯಾರೇ ಅಂದಿಲ್ಲ. ಅಂದರೆ ಶೇ 77ರಷ್ಟು ಸಿನಿಮಾಗಳು ತೋಪೆದ್ದು ಹೋಗಿವೆ. ಬಾಲಿವುಡ್‌ನ ದತ್ತಾಂಶಗಳ ಮೇಲೆ ನಿಗಾ ಇರಿಸುವ ಕೊಯಿಮೊಯಿ ವೆಬ್‌ಸೈಟ್ ಪ್ರಕಾರ, ಈ ಎಲ್ಲ ಸಿನಿಮಾಗಳು ಹಾಕಿದ ದುಡ್ಡಿನ ಅರ್ಧದಷ್ಟು ಅಥವಾ ಅದಕ್ಕಿಂತಲೂ ಹೆಚ್ಚಿನ ನಷ್ಟ ಮಾಡಿವೆ. ಸಾಂಕ್ರಾಮಿಕ ಬರುವುದಕ್ಕೂ ಹಿಂದೆ ಅಂದರೆ 2019ರಲ್ಲಿ ತೋಪು ಸಿನಿಮಾಗಳ ಪ್ರಮಾಣವು ಶೇ 39ರಷ್ಟು ಇತ್ತು. ಹಾಗಾಗಿ, ಬಾಲಿವುಡ್‌ನ ವೈಫಲ್ಯಕ್ಕೆ ಕೋವಿಡ್ ಕೂಡ ಒಂದು ಕಾರಣ ಎಂಬುದು ನಿಜವಲ್ಲ.

ಯುವ ಜನರು ಒಟಿಟಿಗಳತ್ತ ವಾಲಿದ್ದಾರೆ. ಅವರಿಂದಾಗಿ ಕುಟುಂಬದ ಎಲ್ಲರೂ ಮನರಂಜನೆಗಾಗಿ ಒಟಿಟಿಯನ್ನು ಆಶ್ರಯಿಸತೊಡಗಿದ್ದಾರೆ. ನೆಟ್‌ಫ್ಲಿಕ್ಸ್ ಮತ್ತು ಅಮೆಜಾನ್ ಪ್ರೈಮ್‌ನಲ್ಲಿ ಅಮೆರಿಕ ಮತ್ತು ಯುರೋಪ್‌ನ ಸಿನಿಮಾಗಳು, ಕಾರ್ಯಕ್ರಮಗಳು ಲಭ್ಯ ಇವೆ. ಭಾರತದ ಮತ್ತು ಏಷ್ಯಾದ ಇತರ ದೇಶಗಳ ವಿಡಿಯೊಗಳನ್ನೂ ಅಲ್ಲಿ ನೋಡಬಹುದು. ಭಾರತದ 140 ಕೋಟಿ ಜನರ ಪೈಕಿ ಕಾಲುಭಾಗದಷ್ಟು (ಸುಮಾರು 35 ಕೋಟಿ) ಜನರು ಒಟಿಟಿಯಲ್ಲಿ ವಿಡಿಯೊಗಳನ್ನು ನೋಡುತ್ತಿದ್ದಾರೆ. 2019ರಲ್ಲಿ ಈ ಪ್ರಮಾಣ ಶೇ 12ರಷ್ಟಿತ್ತು ಎಂಬುದು ಸ್ಟ್ಯಾಟಿಸ್ಟಾ ದತ್ತಾಂಶ ಸಂಸ್ಥೆ ನೀಡುವ ಮಾಹಿತಿ. 2027ರ ಹೊತ್ತಿಗೆ ಈ ಪ್ರಮಾಣ ಶೇ 31ಕ್ಕೆ ಏರಲಿದೆ ಎಂಬುದು ಅಂದಾಜು. ಒಟಿಟಿಗಳ ಬೆಳವಣಿಗೆಗೆ ಇಲ್ಲಿ ಇರುವ ಅವಕಾಶ ವಿಪುಲ. ಏಕೆಂದರೆ, ಉತ್ತರ ಅಮೆರಿಕದಲ್ಲಿ ಒಟಿಟಿ ವೀಕ್ಷಕರ ಪ್ರಮಾಣ ಶೇ 80ರಷ್ಟಿದೆ.

ಸಮಸ್ಯೆ ಏನು?

ಸಿನಿಮಾಗಳ ಗಳಿಕೆಯು 2019ರ ವರೆಗೆ ಏರುಗತಿಯಲ್ಲಿಯೇ ಇತ್ತು. ಅದು ಸುಮಾರು ₹16 ಸಾವಿರ ಕೋಟಿಯವರೆಗೆ ತಲುಪಿತ್ತು. ಸಾಂಕ್ರಾಮಿಕದ ಬಳಿಕ ಅದು ಇಳಿಕೆಯ ಹಾದಿ ಹಿಡಿದಿದೆ. ಪುಟಿದೇಳುವ ಯಾವ ಲಕ್ಷಣವೂ ಈಗ ಕಾಣಿಸುತ್ತಿಲ್ಲ. ಈ ವರ್ಷ ಮಾರ್ಚ್ ಬಳಿಕ ಟಿಕೆಟ್ ಮಾರಾಟದಲ್ಲಿ ಇಳಿಕೆಯಾಗಿದೆ.

ಗಳಿಕೆ: ದಕ್ಷಿಣದ ಮುಂದೆ ಪೇಲವ



ಈ ವರ್ಷದ ಆರಂಭದಿಂದ ದೇಶದಾದ್ಯಂತ ಬಿಡುಗಡೆಯಾದ ಸಿನಿಮಾಗಳಲ್ಲಿ ಕೆಲವಷ್ಟೇ ದೊಡ್ಡ ಪ್ರಮಾಣದಲ್ಲಿ ಹಣ ಗಳಿಸಿವೆ. ಹೀಗೆ ಭಾರತದೊಳಗೆ ಹೆಚ್ಚು ಹಣ ಗಳಿಸಿದ ಮೊದಲ ಹತ್ತು ಸಿನಿಮಾಗಳಲ್ಲಿ ಬಾಲಿವುಡ್‌ನ ಮೂರು ಸಿನಿಮಾಗಳಷ್ಟೇ ಸ್ಥಾನ ಪಡೆದಿವೆ. ಚಿತ್ರಮಂದಿರಕ್ಕೆ ಬಂದು ಜನರು ವೀಕ್ಷಿಸಿದ ಬಾಲಿವುಡ್ ಸಿನಿಮಾಗಳೆಲ್ಲವೂ ಭಿನ್ನ ಕಥಾ ಹಂದರದವು ಎಂಬುದು ಗಮನಾರ್ಹ. ಹೆಚ್ಚು ಹಣಗಳಿಸಿದ ಬೇರೆಲ್ಲಾ ಸಿನಿಮಾಗಳು ದಕ್ಷಿಣ ಭಾರತದವು.

ರಾಜಕೀಯ ವಾಗ್ವಾದಕ್ಕೆ ಕಾರಣವಾಗಿದ್ದ 'ದಿ ಕಾಶ್ಮೀರ್ ಫೈಲ್ಸ್' ಸಿನಿಮಾವು ದೇಶದಾದ್ಯಂತ ಚಿತ್ರಮಂದಿರಗಳಲ್ಲಿ ₹291 ಕೋಟಿ ಗಳಿಸಿದೆ. ಕಾಶ್ಮೀರಿ ಪಂಡಿತರ ಹತ್ಯಾಕಾಂಡ ಕುರಿತ ಸಿನಿಮಾವು ಬಾಲಿವುಡ್‌ನ ಎಂದಿನ ಸಿನಿಮಾಗಳಿಗಿಂತ ಭಿನ್ನ ಕಥೆಯನ್ನು ಹೊಂದಿತ್ತು. ಹೀಗಾಗಿ ಈ ಸಿನಿಮಾ ನೋಡಲು ಜನರು ಚಿತ್ರಮಂದಿರಗಳತ್ತ ಬಂದರು. ಹಲವು ರಾಜ್ಯಗಳಲ್ಲಿ ರಾಜ್ಯ ಸರ್ಕಾರಗಳು ಈ ಸಿನಿಮಾಗೆ ತೆರಿಗೆ ವಿನಾಯಿತಿಯನ್ನು ನೀಡಿದವು. ದೇಶದ ಉನ್ನತ ನಾಯಕರು ಈ ಸಿನಿಮಾವನ್ನು ನೋಡುವಂತೆ ಕರೆ ನೀಡಿದರು. ಇವೆಲ್ಲವೂ ಸಿನಿಮಾವನ್ನು ನೋಡಲು ಜನರನ್ನು ಪ್ರೇರೇಪಿಸಿದವು.

ಗಂಗೂಬಾಯಿ ಕಾಠಿಯಾವಾಡಿ ಸಹ ಬಾಲಿವುಡ್‌ನ ಸಾಮಾನ್ಯ ಸಿನಿಮಾಗಳಿಗಿಂತ ಭಿನ್ನವಾದ ಕಥೆಯನ್ನು ಹೊಂದಿತ್ತು. ವೇಶ್ಯೆಯೊಬ್ಬಳು ನಾಯಕಿಯಾಗಿ ಬೆಳೆಯುವ ನಿಜವಾದ ಕಥೆಯನ್ನು ಕಟ್ಟಿಕೊಟ್ಟ ಈ ಸಿನಿಮಾವು ಹೆಚ್ಚು ಸುದ್ದಿ ಮಾಡುವುದರ ಜತೆಗೆ, ಉಳಿದ ಬಾಲಿವುಡ್ ಸಿನಿಮಾಗಳಿಗಿಂತ ಹೆಚ್ಚು ಹಣ ಗಳಿಸಿತು.

ಸಾಮಾನ್ಯ ಕಥಾಹಂದರವಿದ್ದೂ, ಹೆಚ್ಚು ಲಾಭಗಳಿಸಿದ ಏಕೈಕ ಬಾಲಿವುಡ್ ಸಿನಿಮಾ ಅಂದರೆ, ಅದು ಭೂಲ್ ಭುಲಯ್ಯಾ-2. ಬಾಲಿವುಡ್ ಬ್ಲಾಕ್‌ಬಸ್ಟರ್ ಆಗಿದ್ದ ಭೂಲ್ ಭುಲಯ್ಯಾ ಸಿನಿಮಾದ ಎರಡನೇ ಭಾಗವಾದ ಇದು, ಹೆಚ್ಚು ಚಿತ್ರಮಂದಿರಗಳಲ್ಲಿ ತೆರೆಕಂಡಿತ್ತು. ಹೀಗಾಗಿ ಉತ್ತಮ ಗಳಿಕೆ ಸಾಧ್ಯವಾಗಿತ್ತು. ಉಳಿದಂತೆ ಈಚೆಗಷ್ಟೇ ಬಿಡುಗಡೆಯಾಗಿರುವ ಲಾಲ್ ಸಿಂಗ್ ಛಡ್ಡಾ, ರಕ್ಷಾ ಬಂಧನ ಇನ್ನೂ ಚಿತ್ರಮಂದಿರಗಳಲ್ಲಿ ಇವೆ. ಆದರೆ ಇವು ಉತ್ತಮ ಗಳಿಕೆಯ ಚಿತ್ರಗಳಾಗುತ್ತವೆ ಎಂಬ ನಿರೀಕ್ಷೆ ಇಲ್ಲ.

ಕೆಜಿಎಫ್-2, ಪುಷ್ಪ, ವಿಕ್ರಂ, ಬೀಸ್ಟ್ ಮೊದಲಾದ ಸಿನಿಮಾಗಳನ್ನು ಬಹುಭಾಷಾ ಸಿನಿಮಾಗಳಾಗಿ ನಿರ್ಮಿಸಲಾಗಿತ್ತು. ತೆಲುಗು, ತಮಿಳು, ಕನ್ನಡ, ಮಲಯಾಳ ಮತ್ತು ಹಿಂದಿಯಲ್ಲಿ ಈ ಚಿತ್ರಗಳನ್ನು ನಿರ್ಮಿಸಲಾಗಿತ್ತು. ಇದರಿಂದಾಗಿ ಈ ಸಿನಿಮಾಗಳು 'ಪ್ಯಾನ್ ಇಂಡಿಯಾ ಮೂವಿ'ಯ ಪಟ್ಟ ಗಳಿಸಿದವು. ಈ ಚಿತ್ರಗಳ ಟ್ರೇಲರ್‌ಗಳನ್ನೂ ಎಲ್ಲಾ ಭಾಷೆಗಳಲ್ಲೂ ಬಿಡುಗಡೆ ಮಾಡಲಾಗಿತ್ತು. ಹೀಗಾಗಿ ಈ ಚಿತ್ರಗಳು ಬಿಡುಗಡೆಗೂ ಮುನ್ನವೇ ಎಲ್ಲಾ ಭಾಷಿಕ ಪ್ರದೇಶದಲ್ಲಿ ಭಾರಿ ನಿರೀಕ್ಷೆ ಮೂಡಿಸಿದ್ದವು. ಬಿಡುಗಡೆಯಾದ ನಂತರ ಜನರು ದೊಡ್ಡಸಂಖ್ಯೆಯಲ್ಲಿ ಚಿತ್ರಮಂದಿರಗಳಿಗೆ ಬಂದು ಇವುಗಳನ್ನು ನೋಡಿದರು. ಇವು ಮಾಸ್ ಸಿನಿಮಾಗಳಾಗಿದ್ದರೂ ಭಿನ್ನ ಕಥಾಹಂದರ, ಆಡುಭಾಷೆಗೆ ತೀರಾ ಹತ್ತಿರವಾದ ಸಂಭಾಷಣೆ, ಉತ್ತಮ ನಿರ್ಮಾಣ, ಬಹುಭಾಷಾ ತಾರಾ ನಟರು ಇತ್ಯಾದಿ ಅಂಶಗಳು ಈ ಸಿನಿಮಾಗಳ ಸಾಧ್ಯತೆಗಳನ್ನು ಹೆಚ್ಚಿಸಿದ್ದವು. ದಕ್ಷಿಣ ಭಾರತದ ಸಿನಿಮಾ ನಿರ್ಮಾಪಕರ ಈ ತಂತ್ರವು ಸದ್ಯದ ಮಟ್ಟಿಗೆ ಯಶಸ್ವಿಯಾಗಿದೆ.

* ಈ ಚಿತ್ರಗಳ ಹಣಗಳಿಕೆಯ ದತ್ತಾಂಶವು ಐಎಂಬಿಡಿ ಮತ್ತು ಇಂಟರ್‌ನ್ಯಾಷನಲ್ ಬ್ಯುಸಿನೆಸ್ ಟೈಮ್ಸ್‌ನ ವರದಿಗಳನ್ನು ಆಧರಿಸಿದೆ

ಕೋವಿಡ್‌ಗಿಂತ ಹಿಂದಿನ ಅವಧಿಗೆ ಹೋಲಿಸಿದರೆ, ಈ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಗಳಿಕೆಯು ಶೇ 45ರಷ್ಟು ಕಡಿಮೆಯಾಗಬಹುದು ಎಂದು ಅಂದಾಜಿಸಲಾಗಿದೆ ಎಂದು ಹೂಡಿಕೆ ಸಂಸ್ಥೆ ಎಲಾರ ಕ್ಯಾಪಿಟಲ್ ಹೇಳಿದೆ.

ಏನು ಕೊಟ್ಟರೂ ಜನರು ನೋಡುತ್ತಾರೆ ಎಂಬ ಭಾವನೆಯನ್ನು ಬಾಲಿವುಡ್ ಮುಂದುವರಿಸಿಕೊಂಡು ಹೋಗಲು ಆಗದು ಎಂಬುದು ರಾಯಿಟರ್ಸ್ ಸುದ್ದಿ ಸಂಸ್ಥೆಯು ಸಂದರ್ಶನ ನಡೆಸಿದ ನಿರ್ಮಾಪಕರು, ವಿತರಕರು ಮತ್ತು ಸಿನಿಮಾಪ್ರಿಯರ ಅಭಿಪ್ರಾಯ. ಸಾಂಕ್ರಾಮಿಕಕ್ಕೆ ಮುಂಚೆ ಬಿಡುಗಡೆ ಆಗಬೇಕಿದ್ದ ಹಲವು ಸಿನಿಮಾಗಳ ಬಿಡುಗಡೆ ಸಾಧ್ಯವಾಗಲಿಲ್ಲ. ಸಾಂಕ್ರಾಮಿಕ, ಲಾಕ್‌ಡೌನ್, ಸಿನಿಮಾ ಮಂದಿರ ಬಂದ್ ಇದ್ದ ಅವಧಿಯಲ್ಲಿ ಪ್ರೇಕ್ಷಕರು ಒಟಿಟಿಯತ್ತ ಹೋದರು. ಹೀಗಾಗಿ, ಬಾಲಿವುಡ್‌ನಲ್ಲಿ ಚಿಂತೆ ಮತ್ತು ಗೊಂದಲ ಇದೆ ಎಂದು ಬಾಲಿವುಡ್‌ನ ನಾಲ್ವರು ಪ್ರಮುಖರು ಹೇಳಿದ್ದಾರೆ.

ಚಿತ್ರಕತೆಗಳ ಕುರಿತು ಮರುಚಿಂತನೆ ನಡೆಸಲು ನಿರ್ಮಾಪಕರು ಆರಂಭಿಸಿದ್ದಾರೆ. ಹಾಗೆಯೇ, ನಟರ ಸಂಭಾವನೆಯನ್ನು ಬಾಕ್ಸ್ ಆಫೀಸ್ ಗಳಿಕೆಯ ಆಧಾರದಲ್ಲಿ ನೀಡುವ ಬಗ್ಗೆಯೂ ಯೋಚನೆ ನಡೆದಿದೆ ಎಂದವರು ಐನಾಕ್ಸ್‌ನ ಮುಖ್ಯ ಕಾರ್ಯಕ್ರಮ ಅಧಿಕಾರಿ ರಾಜೇಂದರ್ ಸಿಂಗ್ ಜ್ಯಾಲಾ. 'ಸಾಂಕ್ರಾಮಿಕದ ಸಂದರ್ಭದಲ್ಲಿ ಯಾವ ಸಿನಿಮಾವೂ ಬಿಡುಗಡೆ ಆಗಲಿಲ್ಲ. ಮನೆಯಲ್ಲಿಯೇ ಸಿಲುಕಿಕೊಂಡ ಪ್ರೇಕ್ಷಕರು ಒಟಿಟಿಯಲ್ಲಿ ಭಿನ್ನ ರೀತಿಯ ವಿಡಿಯೊಗಳನ್ನು ನೋಡಿದರು. ಹಾಗಾಗಿ ಎರಡು ವರ್ಷಗಳ ಹಿಂದೆ ಜನರನ್ನು ಆಕರ್ಷಿಸುತ್ತಿದ್ದ ವಿಷಯ ಈಗ ಜನರಿಗೆ ಬೇಕಾಗಿಲ್ಲ' ಎಂಬುದು ಜ್ಯಾಲಾ ಅವರ ಅಭಿಪ್ರಾಯ.

ಎಲ್ಲವೂ ಮುಗಿದೇ ಹೋಯಿತು ಎಂದು ಹೇಳುವಂತಿಲ್ಲ. ಬಾಲಿವುಡ್ ತನ್ನ ಉಚ್ಛ್ರಾಯ ಕಾಲಕ್ಕೆ ಮರಳುವುದು ಸುಲಭವಲ್ಲ. ಆದರೆ, ಒಂದೆರಡು ದೊಡ್ಡ ಯಶಸ್ಸು ಬಾಲಿವುಡ್‌ಗೆ ಹೊಸ ಚೈತನ್ಯ ತುಂಬಬಹುದು. ಒಟಿಟಿ, ಅದರ ಮೂಲಕ ಬರುವ ವರಮಾನ, ಚಿತ್ರರಂಗ ಈ ಎಲ್ಲದರ ನಡುವೆ ಹೊಸತೊಂದು ಸಮತೋಲನ ಬೇಕಿದೆ ಎಂಬುದು ಜ್ಯಾಲಾ ಮತ್ತು ಇತರರ ಅಭಿಪ್ರಾಯ.

ಆಧಾರ: ರಾಯಿಟರ್ಸ್ ವರದಿ, ಐಎಂಡಿಬಿ

ಯಶಸ್ಸು ಗಳಿಸಲು ವಿಫಲವಾದ 'ಸಂಶೇರ' ಸಿನಿಮಾದ ಪೋಸ್ಟರ್

ಕತೆಯೇ ಬಾಲಿವುಡ್‌ನ ವ್ಯಥೆ

'ಬಾಲಿವುಡ್‌ಗೆ ಕತೆಯೇ ಸಮಸ್ಯೆ. ಕಳೆದ ಎರಡು ವರ್ಷಗಳಲ್ಲಿ ಜನರು ಭಿನ್ನ ವಿಷಯಗಳ ವಿಡಿಯೊಗಳನ್ನು ನೋಡಿದ್ದಾರೆ. ಹೊಸ ಹೊಸ ಪರಿಕಲ್ಪನೆಗಳು ಜನರಿಗೆ ಸಿಕ್ಕಿವೆ. ಈ ವಿಚಾರದಲ್ಲಿ ಬಾಲಿವುಡ್ ಬಹಳ ಹಿಂದೆ ಇದೆ ಎಂಬುದು ನನ್ನ ಭಾವನೆ' ಎನ್ನುತ್ತಾರೆ ದೆಹಲಿಯ ವಿದ್ಯಾರ್ಥಿನಿ ವೈಷ್ಣವಿ ಶರ್ಮಾ.

ಭಾರಿ ನಿರೀಕ್ಷೆ ಮೂಡಿಸಿದ್ದ, ಬಾಲಿವುಡ್‌ನ ಪ್ರಮುಖ ತಾರೆಯರಾದ ಅಕ್ಷಯ್ ಕುಮಾರ್ ಮತ್ತು ಅಮೀರ್ ಖಾನ್ ಅವರ ಭಾರಿ ಬಜೆಟ್‌ನ ಸಿನಿಮಾಗಳು ತೋಪೆದ್ದು ಹೋದವು. ಅಕ್ಷಯ್ ಅವರ ರಕ್ಷಾ ಬಂಧನ್ ಮತ್ತು ಅಮೀರ್ ಅವರ ಲಾಲ್ ಸಿಂಗ್ ಛಡ್ಡಾ ಸಿನಿಮಾಗಳು ದೀರ್ಘ ವಾರಾಂತ್ಯದ, ಸ್ವಾತಂತ್ರ್ಯದ ಅಮೃತಮಹೋತ್ಸವದ ಸಂಭ್ರಮದ ಆಗಸ್ಟ್ 11ರಂದು ಬಿಡುಗಡೆಯಾದವು. ಆದರೆ, ಅಷ್ಟೆಲ್ಲ ಅನುಕೂಲ ಇದ್ದರೂ ಈ ಸಿನಿಮಾಗಳನ್ನು ಜನರು ನೋಡಲಿಲ್ಲ.

'ಪ್ರೇಕ್ಷಕರಿಗೆ ಬೇಕಾದ ರೀತಿಯಲ್ಲಿ ನಾವು ಬದಲಾಗಬೇಕಿದೆ. ಎಲ್ಲವನ್ನೂ ಬದಲಾಯಿಸಬೇಕಿದೆ. ಚಿತ್ರಕತೆಯ ಬಗ್ಗೆ ಕೆಲಸ ಮಾಡಬೇಕಿದೆ. ಇದು ಬಿಟ್ಟರೆ ನನ್ನಲ್ಲಿ ಬೇರೆ ಉತ್ತರವಿಲ್ಲ' ಎಂದು ನಿರ್ಮಾಪಕರೊಬ್ಬರು ಹೇಳಿದ್ದಾರೆ.

ಜನರಿಂದ ದೂರ ದೂರ...

ಚಿತ್ರಮಂದಿರಕ್ಕೆ ಹೋಗುವುದು ದುಬಾರಿ ವ್ಯವಹಾರ. ಜಗತ್ತಿನ ಎಲ್ಲೆಡೆಯೂ ಜೀವನ ನಿರ್ವಹಣೆ ವೆಚ್ಚ ಹೆಚ್ಚಳ ಜನರಿಗೆ ತಟ್ಟಿದೆ. ನಾಲ್ವರ ಒಂದು ಕುಟುಂಬಕ್ಕೆ ಚಿತ್ರಮಂದಿರಕ್ಕೆ ಹೋಗಿ ಸಿನಿಮಾ ನೋಡಲು ₹2,000ದಿಂದ ₹5,000 ಬೇಕು. ಹಾಗಾಗಿಯೇ ಒಟಿಟಿಗಳು ಹೆಚ್ಚು ಜನಪ್ರಿಯವಾದವು.

'ತಿದ್ದುವಿಕೆ ಎಲ್ಲೋ ಒಂದು ಕಡೆ ಆರಂಭವಾಗಲೇ ಬೇಕು– ಸಿನಿಮಾದ ಬಜೆಟ್ ಬಗ್ಗೆ ಚಿಂತನೆ ನಡೆಸಬೇಕು. ಚಿತ್ರಮಂದಿರಕ್ಕೆ ಹೋಗಿ ಸಿನಿಮಾ ನೋಡುವ ಖರ್ಚನ್ನು ಕಡಿಮೆ ಮಾಡಬೇಕು' ಎಂದು ಸಿನಿಮಾ ನಿರ್ಮಾಣ ಸಂಸ್ಥೆಯೊಂದನ್ನು ನಡೆಸುತ್ತಿರುವ ಅನಿಲ್ ಥಡಾನಿ ಹೇಳಿದ್ದಾರೆ.

'ಹಿಂದಿಯಲ್ಲಿ ಬರುತ್ತಿರುವ ಸಿನಿಮಾಗಳು ಜನರಿಂದ ಬಹಳ ದೂರ ಇವೆ. ನಮ್ಮ ಜನಸಂಖ್ಯೆಯ ಬಹುದೊಡ್ಡ ವರ್ಗವು ಈ ಸಿನಿಮಾಗಳ ಜತೆಗೆ ತಮ್ಮನ್ನು ಸಮೀಕರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ' ಎಂದೂ ಅವರು ಹೇಳಿದ್ದಾರೆ. ಮುಂಬೈನ ಸುಂದರೇಶನ್ ಅವರದ್ದೂ ಇದೇ ಅಭಿಪ್ರಾಯ. 'ಚಿತ್ರಮಂದಿರಕ್ಕೆ ಹೋಗಿ, ಇಷ್ಟವಿಲ್ಲದ ಸಿನಿಮಾವನ್ನು ನಮಗೆ ಅನುಕೂಲಕರವಲ್ಲದ ರೀತಿಯಲ್ಲಿ ನೋಡುವುದು ಸಮಯ ವ್ಯರ್ಥ. ಅದಕ್ಕಿಂತ ಒಟಿಟಿಯಲ್ಲಿ ನೋಡಲು ಇನ್ನೂ ಉತ್ತಮವಾದವು ಏನೇನೋ ಇವೆ' ಎಂಬುದು ಅವರ ಮಾತು.

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 214

ಶಿವಕಲ್ಯಾಣಕ್ಕೆ ಬ್ರಹ್ಮೋಪಾಯ

ತಾರಕಾಸುರನ ಕಾಟದಿಂದ ನೊಂದು ತನ್ನ ಬಳಿ ಬಂದ ದೇವತೆಗಳಿಗೆ ಬ್ರಹ್ಮ ತಾನು ಕೊಟ್ಟ ವರ ಮತ್ತೆ ಹಿಂಪಡೆಯಲಾಗುವುದಿಲ್ಲ ಎನ್ನುತ್ತಾನೆ. ಆದರೆ ತಾರಕಾಸುರನನ್ನು ಸಂಹರಿಸುವ ಮಾರ್ಗವನ್ನು ದೇವತೆಗಳಿಗೆ ತಿಳಿಸುತ್ತಾನೆ.

'ಎಲೈ ದೇವತೆಗಳಿರಾ, ತಾರಕಾಸುರನನ್ನು ನಾನಾಗಲೀ ವಿಷ್ಣುವಾಗಲೀ ರುದ್ರನಾಗಲೀ ಕೊಲ್ಲಲು ಸಾಧ್ಯವಿಲ್ಲ. ಈಗಿರುವ ಯಾವ ದೇವತೆಗಳಿಂದಲೂ ಆತನನ್ನು ಕೊಲ್ಲಲಾಗದು. ನಾನು ಆತನಿಗೆ ಆ ರೀತಿಯ ವರವನ್ನು ಕೊಟ್ಟಿರುವೆ. ಆದರೆ, ತಾರಕನನ್ನು ಕೊಲ್ಲುವ ಮಾರ್ಗ ಒಂದಿದೆ. ಶಿವನ ವೀರ್ಯದಿಂದ ಓರ್ವ ಕುಮಾರ ಜನಿಸಿದರೆ, ಆ ಶಿವಕುಮಾರನಿಂದ ತಾರಕಾಸುರನನ್ನು ಕೊಲ್ಲಬಹುದು. ಶಿವಕುಮಾರನ ಹೊರತು ಇನ್ನಾರಿಂದಲೂ ತಾರಕನನ್ನು ಕೊಲ್ಲಲು ಸಾಧ್ಯವಿಲ್ಲ.

'ಇದಕ್ಕಾಗಿ ನಾನೊಂದು ನಿಮಗೆ ಉಪಾಯವನ್ನು ಹೇಳುವೆನು ಕೇಳಿರಿ. ಮಹಾದೇವನ ಅನುಗ್ರಹದಿಂದ ನಿಮ್ಮ ಇಷ್ಟಾರ್ಥವು ಸಿದ್ಧಿಸುವುದು. ದಕ್ಷಪುತ್ರಿಯಾದ ಸತೀದೇವಿಯು ಹಿಂದೆ ದಕ್ಷಯಜ್ಞದಲ್ಲಿ ಶರೀರವನ್ನು ತ್ಯಜಿಸಿದ್ದಳು. ಅವಳೇ ಈಗ ಹಿಮವಂತನ ಮಡದಿಯಾದ ಮೇನಾದೇವಿಯ ಮಗಳಾಗಿ ಜನಿಸಿದ್ದಾಳೆ. ಮೇನಾದೇವಿ ಪುತ್ರಿಯಾದ ಪಾರ್ವತಿಯನ್ನು ಶಂಕರ ಮದುವೆ ಮಾಡಿಕೊಂಡರೆ ನಿಮ್ಮ ಅರ್ಧ ಸಮಸ್ಯೆ ಬಗೆಹರಿದಂತಾಗುತ್ತೆ. ಆದ್ದರಿಂದ ಇವರಿಬ್ಬರ ಕಲ್ಯಾಣಕ್ಕೆ ನೀವೆಲ್ಲಾ ವಿಶೇಷ ಪ್ರಯತ್ನ ಮಾಡಬೇಕು. ಪಾರ್ವತಿ-ಶಂಕರರ ದಾಂಪತ್ಯದಿಂದ ಜನಿಸುವ ಪುತ್ರ ಮಾತ್ರ ತಾರಕನನ್ನು ಸಂಹರಿಸಲು ಸಾಧ್ಯ. ಆದ್ದರಿಂದ ನೀವೆಲ್ಲಾ ಶಿವ-ಪಾರ್ವತಿಯರ ವಿವಾಹವಾಗುವಂಥ ಸನ್ನಿವೇಶ ಸೃಷ್ಟಿಸಬೇಕು. ಪಾರ್ವತಿಯು ಈಗ ಬೆಳೆದು ಯೌವನಾವಸ್ಥೆಗೆ ಬಂದಿದ್ದಾಳೆ. ಆದರೆ ಸತಿ ಸಾವಿನಿಂದ ವಿರಾಗಿಯಾಗಿರುವ ಶಿವ ಸಾಂಸಾರಿಕ ಜೀವನದಿಂದ ವಿಮುಖನಾಗಿ ಹಿಮಾಲಯದ ತಪ್ಪಲಿನಲ್ಲಿ ತಪಸ್ಸು ಮಾಡುತ್ತಿದ್ದಾನೆ.

'ಪಾರ್ವತಿದೇವಿಯು ತಂದೆಯ ಅನುಮತಿಯನ್ನು ಪಡೆದು ಹಿಮಾಲಯದ ತಪ್ಪಲಲ್ಲಿ ತಪಸ್ಸು ಮಾಡುತ್ತಿರುವ ಶಂಕರನನ್ನು ಭಕ್ತಿಯಿಂದ ಸೇವೆ ಮಾಡುತ್ತಿದ್ದಾಳೆ. ಮೂರು ಲೋಕಗಳಲ್ಲೇ ಅತಿಸುಂದರಿಯು ಉತ್ತಮ ಗುಣವುಳ್ಳವಳೂ ಆದ ಆ ಪಾರ್ವತಿಯು ನಿತ್ಯವೂ ಸೇವೆ ಮಾಡುತ್ತಿದ್ದರೂ, ಮಹೇಶ್ವರನ ಮನಸ್ಸಿನಲ್ಲಿ ಮಧುರ ಭಾವನೆಗಳು ಉಂಟಾಗುತ್ತಿಲ್ಲ. ಪಾರ್ವತೀದೇವಿ ಪರಮೇಶ್ವರನನ್ನು ಭಕ್ತಿಯಿಂದ ಸೇವೆ ಮಾಡುತ್ತಿದ್ದಾಳೆ. ನೀವೆಲ್ಲಾ ಶಂಕರನು ಪಾರ್ವತಿಯನ್ನು ಮದುವೆಯಾಗುವಂತೆ ಪ್ರಯತ್ನ ಮಾಡಬೇಕು. ನಾನು ಈಗ ತಾರಕಾಸುರ ನಿಮ್ಮನ್ನು ಹಿಂಸಿಸದಂತೆ ತಡೆಯುತ್ತೇನೆ' ಎಂದ ಬ್ರಹ್ಮ.

ಹೀಗೆ ದೇವತೆಗಳಿಗೆ ಭರವಸೆ ನೀಡಿ ತಾರಕಾಸುರನ ಬಳಿಗೆ ಬಂದ ಬ್ರಹ್ಮ 'ಎಲೈ ದೈತ್ಯನೇ! ಸ್ವರ್ಗರಾಜ್ಯವು ಸಂಪತ್ತುಗಳಿಗೆ ಖನಿಯಂತಿರುವುದು. ನೀನು ತಪಸ್ಸು ಮಾಡಿ ಕೇಳಿರುವ ವರಕ್ಕಿಂತಲೂ ಹೆಚ್ಚಾಗಿ ಅಪೇಕ್ಷಿಸುತ್ತಲಿರುವೆ. ಸ್ವರ್ಗವನ್ನ ಆಳುವಂತೆ ನಿನಗೆ ವರವನ್ನು ಕೊಟ್ಟಿಲ್ಲ. ಆದಕಾರಣ ಸ್ವರ್ಗವನ್ನು ಬಿಡು. ಭೂಲೋಕದಲ್ಲಿಯೇ ನಿನಗೆ ದೇವಭೋಗಗಳೆಲ್ಲವೂ ಲಭಿಸುವುವು' ಎಂದು ತಿಳಿಸಿದ.

ಬ್ರಹ್ಮನ ಮಾತಿಗೆ ಬೆಲೆಕೊಟ್ಟ ತಾರಕಾಸುರ ಸ್ವರ್ಗವನ್ನು ಬಿಟ್ಟು, ಭೂಲೋಕದಲ್ಲಿರುವ ತನ್ನ ಶೋಣಿತಪುರಕ್ಕೆ ತೆರಳಿ ರಾಜ್ಯವಾಳತೊಡಗಿದ. ದೇವತೆಗಳೆಲ್ಲ ಸಂತೋಷಪಟ್ಟರು. ಅವರೆಲ್ಲಾ ಇಂದ್ರನೊಡನೆ ಮತ್ತೆ ಸ್ವರ್ಗಕ್ಕೆ ಹೋಗಿ ಮತ್ತೆ ಆಳ್ವಿಕೆ ನಡೆಸತೊಡಗಿದರು. ವಿರಾಗಿಯಾಗಿರುವ ಶಿವ ಅನುರಾಗಿಯಾಗಿ ಪಾರ್ವತಿಯ ಮೇಲೆ ಪ್ರೀತಿ ಹುಟ್ಟುವಂತಾಗಬೇಕು. ಶಿವ ಸಂಸಾರಿಯಾಗಲು ಪಾರ್ವತಿಯನ್ನು ವಿರಾಗಿಯಾಗಿರುವ ಮದುವೆ ಮಾಡಿಕೊಳ್ಳುವಂತೆ ಆಗಬೇಕು. ಇದಕ್ಕಾಗಿ ಮಾಡಬೇಕಾದ ಪ್ರಯತ್ನವನ್ನೆಲ್ಲ ಇಂದ್ರನಿಗೆ ಹೇಳಿ ದೇವತೆಗಳು ಸಂತೋಷದಿಂದ ತಮ್ಮ ತಮ್ಮ ಮನೆಗಳಿಗೆ ತೆರಳಿದರು ಎಂಬಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಪಾರ್ವತೀಖಂಡದ ಹದಿನಾರನೆಯ ಅಧ್ಯಾಯ ಮುಗಿಯುತ್ತದೆ. ●

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಜಾರ್ಖಂಡ್‌ನಲ್ಲಿ ನಿವೃತ್ತ ಐಎಎಸ್ ಅಧಿಕಾರಿಯೊಬ್ಬರ ಮನೆಯಲ್ಲಿ ಮನೆಗೆಲಸದ ಮಹಿಳೆಯ ಮೇಲೆ ದೌರ್ಜನ್ಯ ನಡೆಸಲಾಗಿತ್ತು. ಅವರ ಮೇಲೆ ಹಲ್ಲೆ ನಡೆಸಲಾಗಿತ್ತು. ಶೌಚಾಲಯವನ್ನು ನಾಲಿಗೆಯಿಂದ ಸ್ವಚ್ಛಗೊಳಿಸುವಂತೆ ಮಾಡಲಾಗಿತ್ತು. ರಾಜ್ಯದಲ್ಲಿ ಯುಪಿಎ ಸರ್ಕಾರದ ಆಡಳಿತ ವಿಫಲವಾಗಿದೆ. ಅದರ ಹೊಣೆ ಹೊತ್ತು ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು' ಎಂಬ ವಿವರ ಇರುವ ಟ್ವೀಟ್ ಮತ್ತು ಫೇಸ್‌ಬುಕ್ ಪೋಸ್ಟ್‌ಗಳು ವೈರಲ್ ಆಗಿವೆ. ಇದೇ ಸ್ವರೂಪದ ಸುದ್ದಿಯನ್ನು ಹಲವು ಸುದ್ದಿ ಸಂಸ್ಥೆಗಳು ಟ್ವೀಟ್ ಮಾಡಿವೆ.

'ಇದು ತಿರುಚಲಾದ ಮಾಹಿತಿ' ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಈ ಪ್ರಕರಣದ ಪ್ರಮುಖ ಆರೋಪಿ ಸೀಮಾ ಪಾತ್ರಾ, ಜಾರ್ಖಂಡ್ ಬಿಜೆಪಿಯ ನಾಯಕಿ ಮತ್ತು ಬೇಟಿ ಬಚಾವೋ-ಬೇಟಿ ಪಢಾವೋ ಕಾರ್ಯಕ್ರಮದ ರಾಜ್ಯ ಸಂಚಾಲಕಿ. ಆದರೆ ಈ ಸುದ್ದಿಸಂಸ್ಥೆಗಳು, ಆರೋಪಿಯು ಬಿಜೆಪಿ ನಾಯಕಿ ಎಂಬುದನ್ನು ಮರೆಮಾಚಿ ಸುದ್ದಿ ಪ್ರಕಟಿಸಿವೆ. ಸೀಮಾ ಪಾತ್ರಾ ಅವರು ನಿವೃತ್ತ ಐಎಎಸ್ ಅಧಿಕಾರಿಯ ಪತ್ನಿ ಎಂದಷ್ಟೇ ಹೇಳಿವೆ. ಈ ಮೂಲಕ ಜನರ ಹಾದಿ ತಪ್ಪಿಸಿವೆ' ಎಂದು ಆಲ್ಟ್‌ನ್ಯೂಸ್ ಹೇಳಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಸೆಪ್ಟೆಂಬರ್ 2, 2022

ಶ್ರೀಶುಭಕೃತ್ ನಾಮ ಸಂವತ್ಸರ ದಕ್ಷಿಣಾಯಣ ವರ್ಷ. ಋತು ತಿಥಿ: ಭಾದ್ರಪದ ಶುಕ್ಲ ಷಷ್ಠಿ ಗಂ. 13-52 ನಕ್ಷತ್ರ: ವಿಶಾಖಾ ಗಂ. 23-47 ಯೋಗ: ಐಂದ್ರ ಗಂ. 19-16, ಕರಣ: ತೈತಿಲ ಗಂ. 13-52, ಸಿಂಹ ಮಾಸದ 16 ನೇ ದಿನ.
ರಾಹುಕಾಲ: ಬೆಳಿಗ್ಗೆ 10:30 – 12:00, ಸೂರ್ಯೋದಯ: 06-23 ಸೂರ್ಯಾಸ್ತ: 06-38,
ಮುಸ್ಲಿಂ ದಿನಾಂಕ: 05 ಸಫರ್,
ದಿನ ವಿಶೇಷ: ಸೂರ್ಯಷಷ್ಠಿ
ಅದೃಷ್ಟ ಸಂಖ್ಯೆ: 2, 8

ಮೇಷ: ಸಮಯ ಅರಿತು ಅಧಿಕಾರಿ ವರ್ಗದವರಲ್ಲಿ ಎಚ್ಚರಿಕೆಯಿಂದ ವರ್ತಿಸುವುದರಿಂದ ಯಶಸ್ಸು, ಅಭಿವೃದ್ಧಿಗೆ ಕಾರಣವಾಗುತ್ತದೆ. ಸಿನಿಮಾ ನಟ–ನಟಿಯರಿಗೆ ಅವಕಾಶಗಳು ದೊರೆಯಲಿವೆ.

ವೃಷಭ: ವೃತ್ತಿರಂಗದಲ್ಲಿ ನಿಮ್ಮ ತಿಳಿವಳಿಕೆಯೇ ಅಂತಿಮವೆಂದು ತಿಳಿದುಕೊಳ್ಳಬೇಡಿ. ಕೆಲಸದಲ್ಲಿ ಅಧಿಕ ಒತ್ತಡ, ದೇಹಾಯಾಸ ತೋರಿಬಂದು ತಪ್ಪು ನಿರ್ಧಾರ ತೆಗೆದು ಕೊಳ್ಳುವಂತಾಗಬಹುದು.

ಮಿಥುನ: ಲೇವಾದೇವಿ ವ್ಯವಹಾರ ನಡೆಸುವವರು ವ್ಯವಹಾರದಲ್ಲಿ ಸ್ವಲ್ಪ ಪ್ರಮಾಣದ ನಷ್ಟ ಸಂಭವಿಸಿ ಹಿನ್ನಡೆ ಕಾಣುವಂತಾಗಲಿದೆ. ಆರೋಗ್ಯದಲ್ಲಿ ಉಸಿರಾಟಕ್ಕೆ ಸಂಬಂಧಿಸಿದಂತೆ ಉದಾಸೀನತೆ ತೋರುವುದು ಸರಿಯಲ್ಲ.

ಕರ್ಕಾಟಕ: ತೈಲ ಉತ್ಪನ್ನಗಳ ಮಾರಾಟದಿಂದ ಹೆಚ್ಚಿನ ಲಾಭ. ಈ ದಿನ ಬುದ್ಧಿವಂತಿಕೆಯಿಂದ ಕೂಡಿರುವ ಕಾರ್ಯವೈಖರಿ ನಿಮ್ಮದಾಗಿರುತ್ತದೆ. ಮಕ್ಕಳ ವಿಚಾರದಲ್ಲಿ ಹೆಮ್ಮೆಪಡುವಂತಹ ಕ್ಷಣಗಳು ಎದುರಾಗುವುದು.

ಸಿಂಹ: ದೀರ್ಘಪ್ರಯಾಣದಿಂದ ನಿರೀಕ್ಷಿತ ಕಾರ್ಯದಲ್ಲಿ ಸಫಲತೆ ಹೊಂದುವಿರಿ. ಪಾಲುದಾರಿಕೆ ವ್ಯವಹಾರದಲ್ಲಿ ಪ್ರಗತಿ. ನಿಮ್ಮ ಶ್ರಮಕ್ಕೆ ಸರಿಸಮಾನವಾದ ಧನಾಗಮನಕ್ಕೆ ಯಾವುದೇ ಅಡ್ಡಿ–ಆತಂಕಗಳು ಇರದು.

ಕನ್ಯಾ: ಅನ್ಯರ ಮೇಲೆ ಅವಲಂಬಿತರಾಗದೆ ಕಾರ್ಯಪ್ರವೃತ್ತರಾಗುವ ಪ್ರಯತ್ನವಿರಲಿ. ವಿದ್ಯಾರ್ಥಿಗಳಿಗೆ ವಿಪುಲ ಅವಕಾಶ. ಜೀವನದಲ್ಲಿ ಕೆಲವು ವಿಚಾರಕ್ಕೆ ಆತಂಕ ಮೂಡಿ ಮನೋಧೈರ್ಯವನ್ನು ಕಟ್ಟಿಹಾಕುವ ಸಂಭವವಿದೆ.

ತುಲಾ: ಹೂವು–ಹಣ್ಣು, ತರಕಾರಿ ಹಾಗೂ ಹಾಲಿನ ವ್ಯಾಪಾರಿಗಳಿಗೆ ಲಾಭ ಆಗುವುದು. ಕಟ್ಟಡ ಕಾರ್ಮಿಕರು ಮತ್ತು ದಿನಗೂಲಿ ನೌಕರರಿಗೆ ಸಾಕಷ್ಟು ಅವಕಾಶಗಳು ಸಿಗಲಿವೆ.

ವೃಶ್ಚಿಕ: ಚೋರ ಬಾಧೆ ಇರುವ ಕಾರಣದಿಂದಾಗಿ ದೊಡ್ಡಮಟ್ಟದ ಹಣ ಅಥವಾ ಬೆಲೆ ಬಾಳುವ ವಸ್ತುಗಳನ್ನು ಹಿಡಿದುಕೊಂಡು ಸಂಚರಿಸುವುದು ಸರಿಯಲ್ಲ. ಕೌಟುಂಬಿಕವಾಗಿ ಕೆಟ್ಟು ಹೋದ ಸಂಬಂಧಗಳು ಇಂದು ಮತ್ತೆ ಮರಳಿ ಬರಲಿವೆ.

ಧನು: ಅಕ್ಕಪಕ್ಕದಲ್ಲಾಗುವ ಸನ್ನಿವೇಶಗಳು ಪ್ರಾಮಾಣಿಕತೆಗೆ ಅಥವಾ ಸ್ವಾಮಿ ನಿಷ್ಠೆಗೆ ಬೆಲೆ ಇಲ್ಲವೆಂದು ಕಾಣಿಸುವುದು. ಅದರ ಫಲವಾಗಿ ನಿಮ್ಮ ಸ್ವಭಾವವನ್ನು ಬದಲಿಸಿಕೊಳ್ಳಬೇಡಿ. ಧ್ಯಾನ, ಪ್ರವಚನ ಕೇಳುವುದರತ್ತ ಮನಸ್ಸು ಹರಿಯಲಿದೆ.

ಮಕರ: ಎಲ್ಲಾ ಕೆಲಸಗಳೂ ನಿಮ್ಮ ಇಷ್ಟದಂತೆಯೇ ನಡೆಯಲಿವೆ. ಸಂಘ–ಸಂಸ್ಥೆಗಳ ಅಧಿಕಾರಿಗಳಿಗೆ ನಾಲ್ಕಾರು ಮಾತುಗಳನ್ನು ಕೇಳಬೇಕಾದ ಸಂದರ್ಭ ಬರಬಹುದು. ಮಂಜುನಾಥನ ದರ್ಶನ ಭಾಗ್ಯದಿಂದ ಕಾರ್ಯಾನುಕೂಲ.

ಕುಂಭ: ಸತ್ಕಾರ್ಯಗಳಿಂದಾಗಿ ಮನೆಯಲ್ಲಿ ಸಡಗರ. ಅವಿವಾಹಿತರಿಗೆ ಅವರ ಮನಸ್ಸಿಗೆ ಇಷ್ಟವಾಗುವ ರೀತಿಯ ಸಂಬಂಧಗಳು ಪ್ರಾಪ್ತಿಯಾಗುತ್ತದೆ. ಗಣೇಶನ ಸೇವೆ ಜೊತೆಯಲ್ಲಿ ಉತ್ಸಾಹದಿಂದ ಕೆಲಸ ಆರಂಭಿಸಿದರೆ ಸಮಸ್ಯೆ ಪರಿಹಾರ.

ಮೀನ: ವಿಜ್ಞಾನಿಗಳಿಗೆ, ಕ್ರಿಯಾತ್ಮಕ ಪದವೀಧರರಿಗೆ ವಿದೇಶದಲ್ಲಿ ಉದ್ಯೋಗ ದೊರೆಯುವ ಸಂಭವ. ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು. ಪಿತ್ರಾರ್ಜಿತ ಆಸ್ತಿಗಳ ವಿಚಾರದಲ್ಲಿ ನ್ಯಾಯಾಲಯದ ಮೆಟ್ಟಿಲು ಏರಬೇಕಾಗುತ್ತದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಭರತನ ದಾರಿ

ಅರಸಡವಿಗೈದಿದೊಡಮ್, ಅವನಿತ್ತ ಪಾದುಕೆಗ- |
ಳೊರೆಯದೊಡಮೇನನಂ,
ತಾಂ ವರದಿಯೊರೆದು ||
ದೊರೆತನದ ಭಾರವನು ಹೊತ್ತು ದೊರೆಯಾಗದಾ |
ಭರತನವೊಲಿರು ನೀನು– ಮಂಕುತಿಮ್ಮ || 706 ||

ಪದ-ಅರ್ಥ: ಅರಸಡವಿಗೈದಿದೊಡಮ್ = | ಅರಸ + ಅಡವಿಗೆ + ಐದಿದೊಡಮ್ (ಹೊರಟು ಹೋದರೂ), ಪಾದುಕೆಗಳೊರೆಯದೊಡಮೇನನಂ = ಪಾದುಕೆಗಳು + ಒರೆಯದೊಡಂ(ಹೇಳದಿದ್ದರೂ) + ಏನನಂ (ಏನನ್ನೂ), ತಾಂ = ತಾನು, ವರದಿಯೊರೆದು = ವರದಿ + ಒರೆದು(ಒಪ್ಪಿಸಿ), ಭರತನವೊಲಿರು = ಭರತ ನವೊಲು(ಭರತನಂತೆ) + ಇರು.

ವಾಚ್ಯಾರ್ಥ: ಅರಸ ಅಡವಿಗೆ ಹೋದರೂ ಅವನ ಪಾದುಕೆಗಳು ಏನನ್ನೂ ಹೇಳದಿದ್ದರೂ ತಾನೇ ಅವುಗಳಿಗೆ ವರದಿ ಒಪ್ಪಿಸಿ, ದೊರೆತನದ ಭಾರವನ್ನು ಹೊತ್ತು ತಾನು ದೊರೆಯಾಗದ ಭರತನಂತೆ ನೀನು ಇರು.

ವಿವರಣೆ: ಭರತನ ಪಾತ್ರ ರಾಮಾಯಣದ ಕಿರೀಟ. ತ್ಯಾಗಕ್ಕೆ, ಧೀಮಂತಿಕೆಗೆ, ಅಂತಃಕರಣಕ್ಕೆ ಮತ್ತೊಂದು ಹೆಸರು ಭರತ. ಡಿ.ವಿ.ಜಿ.ಯವರಿಗೆ ಆ ಪಾತ್ರ ತುಂಬ ಇಷ್ಟದ್ದು. ಅದಕ್ಕೇ ಕಗ್ಗದಲ್ಲಿ ಭರತನ ಬಗ್ಗೆ ಬರೆದಷ್ಟು ಚೌಪದಿಗಳನ್ನು ಮತ್ತಾರ ಬಗ್ಗೆಯೂ ಬರೆಯಲಿಲ್ಲ. ಈ ಕಗ್ಗದಿಂದ ಹಿಡಿದು ಮುಂದಿನ ಮತ್ತೈದು ಕಗ್ಗಗಳಲ್ಲಿ ಭರತನ ಗುಣವರ್ಣನೆಗಳು ಬಂದಿವೆ.

ಅರಸನಾಗಬೇಕಿದ್ದ ರಾಮ ಕಾಡಿಗೆ ಹೋದ. ತಮ್ಮ, ತನಗೆ ಅನಾಯಾಸವಾಗಿ ಬಂದಿದ್ದ ಸಿಂಹಾಸನವನ್ನು ಏರದೆ, ಅಣ್ಣನನ್ನು ಬೆಂಬತ್ತಿ ಹೋಗಿ ಮರಳಿ ಬಾ ಎಂದು ಬೇಡುತ್ತಾನೆ. ಆ ಸಂದರ್ಭ ಇಡೀ ರಾಮಾಯಣದಲ್ಲಿ ಅದ್ಭುತ ಪ್ರಸಂಗ.

ಅಲ್ಲಿ ಅಣ್ಣ-ತಮ್ಮಂದಿರ ನಡುವೆ ದಿವ್ಯಾದರ್ಶಗಳ ಸ್ಪರ್ಧೆ! ಮೌಲ್ಯಗಳ, ಆದರ್ಶಗಳ ಶಿಖರಗಳ ಸಂದರ್ಶನ. ಕೊನೆಗೆ ತಮ್ಮ ಭರತ ಅಣ್ಣನ ಪಾದುಕೆಗಳೊಂದಿಗೆ ಮರಳಿ ಬಂದು, ಅವುಗಳನ್ನೇ ಸಿಂಹಾಸನದ ಮೇಲಿಟ್ಟು, ತಾನು ಅವುಗಳ ಪ್ರತಿನಿಧಿ ಎಂದು ರಾಜ್ಯಭಾರ ಮಾಡುತ್ತಾನೆ.

ಹೇಗೆ ರಾಜ್ಯಭಾರ ಮಾಡಬೇಕು ಎಂಬುದನ್ನು ರಾಮ ಹೇಳಲಿಲ್ಲ. ಆದರೂ ತಾನು ಕೇವಲ ಪಾದುಕೆಗಳ ಸೇವಕ ಎಂಬುದನ್ನು ಮರೆಯದೆ, ತನ್ನ ಕಾರ್ಯಸೂಚಿಯನ್ನು, ಮಾಡಿದ ಕೆಲಸವನ್ನು ಅತ್ಯಂತ ಪಾರದರ್ಶಕವಾಗಿ, ನಿಷ್ಠೆಯಿಂದ ಪಾದುಕೆಗಳಿಗೆ ಒಪ್ಪಿಸಿದ. ತಾನು ದೊರೆಯಾಗಲಿಲ್ಲ ವೆಂಬುದು ಸರಿ. ಆದರೆ ದೊರೆತನದ ಭಾರವನ್ನು ಅತ್ಯಂತ ಪ್ರೀತಿಯಿಂದ ಹೊತ್ತ.

ಈ ರಾಜ್ಯ ತನ್ನದಲ್ಲ. ಆದರೆ ರಾಜ್ಯಭಾರ ತನ್ನ ಜವಾಬ್ದಾರಿ ಎಂದು ಕರ್ತವ್ಯ ಪ್ರಜ್ಞೆಯನ್ನು ಮೆರೆದ ಭರತ ಎಲ್ಲ ಸೇವಕರಿಗೆ ಮಾದರಿಯಾದ.

ಕಗ್ಗ, ನಮಗೆ ಭರತನನ್ನು ಮಾದರಿಯಾಗಿಸಿಕೊಂಡು ಅವನಂತೆ ಬಾಳಲು ಕರೆ ಕೊಡುತ್ತದೆ. ಈ ಜಗತ್ತು ನಮ್ಮದಲ್ಲ, ಭಗವಂತನದು. ನಾನು, ನನ್ನ ಸಮಸ್ತ ವಸ್ತುಗಳು ಅವನಿಗೆ ಸೇರಿದ್ದು. ಅದರೂ ಸಂಸಾರದ ಭಾರವನ್ನು ಅವನ ಪರವಾಗಿ, ಅವನ ಕೃಪೆಯಿಂದ ಹೊರುತ್ತೇನೆ ಎಂದು ದುಡಿಯುವುದು ಭರತ ನಡೆದ ದಾರಿ. ❖

ಪದಬಂಧ 5067

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಭೇದ ಭಾವವಿಲ್ಲದಿರುವುದು (5)
4.ಮೋದಕ ತಿಂದಿದ್ದಕ್ಕೇ ಇಷ್ಟು ಸಂತೋಷ (3)
5.ಸಾಮಾಜಿಯಲ್ಲಿರುವ ಬುದ್ಧಿ (2)
7.ವಿವಿಧದಲ್ಲಿರುವ ರೀತಿ ಕಾಣುತ್ತಿದೆ (2)
10.ಕಮರಿಯೊಳಗೆ ಬಿದ್ದಿರುವ ಗಜ (2)
13.ನೂಪುರ ಧರಿಸಿ ನೋಡಿದ ಪಟ್ಟಣ (2)
15.ವಿಕ್ರಯಿಸು ಎಂದಾಗ ಬೀಸಿದ ಗಾಳಿ (3)
16.ಲೋಹದ ಹಕ್ಕಿಯಲ್ಲಿನ ಪಯಣ (5)

ಮೇಲಿಂದ ಕೆಳಕ್ಕೆ
1.ಈತ ಅಕ್ಷರಗಳನ್ನು ತಿಳಿದವನು (4)
2.ದೃಷ್ಟಾಂತವನ್ನು ಹೀಗೆ ನೀಡಿ (4)
3.ಮತ ಹಾಕಲು ಹೋದಾಗ ಆವರಿಸಿದ ಕತ್ತಲು (2)
4.ಪೂಜೆ ಮಾಡುವವನು (4)
6.ಹೀಗೆ ಮುಷ್ಟಿಯಿಂದ ಹೊಡೆ (2)
8.ಸಿರಿವಂತನನ್ನು ಹೀಗೂ ಕರೆವರು (4)
9.ಮಾನವಿರುವಾತನಿಗೆ ಮೂಡಿದ ಶಂಕೆ (4)
11.ಶತ್ರು ಇಲ್ಲಿದ್ದಾನೆ (2)
12.ತೆಳ್ಳಗಿನ ಸೊಂಟವಿದು (4)
14.ಸೂರ್ಯನ ಇನ್ನೊಂದು ಹೆಸರು (2)



5066ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅರಸ 3.ದಿನಾಂಕ
4.ಮಡದಿ 6.ಆಟ
7.ನವ 11.ಹುಸಿ 13.ಕ್ಷೀರ
14.ಹಿರಿಯ 15.ಕರಣ
16.ತೆವರಿ

ಮೇಲಿಂದ ಕೆಳಕ್ಕೆ:
1.ಅಕಳಂಕ
2.ಸಮನ್ವಯ 3.ದಿಟ
5.ದಿನ 6.ಅಜಾನುಬಾಹು
8.ವರ್ಣವಿಕಾರ 9.ಆತ್ಮೀಯತೆ
10.ಮದಕರಿ 12.ಸಿಹಿ
13.ಕ್ಷೀಣ

ಸುಡೊಕು 5453

		1		8				5
			2		7		1	
7		3		9		8		2
	5				1			
6		7		5		2		8
	3		9					1
	2				8		6	
				3				7
1		8	5			3		4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5452 ಸುಡೊಕು

9	4	3	8	5	1	7	2	6
8	1	7	6	3	2	4	5	9
6	2	5	4	7	9	1	8	3
1	6	2	9	4	5	3	7	8
5	7	4	1	8	3	9	6	2
3	9	8	2	6	7	5	4	1
7	8	9	3	2	4	6	1	5
2	5	1	7	9	6	8	3	4
4	3	6	5	1	8	2	9	7

ಕ್ರೈಸ್ತರ ಮೇಲೆ ಹಲ್ಲೆ: ವರದಿ ಸಲ್ಲಿಸಲು ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಸೂಚನೆ

ನವದೆಹಲಿ (ಪಿಟಿಐ): ಕರ್ನಾಟಕ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಹರಿಯಾಣ, ಒಡಿಶಾ, ಛತ್ತೀಸಗಡ ಮತ್ತು ಜಾರ್ಖಂಡ್ ರಾಜ್ಯಗಳಲ್ಲಿ ಕ್ರೈಸ್ತ ಸಮುದಾಯದವರು ಮತ್ತು ಅವರ ಸಂಸ್ಥೆಗಳನ್ನು ಗುರಿಯಾಗಿಸಿ ದಾಳಿ ನಡೆದಿರುವ ಘಟನೆಗಳ ಸಂಬಂಧ ರಾಜ್ಯಗಳಿಂದ ವರದಿ ಪಡೆಯಲು ಸುಪ್ರೀಂ ಕೋರ್ಟ್ ಕೇಂದ್ರ ಗೃಹ ಸಚಿವಾಲಯಕ್ಕೆ ಗುರುವಾರ ಸೂಚಿಸಿದೆ.

ರಾಜ್ಯಗಳಿಂದ ವರದಿ ಪಡೆದು ಸಲ್ಲಿಸಲು ಎರಡು ತಿಂಗಳ ಕಾಲಾವಕಾಶವನ್ನೂ ನೀಡಿದೆ.

ಕ್ರೈಸ್ತರಮೇಲೆಹಿಂಸಾಚಾರನಡೆಯುತ್ತಿವೆ ಎಂದು ಆರೋಪಿಸಿ ಬೆಂಗಳೂರಿನ ಆರ್ಚ್ ಬಿಷಪ್ ಆಗಿರುವ ನ್ಯಾಷನಲ್ ಸಾಲಿಡಾರಿಟಿ ಫೋರಂನ ರೆವರೆಂಡ್ ಡಾ. ಪೀಟರ್ ಮಚಾಡೊ, ಇವಾಂಜೆಲಿಕಲ್ ಫೆಲೋಶಿಪ್ ಆಫ್ ಇಂಡಿಯಾದ ರೆವರೆಂಡ್ ಡಾ. ವಿಜಯೇಶ್ ಲಾಲ್ ಮತ್ತು ಇತರರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ ಪೀಠವು ಈ ಸೂಚನೆ ನೀಡಿದೆ.

ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠವು, ವೈಯಕ್ತಿಕ ದಾಳಿ ನಡೆದಿದ್ದರೆ ಅದು ಸಮುದಾಯದ ಮೇಲಿನ ದಾಳಿ ಎಂದರ್ಥವಲ್ಲ. ಆದರೆ, ಇಂತಹ ವಿಷಯಗಳ ಕುರಿತ ಆರೋಪಗಳು ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ಇರುವಾಗ ಪರಿಶೀಲನೆ ನಡೆಸಬೇಕಾಗುತ್ತದೆ ಎಂದು ಹೇಳಿದೆ.

ಇಂತಹ ಘಟನೆಗಳ ನಡೆದಾಗ ವರದಿ ಕೊಡುವುದು ಮತ್ತು ಮೇಲ್ವಿಚಾರಣೆಗಾಗಿ ನೋಡಲ್ ಅಧಿಕಾರಿಗಳನ್ನು ನೇಮಿಸುವ ಬಗ್ಗೆ ರಾಜ್ಯಗಳು ತನ್ನ ಹಿಂದಿನ ತೀರ್ಪುಗಳನ್ನು ಪಾಲಿಸುತ್ತಿಲ್ಲವೇ ಎನ್ನುವುದು ಮಾತ್ರ ಕೋರ್ಟ್ ಕಳವಳ ಎಂದು ಪೀಠ ಹೇಳಿದೆ.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಪಿಐಎಲ್‌ನಲ್ಲಿ ಉಲ್ಲೇಖಿಸಿರುವ ಬಹುತೇಕ ಪ್ರಕರಣಗಳು ಸುಳ್ಳು ಮತ್ತು ವೆಬ್ ಪೋರ್ಟಲ್‌ನಲ್ಲಿ ಪ್ರಕಟವಾಗಿರುವ ಲೇಖನಗಳು ಸ್ವಾರ್ಥಪರವಾಗಿವೆ. ಹಾಗಾಗಿ ಯಾವುದೇ ಆದೇಶ ಹೊರಡಿಸಬಾರದು ಎಂದು ಪೀಠಕ್ಕೆ ಮನವಿ ಮಾಡಿದರು.

‘ಯುವಕರಲ್ಲಿ ಉದ್ಯೋಗ ಪ್ರಮಾಣ ಕುಸಿತ’

ನವದೆಹಲಿ (ಪಿಟಿಐ): ಯುವಕರಲ್ಲಿ ಉದ್ಯೋಗ ಪ್ರಮಾಣವು 5 ವರ್ಷಗಳಲ್ಲಿ ಕನಿಷ್ಠ ಮಟ್ಟಕ್ಕೆ ತಲುಪಿದೆ ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ದತ್ತಾಂಶ ಉಲ್ಲೇಖಿಸಿ ಬಿಜೆಪಿ ಸಂಸದ ವರುಣ್ ಗಾಂಧಿ ಗುರುವಾರ ಹೇಳಿದ್ದಾರೆ.

ಯುವಕರಲ್ಲಿ ಉದ್ಯೋಗ ಪ್ರಮಾಣವು ಶೇ 20.9ರಿಂದ ಶೇ 10.4ರಷ್ಟಕ್ಕೆ ಕುಸಿದಿದೆ. ಕಷ್ಟಪಡುವ ಯುವಕರು ಎಷ್ಟು ದಿನ ಕಾಯುತ್ತಾರೆ ಎಂದು ಟ್ವೀಟ್ ಮೂಲಕ ಪ್ರಶ್ನಿಸಿದ್ದಾರೆ.

ಪ್ರಧಾನಿ ಮೋದಿ ಅವರು 10 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಸರ್ಕಾರದ ಇಲಾಖೆಗಳಿಗೆ ಸೂಚಿಸಿದ್ದಾರೆ, ಆದರೆ ಅವರ‍್ಯಾರೂ ಇದಕ್ಕಾಗಿ ಯಾವುದೇ ಯೋಜನೆಗಳನ್ನು ರೂಪಿಸಿಲ್ಲ ಎಂದಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com or Scan QR code to access booking form

2ನೇ ವರ್ಷದ ಪುಣ್ಯ ಸ್ಮರಣೆ

ಎಂ. ಬಿ. ಸಿದ್ದಪ್ಪ

(ನಿವೃತ್ತ ಮುಖ್ಯ ಅಭಿಯಂತರರು KPWD)

ನೀವು ನಮ್ಮನ್ನು ಅಗಲಿ ಇಂದಿಗೆ ಎರಡು ವರ್ಷ ಕಳೆದರೂ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ.

ನಿಮ್ಮನ್ನು ಸದಾ ಸ್ಮರಿಸುವ

ಮಕ್ಕಳು, ಕುಟುಂಬವರ್ಗ ಮತ್ತು ಸ್ನೇಹಿತರು

ವರದಿ ಸೋರಿಕೆ: ರಾಜ್ಯಪಾಲರಿಗೆ ಯುಪಿಎ ಮೈತ್ರಿ ಶಾಸಕರ ಮನವಿ

ರಾಂಚಿ (ಪಿಟಿಐ): ಜಾರ್ಖಂಡ್‌ನ ಆಡಳಿತಾರೂಢ ಯುಪಿಎ ಮೈತ್ರಿಕೂಟದ ನಾಯಕರು ರಾಜ್ಯಪಾಲ ರಮೇಶ್ ಬೈಸ್ ಅವರನ್ನು ಗುರುವಾರ ಭೇಟಿಯಾಗಿದ್ದಾರೆ. ಚುನಾವಣಾ ಆಯೋಗವು ಸಲ್ಲಿಸಿದ್ದ ವರದಿಯಲ್ಲಿ ಇರುವ ಶಿಫಾರಸುಗಳ ಆಯ್ದ ವಿಷಯಗಳ ಸೋರಿಕೆಯ ಕುರಿತಂತೆ ನಿಯೋಗವು ಕಳವಳ ವ್ಯಕ್ತಪಡಿಸಿದೆ.

ಮುಖ್ಯಮಂತ್ರಿ ಹೇಮಂತ್ ಸೋರೇನ್ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಲಾಗುವುದು ಎಂದು ವರದಿಯಲ್ಲಿ ಇದೆ ಎಂಬುದನ್ನು ಸೋರಿಕೆ ಮಾಡಲಾಗಿದೆ ಎಂದು ನಿಯೋಗವು ಹೇಳಿದೆ. ಈ ಸೋರಿಕೆಯು ಅರಾಜಕತೆಗೆ ಕಾರಣವಾಗಲಿದೆ ಎಂದು ನಿಯೋಗವು ರಾಜ್ಯಪಾಲರಿಗೆ ತಿಳಿಸಿದೆ.

ಚುನಾವಣಾ ಆಯೋಗವು ನೀಡಿದ ಶಿಫಾರಸಿನಲ್ಲಿ ಏನಿದೆ ಎಂಬುದನ್ನು ಬಹಿರಂಗಪಡಿಸುವಂತೆಯೂ ರಾಜ್ಯಪಾರಲನ್ನು ಕೋರಿದೆ.

ಹೇಮಂತ್ ಸೋರೇನ್ ಅವರ ಭವಿಷ್ಯದ ಕುರಿತು ಹರಡುತ್ತಿರುವ ವದಂತಿಯು, ಚುನಾಯಿತ ಸರ್ಕಾರವೊಂದನ್ನು ಅಸ್ಥಿರಗೊಳಿಸುವ ಪ್ರಯತ್ನಗಳಿಗೆ ಉತ್ತೇಜನ ನೀಡಿದೆ. ಹೇಮಂತ್ ಅವರು ಅನರ್ಹಗೊಂಡರೂ ಸರ್ಕಾರವೇನೂ ಪತನವಾಗದು. ಏಕೆಂದರೆ, ಮೈತ್ರಿಕೂಟವು ಅತ್ಯಂತ ಸ್ಪಷ್ಟ ಬಹುಮತ ಹೊಂದಿದೆ ಎಂದು ನಿಯೋಗವು ರಾಜ್ಯಪಾಲರಿಗೆ ತಿಳಿಸಿದೆ.

ಬಳಿಕ, ಹೇಮಂತ್ ನೇತೃತ್ವದಲ್ಲಿ ಜಾರ್ಖಂಡ್ ಸಚಿವ ಸಂಪುಟದ ಸಭೆ ನಡೆದಿದೆ. ಇದೇ 5ರಂದು ಒಂದು ದಿನದ ವಿಶೇಷ ಅಧಿವೇಶನ ನಡೆಸಲು ರಾಜ್ಯಪಾಲರನ್ನು ಕೋರಲು ಸಭೆಯಲ್ಲಿ ನಿರ್ಧರಿಸಲಾಗಿದೆ.

ದೆಹಲಿಯಲ್ಲಿ ಆಪರೇಷನ್ ಕಮಲ ವಿಫಲ: ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್

ಎಎಪಿ ವಿಶ್ವಾಸಮತ ಸಾಬೀತು

ನವದೆಹಲಿ (ಪಿಟಿಐ): ದೆಹಲಿಯ ಎಎಪಿ ಸರ್ಕಾರವು ವಿಧಾನಸಭೆಯಲ್ಲಿ ಗುರುವಾರ ವಿಶ್ವಾಸಮತ ಸಾಬೀತು ಮಾಡಿದೆ. ಬಿಜೆಪಿಯ ಆಪರೇಷನ್ ಕಮಲ ವಿಫಲವಾಗಿದೆ ಎಂಬುದನ್ನು ತೋರಿಸಲು ವಿಶ್ವಾಸಮತವನ್ನು ಸಾಬೀತು ಮಾಡಲು ಮುಂದಾದೆವು. ಈಗ ಬಿಜೆಪಿಯ ತಂತ್ರಗಾರಿಕೆಯನ್ನು ಸೋಲಿಸಿದ್ದೇವೆ ಎಂಬುದನ್ನು ಸಾಬೀತುಮಾಡಿದ್ದೇವೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಬಿಜೆಪಿ ಸೇರುವಂತೆ ಎಎಪಿಯ ಶಾಸಕರಿಗೆ ತಲಾ ₹20 ಕೋಟಿಯಂತೆ, ಒಟ್ಟು ₹800 ಕೋಟಿಯ ಆಮಿಷವನ್ನು ಬಿಜೆಪಿ ಒಡ್ಡುತ್ತಿದೆ ಎಂದು ಎಎಪಿ ಹಿಂದಿನ ವಾರ ಆರೋಪಿಸಿತ್ತು. ಹಣ ನೀಡಿ ಶಾಸಕರನ್ನು ಖರೀದಿಸುವುದು ಮತ್ತು ಆ ಮೂಲಕ ಎಎಪಿ ಸರ್ಕಾರವನ್ನು ಉರುಳಿಸಲು ಬಿಜೆಪಿ ತಂತ್ರ ರೂಪಿಸಿತ್ತು ಎಂದು ಎಎಪಿ ಆರೋಪಿಸಿತ್ತು. ಎಎಪಿಯ ರಾಷ್ಟ್ರೀಯ ಸಂಚಾಲಕರೂ ಆಗಿರುವ ಕೇಜ್ರಿವಾಲ್ ಅವರು ಕರೆದಿದ್ದ ಸಭೆಗೆ ಹಲವು ಶಾಸಕರು ಗೈರುಹಾಜರಾಗಿದ್ದರು. ಬಿಜೆಪಿ ಇದನ್ನು ಲೇವಡಿ ಮಾಡಿತ್ತು. ಅದರ ಬೆನ್ನಲ್ಲೇ ವಿಶ್ವಾಸಮತ ಸಾಬೀತಿಗೆ ಎಎಪಿಯು ನೋಟಿಸ್ ನೀಡಿತ್ತು.

ದೆಹಲಿ ವಿಧಾನಸಭೆಯಲ್ಲಿ 70 ಸ್ಥಾನಗಳಿದ್ದು, ಎಎಪಿಯ 62 ಶಾಸಕರಿದ್ದಾರೆ. ಉಳಿದ ಎಂಟು ಸಾಸಕರು ಬಿಜೆಪಿಯವರು. ಸ್ಪೀಕರ್ ರಾಮ್ ನಿವಾಸ್ ಗೋಯಲ್ ಅವರು ಕೆನಡಾ ಪ್ರವಾಸದಲ್ಲಿ, ಎಎಪಿ ಶಾಸಕ ನರೇಶ್ ಬಲ್ಯಾನ್ ಆಸ್ಟ್ರೇಲಿಯಾ ಪ್ರವಾಸದಲ್ಲಿ ಇದ್ದಾರೆ. ಎಎಪಿಯ ಸತ್ಯೇಂದರ್ ಜೈನ್ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜೈಲಿನಲ್ಲಿದ್ದಾರೆ. ಈ ಮೂವರನ್ನು ಬಿಟ್ಟರೆ ಉಳಿದ 67 ಶಾಸಕರು ಗುರುವಾರ ಸದನದಲ್ಲಿ ಹಾಜರಿದ್ದರು.

ಬಿಜೆಪಿ ಶಾಸಕರು ಗಮನ ಸೆಳೆಯುವ ನೋಟಿಸ್ ನೀಡಿದ್ದರು. ಆ ನೋಟಿಸ್ ಕುರಿತೇ ಮೊದಲು ಚರ್ಚೆ ನಡೆಸಬೇಕು ಎಂದು ಸದನದಲ್ಲಿ ಅವರು ಒತ್ತಾಯಿಸಿದರು. ಅದನ್ನು ಡೆಪ್ಯುಟಿ ಸ್ಪೀಕರ್ ನಿರಾಕರಿಸಿದರು. ಆಗ ಬಿಜೆಪಿ ಶಾಸಕರು ಗದ್ದಲ ಉಂಟು ಮಾಡಿದರು.

> ಮನೀಷ್ ಮನೆಯಲ್ಲಿ ಸಿಬಿಐ ಶೋಧದ ಮೂಲಕ ಪ್ರಧಾನಿ, ಗುಜರಾತ್‌ನಲ್ಲಿ ನಮ್ಮ ಮತವನ್ನು ಶೇ 4ರಷ್ಟು ಹೆಚ್ಚಿಸಿದ್ದಾರೆ. ಬಂಧಿಸಿದರೆ ಅದು ಇನ್ನೂ ಶೇ 6ರಷ್ಟು ಹೆಚ್ಚುತ್ತದೆ
>
> **ಅರವಿಂದ ಕೇಜ್ರಿವಾಲ್,** ದೆಹಲಿ ಮುಖ್ಯಮಂತ್ರಿ

ಗದ್ದಲ ನಡೆಸಿದ ಮೂವರು ಶಾಸಕರನ್ನು ಮಾರ್ಷಲ್‌ಗಳು ಹೊರಕಳಿಸಿದರು. ಅದನ್ನು ವಿರೋಧಿಸಿ ಬಿಜೆಪಿಯ ಉಳಿದ ಐವರು ಶಾಸಕರು ಸಭಾತ್ಯಾಗ ಮಾಡಿದರು. ನಂತರ ವಿಶ್ವಾಸಮತ ನಿರ್ಣಯವನ್ನು ಮತಕ್ಕೆ ಹಾಕಲಾಯಿತು.

ಸದನದಲ್ಲಿ ಹಾಜರಿದ್ದ ಎಎಪಿ ಶಾಸಕರೆಲ್ಲರೂ ನಿರ್ಣಯದ ಪರವಾಗಿ ಮತ ಹಾಕಿದರು. ಬಿಜೆಪಿಯ ಒಬ್ಬ ಶಾಸಕನೂ ಇರದಿದ್ದ ಕಾರಣ, ನಿರ್ಣಯದ ವಿರುದ್ಧ ಒಂದು ಮತವೂ ಬೀಳಲಿಲ್ಲ.

ಲೆಫ್ಟಿನೆಂಟ್ ಗವರ್ನರ್ ನಿವಾಸದ ಎದುರು ಎಎಪಿ ಶಾಸಕರು ಗುರುವಾರ ಪ್ರತಿಭಟನೆ ನಡೆಸಿದರು. ಅವರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು –ಪಿಟಿಐ ಚಿತ್ರ

ಆರೋಪ ಆಧಾರರಹಿತ

‘ನಾನು ದೆಹಲಿ ಜನತೆಗಾಗಿ ಉತ್ತಮ ಆಡಳಿತ ಮತ್ತು ಉತ್ತಮ ಸೇವೆ ನೀಡುವುದು, ಭ್ರಷ್ಟಾಚಾರದ ವಿರುದ್ಧ ಸಂಪೂರ್ಣ ಅಸಹಿಷ್ಣುತೆ ತೋರುವುದು ನನ್ನ ಉದ್ದೇಶ. ಆದರೆ ದೆಹಲಿಯ ಗೌರವಾನ್ವಿತ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ನನ್ನ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ಜನರ ಗಮನವನ್ನು ಬೇರೆಡೆ ಸೆಳೆಯಲು ಅವರು ಈ ತಂತ್ರ ಬಳಸುತ್ತಿದ್ದಾರೆ’ ಎಂದು ಲೆಫ್ಟಿನೆಂಟ್ ಗವರ್ನರ್ ಸಕ್ಸೇನಾ ಅವರು ಆರೋಪಿಸಿದ್ದಾರೆ.

2016ರಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷರಾಗಿದ್ದಾಗ ಸಕ್ಸೇನಾ ಅವರು ಅಕ್ರಮ ಎಸಗಿದ್ದರು. ನೋಟುರದ್ದತಿ ಸಂದರ್ಭದಲ್ಲಿ ₹1,400 ಕೋಟಿಯಷ್ಟು ಮೊತ್ತದ ರದ್ದಾದ ನೋಟುಗಳನ್ನು ಹೊಸ ನೋಟುಗಳಿಗೆ ಬದಲಾಯಿಸಿಕೊಂಡಿದ್ದಾರೆ ಎಂದು ಎಎಪಿ ಶಾಸಕರು ದೆಹಲಿ ವಿಧಾನಸಭೆಯಲ್ಲಿ ಆರೋಪಿಸಿದ್ದರು.

‘ಮುಂದಿನ ದಿನಗಳಲ್ಲಿ ನನ್ನ ಮತ್ತು ನನ್ನ ಕುಟುಂಬದ ಸದಸ್ಯರ ವಿರುದ್ಧ ಇಂತಹ ಆಧಾರರಹಿತ ಆರೋಪಗಳ ಸಂಖ್ಯೆ ಹೆಚ್ಚಲಿದೆ. ಆದರೆ, ಎಂತಹ ಒತ್ತಡದ ಸಂದರ್ಭದಲ್ಲೂ ನಾನು ಕರ್ತವ್ಯವಿಮುಖನಾಗುವುದಿಲ್ಲ ಎಂಬುದನ್ನು ಕೇಜ್ರಿವಾಲ್ ಅರ್ಥ ಮಾಡಿಕೊಳ್ಳಬೇಕು. ದೆಹಲಿ ಜನರ ಜೀವನಮಟ್ಟ ಸುಧಾರಿಸುವಲ್ಲಿ ನನ್ನ ಬದ್ಧತೆಯನ್ನು ಮುಕ್ಕಾಗಿಸಲು ಸಾಧ್ಯವಿಲ್ಲ’ ಎಂದು ಸಕ್ಸೇನಾ ಹೇಳಿದ್ದಾರೆ.

ಎಎಪಿ ಶಾಸಕರು ಮಾಡಿರುವ ಆರೋಪದ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲು ಸಕ್ಸೇನಾ ನಿರ್ಧರಿಸಿದ್ದಾರೆ ಎಂದು ರಾಜಭವನದ ಮೂಲಗಳು ಹೇಳಿವೆ.

ಎಲ್‌ಜಿ ನಿವಾಸದ ಎದುರು ಪ್ರತಿಭಟನೆ

ದೆಹಲಿ ಲೆಫ್ಟಿನೆಂಟ್ ಗವರ್ನರ್ (ಎಲ್‌ಜಿ) ಮತ್ತು ಎಎಪಿ ಸರ್ಕಾರದ ನಡುವಣ ಸಂಬಂಧ ಮತ್ತಷ್ಟು ಬಿಗಡಾಯಿಸಿದೆ. ದೇಶದ ರಾಜಧಾನಿ ದೆಹಲಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹಾಳಾಗಿದೆ ಎಂದು ಆರೋಪಿಸಿ ಎಎಪಿ ಶಾಸಕರು ಗುರುವಾರ ರಾಜ್ಯಪಾಲರ ನಿವಾಸದ ಎದುರು ಧರಣಿ ನಡೆಸಿದ್ದಾರೆ. ಮತ್ತೊಂದೆಡೆ ಎಲ್‌ಜಿ ಮತ್ತು ಮುಖ್ಯಮಂತ್ರಿಗಳ ವಾರದ ಸಭೆಗೆ ಹಾಜರಾಗಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಕಚೇರಿ ತಿಳಿಸಿದೆ.

ದೆಹಲಿ ಪೊಲೀಸ್ ಇಲಾಖೆಯು ಕೇಂದ್ರ ಗೃಹ ಸಚಿವಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತದೆ. ‘ದೆಹಲಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹಾಳಾಗಿದೆ. ಈ ಬಗ್ಗೆ ಎಲ್‌ಜಿ ಸಕ್ಸೇನಾ ಅವರ ಜತೆ ಚರ್ಚಿಸಬೇಕಿತ್ತು. ಹೀಗಾಗಿ ಅವರನ್ನು ಭೇಟಿಮಾಡಲು ಬಂದಿದ್ದೆವು. ಆದರೆ ಅವರ ಭೇಟಿಗೆ ಅವಕಾಶ ನೀಡಿಲ್ಲ’ ಎಂದು ಎಎಪಿ ಶಾಸಕರು ಹೇಳಿದ್ದಾರೆ.

ಗುರುವಾರ ಬೆಳಿಗ್ಗೆ ದೆಹಲಿ ವಿಧಾನಸಭೆಯಿಂದ ಮೆರವಣಿಗೆ ಹೊರಟ ಎಎಪಿ ಶಾಸಕರು, ರಾಜ್ಯಪಾಲರ ನಿವಾಸವನ್ನು ತಲುಪಿದ್ದರು. ಆದರೆ, ಎಎಪಿ ಶಾಸಕರು ಪೂರ್ವಾನುಮತಿ ಪಡೆಯದೇ ಇದ್ದ ಕಾರಣ, ಭೇಟಿಗೆ ಎಲ್‌ಜಿ ನಿರಾಕರಿಸಿದರು ಎನ್ನಲಾಗಿದೆ. ಭೇಟಿಗೆ ಅವಕಾಶ ನೀಡದೇ ಇದ್ದ ಕಾರಣ ಎಎಪಿ ಶಾಸಕರು ರಾಜ್ಯಪಾಲರ ನಿವಾಸದ ಎದುರೇ ಧರಣಿ ಕೂತರು.

ಸಭೆಗೆ ಸತತ ಗೈರು: ದೆಹಲಿ ಲೆಫ್ಟಿನೆಂಟ್ ಗವರ್ನರ್ ಮತ್ತು ಮುಖ್ಯಮಂತ್ರಿಯು ಪ್ರತಿವಾರ ಸಭೆ ನಡೆಯುವುದು ವಾಡಿಕೆ. ಆದರೆ, ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸತತವಾಗಿ ಮೂರು ಸಭೆಗಳಲ್ಲಿ ಭಾಗವಹಿಸಿಲ್ಲ ಮತ್ತು ಈಗ ನಾಲ್ಕನೇ ಸಭೆಯಲ್ಲಿ ಭಾಗಿಯಾಗಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದ್ದಾರೆ.

ಈ ಶುಕ್ರವಾರ ಸಭೆ ನಡೆಯಬೇಕಿತ್ತು. ‘ಮುಖ್ಯಮಂತ್ರಿ ಕೇಜ್ರಿವಾಲ್ ಅವರು ಶುಕ್ರವಾರ ಮತ್ತು ಶನಿವಾರ ಗುಜರಾತ್ ಪ್ರವಾಸದಲ್ಲಿ ಇರಲಿದ್ದಾರೆ. ಹೀಗಾಗಿ ಅವರು ವಾರದ ಸಭೆಗೆ ಹಾಜರಾಗಲು ಸಾಧ್ಯವಿಲ್ಲ’ ಎಂದು ಮುಖ್ಯಮಂತ್ರಿಯ ಕಚೇರಿಯು ಹೇಳಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಮಲ್ನಾಡ್ ಕೋಚಿಂಗ್ ಸೆಂಟರ್ #50, ಮಲ್ನಾಡ್, MHR ಬಡಾವಣೆ ಹೆಸರಘಟ್ಟ ರಸ್ತೆ, ಬೆಂಗಳೂರು–90, ಕಿರ್ಲೋಸ್ಕರ್ ಲೇಔಟ್ ಮುಖ್ಯ ರಸ್ತೆಯ Dead end Left.
ಮುಂಬರುವ PSI, PC, FDA, ಮತ್ತು KPSC ಯ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಸೆಪ್ಟೆಂಬರ್ 11 ರಿಂದ ಹೊಸ ತರಗತಿಗಳನ್ನು ಆರಂಭಿಸಲಾಗುವುದು. [ನಾವು ಬೇರೆಲ್ಲೂ ಉಪ ಶಾಖೆಗಳನ್ನು ಹೊಂದಿಲ್ಲ]
ತೀರ್ಥಹಳ್ಳಿ ಕೇಶವಮೂರ್ತಿ ನಿರ್ದೇಶಕರು - MCC
9481100670 | 9845068233 | Subscribe: YouTube “Malnad Academy”

ಉದ್ಯೋಗಾವಕಾಶ

Walk-in

TATA Group (Aerostructures) is Hiring ! ! !
REQUIREMENT
Assembly Operator
Description: Hands on experience in Aerostructure Assembly process. Good understanding on Engineering drawings, familiar with hand tools and cutting tools. Note: Candidates working in Aerospace industry are preferred. • Qualification: ITI – Fitter & Apprentice (NCVT) • Experience: 4-8 Years
Manufacturing Engineer – with knowledge of Sheet metal, Machining processes
Description: Experience in designing, implementing & reviewing aircraft documents and complex tools
Understanding of different SAP, APQP, PPAP and PFMEA tools, Different Special Processes (NADCAP)
Ability to read and interpret complex engineering drawings and specifications. • Qualification: Diploma / BE / B.Tech / M.Tech • Experience: 2 to 12 years
Estimator: Aerostructure Assembly, Machining, Sheetmetal & Composites
Description: Good Knowledge on Manufacturing Engineering/Production, NC programming experience of Aerostructure Assembly. CATIA & UG, RFP documents, 2D drawings, 3D CAD models.
Understanding on latest machines like high speed Aluminium machining and machining of Hard metals like Steel, Titanium, Inconel and other Nickel based alloys. • Qualification: Diploma / BE / B.Tech / M.Tech • Experience: 2 to 12 years
Quality Control/Quality Assurance & Quality Engineering
Description: Developing and implementing quality QMS. Monitoring and analyzing quality performance. Inspecting and testing materials, equipment, processes, and products to ensure quality specifications are met. Implementing the Quality tools (SPC, PFMEA, MSA & 7QC Tools) Handling Customer Queries/complaints, Root cause analysis & corrective action and Audit coordination. • Qualification: Diploma / BE / B.Tech / M.Tech • Experience: 2 to 12 years
Quality CMM Operator/Inspector
Description: Hands on experience in Zeiss or Hexagon CMMs operation and conventional inspection. Good understanding in drawing, GD&T Geometrical dimensions and tolerances. • Qualification: Diploma • Experience: 2-6 Years
Work Location: Hyderabad
Date of Interview: 03-09-2022 Timings: 09.00AM - 5.00PM
Documents to Carry: 1. Updated CV & Passport Size Photograph. (2) All Education Certificates. (3) Present Company CTC Letter & Last 3 months Payslips. (4) Previous Company Experience Letters/Service Certificates (5) Aadhaar Copy
VENUE: HOTEL CITRUS CUNNINGHAM
34, Cunningham Road, Bengaluru - 560052.

Hotel
WANTED CONTINENTAL Cook and Tandoori Cook in Davanagere Hotel. Contact 9019242525 7022460137

General
ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 8197650569, 7204396011

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC,PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 1500020000 ಗಳಿಸಿ. ಕರೆಮಾಡಿ: 9611225388/ 9611225266

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Drivers
ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18,000-20,000 ಪ್ರತಿ ತಿಂಗಳು+ ಕುಟುಂಬಕ್ಕೆ ಖಾಸಗಿ ವಿಮೆ +ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

ಬಿಲ್ಡರ್ ಎಸೆನ್ಷಿಯಲ್

Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಮತ್ತು ರೆಡಿಮೇಡ್ ಪ್ರಿಕ್ಯಾಸ್ಟಿಂಗ್ ಕಾಂಪೌಂಡ್‌ಗೋಡೆ ಕೆಲಸಕ್ಕಾಗಿ ಸಂಪರ್ಕಿಸಿ: 9880916988

ಪ್ರವಾಸ

Pilgrimage Tours
ಶ್ರೀಮಹಾಲಕ್ಷ್ಮೀ ಟ್ರಾವೆಲ್ಸ್. 10.10.22 ದೆಹಲಿ- ವೈಷ್ಣೋದೇವಿ- ಅಮೃತಸರ. 01.11.22 ದೆಹಲಿ,ಆಗ್ರ, ಮಥುರಾ, ಕಾಶಿ, ಗಯ. 10.11.22 ನೇಪಾಳ, ಮುಕ್ತಿನಾಥ, ಪಶುಪತಿನಾಥ. 21.11.22 ಗುಜರಾತ್- ದ್ವಾರಕಾ- ನಾಗನಾಥ, ಸೋಮನಾಥ. 9964527782, 9591017782

Travel
6.9.2022 ಮತ್ತು 16.9.2022 ರಿಂದ 13 ದಿನಗಳು ಎ/ಸಿ ರೈಲು ಮತ್ತು ಎ/ಸಿ ಬಸ್ಸಿನಲ್ಲಿ ಕಾಶಿ- ನೇಪಾಳ- ಗಯಾ- ಅಯೋಧ್ಯ ಸೀತಾಮುಡಿ- ಅಲಹಾಬಾದ್. 8.9.2022 ರಿಂದ 4ದಿನಗಳು. ಧರ್ಮಸ್ಥಳ, ಮುರಡೇಶ್ವರ- ಹೊರನಾಡು, ಕೊಲ್ಲೂರು. 24.9.2022 ರಿಂದ 2ದಿನ ಮಡಿಕೇರಿ, ಅಬ್ಬೆಫಾಲ್ಸ್, ಮೈಸೂರು. 15.11.2022 ರಿಂದ 9ದಿನ ಅಹಮದಾಬಾದ್, ಸೋಮನಾಥ, ಮೌಂಟ್‌ಅಬು, ಸ್ಟ್ಯಾಚು ಆಫ್ ಯುನಿಟಿ. ಶ್ರೀಗುರುರಾಜ ಟ್ರಾವೆಲ್ಸ್ (ರಿ) 9900124333, 9611082432, 8123099913

18.12.2022ರಿಂದ 16/13ದಿನಗಳು ವಿಮಾನ ಮತ್ತು ಎಸಿ ಬಸ್,ಡೀಲಕ್ಸ್ ರೂಮ್ ನೊಂದಿಗೆ ನೇಪಾಳ,ಮುಕ್ತಿನಾಥ, ಭಕ್ತಾಪುರ್,ಚಂದ್ರಗಿರಿಬೆಟ್ಟ,ಫೋಕ್ರ, ಕಾಶಿ ಇತ್ಯಾದಿ.13ದಿನಗಳು ಎಸಿ ಬಸ್,ಎಸಿ ರೂಮ್ ಪಂಚರಾಮ ಕ್ಷೇತ್ರ ಸಮೇತ ಭದ್ರಾಚಲಂ, ಅನ್ನವರಂ,ವಿಶಾಖಪಟ್ಟಣ.ಹಾಗೂ 9ದಿನಗಳ ಕನ್ಯಾಕುಮಾರಿ, ರಾಮೇಶ್ವರ,ನವಗ್ರಹ,ಮದುರೈ ಇತ್ಯಾದಿ..ಏಷ್ಯನ್ ಟ್ರಾವೆಲ್‌ಲೈನ್ಸ್ 164/3,ಆರ್.ವಿ.ರಸ್ತೆ, ಬೆಂಗಳೂರು..04. 8105657052, 26565085.

10.09.2022 26.09.2022 10.10.2022 ವಿಮಾನ/ರೈಲು/ಬಸ್ಸಿನಲ್ಲಿ ದೆಹಲಿ ಅಮೃತ್ಸರ್ ವೈಷ್ಣೋದೇವಿ ಹರಿದ್ವಾರ್ ಚಾರ್‌ಧಾಮ್ ಸಮೇತ 09.10.2022 ನೇಪಾಳ ಮುಕ್ತಿನಾಥ್ ಪೋಖ್ರಾ,ಲೂಂಬಿನಿ 09.11.2022 ಸೋಮನಾಥ್ ದ್ವಾರಕಾ ಬಾವನಗರ್ ಓಂಕಾರೇಶ್ವರ್ ದಕ್ಷಿಣ/ಮಧ್ಯ ಭಾರತ ಪ್ರವಾಸಗಳಿಗೆ ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು.4 26574131 8317446683 9916408171

★ಶ್ರೇಯಸ್ ಟೂರ್ಸ್★ 14.09.2022 10ದಿನಗಳು 6ವಿಮಾನದಲ್ಲಿ ಮುಕ್ತಿನಾಥ ಸಹಿತ ಅಖಂಡ ನೇಪಾಳರಾಷ್ಟ್ರ 26.09.2022 5ದಿನಗಳು ಅಹೋಬಲ,ಶ್ರೀಶೈಲ,ಮಹಾನಂದಿ ಮಂತ್ರಾಲಯ,ಯಾಗಂಟಿ ಬೇಲಂಗುಹೆ,09.10.2022 5ದಿನಗಳು ಅಷ್ಟವಿನಾಯಕ,ಶಿರಡಿ ಭೀಮಾಶಂಕರ,ಮಹಾಬಲೇಶ್ವರ ಕೊಲ್ಲಾಪುರ.8073824856/ 9206979202/ 6366322639

ಕ್ಲಾಸಿಫೈಡ್ಸ್ EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
THE RcsS SPOKEN ENGLISH ACADEMY
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555,
Email : info@thercss.com
Website : www.thercss.com

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY®
Recognised by GOK, Affiliated to VTU & Approved by AICTE
CET CODE: E087 | ESTD.: 1997 | COMEDK CODE: E149
BE: Bachelor of Engineering
❖ Computer Science
❖ Information Science
❖ Artificial Intelligence & Machine Learning
❖ Electronics & Communication
❖ Mechanical ❖ Civil
Ph.D Program
CSE | E&C | MECH
Maths | Chemistry
Physics
VKIT
College of Pharmacy
D.Pharm
B.Pharm
M.Pharm
CET B060
Institute of Management
BCA | BCA - Hons.
BBA | BBA - Hons.
MBA | M.Com
PGCET B-323
College of Law
5 Yrs : BA - LLB | B.Com - LLB
3 Yrs : LLB
Degree College
BSc | BA | BA-Journalism
B.Com | B.Com-Data Analytics
NAAC ACCREDITED
2022-23 Admissions Open
7625013738
9513953482
Admission Center: Dr.Rajkumar Road, Next to Orion Mall, Rajajinagar II Stage, Bengaluru-560055
VKIT Campus: Kumbalagodu, Kengeri, Bengaluru-560074
JES

ಭವಿಷ್ಯ

Astrology
ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಉದ್ಯೋಗಕ್ಕೆ
ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ: 9886213331

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Book Your Classifieds Ads Online Log in to dhclassifieds.com
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331
DH DECCAN HERALD ಪ್ರಜಾವಾಣಿ

ಷೇರುಪೇಟೆ ವಹಿವಾಟು 770



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,759
ಇಂದಿನ ಅಂತ್ಯ	17,543
▼	216
ದಿನದ ಕನಿಷ್ಠ	17,166

ವಿನಿಮಯ ದರ

$ ಡಾಲರ್	79.56
£ ಪೌಂಡ್	92.29
€ ಯುರೊ	79.77
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹445

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1665 (1670)
ಸೋಯಾ (ರಿಫೈನ್ಡ್)	₹1250 (1260)
ಸೂರ್ಯಕಾಂತಿ (ರಿಫೈನ್ಡ್)	₹1450 (1500
ಪಾಮೋಲಿನ್	₹1025 (1050)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹338-562

ದ್ವಿತಳಿ (ಬಿ.ವಿ) ₹470-791

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹153
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹136

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ ₹16000-20000

2ನೇ ದರ್ಜೆ ₹12000-15000

ವಾಣಿಜ್ಯ ಬಳಕೆ ಸಿಲಿಂಡರ್ ದರ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ಗುರುವಾರ ₹ 91.5ರಷ್ಟು ಇಳಿಕೆ ಮಾಡಿವೆ. ಇದರಿಂದಾಗಿ ದೆಹಲಿಯಲ್ಲಿ 19 ಕೆ.ಜಿ ತೂಕದ ಸಿಲಿಂಡರ್ ದರ ₹1,976.50 ರಿಂದ ₹ 1,885ಕ್ಕೆ ಇಳಿಕೆ ಆಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಇಳಿಕೆ ಆಗಿರುವುದರಿಂದ ಈ ಪರಿಷ್ಕರಣೆ ಮಾಡಲಾಗಿದೆ. ವಿಮಾನ ಇಂಧನ (ಎಟಿಎಫ್) ದರವನ್ನು ಪ್ರತಿ ಕಿಲೋ ಲೀಟರ್‌ಗೆ ₹ 874.13ರಷ್ಟು ಇಳಿಕೆ ಆಗಿದ್ದು ದೆಹಲಿಯಲ್ಲಿ ₹ 1.21 ಲಕ್ಷಕ್ಕೆ ತಲುಪಿದೆ.

ಆಕಸ್ಮಿಕ ಲಾಭ ತೆರಿಗೆ ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಗುರುವಾರದಿಂದ ಜಾರಿಗೆ ಬರುವಂತೆ ಡೀಸೆಲ್ ಮತ್ತು ಎಟಿಎಫ್ ರಫ್ತು ಮೇಲಿನ ಆಕಸ್ಮಿಕ ಲಾಭ ತೆರಿಗೆ ಹೆಚ್ಚಿಸಿದೆ. ಅಂತೆಯೇ ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ತೆರಿಗೆಯನ್ನು ಸಹ ಹೆಚ್ಚಿಸಲಾಗಿದೆ.

ಡೀಸೆಲ್ ರಫ್ತು ಮೇಲಿನ ತೆರಿಗೆಯು ಪ್ರತಿ ಲೀಟರಿಗೆ ₹ 7 ಇದ್ದಿದ್ದು ₹ 13.5ಕ್ಕೆ ಏರಿಕೆ ಆಗಿದೆ. ಎಟಿಎಫ್ ರಫ್ತು ಮೇಲಿನ ತೆರಿಗೆ ₹ 2 ಇದ್ದಿದ್ದು ₹ 9ಕ್ಕೆ ಏರಿಕೆ ಮಾಡಲಾಗಿದೆ. ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ತೆರಿಗೆಯನ್ನು ಪ್ರತಿ ಟನ್‌ಗೆ ₹13,300ಕ್ಕೆ ಹೆಚ್ಚಿಸಲಾಗಿದೆ.

ಮುಂಬೈ ಧಾರಣೆ

ಶೇಂಗಾ

1–9-2022

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670 (1680)
ಒಂದು ವಾರದ ಡೆಲಿವರಿ	1665 (1675)
ಸೋಯಾ ಕಚ್ಚಾ	1190 (1200)
ಪಾಮ್ ವಾರದ ಡೆಲಿವರಿ	1023 (1048)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1450)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

50,150 (51,000)

ಬೆಳ್ಳಿ ಕೆ.ಜಿ 52,050 (54,400)

ಆವರಣದಲ್ಲಿ ಮಂಗಳವಾರದ ಧಾರಣೆ

ಪ್ರಮುಖ ಮೂಲಸೌಕರ್ಯ ವಲಯಗಳ ಬೆಳವಣಿಗೆ ಆರು ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ದೇಶದ ಎಂಟು ಪ್ರಮುಖ ಮೂಲಸೌಕರ್ಯ ವಲಯಗಳು ಜುಲೈನಲ್ಲಿ ಶೇ 4.5ರಷ್ಟು ಬೆಳವಣಿಗೆ ಕಂಡಿವೆ. ಹಿಂದಿನ ವರ್ಷದ ಜುಲೈಗೆ ಹೋಲಿಸಿದರೆ ಆರು ತಿಂಗಳ ಕನಿಷ್ಠ ಮಟ್ಟದ ಬೆಳವಣಿಗೆ ಇದಾಗಿದೆ. 2021ರ ಜುಲೈನಲ್ಲಿ ಈ ವಲಯಗಳ ಬೆಳವಣಿಗೆಯು ಶೇ 9.9ರಷ್ಟು ಇತ್ತು.

ರಸಗೊಬ್ಬರ, ಕಲ್ಲಿದ್ದಲು, ಸಿಮೆಂಟ್, ಉಕ್ಕು, ಸಂಸ್ಕರಣಾ ಉತ್ಪನ್ನಗಳು ಮತ್ತು ವಿದ್ಯುತ್ ಉತ್ಪಾದನೆ ಹೆಚ್ಚಾಗಿದೆ.

ಆದರೆ, ಕಚ್ಚಾತೈಲ ಮತ್ತು ನೈಸರ್ಗಿಕ ಅನಿಲ ಉತ್ಪಾದನೆ ಕ್ರಮವಾಗಿ ಶೇ 3.8 ಮತ್ತು ಶೇ 0.3ರಷ್ಟು ಇಳಿಕೆ ಆಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮಾಹಿತಿ ನೀಡಿದೆ.

ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜುಲೈ ಅವಧಿಯಲ್ಲಿ ಈ ಎಂಟು ವಲಯಗಳ ಬೆಳವಣಿಗೆ ಶೇ 11.5ರಷ್ಟು ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಶೇ 21.4ರಷ್ಟು ಬೆಳವಣಿಗೆ ಕಂಡುಬಂದಿತ್ತು.

ಕೆಲವು ವಲಯಗಳ ಬೆಳವಣಿಗೆಯು ಇನ್ನೂ ಕೋವಿಡ್ ಸಾಂಕ್ರಾಮಿಕದ ಮುಂಚಿನ ಮಟ್ಟಕ್ಕಿಂತಲೂ ಕಡಿಮೆ ಇದೆ. ಹೀಗಾಗಿ ವಲಯಗಳ ಒಟ್ಟಾರೆ ಚೇತರಿಕೆಗೆ ಇನ್ನೂ ಹೆಚ್ಚಿನ ಸಮಯ ಹಿಡಿಯಲಿದೆ ಎಂದು ಇಂಡಿಯಾ ರೇಟಿಂಗ್ಸ್ ಸಂಸ್ಥೆಯು ಹೇಳಿದೆ.



* 2022ರ ಮೇ, ಜೂನ್, ಜುಲೈ ಅಂಕಿ–ಅಂಶಗಳು ತಾತ್ಕಾಲಿಕ

(ಮಾಹಿತಿ: ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ) ಪ್ರಜಾವಾಣಿ ಗ್ರಾಫಿಕ್ಸ್

ಜಾಗತಿಕ ಷೇರುಪೇಟೆಗಳಲ್ಲಿ ಮಾರಾಟದ ಒತ್ತಡ

ಸೆನ್ಸೆಕ್ಸ್ 770 ಅಂಶ ಇಳಿಕೆ

ಮುಂಬೈ (ಪಿಟಿಐ): ವಿವಿಧ ಕೇಂದ್ರೀಯ ಬ್ಯಾಂಕ್‌ಗಳು ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿದರ ಏರಿಕೆಗೆ ಮುಂದಾಗಿವೆ. ಇದು ಹೂಡಿಕೆದಾರರಲ್ಲಿ ಆತಂಕಕ್ಕೆ ದೂಡಿದ್ದು, ಭಾರತವನ್ನೂ ಒಳಗೊಂಡು ಜಾಗತಿಕ ಮಟ್ಟದಲ್ಲಿ ಷೇರುಪೇಟೆಗಳು ಗುರುವಾರ ಕುಸಿತ ಕಾಣುವಂತಾಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 770 ಅಂಶ ಕುಸಿತ ಕಂಡು, 58,766 ಅಂಶಗಳಿಗೆ ತಲುಪಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 216 ಅಂಶ ಇಳಿಕೆಯಾಗಿ 17,542 ಅಂಶಗಳಿಗೆ ಇಳಿಕೆ ಕಂಡಿದೆ.

ಕೇಂದ್ರ ಸರ್ಕಾರವು ಡೀಸೆಲ್, ಎಟಿಎಫ್ ರಫ್ತು ಮೇಲೆ ಹಾಗೂ ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲೆ ತೆರಿಗೆ ಹೆಚ್ಚಳ ಮಾಡಿರುವುದರಿಂದಾಗಿ ರಿಲಯನ್ಸ್ ಇಂಡಸ್ಟ್ರೀಸ್ ಷೇರು ಮೌಲ್ಯವು ಶೇ 2.99ರಷ್ಟು ಹೆಚ್ಚಿನ ನಷ್ಟ ಕಂಡಿತು.

‘ಷೇರುಪೇಟೆಗಳು ಕಳೆದ ಕೆಲವು ದಿನಗಳಿಂದ ಹೆಚ್ಚಿನ ಏರಿಳಿತ ಕಾಣುತ್ತಿವೆ.

ಹೀಗಿದ್ದರೂ ಜಿಡಿಪಿ ಬೆಳವಣಿಗೆ ಮತ್ತು ವಿದೇಶಿ ಸಾಂಸ್ಥಿಕ ಬಂಡವಾಳ ಒಳಹರಿವಿನಿಂದಾಗಿ ಸೂಚ್ಯಂಕಗಳು ಹೆಚ್ಚಿನ ಕುಸಿತ ಕಾಣುವುದು ತಪ್ಪಿತು’ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವೀಸ್ ಲಿಮಿಟೆಡ್‌ನ ರಿಟೇಲ್ ರಿಸರ್ಚ್ ಮುಖ್ಯಸ್ಥ ಸಿದ್ಧಾರ್ಥ್ ಖೇಮ್ಕಾ ಹೇಳಿದ್ದಾರೆ.

ಬಿಎಸ್‌ಇನಲ್ಲಿ ವಲಯವಾರು ಇಂಧನ ಶೇ 1.99, ತೈಲ ಮತ್ತು ಅನಿಲ ಶೇ 1.77, ಐಟಿ ಶೇ 1.68, ಲೋಹ ಶೇ 1.56, ಟೆಕ್ ಶೇ 1.41ರಷ್ಟು ಇಳಿಕೆ ಕಂಡಿವೆ.

ಏಷ್ಯಾದಲ್ಲಿ, ಸೋಲ್, ಟೋಕಿಯೊ, ಹಾಂಗ್‌ಕಾಂಗ್ ಮತ್ತು ಶಾಂಘೈ ಷೇರುಪೇಟೆಗಳು ಇಳಿಮುಖವಾಗಿ ವಹಿವಾಟು ಅಂತ್ಯಗೊಳಿಸಿದವು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 2ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 93.73 ಡಾಲರ್‌ಗೆ ತಲುಪಿತು.

ಮುಖ್ಯಾಂಶಗಳು

- ರಿಲಯನ್ಸ್ ಇಂಡಸ್ಟ್ರೀಸ್ ಷೇರು ಮೌಲ್ಯ ಶೇ 2.99ರಷ್ಟು ಗರಿಷ್ಠ ಇಳಿಕೆ
- ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 4 ಪೈಸೆ ಇಳಿಕೆ
- ಕಚ್ಚಾ ತೈಲ ದರ ಇಳಿಕೆ

ದೇಶದಲ್ಲಿ ಕೃಷಿ, ಸೇವಾ ವಲಯಗಳ ಚಟುವಟಿಕೆ ಹೆಚ್ಚಳ

ಜಿಡಿಪಿ ಶೇ 13.5ರಷ್ಟು ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಜಿಡಿಪಿಯು ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ (ಏಪ್ರಿಲ್-ಜೂನ್) ಶೇ 13.5ರಷ್ಟು ಬೆಳವಣಿಗೆ ಕಂಡಿದೆ. ಕಳೆದ ನಾಲ್ಕು ತ್ರೈಮಾಸಿಕಗಳಲ್ಲಿಯೇ ಅತ್ಯಂತ ವೇಗದ ಬೆಳವಣಿಗೆ ಇದಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ತಿಳಿಸಿದೆ.

ಕೃಷಿ ಮತ್ತು ಸೇವಾ ವಲಯಗಳ ಚಟುವಟಿಕೆ ಹೆಚ್ಚಾಗಿರುವುದರಿಂದ ಜಿಡಿಪಿಯು ಈ ಪ್ರಮಾಣದ ಬೆಳವಣಿಗೆ ಕಂಡಿದೆ ಎಂದು ಅದು ಹೇಳಿದೆ.

ಚೀನಾದ ಜಿಡಿಪಿಯು 2022ರ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಶೇ 0.4ರಷ್ಟು ಬೆಳವಣಿಗೆ ಕಂಡಿದೆ. ಹೀಗಾಗಿ ಭಾರತವು ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಪ್ರಮುಖ ಆರ್ಥಿಕತೆಯಾಗಿದೆ ಎಂದು ವರದಿಯಲ್ಲಿ ತಿಳಿಸಿದೆ.

2021-22ರ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ 20.1ರಷ್ಟು ಬೆಳವಣಿಗೆ ಕಂಡಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿಯ ಬೆಳವಣಿಗೆ ಪ್ರಮಾಣದಲ್ಲಿ ಇಳಿಕೆ ಆಗಿದೆ.

ಬಡ್ಡಿದರ ಹೆಚ್ಚಳ ಹಾಗೂ ಜಗತ್ತಿನ ಪ್ರಮುಖ ದೇಶಗಳು ಆರ್ಥಿಕ ಹಿಂಜರಿತಕ್ಕೆ ಒಳಗಾಗುವ ಆತಂಕದಿಂದಾಗಿ ಮುಂಬರುವ ತ್ರೈಮಾಸಿಕಗಳಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಕಡಿಮೆ ಆಗುವ ಸಾಧ್ಯತೆ ಇದೆ ಎಂದು ಅದು ತಿಳಿಸಿದೆ.

ತಯಾರಿಕಾ ವಲಯದ ಬೆಳವಣಿಗೆಯು ಶೇ 4.8ರಷ್ಟು ಇರುವುದು ಆತಂಕಕ್ಕೆ ಕಾರಣವಾಗಿದೆ. ಅಲ್ಲದೆ, ರಫ್ತು ಮೌಲ್ಯಕ್ಕಿಂತಲೂ ಆಮದು ಮೌಲ್ಯವು ಹೆಚ್ಚಿಗೆ ಇರುವುದು ಸಹ ಕಳವಳಕಾರಿ ಆಗಿದೆ ಎಂದು ಹೇಳಿದೆ.

ಮುಂಗಾರು ಎಲ್ಲೆಡೆಯೂ ಸಮನಾಗಿ ಬೀಳದೇ ಇರುವುದರಿಂದ ಕೃಷಿ ಬೆಳವಣಿಗೆಯ ಮೇಲೆ ಪರಿಣಾಮ ಉಂಟುಮಾಡುವ ಸಾಧ್ಯತೆ ಇದ್ದು, ಇದರಿಂದಾಗಿ ಗ್ರಾಮೀಣ ಭಾಗದ ಬೇಡಿಕೆಯು ಕಡಿಮೆ ಆಗಬಹುದು ಎಂದು ತಿಳಿಸಿದೆ. ಆಹಾರ ಮತ್ತು ಇಂಧನದ ದರ ಏರಿಕೆಯಿಂದ ದೇಶದ ಆರ್ಥಿಕ ಚಟುವಟಿಕೆಯಲ್ಲಿ ಶೇ 55ರಷ್ಟು ಪಾಲು ಹೊಂದಿರುವ ಗ್ರಾಹಕರ ಖರೀದಿ ಸಾಮರ್ಥ್ಯ ಕುಗ್ಗಿದೆ.

ಜಿಡಿಪಿ ಬೆಳವಣಿಗೆಯು ಕೋವಿಡ್‌ಗೂ ಮುಂಚಿನ ಮಟ್ಟಕ್ಕಿಂತಲೂ ಶೇ 4ಕ್ಕಿಂತಲೂ ಹೆಚ್ಚಿಗೆ ಇದೆ ಎಂದು ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷಕ್ಕೆ ವಿತ್ತೀಯ ಕೊರತೆಯನ್ನು ಶೇ 6.4ರಲ್ಲಿ ನಿಯಂತ್ರಿಸಬೇಕು ಎನ್ನುವ ಗುರಿಯನ್ನು ತಲುಪುವ ಹಾದಿಯಲ್ಲಿ ಸರ್ಕಾರ ಇದೆ ಎಂದು ಅವರು ತಿಳಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿಡಿಪಿ ಶೇ 7ಕ್ಕಿಂತಲೂ ಹೆಚ್ಚಿನ ಬೆಳವಣಿಗೆ ಕಾಣಲಿದೆ ಎಂದೂ ಅವರು ಹೇಳಿದ್ದಾರೆ.

ಜಗತ್ತಿನ ಪ್ರಮುಖ ದೇಶಗಳ ಜಿಡಿಪಿ ಬೆಳವಣಿಗೆ ಇಳಿಕೆ ಕಾಣುತ್ತಿದೆ. ಇಂತಹ ಸಂದರ್ಭದಲ್ಲಿ ಭಾರತದ ಜಿಡಿಪಿ ಬೆಳವಣಿಗೆ ಕಾಣುತ್ತಿದೆ. ಇದು ಜಾಗತಿಕ ಹೂಡಿಕೆದಾರರ ವಿಶ್ವಾಸವನ್ನು ಹೆಚ್ಚಿಸಲಿದ್ದು, ದೇಶಕ್ಕೆ ಹೂಡಿಕೆಯನ್ನು ಆಕರ್ಷಿಸಲಿದೆ ಎಂದು ಡೆಲಾಯ್ಟ್ ಇಂಡಿಯಾದ ಅರ್ಥಶಾಸ್ತ್ರಜ್ಞೆ ರುಮ್ಕಿ ಮಜುಮ್ದಾರ್ ಹೇಳಿದ್ದಾರೆ.



ಜಿಡಿಪಿ ಅಂದಾಜು ತಗ್ಗಿಸಿದ ಮೂಡಿಸ್

ಬಡ್ಡಿದರ ಏರಿಕೆ, ಜಾಗತಿಕ ಮಂದಗತಿಯ ಆರ್ಥಿಕ ಬೆಳವಣಿಗೆಯ ಕಾರಣಗಳಿಂದಾಗಿ ಮೂಡಿಸ್ ಇನ್‌ವೆಸ್ಟರ್ಸ್ ಸರ್ವೀಸ್ ಸಂಸ್ಥೆಯು ಭಾರತದ ಬೆಳವಣಿಗೆಯ ಅಂದಾಜು ದರವನ್ನು ತಗ್ಗಿಸಿದೆ.

2022ರಲ್ಲಿ ಭಾರತದ ಜಿಡಿಪಿ ಶೇ 7.7ರಷ್ಟು ಬೆಳವಣಿಗೆ ಕಾಣಲಿದೆ ಎಂದು ಅದು ಪರಿಷ್ಕೃತ ಅಂದಾಜಿನಲ್ಲಿ ಹೇಳಿದೆ. ಶೇ 8.8ರಷ್ಟು ಬೆಳವಣಿಗೆ ಕಾಣಲಿದೆ ಎಂದು ಈ ಮೊದಲು ಅದು ಅಂದಾಜು ಮಾಡಿತ್ತು.

ಎಸ್‌ಬಿಐ ಸಹ ಜಿಡಿಪಿ ಬೆಳವಣಿಗೆ ಅಂದಾಜನ್ನು ಶೇ 7.5 ರಿಂದ ಶೇ 6.8ಕ್ಕೆ ಇಳಿಕೆ ಮಾಡಿದೆ.

ಈಕ್ವಿಟಿ ಎಫ್‌ಡಿಐ: ಶೇ 6 ಇಳಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ ಈಕ್ವಿಟಿಗಳಲ್ಲಿ ಆಗಿರುವ ವಿದೇಶಿ ನೇರ ಬಂಡವಾಳ ಹೂಡಿಕೆಯು (ಎಫ್‌ಡಿಐ) ಶೇ 6ರಷ್ಟು ಇಳಿಕೆ ಕಂಡಿದ್ದು, ₹1.32 ಲಕ್ಷ ಕೋಟಿ ಆಗಿದೆ ಎಂದು ಕೈಗಾರಿಕಾ ಉತ್ತೇಜನ ಮತ್ತು ಆಂತರಿಕ ವ್ಯಾಪಾರ ಇಲಾಖೆ (ಡಿಪಿಐಐಟಿ) ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	500

ಅಡಿಕೆ

ಬಂಟ್ವಾಳ

ಕೋಕ	12500-25000
ಹೊಸತು	27500-45000

ಕಾರ್ಕಳ

ಹೊಸತು	40000-47500

ಪುತ್ತೂರು

ಕೋಕ	11000-26000
ಹೊಸತು	34500-47500

ಶಿವಮೊಗ್ಗ

ಬೆಟ್ಟೆ	50099-55369
ಗೊರಬಲು	18752-39009
ರಾಶಿ	48199-54559

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16700	16000	16450	235.25 ಸೆಂಟ್ಸ್
ಎಸಿ	9100	8500	9050	
ಆರ್‌ಪಿ	10200	9800	9825	ಲಂಡನ್
ಆರ್‌ಸಿ	4800	4600	4700	2250 ಡಾಲರ್ಸ್

ಸಕಾರಾತ್ಮಕ ಹಾದಿಯಲ್ಲಿ ತಯಾರಿಕಾ ಚಟುವಟಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಯು ಒಂಬತ್ತು ತಿಂಗಳಿನಲ್ಲಿ ಎರಡನೇ ಬಾರಿಗೆ ಗರಿಷ್ಠ ಮಟ್ಟದ ಬೆಳವಣಿಗೆ ಕಂಡಿದೆ. ಆದರೆ, ಜುಲೈಗೆ ಹೋಲಿಸಿದರೆ ಆಗಸ್ಟ್‌ನಲ್ಲಿ ಅಲ್ಪ ಇಳಿಕೆ ಕಂಡಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ.

ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಜುಲೈನಲ್ಲಿ ಎಂಟು ತಿಂಗಳ ಗರಿಷ್ಠ ಮಟ್ಟವಾದ 56.4ಕ್ಕೆ ತಲುಪಿತ್ತು. ಆದರೆ, ಆಗಸ್ಟ್‌ನಲ್ಲಿ 56.2ಕ್ಕೆ ಇಳಿಕೆ ಆಗಿದೆ.

ಸೂಚ್ಯಂಕವು 50 ಮತ್ತು ಅದಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ. ಹೀಗಾಗಿ ಸತತ 14ನೇ ತಿಂಗಳಿನಲ್ಲಿಯೂ ವಲಯದ ಚಟುವಟಿಕೆಯು ಸಕಾರಾತ್ಮಕ ಮಟ್ಟದಲ್ಲಿಯೇ ಇದೆ. ಬೇಡಿಕೆ ಹೆಚ್ಚಾಗಿರುವುದು ಮತ್ತು ಹಣದುಬ್ಬರ ಆತಂಕ ಕಡಿಮೆ ಆಗಿರುವುದೇ ಇದಕ್ಕೆ ಕಾರಣ ಎಂದು ಎಸ್ ಆ್ಯಂಡ್ ಪಿ ಸಂಸ್ಥೆಯು ತಿಳಿಸಿದೆ.

‘ದೇಶದಲ್ಲಿ ಕೋವಿಡ್–19ಗೆ ಸಂಬಂಧಿಸಿದ ನಿರ್ಬಂಧಗಳು ಇಲ್ಲದೇ ಇರುವುದರಿಂದ ತಯಾರಿಕಾ ಚಟುವಟಿಕೆಗಳು ಬೆಳವಣಿಗೆ ಉತ್ತಮವಾಗಿವೆ. ಉತ್ಪಾದನೆ ಮತ್ತು ಹೊಸ ಬೇಡಿಕೆಗಳ ಮಟ್ಟದಲ್ಲಿ ಹೆಚ್ಚಳ ಕಂಡುಬರುತ್ತಿದ್ದು, ಇದು ಕಳೆದ ವರ್ಷದ ನವೆಂಬರ್ ತಿಂಗಳಿಗಿಂತಲೂ ಅಧಿಕ ಮಟ್ಟದಲ್ಲಿದೆ ಎಂದು ಸಂಸ್ಥೆಯ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ಹೇಳಿದ್ದಾರೆ.

ಬದಲಾವಣೆಯ ಹರಿಕಾರನ ಯುಗಾಂತ್ಯ

ಮಾಸ್ಕೊ(ಎ.ಪಿ): ಮಿಖಾಯಿಲ್ ಗೋರ್ಬಚೆವ್. 20ನೇ ಶತಮಾನದ ದ್ವಿತೀಯಾರ್ಧದಲ್ಲಿ ಜಾಗತಿಕ ರಾಜಕಾರಣದಲ್ಲಿ ಬಹು ಚರ್ಚಿತ ಹೆಸರು. ರಷ್ಯಾದ ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾಗಿ ಜನರ ಜೀವನಶೈಲಿ, ಗುಣಮಟ್ಟದಲ್ಲಿ ಆಮೂಲಾಗ್ರ ಬದಲಾವಣೆಯ ಕನಸು ಕಂಡಿದ್ದ ನೇತಾರ.

ಸುಮಾರು ಏಳು ವರ್ಷ ರಷ್ಯಾದ ಸಂಯುಕ್ತ ಸಂಸ್ಥಾನದ (ಯುಎಸ್‌ಎಸ್‌ಆರ್) ಅಧ್ಯಕ್ಷರಾಗಿದ್ದ ಗೋರ್ಬಚೆವ್ ಹಲವು ನಿರ್ಣಾಯಕ ನಿರ್ಧಾರಗಳನ್ನು ತೆಗೆದುಕೊಂಡಿದ್ದರು. ಆದರೆ, ಕೆಲವು ನಿರ್ಧಾರಗಳ ಹಿಂದಿನ ಲೆಕ್ಕಾಚಾರ ತಪ್ಪಿತ್ತು. ಕೆಲವು ನಿರ್ಧಾರಗಳೇ ತಿರುವುಮುರುವಾಗಿತ್ತು. ಇದರ ಪರಿಣಾಮ, ರಷ್ಯಾ ಒಕ್ಕೂಟದಿಂದ ಯುರೋಪಿಯನ್ ಪೂರ್ವ-ಪ್ರಾಂತ್ಯದ 15ಕ್ಕೂ ಹೆಚ್ಚು ರಾಷ್ಟ್ರಗಳು ಪ್ರತ್ಯೇಕರಾಷ್ಟ್ರವಾಗಿ ಅಸ್ತಿತ್ವ ಪಡೆದವು.

20ನೇ ಶತಮಾನದಲ್ಲಿ ವಿಶ್ವದಲ್ಲೇ ಅದ್ವಿತೀಯ ಶಕ್ತಿಯಾಗಿದ್ದ ರಷ್ಯಾ ಸಂಯುಕ್ತ ಸಂಸ್ಥಾನದಲ್ಲಿ ಆಂತರಿಕ ಸ್ಫೋಟಕ್ಕೆ ಕಾರಣರಾದರು ಎಂದೇ ಹೆಚ್ಚಿನ ರಷ್ಯನ್ನರಿಗೆ ಇವರ ಮೇಲೆ ಮುನಿಸಿತ್ತು.

ವಿಶ್ವದ ಪ್ರಭಾವಿ ಒಕ್ಕೂಟದ ಅಧ್ಯಕ್ಷರಾಗಿ ಜಾಗತಿಕ ರಾಜಕಾರಣದ ಗಮನಸೆಳೆದರೂ ಆಡಳಿತಾವಧಿಯ ಅಂತ್ಯದಲ್ಲಿ ಅಧಿಕಾರ ಚಲಾಯಿಸುವ ಪ್ರಭಾವವನ್ನೇ ಕಳೆದುಕೊಂಡಿದ್ದರು. ಆಡಳಿತಾತ್ಮಕವಾಗಿ ತಾವೇ ಆರಂಭಿಸಿದ್ದ ಬಿರುಗಾಳಿಯನ್ನು ನಿಲ್ಲಿಸಲು ಅವರು ಶಕ್ತರಾಗಿರಲಿಲ್ಲ.

ಸುಧಾರಣೆ ಕುರಿತಂತೆ ರಷ್ಯನ್ನರಿಗೆ ಇವರ ಬಗ್ಗೆ ಇದ್ದ ಅಸಮಾಧಾನದ ಪರಿಣಾಮವಾಗಿಯೇ 1996ರಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಡೆದಿದ್ದ ಚುನಾವಣೆಯಲ್ಲಿ ಅವರು ಶೇ 1ಕ್ಕೂ ಕಡಿಮೆ ಮತಗಳಿಸಿದ್ದರು. ಇವರ ಸ್ಪರ್ಧೆಯೇ ನಗೆಪಾಟಲಿಗೆ ಒಳಗಾಗಿತ್ತು. ಅಂತಿಮವಾಗಿ ತಮ್ಮದೇ ಆದ ದತ್ತಿ ಸಂಸ್ಥೆಗೆ ಸಂಪನ್ಮೂಲ ಕ್ರೋಢಿಕರಿಸಲು ಪಿಜ್ಜಾ ಹಟ್‌ಗಾಗಿ ಟಿ.ವಿ.ಜಾಹೀರಾತು ಅನ್ನು ಗೋರ್ಬಚೆವ್ ನಿರ್ಮಿಸಿದ್ದರು.

ಜನನ: 02-03-1931

ಮರಣ: 30-08-2022

‘ಗೋರ್ಬಚೆವ್ ಆಡಳಿತದ ಕಡೆಯ ದಿನಗಳು ಅಪಮಾನಕರವಾಗಿದ್ದವು. ಸುಧಾರಣೆ ಕ್ರಮಗಳಿಂದಾಗಿಯೇ ತಿರಸ್ಕಾರಕ್ಕೆ ಒಳಗಾಗಿದ್ದರು. 1991ರ ಆಗಸ್ಟ್‌ನಲ್ಲಿ ಅವರ ವಿರುದ್ಧ ಆಂತರಿಕವಾಗಿ ದಂಗೆ ಆರಂಭವಾಗಿತ್ತು. ಡಿ.25, 1991ರಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವವರೆಗೆ ಸಂಯುಕ್ತ ಸಂಸ್ಥಾನದ ಅವನತಿಯನ್ನು ನೋಡಬೇಕಾಯಿತು’ ಎಂದು ರಾಜಕೀಯ ವಿಶ್ಲೇಷಕ ಮಿಖಾಯಿಲ್ ಮ್ಯಾಕ್‌ಫಾಲ್ ಸ್ಮರಿಸುತ್ತಾರೆ.

ಅಧಿಕಾರದಿಂದ ನಿರ್ಗಮಿಸಿದ 25 ವರ್ಷಗಳ ಬಳಿಕ ಸುದ್ದಿಸಂಸ್ಥೆಯೊಂದಿಗೆ ಮಾತನಾಡಿದ್ದ ಗೋರ್ಬಚೆವ್, ‘ಸೋವಿಯತ್ ಒಕ್ಕೂಟವನ್ನು ಹಾಗೇ ಉಳಿಸಿಕೊಳ್ಳಲು ಆಗ ನಾನು ಭದ್ರತಾ ಪಡೆಯನ್ನು ಪೂರ್ಣವಾಗಿ ಬಳಸಲಿಲ್ಲ. ಬಳಸಿದರೆ ಅರಾಜಕತೆ ಮೂಡಬಹುದು ಎಂಬ ಭಯವಿತ್ತು. ಒಕ್ಕೂಟದಲ್ಲಿ ಶಸ್ತ್ರಾಸ್ತ್ರಗಳ ಸಂಗ್ರಹ ಹೇರಳವಾಗಿತ್ತು. ನಾಗರಿಕ ಯುದ್ಧ ಕಾಣಿಸಿಕೊಳ್ಳುವ ಅಪಾಯವಿತ್ತು’ ಎಂದು ಹೇಳಿದ್ದರು.

ನೊಬೆಲ್ ಶಾಂತಿ ಪ್ರಶಸ್ತಿ: ಶೀತಲ ಸಮರಕ್ಕೆ ಅಂತ್ಯ ಹಾಡಿ ಜಾಗತಿಕವಾಗಿ ಮನ್ನಣೆಗೆ ಪಾತ್ರರಾದ ಅವರಿಗೆ 1990ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಸಂದಿತ್ತು. ವಿಶ್ವದ ವಿವಿಧೆಡೆ ಹಲವು ಪ್ರಮುಖ ಪ್ರಶಸ್ತಿಗಳು ಸಂದಿದ್ದವು.

ಸೋವಿಯತ್ ಒಕ್ಕೂಟ ಅಸ್ಥಿರಗೊಳಿಸುವ ಉದ್ದೇಶ ಗೋರ್ಬಚೆವ್ ಅವರದಾಗಿರಲಿಲ್ಲ. ಅಧ್ಯಕ್ಷರಾಗಿ ಆರ್ಥಿಕ ಸುಧಾರಣೆ ಮತ್ತು ರಾಜಕೀಯ ಸ್ಥಿರತೆಗೆ ಮುಂದಾಗಿದ್ದರು. ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಹೆಚ್ಚು ಚಾಲ್ತಿಯಲ್ಲಿದ್ದ 2 ಪದಗಳು:ಗ್ಲಾಸನಾಸ್ತ್ ಮತ್ತು ಪೆರಸ್ತ್ರೋಯ್ಕ. ‘ಪಾರದರ್ಶಕತೆ’ ಹಾಗೂ ‘ಮರುಕಟ್ಟೋಣ’ ಎಂಬುದು ಇದರ ಅರ್ಥ.‘ವಿಪುಲ ಪ್ರಾಕೃತಿಕ ಸಂಪತ್ತು ಇದ್ದರೂ ದೇಶದಲ್ಲಿ ಅಸಂಖ್ಯಾತ ಜನರು ಬಡವರಾಗೇ ಇದ್ದಾರೆ ಎಂಬುದನ್ನು ನೋಡಿ ಭ್ರಮನಿರಸನಗೊಂಡಿದ್ದೆ. ಒಮ್ಮೆ ಅಧಿಕಾರ ಸಿಕ್ಕಾಗ ಸುಧಾರಣೆಗಳಿಗೆ ಮುಂದಾಗಿದ್ದೆ. ರಾಜಕೀಯ ಕೈದಿಗಳ ಬಿಡುಗಡೆ, ಮುಕ್ತ ಚರ್ಚೆಗೆ ಅವಕಾಶ, ಚುನಾವಣೆಗಳಲ್ಲಿ ಹಲವು ಅಭ್ಯರ್ಥಿಗಳ ಸ್ಪರ್ಧೆ, ಮುಕ್ತ ಸಂಚಾರಕ್ಕೆ ಜನರಿಗೆ ಅವಕಾಶ, ಪಾಶ್ಚಿಮಾತ್ಯ ದೇಶಗಳ ಜೊತೆಗೆ ಬಾಂಧವ್ಯ ಇವುಗಳಲ್ಲಿ ಪ್ರಮುಖ ವಾದವು. ಆದರೆ, ನಾನು ಮುಕ್ತ ಅವಕಾಶ ನೀಡಿದ ಶಕ್ತಿಗಳೇ ಬಳಿಕ ನನ್ನ ಹಿಡಿತಕ್ಕೆ ಸಿಗಲಿಲ್ಲ’ ಎಂದು ಅವರು ಹೇಳಿಕೊಂಡಿದ್ದರು.

ಮಿಖಾಯಿಲ್ ಗೋರ್ಬಚೆವ್ ನಿಧನ

ಮಾಸ್ಕೊ(ಎ.ಪಿ): ರಷ್ಯಾ ಸಂಯುಕ್ತ ಸಂಸ್ಥಾನದ (ಯುಎಸ್‌ಎಸ್‌ಆರ್) ಕೊನೆಯ ಅಧ್ಯಕ್ಷರಾಗಿದ್ದ ಮಿಖಾಯಿಲ್ ಗೋರ್ಬಚೆವ್ ಮಂಗಳವಾರ ಇಲ್ಲಿ ನಿಧನರಾದರು. ಅವರಿಗೆ 91 ವರ್ಷ ವಯಸ್ಸಾಗಿತ್ತು.

ದೀರ್ಘಕಾಲದಿಂದ ವಯೋಸಹಜ ಅನಾರೋಗ್ಯದಿಂದ ಅವರು ಬಳಲುತ್ತಿದ್ದರು ಎಂದು ಇಲ್ಲಿನ ಸೆಂಟ್ರಲ್ ಕ್ಲಿನಿಕಲ್ ಹಾಸ್ಪಿಟಲ್‌ನ ಹೇಳಿಕೆ ತಿಳಿಸಿದೆ. 1985 ರಿಂದ 1991ರ ಅಂತ್ಯದವರೆಗೂ ಅವರು ಸೋವಿಯತ್ ಒಕ್ಕೂಟದ ಅಧ್ಯಕ್ಷರಾಗಿದ್ದರು.

ಮಿಖಾಯಿಲ್ ಸೆರ್ಗೆಯೆವಿಚ್ ಗೋರ್ಬಚೆವ್ ಜನಿಸಿದ್ದು ಮಾರ್ಚ್ 2, 1931. 15ನೇ ವಯಸ್ಸಿಗೇ ಕೃಷಿಯಲ್ಲಿ ತಂದೆಗೆ ನೆರವಾಗುತ್ತಿದ್ದರು. ವಿಶ್ವವಿದ್ಯಾಲಯದಲ್ಲಿ ಓದುವಾಗ 1950ರಲ್ಲಿ ಪರಿಚಿತರಾದ ರೈಸಾ ಬಳಿಕ ಅರ್ಧಾಂಗಿಯಾದರು. ಮುಂದೆ ಕಮ್ಯುನಿಸ್ಟ್ ಪಾರ್ಟಿಗೆ ಸೇರಿದರು. 1971ರಲ್ಲಿ ಪಕ್ಷದ ಕೇಂದ್ರ ಸಮಿತಿ ಸದಸ್ಯರಾಗಿ ಆಯ್ಕೆಯಾದರು. 1980ರಲ್ಲಿ ಪಾಲಿಟ್ ಬ್ಯೂರೊ ಸದಸ್ಯರೂ ಆದರು.

ಸೋವಿಯತ್ ಒಕ್ಕೂಟ ನಾಯಕರಾಗಿದ್ದ ಕೊನ್‌ಸ್ಟಾಂಟಿನ್ ಚೆರ್‌ನೆಂಕೊ ನಿಧನದ ಬಳಿಕ ಕಮ್ಯುನಿಸ್ಟ್ ಪಾರ್ಟಿ, ಕ್ರಿಯಾಶೀಲ ಯುವನಾಯಕನಿಗೆ ಆಡಳಿತದ ಸಾರಥ್ಯ ವಹಿಸಲು ತೀರ್ಮಾನಿಸಿತು. ಆಗ ಆಯ್ಕೆಯಾದವರೇ ಮಿಖಾಯಿಲ್ ಗೋರ್ಬಚೆವ್. ಆಗ ಅವರ ವಯಸ್ಸು 54.

ಮಂಗಳನ ಆಗಸದಲ್ಲಿ ಧ್ರುವಪ್ರಭೆ ಪತ್ತೆ

ದುಬೈ/ವಾಷಿಂಗ್ಟನ್ (ಪಿಟಿಐ): ಸಂಯುಕ್ತ ಅರಬ್ ಸಂಸ್ಥಾನದ ಮಂಗಳ ಯಾನ ಕಾರ್ಯಕ್ರಮ ‘ಮಾರ್ಸ್ ಮಿಷನ್’ (ಇಎಂಎಂ) ಮತ್ತು ನಾಸಾದ ‘ಮಾವೆನ್’ ಗಗನನೌಕೆಗಳು ಮಂಗಳನ ಆಕಾಶದಲ್ಲಿ ‘ಪ್ರೋಟಾನ್’ ಕಣಗಳಿಂದಾದ ಹಸಿರು ವರ್ಣದ ಧ್ರುವಪ್ರಭೆ ಪತ್ತೆ ಮಾಡಿವೆ.

ಮಂಗಳ ನವಾತಾವರಣದ ಅಧ್ಯಯನಕ್ಕೆ ಈ ಬಾಹ್ಯಾಕಾಶ ವಿದ್ಯಮಾನ ಹೊಸ ದಿಕ್ಕು ತೋರಲಿದೆ ಎಂದು ಖಗೋಳ ವಿಜ್ಞಾನಿಗಳು ಹೇಳಿದ್ದಾರೆ.

ಮಂಗಳನ ಉತ್ತರ ಧ್ರುವದ ಆಕಾಶದಲ್ಲಿ ಈ ಧ್ರುವಪ್ರಭೆ ಕಾಣಿಸಿದೆ. ಮಂಗಳನ ವಾಯುಪ್ರದೇಶದ ಮೇಲ್ಮೈ ಮೂಲಕ ಸೌರಮಾರುತಗಳು ಹಾದು ಹೋದ ಸಂದರ್ಭದಲ್ಲಿ ಈ ಪ್ರಭಾವಲಯ ಸೃಷ್ಟಿಯಾಗಿದ್ದು, ನಂತರ ನಿಧಾನವಾಗಿ ನೇರಳಾತೀತ ಬೆಳಕು ಹೊರಹೊಮ್ಮುತ್ತದೆ ಎಂದು ವಿಜ್ಞಾನಿಗಳು ವಿವರಿಸಿದ್ದಾರೆ.

‘ಈ ರೀತಿ ಪ್ರಭಾವಲಯ ಸೃಷ್ಟಿಯಾದಾಗ, ಮಂಗಳ ಗ್ರಹದ ಕೆಲ ಭಾಗಗಳು ಹೆಚ್ಚು ಪ್ರಕಾಶಮಾನವಾಗಿ ಕಾಣುತ್ತವೆ. ಗ್ರಹದ ವಾತಾವರಣದಲ್ಲಿ ಶಕ್ತಿಯ ತೀವ್ರತೆ ಹೆಚ್ಚಾಗಿರುವುದನ್ನು ಈ ವಿದ್ಯಮಾನ ಹೇಳುತ್ತದೆ’ ಎಂದಿದ್ದಾರೆ.

‘ಮಂಗಳನಲ್ಲಿ ಹಗಲು ಹೇಗೆ ರೂಪುಗೊಳ್ಳುತ್ತದೆ ಎನ್ನುವುದಕ್ಕೆ ಈಗ ಸದ್ಯ ಅಸ್ತಿತ್ವದಲ್ಲಿರುವ ಸಿದ್ಧಾಂತಗಳಿಗೆ ಈಗ ಪತ್ತೆ ಮಾಡಿರುವ ಖಗೋಳ ವಿದ್ಯಮಾನ ಸವಾಲೊಡ್ಡುತ್ತದೆ. ಈಗ ನಾವು ಪತ್ತೆ ಮಾಡಿರುವ ಹೊಸ ಸಂಗತಿಗಳು, ಮಾವೆನ್ ನೌಕೆಯ ದತ್ತಾಂಶಗಳು ಸಂಶೋಧನೆಯ ಹೊಸ ಸಾಧ್ಯತೆಗಳನ್ನು ತೆರೆದಿಟ್ಟಿವೆ’ ಎಂದು ಇಎಂಎಂನ ಮುಖ್ಯಸ್ಥೆ ಹೆಸ್ಸಾ ಅಲ್ ಮಾತ್ರೌಷಿ ಹೇಳಿದ್ದಾರೆ.

ಮೋದಿ, ಆಂಧ್ರ ಸಿಎಂ, ಅದಾನಿ ವಿರುದ್ಧ ಅಮೆರಿಕದಲ್ಲಿ ಮೊಕದ್ದಮೆ

ವಾಷಿಂಗ್ಟನ್ (ಪಿಟಿಐ): ಭಾರತದ ಪ್ರಧಾನಿ ನರೇಂದ್ರ ಮೋದಿ, ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಮತ್ತು ಉದ್ಯಮಿ ಗೌತಮ್ ಅದಾನಿ ವಿರುದ್ಧ ಭ್ರಷ್ಟಾಚಾರ ಮತ್ತು ಪೆಗಾಸಸ್ ಕುತಂತ್ರಾಂಶ ಹಗರಣ ಸೇರಿ ಹಲವು ವಿಷಯಗಳ ಕುರಿತು ಭಾರತೀಯ ಅಮೆರಿಕನ್ ವೈದ್ಯರೊಬ್ಬರು ಮೊಕದ್ದಮೆ ದಾಖಲಿಸಿದ್ದಾರೆ.

ಈ ವರ್ಷದ ಆರಂಭದಲ್ಲಿ ಭಾರತದಲ್ಲಿ ಸೇವೆ ಸಲ್ಲಿಸಿದ್ದ ರಿಚ್ಮಂಡ್ ಮೂಲದ ಗ್ಯಾಸ್ಟ್ರೋ-ಎಂಟರಾಲಜಿಸ್ಟ್ (ಕರುಳು ಬೇನೆ ತಜ್ಞ) ಡಾ. ಲೋಕೇಶ್ ವುಯ್ಯೂರು ದಾಖಲಿಸಿರುವ 53 ಪುಟಗಳ ಮೊಕದ್ದಮೆ ಸಂಬಂಧ ಕೊಲಂಬಿಯಾ ಜಿಲ್ಲಾ ನ್ಯಾಯಾಲಯ, ಈ ಎಲ್ಲ ನಾಯಕರಿಗೆ ನೋಟಿಸ್ ಜಾರಿ ಮಾಡಿದೆ. ನ್ಯೂಯಾರ್ಕ್‌ನ ಭಾರತೀಯ ಅಮೆರಿಕನ್ ಅಟಾರ್ನಿ ರವಿ ಬಾತ್ರಾ ಅವರು ಈ ವಿಷಯ ಖಚಿತಪಡಿಸಿದ್ದಾರೆ.

ಡಾ.ಲೋಕೇಶ್ ಅವರು ದಾಖಲಿಸಿರುವ ಮೊಕದ್ದಮೆಯಲ್ಲಿ ವಿಶ್ವ ಆರ್ಥಿಕ ವೇದಿಕೆಯ ಸಂಸ್ಥಾಪಕ ಮತ್ತು ಅಧ್ಯಕ್ಷ ಪ್ರೊಫೆಸರ್ ಕ್ಲೌಸ್ ಶ್ವಾಬ್ ಅವರ ಹೆಸರೂ ಇದೆ.

ಮೇ 24ರಂದು ಈ ಮೊಕದ್ದಮೆ ದಾಖಲಿಸಲಾಗಿದ್ದು, ಜುಲೈ 22ರಂದು ನ್ಯಾಯಾಲಯವು ಸಮನ್ಸ್ ಜಾರಿಗೊಳಿಸಿದೆ. ಭಾರತದಲ್ಲಿ ಆಗಸ್ಟ್ 4ರಂದು ಸಮನ್ಸ್ ನೀಡಿದ್ದು, ಸ್ವಿಟ್ಜರ್ಲೆಂಡ್‌ನ ಕ್ಲೌಸ್ ಶ್ವಾಬ್ ಅವರಿಗೆ ಆಗಸ್ಟ್ 2ರಂದು ಸಮನ್ಸ್ ಜಾರಿಗೊಳಿಸಿದೆ. ಡಾ. ಲೋಕೇಶ್ ಆಗಸ್ಟ್ 19ರಂದು ನ್ಯಾಯಾಲಯದ ಮುಂದೆ ಹಾಜರಾಗಿ ಸಾಕ್ಷ್ಯ ಸಲ್ಲಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚೀನಾದ ಚೆಂಗ್ಡುನಲ್ಲಿ ಕಠಿಣ ಲಾಕ್‌ಡೌನ್

ಬೀಜಿಂಗ್ (ಎಪಿ):ಕೋವಿಡ್ ಸೋಂಕು ಹೆಚ್ಚಾಗುತ್ತಿರುವ ಕಾರಣ ಎರಡು ಕೋಟಿಗೂ ಅಧಿಕ ಜನಸಂಖ್ಯೆ ಇರುವ ಚೆಂಗ್ಡು ನಗರದಲ್ಲಿ ಚೀನಾದ ಅಧಿಕಾರಿಗಳು ಕಠಿಣ ಲಾಕ್‌ಡೌನ್ ಜಾರಿಗೊಳಿಸಿದ್ದಾರೆ.

ಇಲ್ಲಿನ ನಿವಾಸಿಗಳಿಗೆ ಮನೆಯಲ್ಲಿಯೇ ಇರಲು ಸೂಚಿಸಲಾಗಿದೆ. ನಗರದಿಂದ ಹೋಗುವ ಮತ್ತು ಇಲ್ಲಿಗೆ ಬರುವ ಶೇ 70ರಷ್ಟು ವಿಮಾನಗಳನ್ನು ರದ್ದುಗೊಳಿಸಲಾಗಿದೆ. ಶಾಲೆಗಳ ಮರು ಆರಂಭವನ್ನು ಮುಂದೂಡಲಾಗಿದೆ. ಆದರೆ, ಸಾರ್ವಜನಿಕ ಸಾರಿಗೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

24 ಗಂಟೆಗೆ ಮುನ್ನ ಕೋವಿಡ್ ಪರೀಕ್ಷೆಗೆ ಒಳಗಾಗಿ ನೆಗೆಟಿವ್ ವರದಿ ಹೊಂದಿರುವ ಕುಟುಂಬದ ಒಬ್ಬ ವ್ಯಕ್ತಿಗೆ ಮಾತ್ರ ದಿನಕ್ಕೆ ಒಮ್ಮೆ ಅಷ್ಟೇ ಮನೆಯಿಂದ ಹೊರಗೆ ಬಂದು ಅಗತ್ಯ ವಸ್ತುಗಳನ್ನು ಖರೀದಿಸಲು ಅವಕಾಶ ನೀಡಲಾಗಿದೆ.

ಚೀನಾ ಖಂಡನೆ

ಬೀಜಿಂಗ್ (ಎಪಿ): ಚೀನಾದ ಪಶ್ಚಿಮ ಷಿನ್‌ಜಿಯಾಂಗ್ ಮತ್ತಿತರ ಪ್ರದೇಶಗಳಲ್ಲಿ ಉಯಿಗರ್ ಮತ್ತು ಇತರ ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯದವರ ಬಂಧನ ಮಾನವೀಯತೆಗೆ ವಿರುದ್ಧವಾದುದು ಎಂಬ ವಿಶ್ವಸಂಸ್ಥೆಯ ವರದಿಯನ್ನು ಚೀನಾ ಬಲವಾಗಿ ಖಂಡಿಸಿದೆ.

ಬುಧವಾರ ತಡರಾತ್ರಿ ಜಿನಿವಾದ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಕಚೇರಿಯಲ್ಲಿ ಈ ವರದಿಯನ್ನು ಬಿಡುಗಡೆ ಮಾಡಲಾಗಿದೆ. ಭಯೋತ್ಪಾದನೆ ವಿರೋಧಿ ಮತ್ತು ತೀವ್ರವಾದಿ ವಿರೋಧಿ ನೀತಿಗಳ ಮೂಲಕ ಚೀನಾ ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತಿದೆ ಎಂದು ವರದಿಯಲ್ಲಿ ತಿಳಿಸಿದೆ.

ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ದಡು ಜಿಲ್ಲೆಯು ಅತಿವೃಷ್ಟಿಯಿಂದಾಗಿ ಸಂಪೂರ್ಣ ಜಲಾವೃತಗೊಂಡಿರುವುದು —ಎಎಫ್‌ಪಿ ಚಿತ್ರ

‘ಪಾಕ್: ಅತಿವೃಷ್ಟಿಗೆ ತಾಪಮಾನ ಬದಲಾವಣೆ ಕಾರಣ’

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದಲ್ಲಿ ಕೋಟ್ಯಂತರ ಜನರನ್ನು ಅತಂತ್ರರಾಗಿಸಿರುವ ಧಾರಾಕಾರ ಮಳೆ, ಪ್ರವಾಹಕ್ಕೆ ತಾಪಮಾನ ಬದಲಾವಣೆ ಕಾರಣ ಎಂದು ಪರಿಣತರು ಹೇಳಿದ್ದು, ಮುಂದಿನ ದಿನಗಳು ಇನ್ನಷ್ಟು ಗಂಭೀರವಾಗಿರಲಿವೆ ಎಂದಿದ್ದಾರೆ.

ಇದು, ಆರಂಭ ಮಾತ್ರ. ಹವಾಮಾನ ಬದಲಾವಣೆ ಪರಿಣಾಮ ಇನ್ನಷ್ಟು ಗಂಭೀರ, ತೀವ್ರವಾಗಿರಲಿದೆ ಎಂದು ಪರಿಣತರು ಎಚ್ಚರಿಸಿದ್ದಾರೆ. ಭಾರಿ ಮಳೆ, ಪ್ರವಾಹದಿಂದಾಗಿ ಪಾಕಿಸ್ತಾನದಲ್ಲಿ 1,100ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದು, 3.3 ಕೋಟಿ ಜನರು ಅತಂತ್ರರಾಗಿದ್ದಾರೆ.

ಮಳೆಯಿಂದಾಗಿ ಭಾರಿ ಹಾನಿಯಾಗಿದ್ದು, ಪರಿಹಾರ ಕಾರ್ಯಗಳಿಗೆ ತುರ್ತಾಗಿ ಸುಮಾರು 1,250 ಕೋಟಿ ಅಗತ್ಯವಿದ್ದು, ನೆರವು ನೀಡಬೇಕು ಎಂದು ಪಾಕಿಸ್ತಾನ ಸರ್ಕಾರ ಮತ್ತು ವಿಶ್ವಸಂಸ್ಥೆ ಜಂಟಿಯಾಗಿ ವಿಶ್ವ ಸಮುದಾಯಕ್ಕೆ ಮನವಿ ಮಾಡಿವೆ.

ಪ್ರಧಾನಿ ಶೆಹಬಾಝ್ ಷರೀಫ್ ಈಚೆಗೆ ಕೆಲ ರಾಜತಾಂತ್ರಿಕರನ್ನು ಭೇಟಿಯಾಗಿದ್ದು, ಮಳೆ ಹಾನಿ ಕುರಿತ ವಸ್ತುಸ್ಥಿತಿಯನ್ನು ವಿವರಿಸಿದ್ದಾರೆ.

‘ಪಾಕಿಸ್ತಾನ ಮತ್ತು ವಿಶ್ವದ ಕೆಲವೆಡೆ ತಾಪಮಾನ ಬದಲಾವಣೆಯಿಂದ ಆಗುತ್ತಿರುವ ಅನಾಹುತಗಳು ಒಂದು ದುಃಸ್ವಪ್ನ’ ಎಂದು ಕರಾಚಿಯ ಪರಿಸರ ವಿಜ್ಞಾನಿ ಡಾ.ಸೀಮಾ ಜಿಲಾನಿ ಅಭಿಪ್ರಾಯಪಟ್ಟಿದ್ದಾರೆ. ಕರಾಚಿಯಲ್ಲಿ ನಿರಂತರ ಮಳೆ, ಪ್ರವಾಹವನ್ನು ಹಿಂದೆಂದೂ ನೋಡಿರಲಿಲ್ಲ ಎಂದು ಡಾ.ಅಲಂಗಿರ್ ಹೇಳಿದರು. ಕರಾಚಿಯಲ್ಲಿ ಐದು ವರ್ಷದ ಹಿಂದಷ್ಟೇ ಬಿಸಿ ಗಾಳಿ ಸಮಸ್ಯೆ ಗಂಭೀರವಾಗಿತ್ತು. ಸುಮಾರು 2000 ಮಂದಿ ಸತ್ತಿದ್ದರು ಎಂದು ಸ್ಮರಿಸಿದರು.

ಈ ಮಧ್ಯೆ, ಮಳೆಯ ಪರಿಣಾಮ ದೇಶದ ವಿವಿಧೆಡೆ ಮುಂದುವರಿದಿದೆ. ಸಂತ್ರಸ್ತರ ಸ್ಥಳಾಂತರ, ಪರಿಹಾರ ಕಾರ್ಯಗಳು ಮುಂದುವರಿದಿವೆ.

ಭಾರತ ಮೂಲದ ಗರ್ಭಿಣಿ ಸಾವು: ಪೋರ್ಚುಗಲ್ ಸಚಿವೆ ರಾಜೀನಾಮೆ

ಲಿಸ್ಬನ್ (ಪಿಟಿಐ): ಪೋರ್ಚುಗಲ್‌ನಲ್ಲಿ ನಡೆದ ಭಾರತೀಯ ಮೂಲದ ಗರ್ಭಿಣಿಯೊಬ್ಬರ ದಾರುಣ ಸಾವು ದೇಶದ ಆರೋಗ್ಯ ಸಚಿವೆ ಮಾರ್ಟಾ ಟೆಮಿಡೊ ರಾಜೀನಾಮೆಗೆ ಕಾರಣವಾಗಿದ್ದು, ಈ ಪ್ರಕರಣದ ಬಗ್ಗೆ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ.

34 ವರ್ಷದ ಭಾರತೀಯ ಮಹಿಳೆ ಸಾಂಟಾ ಮರಿಯಾ ಆಸ್ಪತ್ರೆಯಿಂದ ಮತ್ತೊಂದು ಆಸ್ಪತ್ರೆಗೆ ಆಂಬುಲೆನ್ಸ್‌ನಲ್ಲಿ ಸ್ಥಳಾಂತರಿಸುವ ವೇಳೆ ಹೃದಯ ಸ್ತಂಭನಕ್ಕೊಳಗಾಗಿದ್ದಾರೆ.

‘ಮಹಿಳೆಯ ಸಾವು ಟೆಮಿಡೊ ಅವರ ರಾಜೀನಾಮೆಗೆ ಕಾರಣವಾಗಿದೆ’ ಎಂದು ಪೋರ್ಚುಗಲ್ ಪ್ರಧಾನಿ ಆಂಟೋನಿಯೊ ಕೋಸ್ಟಾ ಹೇಳಿದ್ದಾರೆ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ.

ನವಜಾತ ಶಿಶುವಿನ ಚಿಕಿತ್ಸಾ ಘಟಕ ಭರ್ತಿಯಾಗಿದ್ದರಿಂದ ಪೋರ್ಚುಗಲ್‌ನ ಅತಿದೊಡ್ಡ ಆಸ್ಪತ್ರೆ ಲಿಸ್ಬನ್‌ನ ಸಾಂಟಾ ಮರಿಯಾದಿಂದ ಸ್ಥಳಾಂತರಿಸುವಾಗ ಗರ್ಭಿಣಿ ಮೃತಪಟ್ಟಿರುವುದಾಗಿ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ತುರ್ತಾಗಿ ನಡೆಸಿದ ಸಿಸೇರಿಯನ್ ಬಳಿಕ ಮಗು ಆರೋಗ್ಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಹಿಳೆಯ ಸಾವಿನ ಬಗ್ಗೆ ತನಿಖೆ ನಡೆಯುತ್ತಿದೆ. ಇತ್ತೀಚಿನ ತಿಂಗಳುಗಳಲ್ಲಿ ಪೋರ್ಚುಗಲ್‌ನಾದ್ಯಂತ ಇದೇ ರೀತಿಯ ಘಟನೆಗಳು ನಡೆದಿವೆ ಎಂದು ವರದಿ ತಿಳಿಸಿದೆ.

ಎನ್‌ಐಎಸಿಗೆ ಭಾರತೀಯರ ನೇಮಕ

ವಾಷಿಂಗ್ಟನ್ (ಪಿಟಿಐ): ಭಾರತೀಯ ಮೂಲದ ಮನು ಅಸ್ಥಾನಾ ಮತ್ತು ಮಧು ಬೇರಿವಾಲ್ ಅವರನ್ನು ರಾಷ್ಟ್ರೀಯ ಮೂಲಸೌಕರ್ಯ ಸಲಹಾ ಮಂಡಳಿಗೆ ನೇಮಿಸುವುದಾಗಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಅಧ್ಯಕ್ಷರ ರಾಷ್ಟ್ರೀಯ ಮೂಲಸೌಕರ್ಯ ಸಲಹಾ ಮಂಡಳಿಯು (ಎನ್‌ಐಎಸಿ) ಭೌತಿಕ ಮತ್ತು ಸೈಬರ್ ಅಪಾಯಗಳನ್ನು ಕಡಿಮೆ ಮಾಡುವುದು ಮತ್ತು ರಾಷ್ಟ್ರದ ನಿರ್ಣಾಯಕ ಮೂಲಸೌಕರ್ಯ ವಲಯಗಳ ಸುರಕ್ಷತೆ ಮತ್ತು ಸ್ಥಿತಿಸ್ಥಾಪಕತ್ವವನ್ನು ಸುಧಾರಿಸಲು ಶ್ವೇತಭವನಕ್ಕೆ ಸಲಹೆ ನೀಡುತ್ತದೆ.

ಎನ್‌ಐಎಸಿಗೆ ಬುಧವಾರ ಘೋಷಿಸಿದ 26 ಮಂದಿಯಲ್ಲಿ ಹಲವರು ಬ್ಯಾಂಕಿಂಗ್, ಹಣಕಾಸು, ಸೇರಿ ವಿವಿಧ ಕ್ಷೇತ್ರಗಳಲ್ಲಿ ಅನುಭವ ಹೊಂದಿದ್ದಾರೆ.

ಸರ್ಕಾರಿ ನಿಯಂತ್ರಣದ ದೇಗುಲಗಳಲ್ಲಿ ಅವ್ಯವಹಾರ: ಪುರಾವೆ ಕೇಳಿದ ‘ಸುಪ್ರೀಂ’

ನವದೆಹಲಿ: ಸಾರ್ವಜನಿಕರಿಂದ ಬೃಹತ್ ಪ್ರಮಾಣದ ಕಾಣಿಕೆ ಸ್ವೀಕರಿಸುವ ಕೆಲ ಪ್ರಮುಖ ದೇವಾಲಯಗಳನ್ನು ನಿಯಮಗಳಿಂದ ಹೊರಗಿಡಬೇಕೇ ಎಂದು ಅಚ್ಚರಿ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್,ಸರ್ಕಾರಿ ನಿಯಂತ್ರಣದ ಮಂದಿರಗಳ ಅಸಮರ್ಪಕ ನಿರ್ವಹಣೆ ಅಥವಾ ಹಣದ ದುರುಪಯೋಗದ ಆರೋಪಕ್ಕೆ ಸಂಬಂಧಿಸಿದಂತೆ ಸೂಕ್ತ ಪುರಾವೆಗಳನ್ನು ನೀಡಬೇಕಾಗುತ್ತದೆ ಎಂದು ಹೇಳಿದೆ.

ಮುಸ್ಲಿಂ ಮತ್ತು ಕ್ರಿಶ್ಚಿಯನ್ನರಂತೆಯೇ ಹಿಂದೂಗಳು, ಜೈನರು ಮತ್ತು ಸಿಖ್ಖರು ತಮ್ಮ ದೇಗುಲಗಳನ್ನು ನಿರ್ವಹಿಸುವ ಹಕ್ಕು ನೀಡಬೇಕೆಂದು ಕೋರಿ ಅಶ್ವಿನಿ ಕುಮಾರ್ ಉಪಾಧ್ಯಾಯ ಎಂಬುವವರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಯನ್ನು ಕೋರ್ಟ್ ನಡೆಸಿತು.

‘ನಮಗೆ 150 ವರ್ಷಗಳ ಇತಿಹಾಸವಿದೆ. ಈ ಪೂಜಾ ಸ್ಥಳಗಳು ಸಮಾಜದ ದೊಡ್ಡ ಅಗತ್ಯಗಳನ್ನು ಪೂರೈಸಿವೆಯೇ ಹೊರತು ತಮ್ಮ ಉದ್ದೇಶಕ್ಕಾಗಿ ಅಲ್ಲ. ಕೆಲ ದೇವಾಲಯಗಳು ಸಾರ್ವಜನಿಕ ಉದ್ದೇಶಗಳಿಗೆ ತಮ್ಮ ಭೂಮಿಯನ್ನು ನೀಡಿವೆ’ ಎಂದು ಮುಖ್ಯ ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್ ಮತ್ತು ನ್ಯಾಯಮೂರ್ತಿ ಎಸ್. ರವೀಂದ್ರ ಭಟ್ ತಿಳಿಸಿದೆ.

ಉಪಾಧ್ಯಾಯ ಪರ ಹಾಜರಾದ ಹಿರಿಯ ವಕೀಲ ಅರವಿಂದ್ ದಾತಾರ್ ಮತ್ತು ಗೋಪಾಲ್ ಶಂಕರನಾರಾಯಣನ್ ಅವರಿಗೆ ಹೆಚ್ಚುವರಿ ಮಾಹಿತಿ ಸಲ್ಲಿಸಲು ನ್ಯಾಯಾಲಯವು ಎರಡು ವಾರಗಳ ಕಾಲಾವಕಾಶವನ್ನು ನೀಡಿದೆ.

ಮೂರನೇ ಸುತ್ತಿಗೆ ಮೆಡ್ವೆಡೆವ್

ಅಮೆರಿಕ ಓಪನ್ ಟೆನಿಸ್: ಸಕರಿಗೆ ಸೋಲು; ಮ್ಯಾಡಿಸನ್, ಸೆರೆನಾಗೆ ಗೆಲುವು

ನ್ಯೂಯಾರ್ಕ್ (ಎಎಫ್‌ಪಿ): ವಿಶ್ವದ ಅಗ್ರ ರ‍್ಯಾಂಕ್‌ನ ಆಟಗಾರ ಡೇನಿಯಲ್ ಮೆಡ್ವೆಡೆವ್ ಮತ್ತು ಕೊನೆಯ ಗ್ರ್ಯಾನ್‌ಸ್ಲಾಮ್ ಆಡುತ್ತಿರುವ ಸೆರೆನಾ ವಿಲಿಯಮ್ಸ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮೂರನೇ ಸುತ್ತು ಪ್ರವೇಶಿಸಿದರು.

ಬುಧವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಮೆಡ್ವೆಡೆವ್ 6-2, 7-5, 6-3 ರಲ್ಲಿ ಫ್ರಾನ್ಸ್‌ನ ಅರ್ಥರ್ ರಿಂಡೆರ್‌ನೆಕ್ ಅವರನ್ನು ಮಣಿಸಿದರು.

ಮೆಡ್ವೆಡೆವ್ ಮುಂದಿನ ಸುತ್ತಿನಲ್ಲಿ ಚೀನಾದ ವು ಯಿಬಿಂಗ್ ಅವರನ್ನು ಎದುರಿಸುವರು. ಯಿಬಿಂಗ್ 6-7(3), 7-6(4), 4-6, 6-4, 6-4 ರಲ್ಲಿ ಪೋರ್ಚುಗಲ್‌ನ ನುನೊ ಬೋರ್ಗೆಸ್ ವಿರುದ್ಧ ಗೆದ್ದರು. ಅಮೆರಿಕ ಓಪನ್‌ನಲ್ಲಿ ಮೂರನೇ ಸುತ್ತು ಪ್ರವೇಶಿಸಿದ ಚೀನಾದ ಮೊದಲ ಆಟಗಾರ ಎಂಬ ಗೌರವ ಯಿಬಿಂಗ್ ತಮ್ಮದಾಗಿಸಿಕೊಂಡರು.

ಬ್ರಿಟನ್‌ನ ಆ್ಯಂಡಿ ಮರೆ ಅವರೂ ಮೂರನೇ ಸುತ್ತಿಗೆ ಮುನ್ನಡೆದರು. 35 ವರ್ಷದ ಮರೆ 5-7, 6-3, 6-1, 6-0 ರಲ್ಲಿ ಅಮೆರಿಕದ ಎಮಿಲಿಯೊ ನವಾ ಎದುರು ಗೆದ್ದರು. ಮುಂದಿನ ಪಂದ್ಯದಲ್ಲಿ ಅವರು ವಿಶ್ವದ 14ನೇ ರ‍್ಯಾಂಕ್‌ನ ಆಟಗಾರ ಮಟೆಯೊ ಬೆರೆಟಿನಿ ಜತೆ ಸೆಣಸುವರು. ಇಟಲಿಯ ಬೆರೆಟಿನಿ 2-6, 6-1, 7-6 (7/4), 7-6 (9/7) ರಲ್ಲಿ ಫ್ರಾನ್ಸ್‌ನ ಹ್ಯೂಗೊ ಗ್ರೇನಿಯೆರ್ ಅವರನ್ನು ಪರಾಭವಗೊಳಿಸಿದರು.

ಅಮೆರಿಕದ ಮ್ಯಾಡಿಸನ್ ಕೀಸ್ –ಎಎಫ್‌ಪಿ ಚಿತ್ರ

ಆಸ್ಟ್ರೇಲಿಯಾದ ನಿಕ್ ಕಿರ್ಗಿಯೊಸ್ 7-6 (7/3), 6-4, 4-6, 6-4 ರಲ್ಲಿ ಫ್ರಾನ್ಸ್‌ನ ಬೆಂಜಮಿನ್ ಬೊಂಝಿ ಎದುರು ಗೆದ್ದರು.

ನಡಾಲ್ ಶುಭಾರಂಭ: ಸ್ಪೇನ್‌ನ ರಫೆಲ್ ನಡಾಲ್ ಅವರು ಮೊದಲ ಸುತ್ತಿನಲ್ಲಿ 4-6, 6-2, 6-3, 6-3 ರಲ್ಲಿ ಜಪಾನ್‌ನ ರಿಂಕಿ ಹಿಜಿಕಟ ವಿರುದ್ಧ ಗೆದ್ದು ಶುಭಾರಂಭ ಮಾಡಿದರು.

ಸೆರೆನಾ ಜಯದ ಓಟ: 40 ವರ್ಷದ ಸೆರೆನಾ ವಿಲಿಯಮ್ಸ್ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ 7-6 (7/4), 2-6, 6-2 ರಲ್ಲಿ ಎರಡನೇ ಶ್ರೇಯಾಂಕದ ಆಟಗಾರ್ತಿ ಅನೆಟ್ ಕೊಂತಾವೆತ್ ಎದುರು ಅಚ್ಚರಿಯ ಗೆಲುವು ಪಡೆದರು. ಈ ಮೂಲಕ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ತಮ್ಮ ಇನ್ನೊಂದು ಪಂದ್ಯವನ್ನು ನೋಡುವ ಅವಕಾಶವನ್ನು ಅಭಿಮಾನಿಗಳಿಗೆ ನೀಡಿದರು.

ಚೀನಾದ ವಾಂಗ್ ಕ್ಸಿಯು ಅವರು 3-6, 7-5, 7-5 ರಲ್ಲಿ ಗ್ರೀಸ್‌ನ ಮರಿಯಾ ಸಕರಿ ವಿರುದ್ಧ ಗೆದ್ದು ಅಚ್ಚರಿ ಮೂಡಿಸಿದರು. ಟ್ಯುನೀಷಿಯಾದ ಆನ್ಸ್ ಜಬೇರ್ 7–5, 6–2 ರಲ್ಲಿ ಅಮೆರಿಕದ ಎಲಿಜಬೆತ್ ಮ್ಯಾಂಡ್ಲಿಕ್ ಅವರನ್ನು ಮಣಿಸಿ ಮೂರನೇ ಸುತ್ತು ಪ್ರವೇಶಿಸಿದರು.

ಎರಡನೇ ಸುತ್ತಿನ ಇತರ ಪಂದ್ಯಗಳಲ್ಲಿ 12ನೇ ಶ್ರೇಯಾಂಕದ ಆಟಗಾರ್ತಿ ಅಮೆರಿಕದ ಕೊಕೊ ಗಾಫ್ 6-2, 7-6 (7/4) ರಲ್ಲಿ ರೊಮೇನಿಯದ ಎಲೆನಾ ಗ್ಯಾಬ್ರಿಯೆಲಾ ರೂಸ್ ವಿರುದ್ಧ, ಮ್ಯಾಡಿಸನ್ ಕೀಸ್ 6-4, 5-7, 7-6 (10/6) ರಲ್ಲಿ ಇಟಲಿಯ ಕ್ಯಾಮಿಲಾ ಜಾರ್ಜಿ ಎದುರು ಗೆದ್ದರು.

ಏಷ್ಯಾಕಪ್ ಟಿ20 ಕ್ರಿಕೆಟ್: ಸೂಪರ್ ಫೋರ್ ಹಂತಕ್ಕೆ ಭಾರತ

ಸೂರ್ಯನ ಆಟಕ್ಕೆ ಮನಸೋತ ಕೊಹ್ಲಿ

ದುಬೈ (ಪಿಟಿಐ): ಮುಂಬೈನ ಸೂರ್ಯಕುಮಾರ್ ಯಾದವ್ ಮಂಗಳವಾರ ಹಾಂಗ್‌ಕಾಂಗ್ ಎದುರಿನ ಪಂದ್ಯದಲ್ಲಿ ಸಿಡಿಸಿದ ಅರ್ಧ ಡಜನ್ ಸಿಕ್ಸರ್ ಹಾಗೂ ಬೌಂಡರಿಗಳ ಆಟಕ್ಕೆ 'ರನ್ ಯಂತ್ರ' ವಿರಾಟ್ ಕೊಹ್ಲಿ ಕೂಡ ಮನಸೋತರು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಹಾಂಗ್‌ಕಾಂಗ್ ತಂಡವು ಇನಿಂಗ್ಸ್ ಆರಂಭದಲ್ಲಿ ಉತ್ತಮವಾಗಿ ಬೌಲಿಂಗ್ ಮಾಡಿತು. ಭಾರತ ತಂಡದ ನಾಯಕ ರೋಹಿತ್ ಶರ್ಮಾ ಬೇಗನೆ ಔಟ್ ಕೂಡ ಆದರು. ಕೆ.ಎಲ್. ರಾಹುಲ್ ಕೂಡ ವೇಗವಾಗಿ ಆಡದಂತೆ ಬೌಲರ್‌ಗಳು ನೋಡಿಕೊಂಡರು. ಆದರೆ, ವಿರಾಟ್ ಕೊಹ್ಲಿ ಹಾಗೂ ಸೂರ್ಯಕುಮಾರ್ ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ 98 ರನ್ ಸೇರಿಸಿದರು. ಇದರಲ್ಲಿ ಸೂರ್ಯ ಪಾಲು 68 ರನ್. ಅದರಿಂದಾಗಿ ಭಾರತ ತಂಡವು 192 ರನ್‌ಗಳ ಮೊತ್ತವನ್ನು ಗಳಿಸಿತು.

ಈ ಸಂದರ್ಭದಲ್ಲಿ ವಿರಾಟ್ ಕೊಹ್ಲಿ ಅವರು ಸೂರ್ಯಕುಮಾರ್ ಮುಂದೆ ನಿಂತು ತಮ್ಮ ಎದೆ ಮೇಲೆ ಕೈಯಿಟ್ಟು ತಲೆ ಸ್ವಲ್ಪ ತಗ್ಗಿಸಿ ಅಭಿನಂದಿಸಿದರು. ವಿರಾಟ್ ಮೆಚ್ಚುಗೆಯಿಂದಾಗಿ ಸೂರ್ಯ ಪುಳಕಿತರಾದರು.

ಈ ಕುರಿತು ಪಂದ್ಯದ ನಂತರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಸೂರ್ಯ, 'ವಿರಾಟ್ ನಡವಳಿಕೆಯು ಹೃದಯಸ್ಪರ್ಶಿಯಾಗಿತ್ತು. ನನಗೆ ಇದೊಂದು ಅನಿರೀಕ್ಷಿತ ಹಾಗೂ ಸಂತಸದ ಸಂಗತಿಯಾಗಿದೆ. ಪೆವಿಲಿಯನ್‌ಗೆ ಮರಳುವಾಗಲೂ ಅವರು ನನ್ನನ್ನು ಮುಂದೆ ಸಾಗಲು ಬಿಟ್ಟು ತಾವು ಹಿಂದುಳಿದರು. ಕೆಲವು ಕ್ಷಣಗಳ ನಂತರ ನನಗೆ ಇದರ ಅರಿವಾಯಿತು. ಮತ್ತೆ ಅವರ ಬಳಿ ಮರಳಿಹೋದೆ. ನನ್ನೊಂದಿಗೆ ಹೆಜ್ಜೆ ಹಾಕಲು ಕೇಳಿಕೊಂಡೆ' ಎಂದರು.

ಸೂರ್ಯಕುಮಾರ್ ಯಾದವ್ ಮತ್ತು ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

'ವಿರಾಟ್ ಜೊತೆಗೆ ಕ್ರೀಸ್‌ನಲ್ಲಿ ಬ್ಯಾಟಿಂಗ್ ಮಾಡಿದ್ದು ಅದ್ಭುತವಾದ ಅನುಭವ. ಅವರದ್ದು ಅಪಾರ ಅನುಭವ. ಕಡಿಮೆ ಟಿ20 ಪಂದ್ಯಗಳನ್ನು ಆಡಿರುವ ನನಗೆ ಅವರ ಮಾರ್ಗದರ್ಶನ ಉಪಯುಕ್ತವಾಯಿತು. ಅವರಂತಹ ಶ್ರೇಷ್ಠ ಬ್ಯಾಟರ್ ಪಿಚ್‌ನ ಇನ್ನೊಂದು ತುದಿಯಲ್ಲಿದ್ದ ಕಾರಣ ನನ್ನ ಆತ್ಮವಿಶ್ವಾಸ ದುಪ್ಪಟ್ಟಾಗಿತ್ತು' ಎಂದು ವಿವರಿಸಿದರು.

ಸೂರ್ಯ 26 ಎಸೆತಗಳಲ್ಲಿ 68 ರನ್ ಗಳಿಸಿದರು. ವಿರಾಟ್ 44 ಎಸೆತಗಳಲ್ಲಿ 59 ರನ್ ಗಳಿಸಿದರು. ಇಬ್ಬರೂ ಅಜೇಯರಾಗುಳಿದರು.

ಗುರಿ ಬೆನ್ನಟ್ಟಿದ ಹಾಂಗ್‌ಕಾಂಗ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 152 ರನ್ ಗಳಿಸಿತು. 40 ರನ್‌ಗಳಿಂದ ಸೋತಿತು. ಭಾರತವು ಸೂಪರ್ ಫೋರ್ ಹಂತಕ್ಕೆ ತಲುಪಿತು.

ಸಂಕ್ಷಿಪ್ತ ಸ್ಕೋರು: ಭಾರತ:20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 192 (ಕೆ.ಎಲ್. ರಾಹುಲ್ 36, ರೋಹಿತ್ ಶರ್ಮಾ 21, ವಿರಾಟ್ ಕೊಹ್ಲಿ ಔಟಾಗದೆ 59, ಸೂರ್ಯಕುಮಾರ್ ಯಾದವ್ ಔಟಾಗದೆ 68, ಆಯುಶ್ ಶುಕ್ಲಾ 29ಕ್ಕೆ1, ಮೊಹಮ್ಮದ್ ಘಜನ್‌ಫಾರ್ 19ಕ್ಕೆ1) ಹಾಂಗ್‌ಕಾಂಗ್: 20 ಓವರ್‌ಗಳಲ್ಲಿ 5ಕ್ಕೆ152 (ಬಾಬಾರ್ ಹಯಾತ್ 41, ಕಿಂಚಿತ್ ಶಾ 30, ಜಿಶನ್ ಅಲಿ ಔಟಾಗದೆ 26, ಭುವನೇಶ್ವರ್ ಕುಮಾರ್ 15ಕ್ಕೆ1, ಅರ್ಷದೀಪ್ ಸಿಂಗ್ 44ಕ್ಕೆ1, ಜಡೇಜ 15ಕ್ಕೆ1, ಆವೇಶ್ ಖಾನ್ 53ಕ್ಕೆ1) ಫಲಿತಾಂಶ: ಭಾರತಕ್ಕೆ 40 ರನ್‌ಗಳ ಜಯ.

ಏಷ್ಯಾ ಕಪ್ ಯುಎಇ 2022

ಮುಖ್ಯಾಂಶಗಳು

- 26 ಎಸೆತಗಳಲ್ಲಿ 68 ರನ್ ಗಳಿಸಿದ ಸೂರ್ಯ
- ವಿರಾಟ್ ಕೊಹ್ಲಿ ಅರ್ಧಶತಕ
- ಹಾಂಗ್‌ಕಾಂಗ್ ವಿರುದ್ಧ 40 ರನ್‌ಗಳ ಜಯ

ಕ್ರಿಕೆಟ್: ಭಾರತ 'ಎ'– ನ್ಯೂಜಿಲೆಂಡ್ 'ಎ' ಪಂದ್ಯ

ಮುಕೇಶ್ ದಾಳಿ: ನ್ಯೂಜಿಲೆಂಡ್ ತಬ್ಬಿಬ್ಬು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುರುವಾರ ಮಧ್ಯಾಹ್ನ ಮಳೆ ಸುರಿಯುವ ಮುನ್ನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬಂಗಾಳದ ಹುಡುಗ ಮುಕೇಶ್ ಕುಮಾರ್ ಸ್ವಿಂಗ್ ದಾಳಿ ಬಿರುಗಾಳಿಗೆ ನ್ಯೂಜಿಲೆಂಡ್ ಎ ತಂಡವು ತಡಬಡಾಯಿಸಿತು.

ಇದರಿಂದಾಗಿ ಇಲ್ಲಿ ಆರಂಭವಾದ ಪ್ರಥಮ 'ಟೆಸ್ಟ್'ನಲ್ಲಿ ನ್ಯೂಜಿಲೆಂಡ್ ಎ ತಂಡವು ಮೊದಲ ದಿನದಾಟದ ಅಂತ್ಯಕ್ಕೆ 61 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 156 ರನ್ ಸೇರಿಸಿತು. ಜೋ ಕಾರ್ಟರ್ (ಬ್ಯಾಟಿಂಗ್ 73, 170ಎಸೆತ, 4X10) ಕ್ರೀಸ್‌ನಲ್ಲಿದ್ದಾರೆ.

ಟಾಸ್ ಗೆದ್ದ ಪ್ರವಾಸಿ ಬಳಗವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಭಾರತ 'ಎ' ತಂಡದ ಮಧ್ಯಮವೇಗಿ ಮುಕೇಶ್ ಕುಮಾರ್ (13-4-34-3) ದಾಳಿಯ ಮುಂದೆ ಆರಂಭದಲ್ಲಿಯೇ ತತ್ತರಿಸಿತು. ಮುಕೇಶ್ ಹೊಸಚೆಂಡಿನಲ್ಲಿ (4.3 ಓವರ್) ಮೊದಲ ವಿಕೆಟ್ ಗಳಿಸಿದರು. ಊಟದ ವಿರಾಮದ ನಂತರ ಹಾಗೂ ಚಹಾ ವಿರಾಮದ ಬಳಿಕ ತಲಾ ಒಂದು ವಿಕೆಟ್ ಕೆಡವಿದರು. ಇದರಿಂದಾಗಿ ಎದುರಾಳಿ ತಂಡದ ಓಟ ಗಳಿಕೆಯ ವೇಗ ತಗ್ಗಿತು.

ಆದರೆ, ಜೋ ಕಾರ್ಟರ್ ಮಾತ್ರ ಚೆಂದದ ಬ್ಯಾಟಿಂಗ್ ಮಾಡಿದರು. ತಾಳ್ಮೆಯುತ ಆಟದಲ್ಲಿ ಅರ್ಧಶತಕ ಗಳಿಸಿದರು. ಅವರಿಗೆ ರಾಬರ್ಟ್ ಒಡೆನಿಲ್ (24; 55ಎ) ಹಾಗೂ ಕ್ಯಾಮ್ ಫ್ಲೆಚರ್ (13; 66ಎ) ಉತ್ತಮ ಜೊತೆ ನೀಡಿದರು. ಈ ಇಬ್ಬರ ವಿಕೆಟ್‌ಗಳನ್ನೂ ಮುಕೇಶ್ ತಮ್ಮ ಎಲ್‌ಬಿಡಬ್ಲ್ಯು ಬಲೆಗೆ ಹಾಕಿಕೊಂಡಿದ್ದರಿಂದ ದೊಡ್ಡ ಜೊತೆಯಾಟಗಳು ಮುರಿದುಬಿದ್ದವು.

ವಿಕೆಟ್ ಗಳಿಸಿದ ಮುಕೇಶ್ ಕುಮಾರ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಪ್ರಜಾವಾಣಿ ಚಿತ್ರ/ವಿ. ಪುಷ್ಕರ್

ಯಶ್ ದಯಾಳ್ ಹಾಗೂ ನಾಗವಸಾವಲ್ಲಾ ಕೂಡ ತಲಾ ಒಂದು ವಿಕೆಟ್ ಗಳಿಸಿದರು. ಆತಿಥೇಯ ತಂಡದ ನಾಯಕ ಪ್ರಿಯಾಂಕ್ ಪಾಂಚಾಲ್ ಅವರ ಬೌಲಿಂಗ್ ಹಾಗೂ ಫೀಲ್ಡಿಂಗ್ ತಂತ್ರಗಾರಿಕೆ ಫಲ ನೀಡಿತು.

ಚಹಾ ವಿರಾಮದ ನಂತರದಲ್ಲಿ ಮಳೆ ಸುರಿಯಿತು. ನಂತರ ಮಂದ ಬೆಳಕಿನ ಕಾರಣ ಆಟವನ್ನು ಸ್ಥಗಿತಗೊಳಿಸಲಾಯಿತು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್ : 61 ಓವರ್‌ಗಳಲ್ಲಿ 5ಕ್ಕೆ156 (ಜೋ ಕಾರ್ಟರ್ ಬ್ಯಾಟಿಂಗ್ 73, ಮಾರ್ಕ್ ಚಾಪ್‌ಮನ್ 15, ರಚಿನ್ ರವೀಂದ್ರ 12, ರಾಬರ್ಟ್ ಒಡೊನಿಲ್ 24, ಕ್ಯಾಮ್ ಫ್ಲೆಚರ್ 13, ಮುಕೇಶ್ ಕುಮಾರ್ 34ಕ್ಕೆ3, ಯಶ್ ದಯಾಳ್ 35ಕ್ಕೆ1)

ಸಂಕ್ಷಿಪ್ತ ಸುದ್ದಿ

ಜೋಬರ್ಗ್ ಸೂಪರ್ ಕಿಂಗ್ಸ್‌ಗೆ ಡುಪ್ಲೆಸಿ ನಾಯಕ

ಚೆನ್ನೈ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ಫ್ರ್ಯಾಂಚೈಸಿಯು ದಕ್ಷಿಣ ಆಫ್ರಿಕಾ ಕ್ರಿಕೆಟ್ ಲೀಗ್ ಟೂರ್ನಿಯಲ್ಲಿ ಆಡಲಿರುವ ತನ್ನ ತಂಡಕ್ಕೆ ಜೋಬರ್ಗ್ ಸೂಪರ್ ಕಿಂಗ್ಸ್ (ಜೆಎಸ್‌ಕೆ) ಎಂದು ನಾಮಕರಣ ಮಾಡಿದೆ.

ಫಫ್ ಡುಪ್ಲೆಸಿ

ಈ ತಂಡಕ್ಕೆ ದಕ್ಷಿಣ ಆಫ್ರಿಕಾ ತಂಡದ ಮಾಜಿ ಆಟಗಾರ ಹಾಗೂ ರಾಯಲ್ ಚಾಲೆಂಜರ್ಸ್ ತಂಡದ ನಾಯಕ ಫಫ್ ಡುಪ್ಲೆಸಿ ನಾಯಕತ್ವವಹಿಸುವರು. ಸ್ಟೀಫನ್ ಫ್ಲೆಮಿಂಗ್ ಕೋಚ್ ಆಗಿ ಕಾರ್ಯನಿರ್ವಹಿಸುವರು.

ಶೂಟಿಂಗ್: ಮಿಂಚಿದ ರೋಷನಿ, ಆದ್ಯಲಕ್ಷ್ಮಿ

ಮಂಗಳೂರು: ಕರ್ನಾಟಕದ ರೋಷನಿ ಮತ್ತು ಆದ್ಯಲಕ್ಷ್ಮಿ ಅವರು ಮಂಗಳೂರು ರೈಫಲ್ ಕ್ಲಬ್ ಆಯೋಜಿಸಿರುವ ಮಂಗಳೂರು ಓಪನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಸಾಧನೆ ಮಾಡಿದರು.

ಕದ್ರಿಯಲ್ಲಿರುವ ಕ್ಲಬ್‌ನ ಅಂಗಣದಲ್ಲಿ ಗುರುವಾರ ಆರಂಭಗೊಂಡ ಚಾಂಪಿಯನ್‌ಷಿಪ್‌ನ ರೈಫಲ್ ವಿಭಾಗದ ಆರಂಭಿಕ ಸುತ್ತುಗಳಲ್ಲಿ ರೋಷನಿ ಒಟ್ಟು 601.6 ಸ್ಕೋರು ಕಲೆ ಹಾಕಿದರೆ ಆದ್ಯಲಕ್ಷ್ಮಿ 601.5 ಸ್ಕೋರು ಸಂಗ್ರಹಿಸಿದರು.

ಪಿಸ್ತೂಲು ಶೂಟಿಂಗ್ ಸೀನಿಯರ್ ವಿಭಾಗದಲ್ಲಿ ತಮಿಳುನಾಡಿನ ತಂಗರಾಜೇಶ್ವರಿ 359 ಮತ್ತು ನವ್ಯ ಬಾನು 352 ಸ್ಕೋರು ಗಳಿಸಿದರು. ಯೂತ್ ವಿಭಾಗದಲ್ಲಿ ಝಾರ ಮಾನಿಪಾಡಿ 324 ಸ್ಕೋರುಗಳೊಂದಿಗೆ ಮಿಂಚಿದರು. ಆದರೆ ಪಿಸ್ತೂಲು ಶೂಟಿಂಗ್‌ನಲ್ಲಿ ಯಾರಿಗೂ ಐಎಸ್‌ಎಸ್‌ಎಫ್ ಮಟ್ಟವನ್ನು ತಲುಪಲು ಸಾಧ್ಯವಾಗಲಿಲ್ಲ.

ರೈಫಲ್ ಶೂಟಿಂಗ್‌ನಲ್ಲಿ ಕರ್ನಾಟಕದ ವಿ.ಪ್ರಭಾಕರನ್ 372, ರಿತೇಶ್ 365 ಹಾಗೂ ನಜೀಮಾ ಮಾನಿಪ್ಪಾಡಿ 364 ಸ್ಕೋರುಗಳೊಂದಿಗೆ ಭರವಸೆ ಮೂಡಿಸಿದರು.

ಬ್ಯಾಡ್ಮಿಂಟನ್ ಟೂರ್ನಿಗಳು ರದ್ದು

ಕೌಲಾಲಂಪುರ (ಪಿಟಿಐ): ಆತಿಥೇಯ ರಾಷ್ಟ್ರಗಳಲ್ಲಿ ಕೋವಿಡ್ ನಿರ್ಬಂಧ ನಿಯಮಗಳು ಇರುವುದರಿಂದ ಹಾಂಗ್‌ಕಾಂಗ್ ಓಪನ್ ಸೂಪರ್ 500 ಹಾಗೂ ಮಕಾವ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಗಳನ್ನು ರದ್ದುಪಡಿಸಲಾಗಿದೆ.

ಮಕಾವು ಓಪನ್ ಟೂರ್ನಿ ನವೆಂಬರ್ 1 ರಿಂದ 6 ಹಾಗೂ ಹಾಂಗ್‌ಕಾಂಗ್ ಓಪನ್ ಟೂರ್ನಿಯನ್ನು ನ.8ರಿಂದ 13ರವರೆಗೆ ಆಯೋಜಿಸಲಾಗಿತ್ತು.

'ಎರಡೂ ದೇಶಗಳಲ್ಲಿರುವ ಕೋವಿಡ್–19 ಪರಿಸ್ಥಿತಿ ಹಾಗೂ ಕ್ವಾರಂಟೈನ್ ನಿಯಮಗಳು ಕ್ಲಿಷ್ಟವಾಗಿವೆ. ಹಾಂಗ್‌ಕಾಂಗ್ ಬ್ಯಾಡ್ಮಿಂಟನ್ ಸಂಸ್ಥೆಯು ತಮ್ಮ ಸರ್ಕಾರದೊಂದಿಗೆ ಮಾತುಕತೆ ನಡೆಸುತ್ತಿದೆ. ಟೂರ್ನಿ ಆಯೋಜನೆಗೆ ಅನುಕೂಲಕರ ವ್ಯವಸ್ಥೆಗಳನ್ನು ಮಾಡಿಕೊಡಲು ಮನವಿ ಮಾಡುತ್ತಿದೆ. ಒಂದೊಮ್ಮೆ ಸರ್ಕಾರ ಒಪ್ಪಿದರೆ ಮುಂದಿನ ಯೋಚನೆ ಮಾಡಲಾಗುವುದು' ಎಂದು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ತಿಳಿಸಿದೆ.

ಲೆಜೆಂಡ್ಸ್ ತಂಡಕ್ಕೆ ಸಚಿನ್ ನಾಯಕ

ಮುಂಬೈ (ಪಿಟಿಐ): ಬ್ಯಾಟಿಂಗ್ ಚಾಂಪಿಯನ್ ಸಚಿನ್ ತೆಂಡೂಲ್ಕರ್ ರಸ್ತೆ ಸುರಕ್ಷತಾ ವಿಶ್ವ ಸರಣಿ ಕ್ರಿಕೆಟ್ ನಲ್ಲಿ ಹಾಲಿ ಚಾಂಪಿಯನ್ ಇಂಡಿಯಾ ಲೆಜೆಂಡ್ಸ್ ತಂಡದ ನಾಯಕತ್ವ ವಹಿಸುವರು.

ಸಚಿನ್

ಇದೇ 10ರಿಂದ ಆರಂಭವಾಗಲಿರುವ ಟೂರ್ನಿಯು 22 ದಿನಗಳವರೆಗೆ ನಡೆಯಲಿದೆ. ಬೇರೆ ಬೇರೆ ತಾಣಗಳಲ್ಲಿ ಪಂದ್ಯಗಳು ನಡೆಯಲಿವೆ. ಮೊದಲ ಪಂದ್ಯವು ಕಾನ್ಪುರದಲ್ಲಿ ನಡೆಯುವುದು. ಎರಡು ಸೆಮಿಫೈನಲ್ ಹಾಗೂ ಅ. 1ರಂದು ಫೈನಲ್ ಪಂದ್ಯವನ್ನು ರಾಯಪುರದಲ್ಲಿ ಆಯೋಜಿಸಲಾಗಿದೆ.

ಈ ಬಾರಿ ನ್ಯೂಜಿಲೆಂಡ್ ಲೆಜೆಂಡ್ಸ್ ತಂಡವು ಸೇರ್ಪಡೆಗೊಂಡಿದೆ. ಆಸ್ಟ್ರೇಲಿಯಾ, ಶ್ರೀಲಂಕಾ, ವೆಸ್ಟ್ ಇಂಡೀಸ್, ದಕ್ಷಿಣ ಆಫ್ರಿಕಾ, ಬಾಂಗ್ಲಾದೇಶ ಹಾಗೂ ಇಂಗ್ಲೆಂಡ್ ದೇಶಗಳ ದಿಗ್ಗಜ ಕ್ರಿಕೆಟಿಗರೂ ಈ ಟೂರ್ನಿಯಲ್ಲಿ ಆಡಲಿದ್ದಾರೆ.

ಅ.7ರಿಂದ ಐಎಸ್‌ಎಲ್ ಟೂರ್ನಿ

ಮುಂಬೈ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯು ಅಕ್ಟೋಬರ್ 7ರಿಂದ ನಡೆಯಲಿದೆ.

ಕೊಚ್ಚಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯಲಿರುವ ಉದ್ಘಾಟನೆ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ಹಾಗೂ ಈಸ್ಟ್ ಬೆಂಗಾಲ್ ಕ್ಲಬ್ ಮುಖಾಮುಖಿಯಾಗಲಿವೆ.

'ಸೂಪರ್ 4' ಪ್ರವೇಶಿಸಿದ ಲಂಕಾ

ದುಬೈ (ಪಿಟಿಐ): ಕೊನೆಯ ಓವರ್‌ವರೆಗೂ ರೋಚಕ ಪೈಪೋಟಿ ನಡೆದ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಎರಡು ವಿಕೆಟ್‌ಗಳಿಂದ ಮಣಿಸಿದ ಶ್ರೀಲಂಕಾ, ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ 'ಸೂಪರ್ 4' ಹಂತ ಪ್ರವೇಶಿಸಿತು.

'ಬಿ' ಗುಂಪಿನಲ್ಲಿ ಆಡಿದ ಎರಡೂ ಪಂದ್ಯಗಳಲ್ಲಿ ಸೋತ ಬಾಂಗ್ಲಾದೇಶ ಟೂರ್ನಿಯಿಂದ ಹೊರಬಿತ್ತು. ಅಫ್ಗಾನಿಸ್ತಾನ 'ಬಿ' ಗುಂಪಿನಿಂದ ಈಗಾಗಲೇ ಮುಂದಿನ ಹಂತ ಪ್ರವೇಶಿಸಿದೆ.

ದುಬೈನಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಶಕೀಬ್ ಅಲ್ ಹಸನ್ ಬಳಗ 20 ಓವರ್‌ಗಳಲ್ಲಿ 7ಕ್ಕೆ 183 ರನ್ ಗಳಿಸಿತು. ಲಂಕಾ ತಂಡ 19.2 ಓವರ್‌ಗಳಲ್ಲಿ 8 ವಿಕೆಟ್‌ಗೆ 184 ರನ್ ಗಳಿಸಿ ಜಯ ಸಾಧಿಸಿತು.

ಕುಸಾಲ್ ಮೆಂಡಿಸ್ (60 ರನ್, 37 ಎ., 4X4, 6X3), ನಾಯಕ ದಸುನ್ ಶನಕ (45 ರನ್, 33 ಎ., 4X3, 6X2) ಹಾಗೂ ಕೊನೆಯಲ್ಲಿ ಒತ್ತಡವನ್ನು ಮೆಟ್ಟಿನಿಂತು ಅಜೇಯ 10 ರನ್ (3 ಎ., 4X2) ಗಳಿಸಿದ ಅಸಿತ್ ಫರ್ನಾಂಡೊ ಅವರು ಲಂಕಾ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಲಂಕಾ ತಂಡದ ಅಸಿತ್ ಫರ್ನಾಂಡೊ (ಎಡ) ಮತ್ತು ಮಹೀಶ್ ತೀಕ್ಷಣ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಇದಕ್ಕೂ ಮುನ್ನ ಟಾಸ್ ಗೆದ್ದ ಶ್ರೀಲಂಕಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ಮಹದಿ ಹಸನ್ (38; 26ಎ), ಅಫಿಫ್ ಹುಸೇನ್ (39; 22ಎ) ಹಾಗೂ ಕೇವಲ ಒಂಬತ್ತು ಎಸೆತಗಳಲ್ಲಿ 24 ರನ್ ಗಳಿಸಿದ ಮೊಸಾದಿಕ್ ಅವರ ಅಬ್ಬರದಿಂದಾಗಿ ಬಾಂಗ್ಲಾ ತಂಡವು ದೊಡ್ಡ ಮೊತ್ತದತ್ತ ಹೆಜ್ಜೆ ಹಾಕಿತು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 7ಕ್ಕೆ 183 (ಮೆಹದಿ ಹಸನ್ ಮಿರಾಜ್ 38, ಶಕೀಬ್ ಅಲ್ ಹಸನ್ 24, ಅಫಿಫ್ ಹುಸೇನ್ 39, ಮೆಹಮೂದುಲ್ಲಾ 27, ಮೊಸಾದಿಕ್ ಹುಸೇನ್ ಔಟಾಗದೆ 24, ವಣಿಂದು ಹಸರಂಗಾ 41ಕ್ಕೆ2, ಕರುಣಾರತ್ನೆ 32ಕ್ಕೆ2, ಅಸಿತ್ ಫರ್ನಾಂಡೊ 51ಕ್ಕೆ1, ತೀಕ್ಷಣ 23ಕ್ಕೆ1, ದಿಲ್ಶಾನ್ ಮಧುಸಂಕಾ 26ಕ್ಕೆ1) **ಶ್ರೀಲಂಕಾ:** 19.2 ಓವರ್‌ಗಳಲ್ಲಿ 8ಕ್ಕೆ 184 (ಪಥುಮ್ ನಿಸ್ಸಾಂಕ 20, ಕುಸಾಲ್ ಮೆಂಡಿಸ್ 60, ದಸುನ್ ಶನಕ 45, ಇಬಾದತ್ ಹೊಸೇನ್ 51ಕ್ಕೆ 3, ತಸ್ಕೀನ್ ಅಹ್ಮದ್ 24ಕ್ಕೆ 2, ಮುಸ್ತಫಿಜುರ್ ರೆಹಮಾನ್ 32ಕ್ಕೆ 1) ಫಲಿತಾಂಶ: ಲಂಕಾಗೆ 2 ವಿಕೆಟ್ ಗೆಲುವು

ವಿಶ್ವ ಜೂನಿಯರ್ ಈಜು: ಅಪೇಕ್ಷಾ ಸಾಧನೆ

ನವದೆಹಲಿ (ಪಿಟಿಐ): ಅಪೇಕ್ಷಾ ಫೆರ್ನಾಂಡಿಸ್ ಅವರು ವಿಶ್ವ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ಪ್ರವೇಶಿಸಿದ ಭಾರತದ ಮೊದಲ ಈಜುಪಟು ಎಂಬ ಗೌರವ ಪಡೆದುಕೊಂಡರು.

ಪೆರುವಿನ ಲಿಮಾದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮಹಿಳೆಯರ 200 ಮೀ. ಬಟರ್‌ಫ್ಲೈ ವಿಭಾಗದಲ್ಲಿ ಈ ಸಾಧನೆ ಮಾಡಿದರು. ಎಂಟು ಸ್ಪರ್ಧಿಗಳು ಪಾಲ್ಗೊಂಡ ಫೈನಲ್‌ನಲ್ಲಿ ಅವರಿಗೆ ಕೊನೆಯ ಸ್ಥಾನ ಲಭಿಸಿತು. 2 ನಿಮಿಷ 19.14 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಮಹಾರಾಷ್ಟ್ರದ 17 ವರ್ಷದ ಅಪೇಕ್ಷಾ, ಹೀಟ್ಸ್‌ನಲ್ಲಿ 2 ನಿ. 18.18 ಸೆ. ಸಮಯ ದಾಖಲಿಸಿ ಫೈನಲ್ ಪ್ರವೇಶಿಸಿದ್ದರು. ಇದು ಅವರ ವೈಯಕ್ತಿಕ ಶ್ರೇಷ್ಠ ಸಮಯವೂ ಹೌದು. ಜೂನ್‌ನಲ್ಲಿ ಅವರು 2 ನಿ. 18.39 ಸೆ.ಗಳಲ್ಲಿ ಗುರಿ ತಲುಪಿದ್ದು ಇದುವರೆಗೆ ಉತ್ತಮ ಸಮಯ ಎನಿಸಿತ್ತು.

ಬ್ಯಾಡ್ಮಿಂಟನ್: ಶ್ರೀಕಾಂತ್, ಲಕ್ಷ್ಯ, ಸೈನಾಗೆ ಸೋಲು

ಕ್ವಾರ್ಟರ್ ಫೈನಲ್‌ಗೆ ಪ್ರಣಯ್

ಒಸಾಕ (ಪಿಟಿಐ): ಭಾರತದ ಎಚ್.ಎಸ್.ಪ್ರಣಯ್ ಅವರು ಜಪಾನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಆದರೆ ಕೆ.ಶ್ರೀಕಾಂತ್ ಅವರ ಸವಾಲು ಕೊನೆಗೊಂಡಿತು.

ಗುರುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಪ್ರಣಯ್ 22-20 21-19 ರಲ್ಲಿ ಮಾಜಿ ವಿಶ್ವ ಚಾಂಪಿಯನ್ ಸಿಂಗಪುರದ ಲೊ ಕೀನ್ ಯೆವ್ ಅವರನ್ನು ಮಣಿಸಿದರು. ಪ್ರಣಯ್ ಅವರು ಲೊ ಕೀನ್ ಜತೆ ಒಟ್ಟು ನಾಲ್ಕು ಸಲ ಪೈಪೋಟಿ ನಡೆಸಿದ್ದು, ಮೂರರಲ್ಲಿ ಗೆಲುವು ಪಡೆದಿದ್ದಾರೆ.

30 ವರ್ಷದ ಪ್ರಣಯ್ ಕ್ವಾರ್ಟರ್ ಫೈನಲ್‌ನಲ್ಲಿ ಚೀನಾ ತೈಪೆಯ ಚೌ ತಿಯೆನ್ ಚೆನ್ ಅವರನ್ನು ಎದುರಿಸುವರು. ಚೆನ್ ಕಳೆದ ವಾರ ನಡೆದ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದಿದ್ದರು.

ಎಚ್‌.ಎಸ್‌.ಪ್ರಣಯ್

ವಿಶ್ವ ರ‍್ಯಾಂಕಿಂಗ್‌ನಲ್ಲಿ 18ನೇ ಸ್ಥಾನದಲ್ಲಿರುವ ಭಾರತದ ಆಟಗಾರ, ಚೆನ್ ವಿರುದ್ಧ ಕೊನೆಯದಾಗಿ ಆಡಿದ ಎರಡೂ ಪಂದ್ಯಗಳನ್ನು ಗೆದ್ದಿದ್ದಾರೆ. ಆದರೆ ಒಟ್ಟಾರೆಯಾಗಿ ಚೀನಾ ತೈಪೆಯ ಆಟಗಾರ 3–4 ರಲ್ಲಿ ಮೇಲುಗೈ ಸಾಧಿಸಿದ್ದಾರೆ.

ಶ್ರೀಕಾಂತ್‌ಗೆ ನಿರಾಸೆ: ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಕಣದಲ್ಲಿದ್ದ ಭಾರತದ ಇನ್ನೊಬ್ಬ ಆಟಗಾರ ಶ್ರೀಕಾಂತ್ 10–21, 16–21 ರಲ್ಲಿ ಸ್ಥಳೀಯ ಆಟಗಾರ ಕಾಂಟ ಸುನೆಯಮ ಎದುರು ಪರಾಭವಗೊಂಡರು.

ಲಕ್ಷ್ಯ, ಸೈನಾಗೆ ಸೋಲು: ಲಕ್ಷ್ಯ ಸೇನ್ ಅವರು ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ 21-18, 14-21, 13-21 ರಲ್ಲಿ ಜಪಾನ್‌ನ ಕೆಂಟಾ ನಿಶಿಮೊಟೊ ಎದುರು ಸೋತರು.

ಸೈನಾ ನೆಹ್ವಾಲ್ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ 9-21, 17-21 ರಲ್ಲಿ ಆತಿಥೇಯ ದೇಶದ ಅಕಾನೆ ಯಮಗುಚಿ ಎದುರು ಪರಾಭವಗೊಂಡರು.

ಹಾಕಿಪಟು ಮೊಣ್ಣಪ್ಪ ನಿಧನ

ಬೆಂಗಳೂರು: ಹಾಕಿಪಟು ಎಂ.ಎಸ್. ಮೊಣ್ಣಪ್ಪ (78) ಬುಧವಾರ ರಾತ್ರಿ ಮಡಿಕೇರಿಯಲ್ಲಿ ನಿಧನರಾದರು.

ಮೊಣ್ಣಪ್ಪ

ಅವರು ಕಳೆದ ಒಂದು ವರ್ಷದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಅಂತ್ಯಕ್ರಿಯೆ ಸೆ.2 ರಂದು ಮಡಿಕೇರಿಯಲ್ಲಿ ನಡೆಯಲಿದೆ ಎಂದು ಹಾಕಿ ಕರ್ನಾಟಕದ ಪ್ರಕಟಣೆ ತಿಳಿಸಿದೆ.

ಚೆನ್ನೈನ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಶಿಕ್ಷಣ ಪಡೆದಿದ್ದ ಅವರು ತಮಿಳುನಾಡು ರಾಜ್ಯ ಹಾಕಿ ತಂಡವನ್ನು ಪ್ರತಿನಿಧಿಸಿದ್ದರು. 1970–74ರ ಅವಧಿಯಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ತಮಿಳುನಾಡು ಪರ ಆಡಿದ್ದರು.

ಇಂಡಿಯನ್ ಏರ್‌ಲೈನ್ಸ್‌ನಲ್ಲಿ ಉದ್ಯೋಗ ಪಡೆದ ಬಳಿಕ ಅವರು ಹಾಕಿ ಟೂರ್ನಿಗಳಲ್ಲಿ ಇಂಡಿಯನ್ ಏರ್‌ಲೈನ್ಸ್ ತಂಡವನ್ನು ಪ್ರತಿನಿಧಿಸಿದ್ದರು.

ಎಐಎಫ್‌ಎಫ್ ಅಧ್ಯಕ್ಷ ಸ್ಥಾನದ ಚುನಾವಣೆ ಇಂದು

ಭುಟಿಯಾ- ಕಲ್ಯಾಣ್ ಚೌಬೆ ಹಣಾಹಣಿ

ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ (ಎಐಎಫ್‌ಎಫ್) ಚುನಾವಣೆ ಶುಕ್ರವಾರ ನಡೆಯಲಿದ್ದು, ಸಂಸ್ಥೆಯ 85 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಮಾಜಿ ಆಟಗಾರರೊಬ್ಬರು ಅಧ್ಯಕ್ಷರಾಗಿ ಆಯ್ಕೆಯಾಗಲು ವೇದಿಕೆ ಸಿದ್ಧಗೊಂಡಿದೆ.

ಎಐಎಫ್‌ಎಫ್ ಅಧ್ಯಕ್ಷ ಸ್ಥಾನಕ್ಕೆ ಭಾರತ ತಂಡದ ಮಾಜಿ ನಾಯಕ ಬೈಚುಂಗ್ ಭುಟಿಯಾ ಮತ್ತು ಮೋಹನ್ ಬಾಗನ್ ಹಾಗೂ ಈಸ್ಟ್ ಬೆಂಗಾಲ್ ತಂಡಗಳ ಮಾಜಿ ಗೋಲ್‌ಕೀಪರ್ ಕಲ್ಯಾಣ್ ಚೌಬೆ ನಡುವೆ ನೇರ ಸ್ಪರ್ಧೆ ಏರ್ಪಟ್ಟಿದೆ.

ಗುಜರಾತ್ ಫುಟ್‌ಬಾಲ್ ಸಂಸ್ಥೆ ಮತ್ತು ಅರುಣಾಚಲ ಪ್ರದೇಶ ಫುಟ್‌ಬಾಲ್ ಸಂಸ್ಥೆಗಳ ಬೆಂಬಲದೊಂದಿಗೆ ಕಣಕ್ಕಿಳಿದಿರುವ ಚೌಬೆ, ಗೆಲುವಿನ ನೆಚ್ಚಿನ ಸ್ಪರ್ಧಿ ಎನಿಸಿದ್ದಾರೆ. ಅವರು ಅವಿರೋಧವಾಗಿ ಆಯ್ಕೆಯಾಗುವರು ಎಂದು ಭಾವಿಸಲಾಗಿತ್ತು. ಆದರೆ ಭುಟಿಯಾ ಕಣಕ್ಕಿಳಿದಿರುವುದರಿಂದ ಚುನಾವಣೆಯ ಕಣ ರಂಗೇರಿದೆ.


ಕಲ್ಯಾಣ್ ಚೌಬೆ –ಟ್ವಿಟರ್ ಚಿತ್ರ

ಬೈಚುಂಗ್ ಭುಟಿಯಾ

ಈಶಾನ್ಯ ಭಾಗದ ಪ್ರಭಾವಿ ರಾಜಕಾರಣಿಯೊಬ್ಬರ 'ಆಶೀರ್ವಾದ' ಚೌಬೆ ಅವರ ಮೇಲಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಇದೇ ಕಾರಣಕ್ಕೆ ಭುಟಿಯಾ ಅವರಿಗೆ 'ತವರು ರಾಜ್ಯ' ಸಿಕ್ಕಿಂ ಫುಟ್‌ಬಾಲ್ ಸಂಸ್ಥೆಯ ಬೆಂಬಲ ಕೂಡಾ ಸಿಕ್ಕಿಲ್ಲ ಎನ್ನಲಾಗುತ್ತಿದೆ.

ಭುಟಿಯಾ, ಭಾರತ ತಂಡದ ಪರ 104 ಪಂದ್ಯಗಳನ್ನು ಆಡಿದ್ದು, 40 ಗೋಲುಗಳನ್ನು ಗಳಿಸಿದ್ದಾರೆ. ಅವರು 2011 ರಲ್ಲಿ ನಿವೃತ್ತಿಯಾಗಿದ್ದರು. ಚೌಬೆ 1999–2006ರ ಅವಧಿಯಲ್ಲಿ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದ್ದರು.

ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಖಜಾಂಚಿ ಸ್ಥಾನಗಳಿಗೆ ತಲಾ ಇಬ್ಬರು ನಾಮಪತ್ರ ಸಲ್ಲಿಸಿರುವುದರಿಂದ ನೇರ ಸ್ಪರ್ಧೆ ಏರ್ಪಟ್ಟಿದೆ. ವಿವಿಧ ರಾಜ್ಯ ಸಂಸ್ಥೆಗಳನ್ನು ಪ್ರತಿನಿಧಿಸುವ 34 ಮಂದಿ ಮತ ಚಲಾಯಿಸಲಿದ್ದಾರೆ.

ಕಾರ್ಯಕಾರಿ ಸಮಿತಿಗೆ ಅವಿರೋಧ ಆಯ್ಕೆ: ಕಾರ್ಯಕಾರಿ ಸಮಿತಿಯ 14 ಸ್ಥಾನಗಳಿಗೆ 14 ಮಂದಿ ನಾಮಪತ್ರ ಸಲ್ಲಿಸಿರುವುದರಿಂದ ಎಲ್ಲರೂ ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ.

ಹ್ಯಾರಿಸ್ ಸ್ಪರ್ಧೆ

ಕರ್ನಾಟಕ ಫುಟ್‌ಬಾಲ್ ಸಂಸ್ಥೆ ಅಧ್ಯಕ್ಷ, ಕಾಂಗ್ರೆಸ್ ಶಾಸಕ ಎನ್.ಎ.ಹ್ಯಾರಿಸ್ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದಾರೆ. ಅವರು ರಾಜಸ್ತಾನ ಫುಟ್‌ಬಾಲ್ ಸಂಸ್ಥೆ ಅಧ್ಯಕ್ಷ, ಕಾಂಗ್ರೆಸ್ ಮುಖಂಡರೂ ಆಗಿರುವ ಮಾನವೇಂದ್ರ ಸಿಂಗ್ ವಿರುದ್ಧ ಪೈಪೋಟಿ ನಡೆಸಲಿದ್ದಾರೆ.

ಖಜಾಂಚಿ ಸ್ಥಾನಕ್ಕೆ ಆಂಧ್ರ ಫುಟ್‌ಬಾಲ್ ಸಂಸ್ಥೆ ಅಧ್ಯಕ್ಷ ಗೋಪಾಲಕೃಷ್ಣ ಕೋಸರಾಜು ಮತ್ತು ಅರುಣಾಚಲ ಪ್ರದೇಶದ ಕಿಪಾ ಅಜಯ್ ನಡುವೆ ಸ್ಪರ್ಧೆ ಏರ್ಪಟ್ಟಿದೆ.